
ಹೈದರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿ

ಪ್ರೊ. ಭಾಲಚಂದ್ರ ಜಯಶೆಟ್ಟಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

BVP-1211-27/2/17
1207-(5)

ದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಹೈದರಾಬಾದ್ ಕರ್ನಾಟಕದ
ವಿಮೋಚನಾ ಚಳುವಳಿ

ಪ್ರೊ. ಭಾಲಚಂದ್ರ ಜಯಶೆಟ್ಟಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

HYDERABAD KARNATAKADA VIMOCHANA CHALUVALI
by : **Prof. Bhalachandra Jayashetty**
Published by : **Kannada Sahitya Parishat**
PampaMahakavi Road, Chamarajapet, Bangalore - 560018
Pages : x + 104 Price : Rs. **40=00** : **2006**

ಪ್ರಥಮ ಮುದ್ರಣ	:	೨೦೦೬
ಪ್ರತಿಗಳು	:	೧೫೦೦
ಬೆಲೆ	:	ನಲವತ್ತು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗೀಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ- ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕನ ಮಾತು

ಬೀದರ, ಗುಲಬರ್ಗಾ, ರಾಯಚೂರು ಮತ್ತು ಇತ್ತೀಚೆಗೆ ನಿರ್ಮಾಣವಾದ ಕೊಪ್ಪಳ ಇವು ನಾಲ್ಕು ಜಿಲ್ಲೆಗಳು ಹಿಂದೆ ನಿಜಾಮ ರಾಜ್ಯಕ್ಕೆ ಸೇರಿದ್ದವು. ನಿಜಾಮ ಮನೆತನದ ಹೆಸರು 'ಆಸಿಫಜಾಹ.' ಈ ಮನೆತನದ ರಾಜ್ಯವನ್ನು ೧೭೨೪ರಲ್ಲಿ ಸ್ಥಾಪಿಸಿದ ಮೂಲ ಪುರುಷನು ಮೀರ ಕಮರುದ್ದೀನ ಅಲೀಖಾನ ಎಂಬುವನು. ಆತ ಮೊದಲು ದಕ್ಷಿಣಕ್ಕೆ ಕಾಲಿಟ್ಟದ್ದು ಮೊಗಲರ ಸೂಬೇದಾರನಾಗಿ. ಮುಂದೆ ಕೊನೆಯ ನಿಜಾಮನಾದ ಮೀರ ಉಸ್ಮಾನ ಅಲೀಖಾನನು ತಾನು ಮೊಗಲ ವಂಶಸ್ಥನು ಎಂದು ಹೇಳಿಕೊಳ್ಳುತ್ತಿದ್ದನು. ಹೀಗಾಗಿ ನಿಜಾಮ ಪ್ರದೇಶಕ್ಕೆ 'ಮೊಗಲಾಯಿ' ಎಂದೇ ಹೆಸರಾಗಿತ್ತು.

ಇಂಗ್ಲೀಷರ ಆಳ್ವಿಕೆಯಲ್ಲಿ ಭಾರತದಲ್ಲಿದ್ದ ಸುಮಾರು ೫೦೦ಕ್ಕೂ ಹೆಚ್ಚಿನ ಸಂಸ್ಥಾನಗಳಲ್ಲಿ ನಿಜಾಮನ ಸಂಸ್ಥಾನವು ಅತಿ ದೊಡ್ಡದಾಗಿತ್ತು. 'ಇಂಗ್ಲಿಷರು ಭಾರತವನ್ನು ಬಿಟ್ಟು ಹೋಗುವಾಗ ಕಾಶ್ಮೀರ, ಜೂನಾಗಢ ಮತ್ತು ಹೈದರಾಬಾದ ಸಂಸ್ಥಾನಗಳನ್ನು ಬಿಟ್ಟು ಉಳಿದವುಗಳು ಭಾರತ ಒಕ್ಕೂಟಕ್ಕೆ ಸೇರಲು ಒಪ್ಪಿದ್ದವು. ಈ ಮೂರು ಸಂಸ್ಥಾನಗಳು ಮಾತ್ರ ಒಕ್ಕೂಟದಿಂದ ಹೊರಗೇ ಉಳಿದಿದ್ದವು. ಜೂನಾಗಢ ಮತ್ತು ಕಾಶ್ಮೀರದ ಸಮಸ್ಯೆಗಳು ಅದು ಹೇಗೋ ಬಗೆಹರಿದವಾದರೂ ನಿಜಾಮ ಸಂಸ್ಥಾನದ ಸಮಸ್ಯೆ ಹಾಗೇ ಉಳಿದಿತ್ತು. ಭಾರತದ ಸ್ವಾತಂತ್ರ್ಯಾನಂತರ ಇದರ ವಿಮೋಚನೆಗಾಗಿ ಮುಂದೆ ಇನ್ನೂ ಹದಿಮೂರು ತಿಂಗಳು ಹೋರಾಡಬೇಕಾಯಿತು.

ಆಗಿನ ನಿಜಾಮ ರಾಜ್ಯವು ಅಂದರೆ ಹೈದರಾಬಾದ ಸಂಸ್ಥಾನವು ಮೂರು ಭಾಷಾ ಪ್ರದೇಶಗಳಿಂದ ಕೂಡಿತ್ತು. ತೆಲುಗು ಮಾತನಾಡುವ ಎಂಟು ಜಿಲ್ಲೆಗಳು ಆಂಧ್ರ ಪ್ರದೇಶಕ್ಕೆ ಸೇರಿ, ಹೈದರಾಬಾದನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೂ 'ಹೈದರಾಬಾದಿ'ನ ತಮ್ಮ ಐಡೆಂಟಿಟಿಯನ್ನು ಕಳೆದುಕೊಂಡವು. ಮರಾಠಿ ಮಾತನಾಡುವ ಐದು ಜಿಲ್ಲೆಗಳು ಮಹಾರಾಷ್ಟ್ರಕ್ಕೆ ಸೇರಿ ಹೈದರಾಬಾದದ ಸಂಪರ್ಕವನ್ನು ಕಳಚಿಕೊಂಡವು. ಆದರೆ ಕನ್ನಡ ಮಾತನಾಡುವ ಆಗಿನ ಮೂರು ಜಿಲ್ಲೆಗಳು (ಈಗಿನ ನಾಲ್ಕು ಜಿಲ್ಲೆಗಳು) ತಮ್ಮ ಹೈದರಾಬಾದದ ಜೊತೆಗಿನ ನಂಟನ್ನು ಇನ್ನೂ ಉಳಿಸಿಕೊಂಡೇ ಬರುತ್ತಿವೆ. ಹೈದರಾಬಾದ ರಾಜ್ಯದಲ್ಲಿದ್ದಾಗಿನ ದಿನಗಳಲ್ಲಿನ ಒಂದೂ ಹಿತವಾದ ಅನುಭವಗಳು ಕನ್ನಡಿಗರಿಗಿಲ್ಲ. ಆದರೂ 'ಹೈದರಾಬಾದ ಕರ್ನಾಟಕ' ಎಂದು ಹೇಳಿಕೊಳ್ಳುವುದರಲ್ಲಿ ಅಂಥದ್ದೇನು ಗೌರವವಿದೆಯೋ ತಿಳಿಯದು. ಆದರೂ ಇದನ್ನು 'ಹೈದರಾಬಾದ ಕರ್ನಾಟಕ'ವೆಂದೇ ಗುರುತಿಸುತ್ತೇವೆ. ಇದನ್ನು 'ಕಲ್ಯಾಣ ಕರ್ನಾಟಕ' ಎಂದು ಪುನರ್ನಾಮಕರಣ ಮಾಡುವುದು ತರ್ಕಸಂಗತ ಎಂದು ನನ್ನ ಅಭಿಪ್ರಾಯ.

ಈ ಪ್ರದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಎರಡು ಸಲ ಹೋರಾಡಬೇಕಾಯಿತೆಂದು ಹೇಳಲಾಗುತ್ತದೆ. ಒಮ್ಮೆ ಇಂಗ್ಲಿಷರೊಂದಿಗೆ, ಇನ್ನೊಮ್ಮೆ ನಿಜಾಮನೊಂದಿಗೆ. ವಾಸ್ತವವಾಗಿ ಇಂಗ್ಲಿಷರ ಜೊತೆಗೆ ಹೋರಾಡಿದ ನೆನಪುಗಳು ಯಾರ ತಲೆಯಲ್ಲೂ ಇದ್ದಂತೆ ಕಾಣುವುದಿಲ್ಲ. ಆದರೆ ನಿಜಾಮನ ಜೊತೆಗೆ ಹೋರಾಡಿದ ಗಾಯಗಳು ಎಂದೂ ಅಳಿಸದಂತೆ ಕಪ್ಪು ಕಲೆಗಳಾಗಿ ಈ ಪ್ರದೇಶದ ಚರಿತ್ರೆಯಲ್ಲಿ ಉಳಿದುಕೊಂಡಿವೆ. ಅದರ ಕರುಣ ಕಥೆಯೇ ಈ ಪುಸ್ತಕ. ಈ ಹೋರಾಟವನ್ನು ನಾನು ಮೊದಲನೆಯ ಹೋರಾಟವೆಂದು ಕರೆಯುತ್ತೇನೆ. ನಮ್ಮ ಎರಡನೆಯ ಹೋರಾಟ ನಡೆದದ್ದು ಕರ್ನಾಟಕದ ಏಕೀಕರಣಕ್ಕಾಗಿ. ಅದೂ ಕೂಡ ಒಂದು ಕಿರಿಯ ಚರಿತ್ರೆಯೇ ಆಗಿದೆ. ಈ ಮೊದಲನೆಯ ಹೋರಾಟದಲ್ಲಿ ಆದಷ್ಟು ಸಾವುನೋವುಗಳು ಆಗಿಲ್ಲವಾದರೂ ಅದೂ ಕೂಡ ನಮ್ಮ ನೆನಪಿನಲ್ಲಿ ಉಳಿಯುವಂಥ ಹೋರಾಟವಾಗಿದೆ. ಕರ್ನಾಟಕದ ಏಕೀಕರಣಕ್ಕಾಗಿ ಶ್ರೀ ಆರ್.ವಿ. ಬೀಡಪ, ಪ್ರಭುರಾವ ಕಂಬಳಿವಾಲೆ, ಉದಗೀರ ಸಂಗ್ರಾಮಪ್ಪ, ಭಾಲ್ಕಿ ಹಿರೇಮಠದ ಪೂಜ್ಯ ಚೆನ್ನಬಸವ ಪಟ್ಟದ್ದೇವರು ಮುಂತಾದವರು ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ ಹೋರಾಡಿದರು. ಅಂತೂ ಕರ್ನಾಟಕದ ಇತರ ಪ್ರದೇಶದ ನಮ್ಮ ಬಂಧುಗಳು ನಮ್ಮನ್ನು ಯಾವ ದೃಷ್ಟಿಯಿಂದಲೇ ನೋಡಿದರೂ ಕನ್ನಡದವರೆಂದು ಕನ್ನಡವನ್ನು ಉಸಿರಾಡುತ್ತಿರುವ ನಾವೂ ಕರ್ನಾಟಕದವರಾದೆವು...

ಇಲ್ಲಿ ಹೈದರಾಬಾದ ಸಂಸ್ಥಾನದ ವಿಮೋಚನೆಯ ವಿಷಯವನ್ನೇ ಸಂಗ್ರಹಿಸಲಾಗಿದೆ. ಈ ವಿಷಯವು ಬಹಳ ವ್ಯಾಪಕವಾಗಿದೆ. ಆದರೂ ಇತಿಮಿತಿಯಲ್ಲಿ ಇದನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ಇದೇ ಪ್ರದೇಶದ ಬೀದರನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಈ ಸಂದರ್ಭದಲ್ಲಿ ಈ ಪ್ರದೇಶದ ಚಳವಳಿಗೆ ಸಂಬಂಧಿಸಿದ ಇಂಥ ಒಂದು ಕೃತಿಯನ್ನು ಪ್ರಕಟಿಸುವುದು ಆವಶ್ಯಕವಾಗಿತ್ತು. ಇದನ್ನು ರಚಿಸುವ ಹೊಣೆಯನ್ನು ನನ್ನ ಮೇಲೆ ಹಾಕಿ ಅಂಥ ಒಂದು ಅವಕಾಶವನ್ನು ಮಾಡಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ನನ್ನ ಶುಭಚಿಂತಕರೂ ಆದ ಪ್ರೊ. ಚಂದ್ರಶೇಖರ ಪಾಟೀಲರ ಕೃಪೆಯನ್ನು ನಾನು ಇಲ್ಲಿ ಸ್ಮರಿಸುತ್ತೇನೆ.

–ಭಾಲಚಂದ್ರ ಜಯಶೆಟ್ಟಿ

'ನನ್ನ ಮನೆ'
ಜಯನಗರ, ಸೇಡಂ ರಸ್ತೆ,
ಗುಲಬರ್ಗಾ–೫೮೫ ೧೦೫

ಪರಿವಿಡಿ

****

ಚಳವಳಿ ಚರಿತ್ರೆಯ ಹಿನ್ನೆಲೆ

ಆಸಫಿಯಾ ಮನೆತನ :

ಸುಮಾರು ಎರಡೂಕಾಲು ಶತಮಾನದ ವರೆಗೆ ಆಳಿದ ಆಸಫಿಯಾ ಮನೆತನದ ಸೂರ್ಯನು ೧೭ನೆಯ ಸೆಪ್ಟೆಂಬರ್, ೧೯೪೮ರಂದು ಅಸ್ತಂಗತನಾದನು. ಆಸಫಿಯಾ ಮನೆತನದ ಮೂಲ ಪುರುಷನಾದ ಶಹಾಬುದ್ದೀನನ ಹಿರಿಯ ಮಗ ಮೀರ ಕಮರುದ್ದೀನ ಎಂಬುವವನು ಕ್ರಿ.ಶ. ೧೬೭೧ರಲ್ಲಿ ಜನಿಸಿದ್ದನು. ಮಿತಿಮೀರಿದ ಮಹತ್ವಾಕಾಂಕ್ಷಿಯೂ, ಧೂರ್ತನೂ ಆಗಿದ್ದ ಮೀರ ಕಮರುದ್ದೀನನನ್ನು ಮೊಗಲ ಅರಸರು ಮೊದಲು ಗುಜರಾತಿನ ಸೂಬೇದಾರನಾಗಿ, ಅನಂತರ ೧೭೧೯ರಲ್ಲಿ ದಕ್ಷಿಣದ ಸೂಬೇದಾರನಾಗಿ ನೇಮಿಸಿದ್ದರು. ಈತನ ನಯವಿನಯ, ಸ್ವಾಮಿನಿಷ್ಠೆ, ಶೌರ್ಯ ಮುಂತಾದ ಗುಣಗಳಿಗೆ ಮಾರುಹೋಗಿ ಆಗಿನ ಮುಗಲ ಸಾಮ್ರಾಟನಾದ ಫಾರೂಖಸಿಯರನು 'ನಿಜಾಮುಲ್ಮುಲ್ಕ ಫಿರೋಜ ಜಂಗ ಚಿನ್ ಕಿಲಿಚ್ ಖಾನ್' (ಕಿರಿಯ ಸಮಶೇರ ಬಹಾದ್ದೂರ) ಎಂಬ ಬಿರುದನ್ನು ಕೊಟ್ಟು ಗೌರವಿಸಿದ್ದನು. 'ನಿಜಾಮ' ಶಬ್ದದ ಮೂಲ ಅರ್ಥ ವ್ಯವಸ್ಥಾಪಕ, ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವವನು, ರಕ್ಷಕ, ನಿಯಾಮಕ ಎಂದಾಗುತ್ತದೆ. ಈ ಮೀರ ಕಮರುದ್ದೀನನು ಕ್ರಿ.ಶ. ೧೭೪೮ರಲ್ಲಿ ಸತ್ತನು. ಈತನಿಗೆ ನಾಲ್ಕು ಜನ ಮಕ್ಕಳಿದ್ದರು – ಮೀರ ಸಲಾಬತ ಜಂಗ, ಮೀರ ನಾಸಿರ ಜಂಗ (ಮಹಮ್ಮದ ಖಾನ), ನಿಜಾಮ ಅಲೀ ಮತ್ತು ಮೀರ ಬಸಾಲತ ಜಂಗ.

ಎರಡನೆಯ ಮಗ ಮೀರ ನಾಸಿರ ಜಂಗನು ೧೭೪೭ರಲ್ಲಿ ತಂದೆಯನ್ನು ಸೆರೆಮನೆಯಲ್ಲಿಟ್ಟು ತಾನೇ ನಿಜಾಮ ಪಟ್ಟವನ್ನು ಅಲಂಕರಿಸಿದನು. ಸೆರೆಮನೆಯಲ್ಲಿಯೇ ತಂದೆಯ ಕೊಲೆಯಾಯಿತು. ನಾಸಿರ ಜಂಗನು ಎರಡು ವರ್ಷ ಆಳುವಷ್ಟರಲ್ಲಿ ಆತನ ಅಣ್ಣನಾದ ಮೀರ ಸಲಾಬತ ಜಂಗನು ಫ್ರೆಂಚರ ಸಹಾಯದಿಂದ ನಾಸಿರ ಜಂಗನ ಕೊಲೆ ಮಾಡಿಸಿ ಕ್ರಿ.ಶ. ೧೭೫೭ರಲ್ಲಿ ನಿಜಾಮನಾದನು. ರಾಜ್ಯ ವಿಸ್ತಾರದ ದಾಹದಿಂದಾಗಿ ಫ್ರೆಂಚ ಗವರ್ನರ ಜನರಲ್‌ನಾದ ಡೂಪ್ಲೆಯು ಸಲಾಬತ ಜಂಗನನ್ನು ಪಟ್ಟದಿಂದ ಇಳಿಸಿ ನಿಜಾಮುಲ್ಮುಲ್ಕನ ಸೋದರಳಿಯನಾದ ಮುಜಫರ್ ಜಂಗನನ್ನು ಪಟ್ಟಕ್ಕೆ ಕೂಡಿಸಿದನು. ಮುಜಫರ್ ಜಂಗನು ಹೆಚ್ಚು ಕಾಲ ರಾಜ್ಯವಾಳಲಿಲ್ಲ. ಆತನ ಕೊಲೆಯಾಯಿತು. ಮತ್ತೆ ಸಲಾಬತ ಜಂಗ್‌ನು ಪಟ್ಟಕ್ಕೆ ಬಂದನು.

ಮೂರನೆಯ ಸೋದರನಾದ ನಿಜಾಮ ಅಲೀಯು ಇಂಗ್ಲಿಷರ ನೆರವಿನಿಂದ ಸಲಾಬತ ಜಂಗ್‌ನನ್ನು ಬೀದರ ಕೋಟೆಯಲ್ಲಿ ಸೆರೆಯಲ್ಲಿಟ್ಟು ಕ್ರಿ.ಶ. ೧೭೬೨ರಲ್ಲಿ ತಾನು ನಿಜಾಮನಾಗಿ ಅಧಿಕಾರ ವಹಿಸಿಕೊಂಡನು. ಆಸಫಿಯಾ ಮನೆತನದ ನಿಜಾಮುಲ್ಮುಲ್ಕನು ಮೊದಲನೆಯ ನಿಜಾಮನಾದರೆ ನಿಜಾಮ ಅಲೀಯು ಆ ಪರಂಪರೆಯ ಎರಡನೆಯ ನಿಜಾಮನೆಂದು

ಪರಿಗಣಿಸಲ್ಪಡುತ್ತಾನೆ. ಈತ ಕ್ರಿ.ಶ. ೧೭೬೨ರಿಂದ ೧೮೦೩ರ ವರೆಗೆ ಆಳಿದನು. ಈತನದು ತನ್ನದೇಯಾದಂಥ ಒಂದು ನೀತಿಯೆಂಬುದು ಇರಲಿಲ್ಲ. ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಸಮಯ ಸಾಧಕನಂತೆ ಗಾಳಿ ಬಿಟ್ಟಂತೆ ಬಲ ಇದ್ದವರ ಕಡೆಗೆ ವಾಲುತ್ತಿದ್ದನು. ಇಂಗ್ಲಿಷರ ಸಹಾಯದಿಂದಲೇ ಪಟ್ಟಕ್ಕೆ ಬಂದಿದ್ದನಾದರೂ ಫ್ರೆಂಚರ ಬಲ ಹೆಚ್ಚುತ್ತಿರುವುದನ್ನು ಕಂಡರೆ ಫ್ರೆಂಚರ ಕಡೆಗೆ, ಇಂಗ್ಲಿಷರು ಮೇಲುಗೈ ಸಾಧಿಸುತ್ತಿದ್ದರೆ ಇಂಗ್ಲಿಷರ ಕಡೆಗೆ ವಾಲುತ್ತಿದ್ದನು. ಈತನು ತನ್ನ ಈ ಚಿಲ್ಲರೆ ಧೂರ್ತತನದಿಂದ ಇಂಗ್ಲಿಷರ ಕಣ್ಣಿಗೆ ಮಣ್ಣೆರಚಲು ಸಾಧ್ಯವಾಗಲಿಲ್ಲ. ಕ್ರಿ.ಶ. ೧೭೯೮–೧೮೦೦ರ ಸುಮಾರಿಗೆ ಇಂಗ್ಲಿಷರು ಹಂತಹಂತವಾಗಿ ಈತನ ಬಾಲ ಕತ್ತರಿಸುತ್ತ ಬಂದರು. ಕ್ರಿ.ಶ. ೧೮೦೦ರಲ್ಲಿ ಈತನನ್ನು ಸಂಪೂರ್ಣವಾಗಿ ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡರು. ಆ ದಿನದಿಂದ ನಿಜಾಮ ರಾಜ್ಯವು ಸಂರಕ್ಷಿತ ರಾಜ್ಯ (Protected State) ಆಯಿತು. ಈ ಒಪ್ಪಂದದ ಮೇರೆಗೆ ಇಂಗ್ಲಿಷರು ನಿಜಾಮನನ್ನು ಸಾಧ್ಯವಾದಷ್ಟು ತಮ್ಮ ಹಿಡಿತದಲ್ಲಿಟ್ಟುಕೊಂಡರು. ಈ ಕ್ರಮ ಕೊನೆಯ ನಿಜಾಮನ ವರೆಗೂ ನಡೆದುಕೊಂಡು ಬಂದಿತು. ನಿಜಾಮರ ಖರ್ಚುವೆಚ್ಚಗಳನ್ನು ನಿರ್ಧರಿಸುವ ಕೆಲಸ ಇಂಗ್ಲಿಷರೇ ಮಾಡುತ್ತಿದ್ದರು. ಕೊನೆಯ ನಿಜಾಮನ ವಾರ್ಷಿಕ ಖರ್ಚು ರೂ. ೫೦ ಲಕ್ಷ ಎಂದು ನಿರ್ಧರಿಸಲಾಗಿತ್ತು. (ಈ ರಾಜಧನ ಹೆಸರಿಗೆ ಮಾತ್ರ ಇತ್ತು. ನಿಜಾಮನ ಖಾಜಗಿ ಉತ್ಪನ್ನ ಕೋಟಿಗಟ್ಟಲೆ ಬರುತ್ತಿತ್ತು. ಅದರ ಲೆಕ್ಕವೇ ಇರಲಿಲ್ಲ).

ನಿಜಾಮ ಅಲೀಯ ನಂತರ ಮೀರ ಸಿಕಂದರಜಾಹ (ಕ್ರಿ.ಶ. ೧೮೦೩–೧೮೨೯), ಮೀರ ನಾಸಿರುದ್ದೌಲಾ (೧೮೨೯–೧೮೫೭), ಮೀರ ಅಫಜಲುದ್ದೌಲಾ (೧೮೫೭–೧೮೬೯), ಮೀರ ಮಹಬೂಬ ಅಲೀ (೧೮೬೯–೧೯೧೧) ನಿಜಾಮ ಪಟ್ಟಕ್ಕೆ ಬಂದು ಹೈದರಾಬಾದಿನಲ್ಲಿ ಆಸಫಿಯಾ ಮನೆತನದ ಅರಸರಾಗಿ ಆಳಿದರು. ಈ ಎಲ್ಲ ನಿಜಾಮರ ಆಳ್ವಿಕೆಯ ಕಾಲದುದ್ದಕ್ಕೂ ಇಂಗ್ಲಿಷರ ಹಿಡಿತ ಬಿಗಿಯಾಗಿಯೇ ಇತ್ತು. ಆದರೂ ಈ ನಿಜಾಮರು ತಾವು ಸಾರ್ವಭೌಮರೆಂದು ಹೇಳಿಕೊಳ್ಳುತ್ತಿದ್ದರು. ಅದರಲ್ಲಿಯೂ ಕೊನೆಯ ನಿಜಾಮನಾದ ಮೀರ ಉಸ್ಮಾನ ಅಲೀಖಾನನು ತಾನು ತುರ್ಕಿ ಮನೆತನದ ಮೊಗಲ ವಂಶಸ್ಥನೆಂದೂ ಭಾರತದಲ್ಲಿ ದಿಗ್ವಿಜಯವನ್ನು ಸಾಧಿಸಿ ಹಿಂದೂಗಳನ್ನು ಆಳಲು ಬಂದವನೆಂದೂ, ಹೀಗಾಗಿ ಹಿಂದೂಗಳು ತನ್ನ ಗುಲಾಮರೆಂದೂ ಭಾವಿಸಿದ್ದನು. ಆದರೆ ಸತ್ಯಾಂಶವೆಂದರೆ ಇಂಗ್ಲಿಷ ವಾಯಿಸ್‌ರಾಯರ ಅಪ್ಪಣೆಯಿಲ್ಲದೆ ಒಂದು ಹೆಜ್ಜೆಯನ್ನೂ ಎತ್ತಿಡಲು ಆತನಿಗೆ ಸಾಧ್ಯವಿರಲಿಲ್ಲ. ಆದರೂ ತಾನು ಒಂದು ಸ್ವತಂತ್ರ ಇಸ್ಲಾಮಿ ರಾಷ್ಟ್ರದ ಅಧಿಪತಿಯಾಗಿದ್ದೇನೆಂದು ಕೊಚ್ಚಿಕೊಳ್ಳುತ್ತಿದ್ದನು. ಇಂಥ ಆಳರಸನ ಪ್ರಜೆಗಳ ಸ್ಥಾನಮಾನ ಏನಾಗಿತ್ತೆಂದು ಊಹಿಸಬಹುದಾಗಿದೆ. ಒಬ್ಬ ಗುಲಾಮ ರಾಜನ ಗುಲಾಮರಾಗಿ ಇಲ್ಲಿಯ ಪ್ರಜೆಗಳು ಬದುಕುತ್ತಿದ್ದರು.

ಭಾರತ ಸರಕಾರವು ಪ್ರಕಟಿಸಿರುವ ಹೈದರಾಬಾದ ಶ್ವೇತಪತ್ರ (White paper on Hyderabad: Government of India) ಪುಟ ೧೩ರಲ್ಲಿ ಒಂದು ಸತ್ಯಸಂಗತಿಯನ್ನು ನಮೂದಿಸಲಾಗಿದೆ. ಮೀರ ಉಸ್ಮಾನ ಅಲೀಖಾನನು ಆತನ ತಂದೆಯಾದ ಮೀರ ಮಹಬೂಬ ಅಲೀಖಾನರ ಅಂತಃಪುರದ ಅನೇಕ ಹೆಂಗಸರಲ್ಲಿ ಜೋಹರಾ ಬೇಗಂ ಎಂಬಾಕೆಯ ಉದರದಿಂದ

ಜನಿಸಿದವನಾಗಿದ್ದನು. ಈ ಜೋಹರಾ ಬೇಗಂ ಅಂತಃಪುರ ಸೇರುವುದಕ್ಕೆ ಮೊದಲು ಹಿಂದೂ ಆಗಿದ್ದಳು. ಇಂಥ ಅನೌರಸ ಪುತ್ರನನ್ನು ವಿಧಿಯಿಲ್ಲದೆ ಕ್ರಿ.ಶ. ೧೯೧೧ರಲ್ಲಿ ಪಟ್ಟಕ್ಕೆ ಕೂಡಿಸಬೇಕಾಯಿತು. ಆಗ ಈತ ೨೫ ವರ್ಷದವನಾಗಿದ್ದನು. ಈತ ಪಟ್ಟಕ್ಕೆ ಬರುವವರೆಗೆ ರಾಜ್ಯದ ಆಡಳಿತದಲ್ಲಿ ಹೇಳಿಕೊಳ್ಳುವಂಥ ಏರುಪೇರುಗಳೇನು ಕಾಣಿಸಿಕೊಂಡಿರಲಿಲ್ಲ. ಕೋಮು ದ್ವೇಷವಾಗಲೀ, ಕೋಮು ಗಲಭೆಗಳಾಗಲೀ ನಡೆದಂಥ ದಾಖಲೆಗಳು ಸಿಗುವುದು ಅಪರೂಪ.

ಆರನೆಯ ನಿಜಾಮನಾದ ಮೀರ ಮಹಬೂಬ ಅಲೀಯ ಕಾಲಕ್ಕೆ ರಾಜ್ಯದ ಜನತೆ ಬಹಳ ನೆಮ್ಮದಿಯಿಂದ ಬಾಳುತ್ತಿದ್ದರು. ಆ ಕಾಲಕ್ಕೆ ಕೆಲವು ಮತಾಂತರದ ಘಟನೆಗಳು ಸಂಭವಿಸಿರಬಹುದಾದರೂ ಅವು ಚರಿತ್ರೆಯಲ್ಲಿ ದಾಖಲಾಗುವ ಮಟ್ಟಿಗೆ ಬಲಾತ್ಕಾರದ ಮತಾಂತರಗಳಾಗಿರಲಿಲ್ಲ. ಮಹಬೂಬ ಅಲೀಖಾನನು ಶಾಂತಿಪ್ರಿಯನೂ ಉದಾರಿಯೂ ಆಗಿದ್ದನು. ಹಿಂದೂ ಹಾಗೂ ಮುಸಲ್ಮಾನ ಈ ಎರಡೂ ಜನಾಂಗದ ಹಿತವನ್ನು ಕಾಪಾಡುವಲ್ಲಿ ಮುತುವರ್ಜಿ ವಹಿಸುತ್ತಿದ್ದನು. ಜಾತಿಯ ಆಧಾರದ ಮೇಲೆ ಯಾವ ಭೇದಭಾವವೂ ಮಾಡುತ್ತಿರಲಿಲ್ಲ. ಧರ್ಮನಿರಪೇಕ್ಷ ಭಾವನೆಯಿಂದಲೇ ಆಡಳಿತ ನಡೆಸುತ್ತಿದ್ದನು. ಅಂಥ ಒಂದೆರಡು ಪ್ರಸಂಗಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ :

ಅಚ್ಯುತರಾವ ಎಂಬ ಒಬ್ಬ ಸೂಬೇದಾರನು ನಿಜಾಮು ಸಾಹೇಬರ ಒಲವು ಪಡೆಯುವುದಕ್ಕಾಗಿ ಒಮ್ಮೆ ನಿಜಾಮರಲ್ಲಿ ತಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಬಯಸುತ್ತೇನೆ ಎಂದು ವಿನಂತಿಸಿಕೊಂಡನು. ಆಗ ನಿಜಾಮನಾದ ಮೀರ ಮಹಬೂಬ ಅಲೀಖಾನನು ಹೇಳಿದ್ದನು, "ನೀನು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಬಯಸುವುದಾದರೆ ಮೊದಲು ನಿನ್ನ ಸೂಬೇದಾರಿ ಹುದ್ದೆಯನ್ನು ಬಿಡಬೇಕಾಗುತ್ತದೆ. ಯಾಕೆಂದರೆ ಈ ಹುದ್ದೆ ಇರುವುದು ಬರೀ ಬ್ರಾಹ್ಮಣರಿಗಾಗಿ, ಮುಸಲ್ಮಾನರಿಗಲ್ಲ."

ಇಂಥದ್ದೇ ಇನ್ನೊಂದು ಪ್ರಸಂಗ ಕಂಡುಬರುತ್ತದೆ. ರಾಜ್ಯದ ಪ್ರಧಾನಮಂತ್ರಿಯಾಗಿದ್ದ ಮಹಾರಾಜಾ ಕಿಶನ ಪ್ರಸಾದರು ತಮ್ಮ ಸಾರ್ವಭೌಮರ ಧರ್ಮನಿರಪೇಕ್ಷತೆಗೆ ಹಾಗೂ ಅವರ ಉದಾರತೆಗೆ ತುಂಬ ಮಾರುಹೋಗಿದ್ದರು. ಈ ಹಿಂದೂ-ಮುಸ್ಲಿಂ ಎಂಬುದು ಅರ್ಥವಿಲ್ಲದ್ದು. ರಾಜನ ಧರ್ಮವೇ ಪ್ರಜೆಗಳಾದ ನಮ್ಮ ಧರ್ಮ ಎಂಬ ಭಾವನೆ ಅವರದಾಗಿತ್ತು. ಹೀಗಾಗಿ ಅವರು ತಮ್ಮ ಮಗನಿಗೆ 'ಖ್ವಾಜಾ ಪ್ರಸಾದ' ಎಂದು ನಾಮಕರಣ ಮಾಡಿದ್ದರು. ಅಷ್ಟೇ ಅಲ್ಲದೆ ತಮ್ಮ ಮಗಳನ್ನು ಒಬ್ಬ ಮುಸ್ಲಿಮನಿಗೆ ಕೊಟ್ಟು ಮದುವೆ ಮಾಡಿದ್ದರು. ಇಂಥ ಮಹಾರಾಜ ಕಿಶನ ಪ್ರಸಾದರು ಒಮ್ಮೆ ತಾವು ಮುಸಲ್ಮಾನರಾಗಬೇಕೆಂಬ ಇಚ್ಛೆ ವ್ಯಕ್ತಪಡಿಸಿದರು. ಆಗ ನಿಜಾಮನು ಅವರನ್ನು ತರಾಟೆಗೆ ತೆಗೆದುಕೊಂಡು ನುಡಿದಿದ್ದನು, "ನೀವು ಮುಸಲ್ಮಾನರಾಗುವುದಾದರೆ ಸಂತೋಷವಾಗಿ ಆಗಬಹುದು. ನನ್ನದೇನೂ ಅಭ್ಯಂತರವಿಲ್ಲ. ಆದರೆ ಪರಂಪರೆಯಿಂದ ಹಿಂದೂಗಳಿಗಾಗಿಯೇ ಕಾಯ್ದಿರಿಸಿಕೊಂಡು ಬಂದಿರುವಂಥ ರಾಜ್ಯದ ಪ್ರಧಾನಮಂತ್ರಿಯ ಪಟ್ಟವನ್ನು ನೀವು ಬಿಡಬೇಕಾಗುತ್ತದೆ."

ಫೆಬ್ರವರಿ ೧೮೯೩ರಲ್ಲಿ ಸ್ವಾಮಿ ವಿವೇಕಾನಂದರು ಸ್ವಲ್ಪ ಕಾಲ ಹೈದರಾಬಾದಿನಲ್ಲಿ

ತಂಗಿದ್ದರು. ಆಗ ಸಿಕಂದರಾಬಾದಿನ ಮೆಹಬೂಬ ಕಾಲೇಜಿನಲ್ಲಿ ಒಂದು ದೊಡ್ಡ ಸಭೆಯನ್ನು ಏರ್ಪಡಿಸಲಾಗಿತ್ತು. ಆ ಸಭೆಯನ್ನು ಉದ್ದೇಶಿಸಿ ವಿವೇಕಾನಂದರು ಭಾಷಣ ಮಾಡಿದ್ದರು. ಅಲ್ಲಿ ಜಾತಿಭೇದವಿಲ್ಲದೆ ಜನಸಮುದಾಯ ಕಿಕ್ಕಿರಿದು ಸೇರಿತ್ತು. ಜಾತಿಯ ಚೌಕಟ್ಟಿಲ್ಲದೆ ಹೈದರಾಬಾದಿನ ಜನತೆ ಸ್ವಾಮೀಜಿಗಳ ಪ್ರಭಾವ, ವ್ಯಕ್ತಿತ್ವದ ಆಕರ್ಷಣೆಗೆ ಮಾರುಹೋಗಿತ್ತು. ಇನ್ನೂ ಮಹತ್ವದ ಸಂಗತಿಯೆಂದರೆ ನಿಜಾಮನ ದರಬಾರದ ಸದಸ್ಯರಲ್ಲಿ ಅನೇಕರು ಹೈದರಾಬಾದ ರೈಲ್ವೆ ನಿಲ್ದಾಣದಲ್ಲಿ ಸ್ವಾಮೀಜಿಯವರನ್ನು ಸ್ವಾಗತಿಸಲು ಹಾಜರಾಗಿದ್ದರು. ರಾಜ್ಯದ ಆಗಿನ ಪ್ರಧಾನಮಂತ್ರಿಗಳಾಗಿದ್ದ ಸರ್ ಅಸಮದ್ ಜಾಹ ಹಾಗು ಇನ್ನೋರ್ವರು ಸರ್ ಖುರ್ಶಿದ ಜಾಹರು ಸ್ವಾಮೀಜಿಯವರ ಭೇಟಿಗೆ ಬಂದಿದ್ದರು. ಈ ಈರ್ವರೂ ಮಹನೀಯರು ಭಾರತದ ಎಲ್ಲ ಕಡೆಯ ಹಿಂದೂ ದೇವಾಲಯಗಳನ್ನು ಸಂದರ್ಶಿಸಿ ಮತ್ತು ಯಾತ್ರೆಯನ್ನು ಮಾಡಿದ ಮೊದಲ ಮುಸಲ್ಮಾನರಾಗಿದ್ದರು.

ಇದು ಮೀರ ಉಸ್ಮಾನ ಅಲೀಖಾನನು ನಿಜಾಮ ಪಟ್ಟವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಹೈದರಾಬಾದ ರಾಜ್ಯದಲ್ಲಿದ್ದ ಕೋಮು ಸೌಹಾರ್ದದ ಒಂದೆರಡು ಕಿರು ಚಿತ್ರಗಳು ಅಷ್ಟೆ.

ಮೀರ ಉಸ್ಮಾನ ಅಲೀಖಾನನು ನಿಜಾಮನಾದ ಮೇಲೆ ಪರಿಸ್ಥಿತಿ ಮೊದಲಿಗೆ ನಿಧಾನವಾಗಿ, ಆಮೇಲೆ ಕ್ಷಿಪ್ರ ಗತಿಯಲ್ಲಿ ಬದಲಾಗುತ್ತ ಹೋಯಿತು. ಮೀರ ಮಹಬೂಬ ಅಲೀಖಾನನು 'ಹಿಂದೂ ಮುಸ್ಲಿಮರು ತನ್ನ ಎರಡು ಕಣ್ಣುಗಳು' ಎಂದು ಹೃದಯ ತುಂಬಿ ಹೇಳುತ್ತಿದ್ದ ಮಾತನ್ನು ಮೀರ ಉಸ್ಮಾನ ಅಲೀಖಾನನು ತನ್ನ ನಯವಂಚಕತನಕ್ಕಾಗಿ ಆ ಮಂತ್ರವನ್ನು ಪಠಿಸುತ್ತಿದ್ದನು. ಹಿಂದೆ ಕ್ರಿ.ಶ. ೧೮೦೦ರಿಂದ ಇಂಗ್ಲಿಷರ ಕೈಗೊಂಬೆಯಾಗಿ ಉಳಿದುಕೊಂಡು ಬಂದಿದ್ದ ನಿಜಾಮ ಆಡಳಿತದಲ್ಲಿ ಉಸ್ಮಾನ ಅಲೀಖಾನನು ಒಳಗೊಳಗೆ ತನ್ನ ಅಹಮಿಕೆಯನ್ನು ತೋರಿಸಲು ಪ್ರಯತ್ನಿಸುತ್ತಿದ್ದನು. ಆದರೆ ನಿಜ ಹೇಳಬೇಕೆಂದರೆ ಹೈದರಾಬಾದ ಸಂಸ್ಥಾನವು ಬ್ರಿಟಿಷರ ಕೃಪೆಯಿಂದಾಗಿ ಮಾತ್ರ ಉಳಿದುಕೊಂಡು ಬಂದಿತ್ತು. ಆಸಫಿಯಾ ಮನೆತನಕ್ಕೆ ದಕ್ಷಿಣದಲ್ಲಿ ಆಳವಾಗಿ ನೆಲೆಯೂರಿ ನಿಲ್ಲಲು ಸಾಧ್ಯವಾಗಲೇ ಇಲ್ಲ. ತಾನು ತುರ್ಕಿ ಮೂಲದ, ಮೊಗಲ ಮೂಲದ ಮನೆತನದವನೆಂಬ ಅಹಮಿಕೆಯಲ್ಲಿಯೇ ಅದು ಉಳಿದುಕೊಂಡಿತು. ಬ್ರಿಟಿಷರ ಆಶ್ರಯವನ್ನು ಬಿಟ್ಟರೆ ತೀರ ಅಲ್ಪಸಂಖ್ಯಾತರಾದ ಮುಸ್ಲಿಮರನ್ನೇ ನಂಬಿಕೊಂಡು ಈ ಮನೆತನ ಇಲ್ಲಿ ಉಸಿರಾಡಬೇಕಾಗುತ್ತಿತ್ತು. ಒಂದು ರೀತಿಯಲ್ಲಿ ಇದು 'ಬ್ರಿಟಿಷ ಕೃಪಾಪೋಷಿತ ರಾಜಕೀಯ ನಾಟಕ ಮಂಡಳಿ' ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ.

ಕ್ರಿ.ಶ. ೧೮೦೦ರಲ್ಲಿ ಆಗಿನ ನಿಜಾಮನಾಗಿದ್ದ ನಿಜಾಮ ಅಲೀ ಮತ್ತು ಬ್ರಿಟಿಷರ ನಡುವೆ ಆದಂಥ ಒಪ್ಪಂದದಲ್ಲಿ ನಿಜಾಮ ರಾಜ್ಯವು ಸಾರ್ವಭೌಮ ರಾಜ್ಯವೆಂಬ ಮಾತು ಸ್ಪಷ್ಟಪಡಿಸಿರಲಿಲ್ಲ. ಆಗಿನ ನಿಜಾಮನಿಗೂ ಕೂಡ ತಾನು ಸಾರ್ವಭೌಮ ರಾಜನಾಗಬೇಕು ಎಂಬ ಕಲ್ಪನೆ ಬಹುಶಃ ಬಂದಿರಲಿಲ್ಲವಾಗಿ ಬ್ರಿಟಿಷರಿಂದ ಆ ರೀತಿ ಒಪ್ಪಂದ ಮಾಡಿಕೊಂಡಿರಲಿಲ್ಲ. ಹೀಗಾಗಿ ಮುಂದೆ ಬಂದ ಎಲ್ಲ ನಿಜಾಮರಿಗೆ ದಿಲ್ಲಿ ಆಡಳಿತದ ಮಾಂಡಲೀಕರಾಗಿಯೇ ಉಳಿದುಕೊಳ್ಳಬೇಕಾಗಿತ್ತು. ಈ ಒಪ್ಪಂದದ ನಂತರ ಆದ ಕೆಲವು ಘಟನಾವಳಿಗಳನ್ನು ಇಲ್ಲಿ ಗಮನಿಸಬಹುದು. (ವಂದೇಮಾತರಂದಿಂದ ....ಪು. ೧೧೭).

ಅ) ೧೮೩೫ರಲ್ಲಿ ನಿಜಾಮನಿಗೆ ಈ ಮುಂದಿನಂತೆ ತಿಳಿಸಲಾಯಿತು : ಸಂಸ್ಥಾನದಲ್ಲಿನ ಅಶಾಂತಿ ಮತ್ತು ಅವ್ಯವಸ್ಥೆಗಳನ್ನು ಸರಿಪಡಿಸದೇ ಹೋದರೆ ಬ್ರಿಟಿಷ ಸರಕಾರವು ಮೂಕಸಾಕ್ಷಿಯಾಗಿ ಸುಮ್ಮನೆ ಕೂಡುವುದಿಲ್ಲ. ಆದ ಕಾರಣ ನಿಜಾಮನು ತನ್ನ ಮಂತ್ರಿಮಂಡಲವನ್ನು ಬದಲಾಯಿಸುವುದು ಅವಶ್ಯಕವಾಗಿದೆಯಲ್ಲದೆ ಆಗಿನ ಸನ್ನಿವೇಶದಲ್ಲಿ ಅಪೇಕ್ಷಿತ ಕ್ರಮಗಳನ್ನು ತೆಗೆದುಕೊಳ್ಳುವುದು ಆತನಿಗೆ ಅನಿವಾರ್ಯವೂ ಆಗಿದೆ.

ಬ) ೧೮೬೭ರಲ್ಲಿ ನಿಜಾಮನ ಸಚಿವ ಸಂಪುಟದಲ್ಲಿನ ಬಿಕ್ಕಟ್ಟಿನ ನಂತರ ಸಂಸ್ಥಾನದಲ್ಲಿ ಉಂಟಾದ ಅವ್ಯವಸ್ಥೆಯನ್ನು ತಡೆಯಲು ಕೇಂದ್ರವು ತನ್ನ ಅಧಿಕಾರವನ್ನು ನಿಜಾಮನ ಅಪೇಕ್ಷೆಗೆ ವ್ಯತಿರಿಕ್ತವಾಗಿ ಹೇರಬೇಕಾಗುವುದೆಂದು ಗವರ್ನರ ಜನರಲ್ಲನು ನಿಜಾಮನಿಗೆ ತಿಳಿಸಿದನು.

ಕ) ೧೮೯೭ರಲ್ಲಿ ಹೈದರಾಬಾದಿನಲ್ಲಿ ಆರ್ಥಿಕ ಸಂಕಟ ಉದ್ಭವಿಸಿತ್ತು. ಆ ಸಂಕಟದ ಜೊತೆಗೆ ಇನ್ನೂ ಕೆಲವು ಕಠಿಣವಾದ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡಬೇಕೆಂದು ಭಾರತ ಸರಕಾರವನ್ನು ಒತ್ತಾಯಿಸಲಾಯಿತು. ಈ ಪ್ರಸ್ತಾವನೆಗಳನ್ನು ಅನುಮತಿಸುತ್ತ ಒಳಾಡಳಿತ ಇಲಾಖೆಯ ಕಾರ್ಯದರ್ಶಿಗಳು ಒಂದು ಮಾತನ್ನು ಹೇಳಿದರು. ಸಂಸ್ಥಾನದ ಹದಗೆಡುತ್ತಿರುವ ಆರ್ಥಿಕ ಸ್ಥಿತಿಗಳಿಗೆ ಕೂಡಲೇ ಕಡಿವಾಣ ಹಾಕದಿದ್ದರೆ ಅಧಿಕಾರಶಾಹಿಗಳ ಹಸ್ತಕ್ಷೇಪವಾಗಿ ಸಂಸ್ಥಾನವು ಅವರ ಅಧೀನವಾಗುತ್ತದೆ.

ಡ) ಅಕ್ಟೋಬರ ೧೯೧೧ ರಲ್ಲಿ ಏಳನೆಯ ನಿಜಾಮನು ಪಟ್ಟಾಧಿಕಾರ ವಹಿಸಿಕೊಂಡ ಮೇಲೆ ಕೆಲವು ತಿಂಗಳ ನಂತರ ಲಾರ್ಡ ಹಾರ್ಡಿಂಜನು ನಿಜಾಮನಿಗೆ ಎಚ್ಚರಿಕೆ ಕೊಟ್ಟನು. ಆ ಎಚ್ಚರಿಕೆಯ ಪ್ರಕಾರ ನಿಜಾಮನು ಎರಡು ವರ್ಷಗಳ ವರೆಗೆ ಕಠಿಣ ಪರೀಕ್ಷೆಗೆ ಒಳಗಾಗಿದ್ದನು. ಈ ಅವಧಿಯ ಕೊನೆಯಲ್ಲಿ ಈಗಿರುವಂತೆ ಸಂಸ್ಥಾನದಲ್ಲಿ ರಾಜಪ್ರತಿನಿಧಿ ಮಂಡಲಿಯನ್ನು ಸ್ಥಾಪಿಸುವುದು ಭಾರತ ಸರಕಾರಕ್ಕೆ ಸುಲಭ ಸಾಧ್ಯವಾಗಿತ್ತು.

ಇ) ೧೯೧೯ ರಲ್ಲಿ ಲಾರ್ಡ್ ಛೇಮ್ಸಫರ್ಡನು ಮತ್ತೆ ಎರಡು ಸಲ ಎಚ್ಚರಿಕೆ ಕೊಟ್ಟನು. ಮೊದಲನೆಯ ಎಚ್ಚರಿಕೆಯನ್ನು ಪತ್ರದ ಮೂಲಕ ಕೊಟ್ಟರೆ ಎರಡನೆಯ ಎಚ್ಚರಿಕೆಯನ್ನು ಸಮಕ್ಷಮ ಭೇಟಿಯ ಕಾಲಕ್ಕೆ ಕೊಡಲಾಯಿತು. ದುರಾಡಳಿತದಂತಹ ಪ್ರಸಂಗದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ತನಗಿರುವುದಾಗಿ ಭಾರತ ಸರಕಾರ ತಿಳಿಸಿತ್ತು. ಪ್ರತ್ಯಕ್ಷ ಭೇಟಿಯಲ್ಲಿಯ ಎಚ್ಚರಿಕೆ ಬಹಳ ಸ್ಪಷ್ಟ ಸ್ವರೂಪದ್ದಾಗಿತ್ತು. "ನಾನು ಯಾವಾಗಲೂ ಸ್ಪಷ್ಟವಾಗಿ ಹೇಳುವುದೇನೆಂದರೆ ದುರಾಡಳಿತವನ್ನು ಮತ್ತು ಅದರ ಪರಿಣಾಮಗಳನ್ನು ನಾನೆಂದೂ ಸಹಿಸಲಾರೆನು. ಈ ಬಗ್ಗೆ ಕೆಲವು ದೃಷ್ಟಾಂತಗಳನ್ನು ನಿಮ್ಮ ಗಮನಕ್ಕೆ ತಂದಿದ್ದು ಅವು ವೈಯಕ್ತಿಕ ದುರಾಡಳಿತದ ಸ್ಪಷ್ಟ ಸಾಕ್ಷ್ಯಾಧಾರಗಳಾಗಿವೆ. ತನ್ನ ರಾಜ್ಯದಲ್ಲಿ ಇಂಥ ಒಂದು ಅಸ್ಥಿರವಾದ ಪರಿಸ್ಥಿತಿಯನ್ನು ಮುಂದುವರೆಯಲು ಅನುಮತಿಸಿದ ಯಾವುದೇ ರಾಜನಿಗೆ ಭಾರತ ಸರಕಾರವು ಬೆಂಬಲ ಕೊಡುವುದು ಸಾಧ್ಯವಿಲ್ಲ."

ಸಾಂಪ್ರದಾಯಿಕತೆಯ ಹುಟ್ಟು ಮತ್ತು ಬೆಳವಣಿಗೆ

ಕ್ರಿ.ಶ. ೧೯೧೧ರಲ್ಲಿ ಪಟ್ಟಕ್ಕೆ ಬಂದ ತಕ್ಷಣ ನಿಜಾಮ ಉಸ್ಮಾನ ಅಲೀಖಾನನ ತಲೆಯಲ್ಲಿ

ತಾನೊಬ್ಬ ಸಾರ್ವಭೌಮ ಇಸ್ಲಾಮ ಸಾಮ್ರಾಟನಾಗಬೇಕೆಂಬ ಆಕಾಂಕ್ಷೆ ಹುಟ್ಟಿಕೊಂಡಿತು. ಆಗ ಹೈದರಾಬಾದ ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆ ಸುಮಾರು ೧೦% ರಷ್ಟಿತ್ತು. ಹಿಂದೂಗಳ ಸಂಖ್ಯೆ ೮೬.೯% ರಷ್ಟಿತ್ತು. ಹೇಗಾದರೂ ಮಾಡಿ ತನ್ನ ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸಬೇಕು, ಹಿಂದೂಗಳ ಸಂಖ್ಯೆಯನ್ನು ಕಡಿಮೆಗೊಳಿಸಬೇಕೆಂದು ಯೋಚಿಸುತ್ತಿದ್ದನು. ೧೯೪೧ರ ಜನಗಣತಿಯ ಪ್ರಕಾರ ಮುಸ್ಲಿಮರ ಜನಸಂಖ್ಯೆ ೩.%ರಷ್ಟು ಹೆಚ್ಚಾಗಿ ಹಿಂದೂಗಳ ಸಂಖ್ಯೆ ೬%ರಷ್ಟು ಕಡಿಮೆಯಾಯಿತು. ಇಡೀ ರಾಜ್ಯದ ಜನಸಂಖ್ಯೆ ಒಂದು ಕೋಟಿ ನಲ್ವತ್ನಾಲ್ಕು ಲಕ್ಷ ನೂರಾ ನಲ್ವತ್ತೆರಡು ಇತ್ತು. ಅದರಲ್ಲಿ ತೊಂಬತ್ತಾರು ಲಕ್ಷ ತೊಂಬತ್ತೊಂಬತ್ತು ಸಾವಿರದ ಆರುನೂರಾ ಹದಿನೈದು ಜನ ಹಿಂದೂಗಳು, ಇಪ್ಪತ್ತೆರಡು ಲಕ್ಷ ಇಪ್ಪತ್ತೇಳು ಸಾವಿರದ ಐನೂರಾ ಇಪ್ಪತ್ತೇಳು ಜನ ಮುಸ್ಲಿಮರು ಹಾಗೂ ಇಪ್ಪತ್ನಾಲ್ಕು ಲಕ್ಷ ಎಪ್ಪತ್ಮೂರು ಸಾವಿರ ಇತರೆ ಧರ್ಮದ ಜನರಿದ್ದರು. ಎಂಟು ಜಿಲ್ಲೆಗಳನ್ನು ಹೊಂದಿದ್ದ ತೆಲುಗು ಭಾಷಿಕರ ಸಂಖ್ಯೆ ೪೮% ರಷ್ಟು, ಐದು ಜಿಲ್ಲೆಗಳನ್ನು ಹೊಂದಿದ್ದ ಮರಾಠಿ ಭಾಷಿಕರ ಸಂಖ್ಯೆ ೨೪%ರಷ್ಟು, ಮೂರು ಜಿಲ್ಲೆಗಳನ್ನು ಹೊಂದಿದ್ದ ಕನ್ನಡಿಗರ ಸಂಖ್ಯೆ ೧೨%ರಷ್ಟು ಮತ್ತು ಹದಿನಾರು ಜಿಲ್ಲೆಗಳ ಇಡೀ ರಾಜ್ಯದಲ್ಲಿ ಉರ್ದು ಭಾಷಿಕರ ಸಂಖ್ಯೆ ೧೦% ಇತ್ತು. ಆದರೂ ಇಲ್ಲಿಯ ವಿಡಂಬನೆಯೆಂದರೆ ಆಡಳಿತ ಭಾಷೆ ಉರ್ದು ಆಗಿತ್ತು. ಹೆಚ್ಚೂ ಕಡಿಮೆ ಶಿಕ್ಷಣ ಮಾಧ್ಯಮವೂ ಕೂಡ ಉರ್ದುವೇ ಆಗಿತ್ತು.

ಜನತೆಯಲ್ಲಿ ಶಿಕ್ಷಣದ ಪ್ರಸಾರವಾದರೆ ರಾಜಕೀಯ ಜಾಗೃತಿ ಉಂಟಾಗುತ್ತದೆ, ಪ್ರಜೆಗಳು ತನಗೆ ವಿರುದ್ಧವಾಗಿ ಬಂಡೇಳುತ್ತಾರೆ ಎಂಬುದು ನಿಜಾಮನ ಧೋರಣೆಯಾಗಿತ್ತು. ಹೀಗಾಗಿ ಆತ ಶಿಕ್ಷಣಕ್ಕೆ ಅಷ್ಟೊಂದು ಪ್ರಾಶಸ್ತ್ಯ ಕೊಡುತ್ತಿರಲಿಲ್ಲ. ಇಡೀ ರಾಜ್ಯದಲ್ಲಿ ೪೩ ಹೈಸ್ಕೂಲುಗಳು, ೧೯೮ ಮಿಡ್ಲಸ್ಕೂಲುಗಳು, ೨೯೭೭ ಪ್ರೈಮರಿ ಶಾಲೆಗಳು ಇದ್ದುವು. ಆರು ಇಂಟರಮೀಡಿಯೆಟ್ ಕಾಲೇಜುಗಳು, ಒಂದೇ ಒಂದು ಡಿಗ್ರಿ ನಿಜಾಮ ಕಾಲೇಜು ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯ ಇಷ್ಟು ಮಾತ್ರ ಇದ್ದುದು. ಅಲ್ಲಿಯೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉರ್ದು ಕಲಿಕೆಗೆ ಹೆಚ್ಚಿನ ಒತ್ತು ಕೊಡಲಾಗುತ್ತಿತ್ತು. ಎಲ್ಲ ಮಟ್ಟದಲ್ಲಿಯೂ ಇಸ್ಲಾಮಿ ಶಿಕ್ಷಣಕ್ಕೆ ಪ್ರೋತ್ಸಾಹನೆ ನೀಡಲಾಗುತ್ತಿತ್ತು.

ಉಸ್ಮಾನಿಯಾ ವಿಶ್ವವಿದ್ಯಾಲಯವು ಅಪ್ಪಟ ಇಸ್ಲಾಮಿಕ ಸಂಸ್ಕೃತಿಯ ಸಂಸ್ಥೆಯಾಗಿತ್ತು. ಅರಬ್ಬಿ, ಫಾರ್ಸಿ, ಉರ್ದು ಭಾಷೆಗಳಲ್ಲಿ ಪರಿಣತಿ ಹೊಂದಿದ ಮೌಲ್ವಿಗಳು ಇಲ್ಲಿಯ ಅಧ್ಯಾಪಕರಾಗಿರುತ್ತಿದ್ದರು. ಇಸ್ಲಾಂ ಧರ್ಮದ ಹೊಗಳಿಕೆ, ನಿಜಾಮನ ಯಶೋಗೀತೆ ಮತ್ತು ಹಿಂದೂಗಳ ಅವಹೇಳನ ಇಲ್ಲಿಯ ಅನಧಿಕೃತ ಪಠ್ಯಕ್ರಮದಲ್ಲಿ ಸೇರಿಕೊಂಡಿರುತ್ತಿತ್ತು. ಅಂದಿನ ಪರಿಸ್ಥಿತಿಯ ಒತ್ತಡದಿಂದಾಗಿ ಹಿಂದೂ ವಿದ್ಯಾರ್ಥಿಗಳು ಕೂಡ ಇಸ್ಲಾಮಿಕ ಸಂಸ್ಕೃತಿಯೊಂದಿಗೆ ತಾದಾತ್ಮ್ಯ ಹೊಂದಲೇಬೇಕಾಗುತ್ತಿತ್ತು. ಮುಸ್ಲಿಂ ವಿದ್ಯಾರ್ಥಿಗಳ ಜೊತೆಗೆ ಹಿಂದೂ ವಿದ್ಯಾರ್ಥಿಗಳೂ ಕೂಡ ಶೇರವಾನಿ, ಪಾಯಜಾಮಾ ತೊಟ್ಟು ಫೆಜ್‌ಕ್ಯಾಪ ಧರಿಸಬೇಕಾಗುತ್ತಿತ್ತು. ಮುಸ್ಲಿಮರಂತೆ ಫರ್ಸಿ ಸಲಾಮ (ನೆಲದ ಫರ್ಸಿಯನ್ನು ಮುಟ್ಟಿ ಮಾಡುವ ನಮಸ್ಕಾರ) ಮಾಡಬೇಕಾಗುತ್ತಿತ್ತು.

'ಆಸಫಿಯಾ ಮನೆತನವು ಅಮರವಾಗಿರಲಿ' ಎಂದು ಸ್ವತಃ ನಿಜಾಮನೇ ೧೯೧೨ರಲ್ಲಿ ಒಂದು ಕವಿತೆಯನ್ನು ರಚಿಸಿದ್ದನು. ಅದು ಗೆಜೆಟನಲ್ಲಿಯೂ ಪ್ರಕಟವಾಗಿತ್ತು. ಎಲ್ಲಾ ಶಿಕ್ಷಣ

ಸಂಸ್ಥೆಗಳಲ್ಲಿ ಪ್ರಾರ್ಥನಾರೂಪವಾಗಿ ಅದನ್ನು ಕಡ್ಡಾಯವಾಗಿ ಹಾಡಿ ನಿಜಾಮನ ಯಶಸ್ಸನ್ನು ಹಾರೈಸಬೇಕೆಂದು ಆಜ್ಞೆ ಕೂಡ ಹೊರಡಿಸಲಾಗಿತ್ತು. ಆ ಕವನದ ಎರಡು ಸಾಲುಗಳು ಈ ಕೆಳಗಿನಂತಿವೆ :

'ನಿಜಾಮ್-ಉಲ್-ಮುಲ್ಕ ಉಸ್ಮಾನ ಅಲೀಖನ್ ಆಸಿಫೇ ಸಾಬೇ –
ಸಾರಾಜೇ ದೀನ ಇಸ್ಲಾಮೀ ಅಮೀರ್ ಮೋಮಿನಾ ತೂ ಹೋ'

(ಓ ನಿಜಾಮನೇ ! ಇಸ್ಲಾಂ ಧರ್ಮದ ಸೂರ್ಯ ನೀನಾಗಿರುವೆ. ಎಲ್ಲಾ ಮುಸಲ್ಮಾನರ ಅಮೀರನೇ ನೀನಾಗಿರುವಿ)

ಇನ್ನೊಂದು ಕವನ :

'ಸಲಾತೀನೇ ಸಫಲ್ ಸಬ್ ಹೋಗಯೇ ನಜರೇ ಅಜಲ್ ಉಸ್ಮಾ
ಮುಸಲ್ಮಾನೋಂ ಕಾ ತೇರೀ ಸಲ್ತನತ್ ಸೇ ಹೈ ನೀಶಾ ಬಾಕೀ'

(ಇವೊತ್ತಿನ ವರೆಗೂ ಎಲ್ಲ ಸುಲ್ತಾನರು ಮೃತ್ಯುವಶರಾದರು. ಆದರೆ ಉಸ್ಮಾನ, ನಿನ್ನ ಸಾಮ್ರಾಜ್ಯದಲ್ಲಿ ಮುಸಲ್ಮಾನರ ಸ್ಮಾರಕಗಳು ಚಿರಕಾಲ ಬಾಳಲಿವೆ). (ಹೈದರಾಬಾದ ಮುಕ್ತಿ ಸಂಘರ್ಷ, ಪು.೩೦)

ಶಾಲಾಕಾಲೇಜುಗಳಲ್ಲಿ ಪ್ರಾರ್ಥನಾಗೀತೆಯಾಗಿ ಎಲ್ಲರೂ ಕಡ್ಡಾಯವಾಗಿ ಹಾಡಲೇ ಬೇಕಾದಂಥ ಇನ್ನೊಂದು ಗೀತೆ ಇದೆ. ಅದರ ಪೂರ್ಣಪಾಠ 'ಹೈದರಾಬಾದ ಮುಕ್ತಿ ಸಂಘರ್ಷ'ದ ಪುಟ ೩೨ ರಲ್ಲಿದೆ, ನೋಡಬಹುದು. ಅದರ ತಾತ್ಪರ್ಯ ಈ ಮುಂದಿನಂತಿದೆ :

'ನಿಜಾಮ ಉಸ್ಮಾನ ಅಲೀಖನ್ ಹಾಗೂ ಆತನ ಕುಟುಂಬದವರಿಗೆ ಅಲ್ಲಾಹನು ಒಳ್ಳೆಯದು ಮಾಡಲಿ. ಹೈದರಾಬಾದ ರಾಜ್ಯ ಹಾಗೂ ಆಸಫಿಯಾ ಮನೆತನವು ಸೂರ್ಯ ಚಂದ್ರರಿರುವವರೆಗೂ ಮುಂದುವರಿಯಲಿ. ದೇವರು ನಿನಗೆ ಸಂಪತ್ತನ್ನು ಕರುಣಿಸಲಿ. ಪ್ರಜೆಗಳು ನಿನ್ನ ಹುಟ್ಟುಹಬ್ಬವನ್ನು ಆಚರಿಸುವಂತಾಗಲಿ.'

ಇಂಗ್ಲಿಷರೊಂದಿಗೆ ಆದ ಒಪ್ಪಂದದ ಪ್ರಕಾರ ನಿಜಾಮನು ತನ್ನಲ್ಲಿ ಹೆಚ್ಚಿನ ಸೈನ್ಯಬಲವನ್ನು ಇಟ್ಟುಕೊಳ್ಳುವಹಾಗಿರಲಿಲ್ಲ. ಕಾಲಾಳು, ಕುದುರೆ ಸವಾರರು, ಪೊಲೀಸರು ಸೇರಿ ಸೇನಾಪಡೆಯ ಸಂಖ್ಯೆ ಇಪ್ಪತ್ತು ಸಾವಿರಕ್ಕೆ ಮೀರದಂತಿರಬೇಕಾಗಿತ್ತು. ಆದ್ದರಿಂದ ನಿಜಾಮನು ತನ್ನ ಸೇನಾಬಲವು ೧೮,೨೨೬ ಎಂದು ತೋರಿಸುತ್ತಿದ್ದನು. ಇದರಲ್ಲಿ ಎರಡು ವಿಭಾಗಗಳಿದ್ದವು.

ಒಂದು 'ಬಾ-ಕಾಯ್ದಾ ಲಷ್ಕರ' : (ಇದರ ನಿಜವಾದ ಅರ್ಥ ನಿಯಮಬದ್ಧವಾಗಿ ಎಂದು). ಈ ವಿಭಾಗದಲ್ಲಿ ಶಿಸ್ತಿನಿಂದ ಕೂಡಿದ ಸೈನಿಕರು, ಅಂದರೆ ಮಿಲ್ಟ್ರಿ ದಳ ಸೇರಿರುತ್ತಿತ್ತು.

ಇನ್ನೊಂದು 'ಬೇ-ಕಾಯ್ದಾ ಲಷ್ಕರ': (ಇದರ ಅರ್ಥ ನಿಯಮ ಬಾಹಿರವಾಗಿ ಎಂದು). ಇದರಲ್ಲಿ ಪೊಲೀಸರು ಸೇರಿರುತ್ತಿದ್ದರು.

ಈ ಸೇನಾ ಪಡೆಗಳಲ್ಲಿ ಸ್ಥಳೀಯ ಹಿಂದೂಗಳ ಸಂಖ್ಯೆಯನ್ನು ಸಾಧ್ಯವಿದ್ದಷ್ಟು ಕಡಿತಗೊಳಿಸಿ ಮುಸ್ಲಿಮರ ಸಂಖ್ಯೆಯನ್ನು ೯೫%ಕ್ಕೆ ಏರಿಸಲಾಗಿತ್ತು. ಇದು ನಿಜಾಮನು ಕಾನೂನು

ಬದ್ಧವಾಗಿ ಘೋಷಿಸಿಕೊಂಡ ಅಂಕಿಸಂಖ್ಯೆಯಾದರೂ ಆತನ ಸೇನಾಪಡೆಯಲ್ಲಿ ಪೊಲೀಸ ದಳವನ್ನು ಹೊರತುಪಡಿಸಿ ೪೨,೦೦೦ ಸೇನೆ ಇತ್ತು. ಇದೂ ಅಲ್ಲದೆ ಎರಡು ಲಕ್ಷ ರಜಾಕಾರರನ್ನೂ ಅರೆಸೈನಿಕ ದಳವೆಂದು ಸೇರಿಸಿಕೊಳ್ಳಲಾಗಿತ್ತು. ಹೈದರಾಬಾದ ಚಳವಳಿಗೆ ಈ ರಜಾಕಾರ ಸಂಘಟನೆಯ ಪಾತ್ರ ಹೆಚ್ಚು ಮಹತ್ವದ್ದಾಗಿದೆ.

ರಜಾಕಾರ ಸಂಘಟನೆಗೆ ಮುಂಚೆ :

ನಿಜಾಮ ರಾಜ್ಯದ ಸರ್ವನಾಶಕ್ಕೆ ಈ ರಜಾಕಾರ ಸಂಘಟನೆಯೇ ಪ್ರಮುಖ ಕಾರಣವಾಯಿತೆಂಬ ಮಾತನ್ನು ಸ್ವತಃ ನಿಜಾಮನಾದ ಮೀರ ಉಸ್ಮಾನ ಅಲೀಖಾನನೇ ಕೊನೆಯಲ್ಲಿ ಒಪ್ಪಿಕೊಂಡಿದ್ದನು. ರಜಾಕಾರ ಸಂಘಟನೆಯು ಹೈದರಾಬಾದಿನ ರಾಜ್ಯಾಡಳಿತದ ರಂಗದ ಮೇಲೆ ಬರುವುದಕ್ಕೆ ಮುಂಚೆ ಇನ್ನೂ ಒಂದೆರಡು ಸಂಘಟನೆಗಳು ನಿಜಾಮನ ಆಕಾಂಕ್ಷೆಗಳನ್ನು ಸಾಕಾರಗೊಳಿಸಲು ಹುಟ್ಟಿಕೊಂಡಿದ್ದವು. ಅವುಗಳಲ್ಲಿ 'ಖಾಕಸಾರ ಪಾರ್ಟಿ' ಎಂಬುದು ಒಂದು. ಇದಕ್ಕೆ 'ನಿಜಾಮ ಸೇನೆ' ಎಂಬ ಇನ್ನೊಂದು ಹೆಸರಿನಿಂದಲೂ ಗುರುತಿಸುತ್ತಿದ್ದರು. ಈ ಸಂಘಟನೆಯ ಉದ್ದೇಶವೆಂದರೆ ನಿಜಾಮ ರಾಜ್ಯದಲ್ಲಿ ಶುದ್ಧೀಕರಣ ಮಾಡುವುದು. ಎಲ್ಲರನ್ನೂ 'ಪಾಕ್' ಎಂದರೆ ಪವಿತ್ರರನ್ನಾಗಿ ಮಾಡುವುದು. ಇಸ್ಲಾಮ ಧರ್ಮವನ್ನು ಪಾಲಿಸುವವರು ಮಾತ್ರ 'ಪಾಕ್' ಆಗಿರುತ್ತಾರೆ. ಇಸ್ಲಾಮನ್ನು ನಂಬದವರೆಲ್ಲ 'ನಾಪಾಕ್' ಅಂದರೆ ಅಪವಿತ್ರರು ಎಂದು ಮುಸ್ಲಿಮರು ಭಾವಿಸುತ್ತಾರೆ. ಅಂಥವರನ್ನು 'ಕಾಫಿರ್'ರೆಂದು ಸಂಬೋಧಿಸುತ್ತಾರೆ. ನಿಜಾಮ ರಾಜ್ಯದಲ್ಲಿ ಯಾರೊಬ್ಬನೂ ಕಾಫಿರನಾಗಿ ಉಳಿಯಕೂಡದು ಎಂಬುದು ಖಾಕಸಾರ ಪಾರ್ಟಿಯ ಮೂಲ ಉದ್ದೇಶವಾಗಿತ್ತು. ಇದು 'ನಿಜಾಮ ಸೇನೆ'ಯಾದ್ದರಿಂದ ನಿಜಾಮನ ಆಶ್ರಯದಲ್ಲಿಯೇ ಹುಟ್ಟಿಕೊಂಡು ಬೆಳೆಯುತ್ತಿತ್ತು. ತನ್ನ ಇತಿಮಿತಿಗಳಲ್ಲಿ ಜನತೆಯನ್ನು 'ಪಾಕ್'ಗೊಳಿಸುವ ಅಂದರೆ ಮತಾಂತರದ ಮೂಲಕ ಮುಸ್ಲಿಮರನ್ನಾಗಿ ಮಾಡುವ ಕಾರ್ಯ ಕೈಗೊಂಡಿತ್ತು. ಈ ಪಾರ್ಟಿಯು ಕೈಕೊಂಡ ಮತಾಂತರದ ಪ್ರಸಂಗದಲ್ಲಿ ಹೆಚ್ಚಿನ ಅತಿರೇಕದ ಘಟನೆಗಳು ವರದಿಯಾದಂತೆ ಕಾಣುವುದಿಲ್ಲ. ಅದೊಂದು ಇಸ್ಲಾಮಿನ ಕಟ್ಟರಪಂಥಿ ಸಂಘಟನೆಯಾಗಿತ್ತು ಎಂಬುದು ಸುಳ್ಳಲ್ಲ.

ದೀನದಾರ ಅಂಜುಮನ್ ಚೆನ್ನಬಸವೇಶ್ವರ ಕಿಬಲಿ

ದೀನದಾರ ಅಂಜುಮನ್ ಚೆನ್ನಬಸವೇಶ್ವರ ಕಿಬಲಿ ಎಂಬ ಒಂದು ಹೊಸ ಮಾದರಿಯ ಪಂಥವು ಕ್ರಿ.ಶ. ೧೯೨೪ರಲ್ಲಿ ಗುಲಬರ್ಗಾ ಜಿಲ್ಲೆಯ ಬೆಲ್ಲಂಪೇಟ ಎಂಬಲ್ಲಿ ಹುಟ್ಟಿಕೊಂಡಿತ್ತು. 'ಹಜರತ ಮೌಲಾನಾ ಸಿದ್ದಿಕೀ' ಎಂಬ ತರುಣನೊಬ್ಬನು ಇದನ್ನು ಹುಟ್ಟುಹಾಕಿದ್ದನು. ಈತ ತಕ್ಕಮಟ್ಟಿಗೆ ಹಿಂದೂಧರ್ಮವನ್ನು ಓದಿಕೊಂಡಿದ್ದ. ವಿಶೇಷವಾಗಿ ಲಿಂಗಾಯತ ಧರ್ಮ ಹಾಗೂ ಶರಣರ ಕುರಿತು ಚೆನ್ನಾಗಿ ತಿಳಿದುಕೊಂಡಿದ್ದನು. ಪುರಾಣ ಕಥೆಗಳ ಆಧಾರದಿಂದ ಚೆನ್ನಬಸವಣ್ಣನ ಅವತಾರವನ್ನೇ ಪಡೆದು ತಾನು ಲಿಂಗಾಯತರನ್ನು ಉದ್ಧಾರ ಮಾಡಲು ಬಂದಿರುವುದಾಗಿ ಹೇಳಿಕೊಳ್ಳುತ್ತಿದ್ದನು. ಆತ 'ಲಿಂಗಾಯತ' ಎಂಬ ಪದದ ನಿಷ್ಪತ್ತಿಯನ್ನು ಈ ರೀತಿಯಾಗಿ ವಿವರಿಸುತ್ತಿದ್ದನು : "ಕುರಾನಿನಲ್ಲಿ ಅನೇಕ ಆಯತಗಳಿವೆ. ಆಯತಗಳೆಂದರೆ ವಚನಗಳು. ಅಂಥ ಆಯತಗಳಲ್ಲಿ ಲಿಂಗಕ್ಕೆ ಸಂಬಂಧಿಸಿದ ಕೆಲವು ಆಯತಗಳೂ ಇವೆ. ಈ ಲಿಂಗಾಯದ

ಸಿದ್ಧಾಂತಗಳು ಆ ಆಯತಗಳಿಂದಲೇ ಹುಟ್ಟಿಕೊಂಡಿವೆ. ಹೀಗಾಗಿ ಲಿಂಗಾಯತ ಧರ್ಮವು ಇಸ್ಲಾಮದ ಒಂದು ಭಾಗವೇ ಆಗಿದೆಯೇ ಹೊರತು ಅದು ಬೇರೆಯಲ್ಲ' ಎಂದು ಲಿಂಗಾಯತರನ್ನು ನಂಬಿಸುತ್ತಿದ್ದನು.

ಈತನಿಗೆ ನಾಲ್ಕು ಜನ ಶಿಷ್ಯಂದಿರಿದ್ದರು. ಅವರು ತಮ್ಮನ್ನು ವ್ಯಾಸ, ಶ್ರೀಕೃಷ್ಣ, ನರಸಿಂಹ ಮತ್ತು ವೀರಭದ್ರನ ಅವತಾರವೆಂದು ಹೇಳಿಕೊಳ್ಳುತ್ತಿದ್ದರು. ಉಸ್ಮಾನ ಅಲೀಖಾನನನ್ನು ದ್ವಾಪರ ಯುಗದ ಧರ್ಮರಾಜನ ಅವತಾರವೆಂದು ಪ್ರಚಾರ ಮಾಡುತ್ತಿದ್ದರು. ಮೌಲಾನಾ ಸಿದ್ಧಿಕನು ತನ್ನ ಮೈಮೇಲೆ ಶಂಖ, ಚಕ್ರ, ಗದಾ, ಪದ್ಮ, ಧನುಷ, ಬಾಣ, ಸರ್ಪ, ಶಿವಲಿಂಗ ಮುಂತಾದ ಹಿಂದೂಗಳ ಪವಿತ್ರ ಚಿಹ್ನೆಗಳ ಹಚ್ಚೆ ಹಾಕಿಸಿಕೊಂಡಿದ್ದನು. ಅವು ಜನ್ಮಜಾತವಾಗಿ ತನ್ನ ಮೈಮೇಲೆ ಬಂದಿವೆ ಎಂದು ಬುರುಡೆ ಬಿಡುತ್ತಿದ್ದನು. ದೀನದಾರ ಪಂಥದ ಅನುಯಾಯಿಗಳು ತಲೆಗೆ ಹಸಿರು ಪೇಟಾ ಸುತ್ತಿ, ಕೇಸರಿ ಬಣ್ಣದ ವಸ್ತ್ರ ತೊಡುತ್ತಾರೆ ಮತ್ತು ಗಡ್ಡ ಬಿಟ್ಟಿರುತ್ತಾರೆ.

ಮೌಲಾನಾ ಸಿದ್ಧಿಕನು ಕೃಷ್ಣ, ವ್ಯಾಸ, ನರಸಿಂಹ ಮುಂತಾದವರನ್ನು ತನ್ನ ಪ್ರಚಾರ ತಂತ್ರದಲ್ಲಿ ಬಳಸಿಕೊಳ್ಳುತ್ತಿದ್ದರೂ ಲಿಂಗಾಯತರಷ್ಟು ಸುಲಭವಾಗಿ ಈ ಸ್ಮಾರ್ಥ ಮತ್ತು ವೈಷ್ಣವ ಬ್ರಾಹ್ಮಣರು ತನ್ನ ಬುಟ್ಟಿಗೆ ಬೀಳುವುದಿಲ್ಲವೆಂಬುದನ್ನು ಆತ ಚೆನ್ನಾಗಿ ಅರ್ಥಮಾಡಿಕೊಂಡಿದ್ದ. ಆತ ತುಂಬ ಚತುರನೂ ಧೂರ್ತನೂ ಆಗಿದ್ದನು. ಮೊದಲು ಲಿಂಗಾಯತರನ್ನೇ ತನ್ನ ಗುರಿಯಾಗಿಟ್ಟುಕೊಂಡು ಅನೇಕ ಜನ ಲಿಂಗಾಯತರನ್ನು ಮತಾಂತರಗೊಳಿಸಿದ್ದನು. ಆತ 'ಸರವರೇ ಆಲಮ್' ಎಂಬ ಒಂದು ಗ್ರಂಥವನ್ನೂ ರಚನೆ ಮಾಡಿದ್ದನು. ಅದರಲ್ಲಿ ರಾಮ, ಕೃಷ್ಣ, ಮತ್ತು ಇತರ ದೇವಿ ದೇವತೆಗಳನ್ನು ಕೆಟ್ಟದಾಗಿ ನಿಂದಿಸಿದ್ದನು.

ಈ ದೀನದಾರ ಸಿದ್ಧಿಕಿಯು ಚತುರ ಮಾತುಗಾರನಾಗಿದ್ದು ತನ್ನ ಮಾತಿನ ಮೋಡಿಯಲ್ಲಿ ಎಂಥವರನ್ನು ಬೇಕಾದರೂ ಮರುಳು ಮಾಡುತ್ತಿದ್ದನು. ಮಾತುಗಾರಿಕೆಯ ಚಾತುರ್ಯದಿಂದ ಸರಕಾರಿ ಅಧಿಕಾರಿಗಳನ್ನು, ಶ್ರೀಮಂತ ಮುಸ್ಲಿಮರನ್ನು, ನವಾಬರನ್ನು ಸುಲಭವಾಗಿ ಒಲಿಸಿಕೊಳ್ಳುತ್ತಿದ್ದನು. ಅವರಿಂದ ನಿಧಿ ಸಂಗ್ರಹಿಸುತ್ತಿದ್ದನು. ಹೈದರಾಬಾದ ರಾಜ್ಯದ ಲಕ್ಷಾಂತರ ಹಿಂದೂಗಳನ್ನು ಮತಾಂತರಗೊಳಿಸಿ ಮುಸ್ಲಿಮರನ್ನಾಗಿ ಮಾಡುತ್ತೇನೆಂದೂ, ರಾಜ್ಯದ ಉದ್ದಗಲಕ್ಕೂ ಇರುವ ಹಿಂದೂ ದೇವಾಲಯಗಳನ್ನು, ಮಂದಿರಗಳನ್ನು, ದೇಗುಲಗಳನ್ನು ಕೆಡವಿ ಆ ಜಾಗದಲ್ಲಿ ಮಸೀದಿಗಳನ್ನು ಕಟ್ಟಿಸುವುದಾಗಿ ಹೇಳುತ್ತಿದ್ದನು. ಆತನ ಇಂಥ ಮಾತುಗಳಿಗೆ ಮುಸ್ಲಿಂ ಜನಾಂಗದವರು ಸಹಜವಾಗಿಯೇ ಮರುಳಾಗುತ್ತಿದ್ದರು. ಈತನ ಈ ರೀತಿಯ ಕಾರ್ಯವೈಖರಿಯು ನಿಜಾಮನ ವರೆಗೂ ತಲುಪಿತ್ತು. ನಿಜಾಮನು ನೇರವಾಗಿಯಲ್ಲದಿದ್ದರೂ ಈತನಿಗೆ ಒಳಗೊಳಗೆ ಕುಮ್ಮಕ್ಕು ಕೊಡುತ್ತಿದ್ದನು. ಯಾಕೆಂದರೆ ಆತನಿಗೆ ತನ್ನ ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿಸಬೇಕಾಗಿತ್ತು. ಮುಸ್ಲಿಂ ಸಾರ್ವಭೌಮತ್ವವನ್ನು ಸ್ಥಾಪಿಸಬೇಕಾಗಿತ್ತು.

ದೀನದಾರ ಸಿದ್ಧಿಕನು ಯಾವ ಸದ್ದುಗದ್ದಲವಿಲ್ಲದೆ ಶಾಂತವಾಗಿ ಹಿಂದೂಗಳ ಮನಪರಿವರ್ತನೆಗೊಳಿಸಿ ಅವರನ್ನು ಮುಸ್ಲಿಮರನ್ನಾಗಿ ಮಾಡುತ್ತಿದ್ದನು. ಇದು ಕೆಲವು ಪ್ರಜ್ಞಾವಂತ ಹಿಂದೂಗಳ ಗಮನಕ್ಕೆ ಬಾರದೇ ಹೋಗಲಿಲ್ಲ. ಅಂಥ ಕೆಲವು ಹಿಂದೂ ಸಂಘಟನೆಗಳು ಈ

ದೀನದಾರ ಸಿದ್ದಿಕಿಯ ಚಟುವಟಿಕೆಗಳನ್ನು ನಿಯಂತ್ರಿಸಬೇಕೆಂದು ದಿ. ೧೦ ಜನವರಿ, ೧೯೩೨ರಂದು ನಿಜಾಮನಲ್ಲಿ ಮನವಿ ಮಾಡಿಕೊಂಡರು. ನಿಜಾಮನು ದೂರು ತಂದವರ ಕಣ್ಣೊರೆಸುವಂತೆ ಮಾಡಿದನೇ ಹೊರತು ಸಿದ್ದಿಕಿಯ ವಿರುದ್ಧವಾಗಿ ಯಾವ ಕ್ರಮವನ್ನೂ ಕೈಕೊಳ್ಳಲಿಲ್ಲ. ಇದರಿಂದ ಸಿದ್ದಿಕಿಯ ಹಿಂದೆ ನಿಜಾಮನ ಕುಮ್ಮಕ್ಕು ಇತ್ತೆಂಬುದು ಸ್ಪಷ್ಟವಾಗುತ್ತದೆ.

ದೀನದಾರ ಸಿದ್ದಿಕಿಯು ಒಂದು ದೊಡ್ಡ ಯೋಜನೆಯನ್ನೇ ಹಾಕಿಕೊಂಡಿದ್ದನು. ಆತನ ಪ್ರಕಾರ ತ್ರೇತಾಯುಗದಲ್ಲಿ ಶ್ರೀ ರಾಮನು ವಾಲಿ ಮತ್ತು ರಾವಣರನ್ನು ಸಂಹಾರ ಮಾಡಿ ಕಿಷ್ಕಿಂಧೆ ಮತ್ತು ಲಂಕೆಯ ಅಪಾರ ಸಂಪತ್ತನ್ನು ಅಪಹರಿಸಿಕೊಂಡು ಬಂದು ತಿರುಪತಿ ಮತ್ತು ಹಂಪಿಯ ದೇವಸ್ಥಾನಗಳಲ್ಲಿ ಹೂತಿಟ್ಟಿದ್ದಾನೆ. ಆ ಎರಡೂ ಕಡೆಗೆ ದಾಳಿ ಮಾಡಿ ನೆಲ ಅಗೆದು ಅಲ್ಲಿ ಹೂತಿಟ್ಟ ಅಪಾರ ಸಂಪತ್ತನ್ನು ವಶಪಡಿಸಿಕೊಳ್ಳುವುದು ಆತನ ಯೋಜನೆಯಾಗಿತ್ತು. ಆ ಸಂಪತ್ತಿನಿಂದ ಇಸ್ಲಾಂ ಧರ್ಮದ ಪ್ರಚಾರ ಪ್ರಸಾರ ಮಾಡುವುದು ತನ್ನ ಉದ್ದೇಶವೆಂದು ಹೇಳುತ್ತಿದ್ದನು. ಈ ರೀತಿ ಮಾಡುವುದರಲ್ಲಿ ದಕ್ಷಿಣ ಭಾರತದಲ್ಲಿ ದೇವಸ್ಥಾನಗಳೆಲ್ಲ ಧ್ವಂಸವಾಗಿ ಈ ಪ್ರದೇಶದಲ್ಲಿ ಮೂರ್ತಿ ಪೂಜೆಯನ್ನು ಬೇರುಸಹಿತ ಕಿತ್ತೊಗೆಯುತ್ತೇನೆ ಎಂದು ಪಣತೊಟ್ಟಿದ್ದನು.

ತನ್ನ ಯೋಜನೆಯ ಪ್ರಕಾರ ಆತನು ಡಿಸೆಂಬರ್ ೧೯೩೧ರಲ್ಲಿ ಹಂಪಿಯಲ್ಲಿ ಒಂದು ಬೃಹತ್ ಸಭೆ ನಡೆಸುವುದಾಗಿ ಘೋಷಿಸಿದನು. ಆ ಸಭೆಯಲ್ಲಿ ಸಾವಿರಾರು ಜನ ಪಠಾಣರು, ಮುಸ್ಲಿಮರು ಭಾಗವಹಿಸುವರು. ಅಂಥ ದೊಡ್ಡ ಸಭೆಯ ಎದುರಿಗೆ ಚೆನ್ನಬಸವಣ್ಣನು ನಬಿಯ (ಇಸ್ಲಾಮಿನ ನಂಬಿಕೆಯಂತೆ ಏಕಮಾತ್ರ ಸರ್ವಶಕ್ತನಾದ ದೇವರು) ಹೆಸರನ್ನು ಘೋಷಿಸುವನು. ನಬಿಯ ಹೆಸರಿನ ಘೋಷಣೆಯೊಂದಿಗೆ ಪಠಾಣರು ಮತ್ತು ಮುಸ್ಲಿಮರು 'ಅಲ್ಲಾ ಹೂ ಅಕ್ಬರ' ಎಂದು ಘೋಷಿಸುತ್ತ ದೇವಸ್ಥಾನದ ಮೇಲೆ ದಾಳಿ ಮಾಡುವರು. ದೇವಸ್ಥಾನದಲ್ಲಿ ಹೂತಿಟ್ಟ ಎಂಬತ್ತೈದು ಕೋಟಿ ಸಂಪತ್ತನ್ನು ವಶಪಡಿಸಿಕೊಳ್ಳುವರು.

ಆದರೆ ಆತ ಘೋಷಿಸಿದಂತೆ ಆ ದಿನ ಹಂಪಿಯಲ್ಲಿ ಅಂಥ ಯಾವ ಸಭೆಯೂ ನಡೆಯಲಿಲ್ಲ.

ಅದೇ ವರ್ಷ ೨೦ ಡಿಸೆಂಬರದಂದು ಒಂದು ಭಾಷಣದಲ್ಲಿ ಆತ ಗುಡುಗಿದ,

"ಪ್ರಪಂಚದಲ್ಲಿರುವ ಕಾಫಿರರೆಲ್ಲ ಮುಸ್ಲಿಮರ ವೈರಿಗಳಾಗಿದ್ದಾರೆ. ಎಲ್ಲಿಯವರೆಗೆ ಅವರು ಮುಸ್ಲಿಮರಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಗೆಳೆಯರಾಗಲು ಸಾಧ್ಯವಿಲ್ಲ." ಮುಂದೆ ೨೬ ಡಿಸೆಂಬರದಂದು ಇನ್ನೊಂದು ಮುಸ್ಲಿಮ ಸಭೆಯಲ್ಲಿ ನುಡಿದ, "ವೈರಿಯನ್ನು ಗೆಲ್ಲಲು ಮತ್ತು ಅವರನ್ನು ಕೊಲ್ಲಲು ಆದೇಶಿಸುವಂಥ ೫೦೦ ಆಯತಗಳು ನಮ್ಮ ಕುರಾನಿನಲ್ಲಿವೆ... ನೀವು ಅವರಿಗೆ (ಹಿಂದೂಗಳಿಗೆ) ಯಾಕೆ ಹೆದರುತ್ತೀರಿ?" (*ಹೈದರಾಬಾದ ಸತ್ಯಾಗ್ರಹ ಕಾ ರಕ್ತರಂಜಿತ ಇತಿಹಾಸ, ಪು. ೫೫*).

ಆತ ಮುಸಲ್ಮಾನ ಬಾಂಧವರನ್ನು ಕುರಿತು ಹೇಳುತ್ತಿದ್ದ, "ನನ್ನ ಮುಸ್ಲಿಂ ಸ್ನೇಹಿತರೆ, ಕುರಾನ ನಿಮಗೆ ಒಂದು ವಿಷಯವನ್ನು ಕಲಿಸಿದೆ. ಅದೇನೆಂದರೆ ನೀವು ವಾಸಿಸುವ ನಾಡೆಲ್ಲ

ಪಾಕಿಸ್ತಾನವಾಗಿ ಮಾರ್ಪಡಬೇಕು. ಅಂದರೆ ನೀವು ಬೇರೆಯವರಿಗೆ 'ಕುರಾನ್-ಏ-ಮಜೀದ'ದ ಜಲಪಾನ ಮಾಡಲು ಒತ್ತಾಯಿಸಬೇಕು. ಒಂದು ಪಾತ್ರೆಯಲ್ಲಿ ಒಂದು ಭಾಗ ಹಾಲು, ಮೂರು ಭಾಗ ಶಗಣಿ ಇದ್ದರೆ ಅದನ್ನು ಶುದ್ಧ ಎಂದು ಹೇಳಲಾಗುವುದಿಲ್ಲ. ಅರಬಸ್ತಾನ, ತುರ್ಕಿಸ್ತಾನ ಮತ್ತು ಅಫಘಾನಿಸ್ತಾನ ಅವು ಯಾವ ದೇಶಗಳೇ ಆಗಿರಲಿ, ಅದರಲ್ಲಿ ಕಾಫಿರಸ್ತಾನವಿದ್ದರೆ ಅದನ್ನು ಪಾಕಿಸ್ತಾನ ಎಂದು ಕರೆಯಲಾಗುವುದಿಲ್ಲ." (*ಹೈದರಾಬಾದ ಮುಕ್ತಿ ಸಂಘರ್ಷ, ಪು. ೪೩*).

ಈ ರೀತಿಯಾಗಿ ದೀನದಾರ ಸಿದ್ದಿಕಿಯ ಕೋಮು ಪ್ರಚೋದನೆಯ ಪ್ರಹಸನಗಳು ಬೆಳೆಯುತ್ತಲೇ ಹೋದವು. ಮುಗ್ಧ ಹಿಂದೂಗಳು ಆತನ ಮಾತಿಗೆ ಮರುಳಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳಹತ್ತಿದರು. ದಿನದಿಂದ ದಿನಕ್ಕೆ ಸಿದ್ದಿಕಿಯ ಪ್ರಭಾವ ಬೆಳೆಯಹತ್ತಿತು. ಆತನ ಈ ಬೆಳೆಯುತ್ತಿರುವ ಪ್ರಭಾವವನ್ನು ಕಂಡು ರಜಾಕಾರ ಸಂಘಟನೆಯ ನೇತಾರನಾದ ಕಾಸಿಂ ರಜವಿಯು ಒಳಗೊಳಗೆ ಹೆದರಿದನು. ದೀನದಾರ ಪಂಥವು ಎಲ್ಲಿ ತನಗೆ ಪ್ರತಿಸ್ಪರ್ಧಿಯಾಗಿ ನಿಲ್ಲುತ್ತದೋ ಎಂಬ ಭಯ ರಜವಿಗೆ ಆವರಿಸಿತ್ತು. ಯಾಕೆಂದರೆ ಯಾವ ರಕ್ತಪಾತವೂ ಇಲ್ಲದೆ ಸಿದ್ದಿಕಿಯು ಹಿಂದೂಗಳನ್ನು ಮತಾಂತರಗೊಳಿಸುತ್ತಿದ್ದನು. ಆದರೆ ರಜಾಕಾರರು ಮತಾಂತರಗೊಳಿಸುವ ವಿಧಾನವೇ ಬೇರೆಯಾಗಿತ್ತು. ಅದು ಕ್ರೌರ್ಯದಿಂದ ಕೂಡಿತ್ತು. ಇಂಥ ಅತಿರೇಕದ ಮತಾಂತರ ವಿಧಾನಕ್ಕಿಂತಲೂ ಸದ್ದುಗದ್ದಲವಿಲ್ಲದ ಮತಾಂತರವನ್ನು ಮೆಚ್ಚಿ ನಿಜಾಮನು ಸಿದ್ದಿಕಿಯನ್ನು ಹತ್ತಿರಕ್ಕೆ ಕರೆದುಕೊಂಡು ತನ್ನನ್ನು ದೂರ ಮಾಡಿದರೆ ಹೇಗೆ ಎಂಬ ಆತಂಕ ರಜವಿಯದಾಗಿತ್ತು. ಆದರೆ ಅಷ್ಟೊತ್ತಿಗೆ ನಿಜಾಮನು ರಜಾಕಾರರ ಕೈಗೊಂಬೆಯಾಗಿದ್ದನು. ತನ್ನ ಹಿಡಿತದಿಂದ ನಿಜಾಮನು ಬಿಡಿಸಿಕೊಳ್ಳುವುದು ಸಾಧ್ಯವಿಲ್ಲ ಎಂಬ ಸಮಾಧಾನವೂ ಆತನಿಗಿತ್ತು.

ಆ ಕಡೆ ಹಿಂದೂವಾದಿ ಸಂಘಟನೆಗಳಿಗೆ ಸಿದ್ದಿಕಿಯ ಚಟುವಟಿಕೆಗಳು ಕೆರಳಿಸುತ್ತಿದ್ದವು. ಸಿದ್ದಿಕಿಯು ಧೂರ್ತತನವನ್ನು ಬಯಲಿಗೆಳೆದು ಆತನ ಟೊಳ್ಳುತನವನ್ನು ಜನರಿಗೆ ತೋರಿಸಕೊಡಬೇಕಾಗಿತ್ತು. ಮಾತಿನಲ್ಲೇ ಮರುಳು ಮಾಡುತ್ತಿದ್ದ ಸಿದ್ದಿಕಿಯನ್ನು ಮಾತಿನಲ್ಲೇ ಬಗ್ಗುಬಡಿಯುವುದಕ್ಕಾಗಿ ಆರ್ಯಸಮಾಜವು ಹೊಂಚು ಹಾಕಿತು. ಸ್ಥಳೀಯ ನಾಯಕರ ಜೊತೆಗೆ ಹೊರಗಿನಿಂದಲೂ ಆರ್ಯ ವಿದ್ವಾಂಸರನ್ನು ಕರೆಸಿ ಅಲ್ಲಲ್ಲಿ ಭಾಷಣಗಳನ್ನು ಏರ್ಪಡಿಸಹತ್ತಿದರು. ಸ್ಥಳೀಯ ನೇತಾರರಾದ ಬನ್ಸಿಲಾಲ ವ್ಯಾಸ, ಮೋಹನಲಾಲಜೀ ಬದವಾ, ಮುನ್ನಾಲಾಲ ಜೀ ಮಿಶ್ರ, ಮೋಹನಚಾರಿ ಮೇವಾಡಿ ಮುಂತಾದ ಆರ್ಯಸಮಾಜದ ನಾಯಕರು ಒಳ್ಳೆಯ ಭಾಷಣಕಾರರಾಗಿದ್ದರು. ಹೊರಗಿನಿಂದ ಬಂದವರಲ್ಲಿ ಮಂಗಲದೇವ ಶಾಸ್ತ್ರೀ, ಚಂದ್ರಭಾನು ಎಂಬವರು ಪ್ರಮುಖರಾಗಿದ್ದರು. ಇವರೆಲ್ಲ ಸೇರಿ ರಾಜ್ಯದ ತುಂಬ ಸುಮಾರು ಎರಡು ವರ್ಷಗಳ ವರೆಗೆ ಊರೂರು ಸುತ್ತಾಡಿ ದೀನದಾರ ಸಿದ್ದಿಕಿಯ ಪೊಳ್ಳುತನವನ್ನು ಪ್ರಚಾರ ಮಾಡಿದರು.

ಇದೇ ಸಂದರ್ಭದಲ್ಲಿ ದೀನದಾರ ಸಿದ್ದಿಕಿಯ ವಿರುದ್ಧವಾಗಿ ಜನರಲ್ಲಿ ಜಾಗೃತಿಯನ್ನು ಮೂಡಿಸಲು ದೆಹಲಿಯಿಂದ ರಾಮಚಂದ್ರ ಜೀ ಆರ್ಯ ಎಂಬವರನ್ನು ಬರಮಾಡಿಕೊಳ್ಳಲಾಯಿತು. ಹೈದರಾಬಾದ ವಿಮೋಚನಾ ಚಳವಳಿಯ ಆರ್ಯಸಮಾಜದ ಕಾರ್ಯಕರ್ತರಲ್ಲಿ ರಾಮಚಂದ್ರ ಜೀ ದೆಹಲವಿಯವರ ಹೆಸರು ಅವಿಸ್ಮರಣೀಯವಾಗಿದೆ. "ನಿಜಾಮ ಮೀರ ಉಸ್ಮಾನ ಅಲೀಖಾನರು ಒಂದು ವೇಳೆ ಒಂದು ತಿಂಗಳ ಕಾಲ ನನ್ನ ಭಾಷಣ ಕೇಳಿದರೆ ಖಂಡಿತವಾಗಿಯೂ ಅವರು

ಇಸ್ಲಾಂ ಧರ್ಮವನ್ನು ತ್ಯಜಿಸುತ್ತಾರೆ ಎಂದು ನಾನು ಎದೆತಟ್ಟಿ ಹೇಳುತ್ತೇನೆ" ಎಂಬಂಥ ಆತ್ಮವಿಶ್ವಾಸದ ನುಡಿಗಳು ದೆಹಲವಿಯವರದಾಗಿದ್ದವು. ಅರಬ್ಬೀ, ಫಾರ್ಸಿ ಭಾಷೆಗಳ ಉದ್ದಾಮ ಪಂಡಿತರಾಗಿದ್ದ ರಾಮಚಂದ್ರ ಜೀ ಯವರು ನಿರರ್ಗಳವಾಗಿ ಆ ಎಲ್ಲ ಭಾಷೆಗಳಲ್ಲಿ ಮಾತಾಡುತ್ತಿದ್ದರು. ಅವರು ಒಬ್ಬ ಕುಂಟ ಮುಸ್ಲೀಮ ಮೌಲ್ವಿಯನ್ನು ಪ್ರತಿದಿನ ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಮಸೀದಿಗೆ ನಮಾಜಕ್ಕಾಗಿ ಕರೆದುಕೊಂಡು ಹೋಗುತ್ತಿದ್ದರಂತೆ. ಬಹಳ ಶ್ರದ್ಧಾ ಭಕ್ತಿಯಿಂದ ಆ ಮೌಲ್ವಿಯ ಸೇವೆ ಮಾಡಿದ್ದರಂತೆ. ಅದರಿಂದ ಮೌಲ್ವಿಯು ಪ್ರಸನ್ನನಾಗಿ ದೆಹಲವಿಯವರಿಗೆ ಕುರಾನೇ ಶರೀಫದ ಆಳವಾದ ಜ್ಞಾನವನ್ನು ಮಾಡಿಸಿಕೊಟ್ಟಿದ್ದನಂತೆ. ಹೀಗಾಗಿ ದೆಹಲವಿಯವರು ಅಧಿಕಾರ ವಾಣಿಯಿಂದ ಕುರಾನಿನ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನೂ ಕೂಡ ಸಹಜವಾಗಿ ವಿಶ್ಲೇಷಿಸಿ ಜನರ ಎದುರಿಗೆ ಇಡುತ್ತಿದ್ದರಂತೆ. ಅವರ ಆ ತರ್ಕಕ್ಕೆ ಸ್ವತಃ ಮುಸ್ಲಿಂ ಶ್ರೋತೃಗಳೂ ಕೂಡ ತಲೆತೂಗುತ್ತಿದ್ದರಂತೆ.

ಹೈದರಾಬಾದಿನ ಹಿಂದೂಗಳ ಮೇಲೆ ದೆಹಲವಿಯವರ ಭಾಷಣಗಳ ಪ್ರಭಾವ ಬಹಳ ಆಳವಾಗಿ ಆಗಿತ್ತು. ಮುಸ್ಲಿಮರು ಕೂಡ ಅವರ ಭಾಷಣ ಕೇಳಲು ಬರುತ್ತಿದ್ದರು. ದೆಹಲವಿಯವರು ಮಂಡಿಸುತ್ತಿದ್ದ ಒಂದೊಂದು ತರ್ಕಕ್ಕೂ ಮುಸ್ಲಿಂ ಶ್ರೋತೃಗಳು 'ವಾಹ್ ವಾಹ್' ಎಂದು ಮೆಚ್ಚಿಕೆ ಸೂಚಿಸುತ್ತಿದ್ದರು. ದೆಹಲವಿಯವರು ಸುಮಾರು ಒಂದು ವರ್ಷದ ವರೆಗೆ ರಾಜ್ಯದಲ್ಲಿ ಆರ್ಯಸಮಾಜದ ಪ್ರಚಾರ ಕೈಕೊಂಡಿದ್ದರು. ಅವರ ಭಾಷಣ ಎಲ್ಲೇ ಇರಲಿ ಜನರು ಹಸಿವು ನೀರಡಿಕೆ ಮರೆತು ಭಾಷಣ ಕೇಳಲು ಧಾವಿಸುತ್ತಿದ್ದರು. ಅವರ ಭಾಷಣಗಳ ಪ್ರಭಾವ ಎಷ್ಟರ ಮಟ್ಟಿಗೆ ಆಗಿತ್ತೆಂದರೆ ರಾಜ್ಯದ ಪ್ರಧಾನಮಂತ್ರಿಯಾಗಿದ್ದ ಮಹಾರಾಜಾ ಕಿಶನ ಪ್ರಸಾದರೂ ಕೂಡ ಅವರ ಭಾಷಣ ಕೇಳಲು ಆರ್ಯಸಮಾಜದ ಸಭೆಗಳಿಗೆ ಬರುತ್ತಿದ್ದರು.

ಒಮ್ಮೆ ಬೀದರ ಜಿಲ್ಲೆಯ ಹಳ್ಳಿಖೇಡ (ಬಿ) ಗ್ರಾಮದಲ್ಲಿ ಅವರ ಭಾಷಣ ಏರ್ಪಟ್ಟಿತ್ತು. ಸಾವಿರಾರು ಜನ ಶ್ರೋತೃಗಳು ಸೇರಿದ್ದರು. ಧಾರಾಪ್ರವಾಹದಂತೆ ದೆಹಲವಿಯವರ ಭಾಷಣ ಭೋರ್ಗರೆಯುತ್ತ ನಡೆದಿತ್ತು. ಜನ ತಮ್ಮನ್ನು ತಾವು ಮರೆತು ಭಾಷಣದ ಗುಂಗಿನಲ್ಲಿ ತೇಲಿ ಹೋಗಿದ್ದರು. ತಮ್ಮ ಭಾಷಣದ ನಡುವೆ ದೆಹಲವಿಯವರು ಒಂದು ಮಾತು ಹೇಳಿದರು, "ಸಜ್ಜನರೆ, ವೇದವು ಕುರಾನ, ಬೈಬಲ್ ಮತ್ತು ಆಕಾಶದಿಂದ ಇಳಿದು ಬಂದಂಥ ಇತರ ಎಲ್ಲ ಪವಿತ್ರ ಹೊತ್ತಿಗೆಗಳ ಅಪ್ಪನಾಗಿದೆ. ವೇದಗಳ ಹೊರತಾಗಿ ಉಳಿದ ಪವಿತ್ರ ಗ್ರಂಥಗಳೆಲ್ಲ ವ್ಯಾವಹಾರಯೋಗ್ಯವಲ್ಲ. ಅವೆಲ್ಲ ಮನುಷ್ಯ ನಿರ್ಮಿತವಾಗಿವೆ. ಕುರಾನವು ರಾತ್ರಿಯಲ್ಲಿ ಭೂಮಿಗೆ ಇಳಿದು ಬಂತು. ರಾತ್ರಿಯಲ್ಲಿ ಯಾರು ಇಳಿದು ಬರುತ್ತಾರೆ? ಗೊತ್ತೆ? (ಸಭೆಯಲ್ಲಿ ಎಲ್ಲರೂ ನಕ್ಕರು). ವೇದವಂತೂ ಸೂರ್ಯನಾಗಿದೆ. ಉಳಿದವುಗಳೆಲ್ಲ ಲ್ಯಾಂಪು ಮತ್ತು ಚಿಮಣಿ ದೀಪಗಳಾಗಿವೆ. ಅವುಗಳು ರಾತ್ರಿಯಲ್ಲಿ ಕೆಲಸಕ್ಕೆ ಬರುತ್ತವೆ." (*ಹೈದರಾಬಾದ ಸತ್ಯಾಗ್ರಹ ಕಾ ರಕ್ತರಂಜಿತ ಇತಿಹಾಸ, ಪು. ೫೦*).

ಭಾಷಣದ ಈ ಅಂಶವನ್ನೇ ಆಧಾರವಾಗಿಟ್ಟುಕೊಂಡು ಪಂ. ರಾಮಚಂದ್ರ ಜೀಯವರ ಮೇಲೆ ದಾವೆ ಹೂಡಲಾಯಿತು. ಕೆಳಗಿನ ನ್ಯಾಯಾಲಯವು ಅವರಿಗೆ ದಂಡ ಹಾಗೂ ಶಿಕ್ಷೆಯನ್ನು ವಿಧಿಸಿತು. ಆಗ ಪಂಡಿತಜೀಯವರು ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಲು ನಿರ್ಧರಿಸಿದರು.

ಅಷ್ಟರಲ್ಲಿ ಆರ್ಯಸಮಾಜದ ಸಾರ್ವದೇಶಿಕ ಸಭೆಯು ನಿಜಾಮನಿಗೆ ಪತ್ರ ಬರೆದು ದಾವೆ ವಾಪಸ್ಸು ತೆಗೆದುಕೊಳ್ಳಬೇಕು ಇಲ್ಲವೆ ವಿಶೇಷ ಟ್ರಿಬ್ಯುನಲ್ ರಚಿಸಿ ಅದರ ಮೂಲಕ ವಿಚಾರಣೆ ನಡೆಸಬೇಕೆಂದು ಕೇಳಿಕೊಂಡಿತು. ಆರ್ಯಸಮಾಜದ ಸಾರ್ವದೇಶಿಕ ಸಭೆಯ ಮಂತ್ರಿಗಳಾಗಿದ್ದ ಶ್ರೀ ಸುಧಾಕರ ಜೀಯವರು ನಿಜಾಮ ರಾಜ್ಯದಲ್ಲಿದ್ದ ಭಾರತ ಸರಕಾರದ ಪಾಲಿಟಿಕಲ್ ಸೆಕ್ರೆಟರಿಯವರಿಗೆ ಪತ್ರ ಬರೆದು ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡಬೇಕೆಂದು ವಿನಂತಿಸಿಕೊಂಡರು. ಈ ಘಟನೆಯು ಅಷ್ಟಕ್ಕೆ ನಿಲ್ಲಲಿಲ್ಲ. ಇಡೀ ದೇಶದ ಗಮನವನ್ನು ಸೆಳೆಯಿತು. ದೇಶದ ತುಂಬ ಬಿಸಿ ವಾತಾವರಣ ಏರ್ಪಟ್ಟಿತು. ಎಲ್ಲ ಕಡೆಗೂ ಈ ಕುರಿತು ಚರ್ಚೆಯಾಗಹತ್ತಿತು. ಈ ಘಟನೆ ಕುರಿತು ಪುನರ್ವಿಚಾರ ಮಾಡದೇ ಹೋದರೆ ನೇರ ಚಳವಳಿಗೆ ಇಳಿಯುವುದಾಗಿ ಸಾರ್ವದೇಶಿಕ ಸಭೆಯು ಬೆದರಿಕೆ ಹಾಕಿತು. ಕೊನೆಗೆ ಸರಕಾರವು ಪಂ. ರಾಮಚಂದ್ರ ಜೀಯವರ ಮೇಲೆ ಹೂಡಿದ ದಾವೆಯನ್ನು ವಾಪಸುತೆಗೆದುಕೊಂಡಿತು. ಆದರೆ ಒಂದು ಶರತ್ತು ಹಾಕಿತು. ಪಂಡಿತ ಜೀಯವರು ಹೈದರಾಬಾದ ರಾಜ್ಯದ ಒಳಗೆ ಮುಂದೆಂದೂ ಪ್ರವೇಶಿಸಕೂಡದು ಎಂದು ಅವರ ಮೇಲೆ ನಿರ್ಬಂಧ ಹೇರಿತು. (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೬೫–೬೬*).

ಇಷ್ಟೆಲ್ಲ ನಡೆದರೂ ಹೈದರಾಬಾದ ರಾಜ್ಯದ ವಿಮೋಚನೆಯ ವರೆಗೂ ದೀನದಾರ ಪಂಥವು ಸಕ್ರಿಯವಾಗಿಯೇ ಇತ್ತು. ತನ್ನ ಚಟುವಟಿಕೆಗಳನ್ನು ನಿರಾತಂಕವಾಗಿ ಮುಂದುವರಿಸಿಕೊಂಡೇ ಬಂದಿತು. ವಿಮೋಚನೆಯ ನಂತರವೂ ಕೂಡ ಅದು ಕಾಣಿಸಕೊಳ್ಳುತ್ತ ಬಂದಿದೆ. ದೀನದಾರ ಪಂಥದ ಸಂಸ್ಥಾಪಕನಾದ ಮೌಲಾನಾ ಸಿದ್ದಿಕಿಯ ಮಗನಾದ ಸೈಯದ ಜಿಯಾವುಲ್ ಹಸನ ಎಂಬಾತನು ಈಗ ಪಾಕಿಸ್ತಾನದ ಪ್ರಜೆಯಾಗಿದ್ದಾನೆ. ಆತ ಆಗಾಗ ಭಾರತಕ್ಕೆ ಭೇಟಿಕೊಟ್ಟು ಇಲ್ಲಿಯ ದೀನದಾರ ಸಂಘಟನೆಯ ಕಾರ್ಯಕರ್ತರಲ್ಲಿ ಕೋಮುಭಾವನೆಯನ್ನು ಪ್ರಚೋದಿಸುವ ಕೆಲಸ ಮಾಡುತ್ತಿದ್ದಾನೆ ಎಂದು ಶ್ರೀ ಗೋಪಾಲರಾವ ಹೇಜೀಬ್‌ರು ತಮ್ಮ 'ಹೈದರಾಬಾದ ಮುಕ್ತಿ ಸಂಘರ್ಷ' ಎಂಬ ಪುಸ್ತಕದಲ್ಲಿ ಸಾಕ್ಷ್ಯಾಧಾರಗಳೊಂದಿಗೆ ಮಾಹಿತಿಯನ್ನು ಒದಗಿಸಿದ್ದಾರೆ. (*ನೋ. ಪು. ೪೪–೪೭*).

ಇತ್ತೇಹಾದ–ಏ–ಮುಸಲ್ಮೀನ:

ಸುಮಾರು ೨೨೪ ವರ್ಷಗಳಿಂದ ಹೈದರಾಬಾದ ಸಂಸ್ಥಾನವನ್ನು ಆಳಿದ ಆಸಫಿಯಾ ಮನೆತನದ ಆಡಳಿತದ ಗೋರಿ ಕಟ್ಟುವ ಕೆಲಸವನ್ನು 'ಅಂಜುಮನ್–ಏ–ಇತ್ತೇಹಾದ್–ಉಲ್–ಮುಸಲ್ಮೀನ್' ಎಂಬ ಸಂಘಟನೆಯು ಸುಸೂತ್ರವಾಗಿ ಮಾಡಿತು ಎಂದು ಹೇಳಬಹುದು. ಇದು ಬಹಳ ಹಿಂದಿನಿಂದಲೇ ನಿಜಾಮನ ರಾಜ್ಯದಲ್ಲಿ ಮೊದಮೊದಲು ನಿಜಾಮನ ವಿರುದ್ಧವಾಗಿಯೇ ಬಂಡೆದ್ದು ಮತೀಯ ಚಳವಳಿಗೆ ನಾಂದಿ ಹಾಡಿತ್ತು. ಅದು ಒಂದು ಘಟ್ಟದಲ್ಲಿ ತನ್ನನ್ನು ತಾನು ನಿಜಾಮನೆಂದೇ ಭಾವಿಸಿಕೊಂಡಿತ್ತು. ಮುಂದೆ ಇದು ನಿಜಾಮನ ವಿಶ್ವಾಸ ಗಳಿಸಿಕೊಂಡು ಆತನ ಕೃಪೆಯಿಂದ ತನ್ನ ಸೈತಾನೀ ಪ್ರದರ್ಶನವನ್ನು ಹೊರಹಾಕುತ್ತ ಬಂತು. ಹೀಗಾಗಿ ಈ ಸಂಘಟನೆಯ ನಾಯಕರು, ಸದಸ್ಯರು ಹಿಂದೂ ಜನತೆಯ ಮೇಲೆ ಎಸಗುತ್ತಿದ್ದ ಕ್ರೂರವಾದ ಅತ್ಯಾಚಾರಗಳು ಸರಕಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಅವರು ದಿವ್ಯ ನಿರ್ಲಕ್ಷ್ಯ ತೋರುತ್ತಿದ್ದರು. ಸರಕಾರಿ ಯಂತ್ರದ ಈ ರೀತಿಯ ಧೋರಣೆ ಇತ್ತೇಹಾದ ಸಂಘಟನೆಗೆ ಸಹಕಾರಿಯಾಗಿತ್ತು.

ಈ ರೀತಿಯಾಗಿ ಮೊದಲಿನಿಂದಲೂ ಹೈದರಾಬಾದ ರಾಜ್ಯದಲ್ಲಿ ಮತಾಂಧತೆಯನ್ನು ಪೋಷಿಸಿಕೊಂಡು ಬರಲಾಗುತ್ತಿತ್ತು. ಆದರೆ ಅದಕ್ಕೊಂದು ಸ್ಪಷ್ಟವಾದ ಸ್ವರೂಪವನ್ನು ೧೯೨೭ರಲ್ಲಿ ಇತ್ತೇಹಾದ ಸಂಘಟನೆಯು ಕೊಟ್ಟಿತು. ಮಹಮ್ಮದ ನವಾಜ ಖಾನ್ ಎಂಬವನು ೧೯೨೬ರಲ್ಲಿ ಈ ಸಂಘಟನೆಯನ್ನು ಹುಟ್ಟುಹಾಕಿದನೆಂಥು ಹೇಳಲಾಗುತ್ತದೆ. ಮುಂದೆ ೧೯೨೭ರಲ್ಲಿ ಹೈದರಾಬಾದಿನ 'ತೋಹೀದ್ ಮಂಜಿಲ್' ಎಂಬಲ್ಲಿ ಒಂದು ಸಭೆ ನಡೆಯಿತು. ಹೈದರಾಬಾದ ಸರಕಾರದಲ್ಲಿ ಧಾರ್ಮಿಕ ಇಲಾಖೆಯ ನಿರ್ದೇಶಕರಾಗಿದ್ದ ನವಾಬ ಸದರ ಯಾರ ಜಂಗರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಇತ್ತೇಹಾದ ಸಂಘಟನೆಯನ್ನು ಬಲಪಡಿಸಿ ಅದರ ಚಟುವಟಿಕೆಗಳನ್ನು ಹೆಚ್ಚಿಸಬೇಕೆಂದು ಈ ಸಭೆಯಲ್ಲಿ ತೀರ್ಮಾನಿಸಲಾಯಿತು. ಆಗ ಅದಕ್ಕೊಂದು ಅಧಿಕೃತವಾದ ಸ್ವರೂಪ ಕೊಡಲಾಯಿತು. ಮುಂದೆ 'ಮಹಫಿಲ್-ಏ-ಮಿಲಾದ್' ಎಂಬ ಮುಸ್ಲಿಂ ಸಭೆಯಲ್ಲಿ ನಿಜಾಮನು ಬಹಾದ್ದೂರ ಖಾನನೆಂಬ ಪಠಾಣ ಯುವಕನನ್ನು ಇತ್ತೇಹಾದ ಸಂಘಟನೆಗೆ ಅಧ್ಯಕ್ಷನನ್ನಾಗಿ ಮಾಡಿದನು. ಬಹಾದ್ದೂರ ಖಾನನ ಕಾರ್ಯಚಟುವಟಿಕೆಯನ್ನು ಮೆಚ್ಚಿ ನಿಜಾಮನು ಆತನಿಗೆ 'ಬಹಾದ್ದೂರ ಯಾ ಜಂಗ್' ಎಂಬ ಬಿರುದನ್ನು ಕೊಟ್ಟು ಆತನ ಸ್ಥಾನಮಾನವನ್ನು ಹೆಚ್ಚಿಸಿದನು.

೧೯೩೯ರಿಂದ ಇತ್ತೇಹಾದುಲ್ ಮುಸ್ಲ್ಮೀನ ಸಂಘಟನೆಯ ಲಕ್ಷಣಗಳು ಬದಲಾಗುತ್ತ ಬಂದವು. ಅದು ಇಸ್ಲಾಮಿನ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯ ಮುಖವಾಡವನ್ನು ಕಳಚಿಹಾಕಿ ನೇರವಾಗಿ ಹಿಂದೂಗಳನ್ನು, ದಲಿತರನ್ನು ಮತ್ತು ಬಡವರ್ಗದವರನ್ನು ಬಲಾತ್ಕಾರವಾಗಿ ಮತಾಂತರಗೊಳಿಸಲು ಪ್ರಾರಂಭಿಸಿತು. ಇತ್ತೇಹಾದಿನ ಈ ಬದಲಾದ ಚಟುವಟಿಕೆಗಳನ್ನು ಕಂಡು ಮುಸ್ಲಿಮೇತರ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯಹತ್ತಿತು. ಇದನ್ನು ಇಷ್ಟಕ್ಕೆ ಬಿಡಬಾರದೆಂದು ಆ ಕಡೆ ರಾಜ್ಯದಲ್ಲಿ ಹೊಣೆಗಾರಿಕೆ ಸರಕಾರ ಸ್ಥಾಪಿತವಾಗಬೇಕೆಂಬ ಬೇಡಿಕೆಯ ಕೂಗು ಮೊಳಗ ಹತ್ತಿತು. ಎಲ್ಲ ಕೋಮಿನ ಜನರಿಗೂ ಸಮಾನವಾದ ಹಕ್ಕುಗಳಿರಬೇಕು, ಯಾವುದೇ ಕಾರಣಕ್ಕೂ ಆಳುವ ವರ್ಗಕ್ಕೆ ಸೇರಿದ ಕೋಮಿಗೆ ಹೆಚ್ಚಿನ ರಿಯಾಯತಿ ಇರಕೂಡದು ಎಂಬಂಥ ಇದೇ ರೀತಿಯ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸ್ವಾಮಿ ರಮಾನಂದ ತೀರ್ಥರು ಹಾಗೂ ಆರ್ಯಸಮಾಜದ ನಾಯಕರು ಸತ್ಯಾಗ್ರಹಗಳನ್ನು ಹಮ್ಮಿಕೊಂಡರು. ಈ ಸತ್ಯಾಗ್ರಹಗಳು ಎಷ್ಟರಮಟ್ಟಿಗೆ ಪ್ರಖರವಾಗಿದ್ದುವೆಂದರೆ ಅವುಗಳಿಂದಾಗಿ ನಿಜಾಮ ರಾಜ್ಯದಲ್ಲಿ ಇಸ್ಲಾಂ ಧರ್ಮಕ್ಕೂ ಮತ್ತು ನಿಜಾಮನ ಆಡಳಿತಕ್ಕೂ ಒಂದು ದಿನ ಕುತ್ತು ಬರಬಹುದೆಂದು ಮುಸ್ಲಿಂ ಸಮುದಾಯಗಳು ಹೆದರಿದವು. ಆದ್ದರಿಂದ ಇತ್ತೇಹಾದಿನ ಕಾರ್ಯವೈಖರಿಯಲ್ಲಿ ಪರಿಷ್ಕರಣೆ ಮಾಡಿ ಅದರ ಬಲವರ್ಧನೆಗೆ ಪ್ರಯತ್ನಗಳು ಕೈಕೊಳ್ಳಲಾಯಿತು. ನಿಜಾಮನೂ ಕೂಡ ತನ್ನ ಖಾಜಗಿ ರಾಜಕೀಯ ಸ್ವಾರ್ಥಗಳನ್ನು ಸಾಧಿಸಿಕೊಳ್ಳುವ ಆಂತರಿಕ ಆಕಾಂಕ್ಷೆಯಿಂದಾಗಿ ಇದಕ್ಕೆ ಬೆಂಬಲ ನೀಡಿದನು.

ಇತ್ತೇಹಾದ-ಉಲ್-ಮುಸಲ್ಮೀನ್ ಸಂಘಟನೆಯು ತನ್ನ ವಿಷಪೂರಿತ ಹಾಗೂ ದುರುದ್ದೇಶದಿಂದ ಕೂಡಿದ ಪ್ರಚಾರವನ್ನು ಮಾಡುವುದಕ್ಕಾಗಿ 'ಇತ್ತೇಹಾದ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿತು. ಈ ಪತ್ರಿಕೆಗೆ ಸರಕಾರದಿಂದ ಎಲ್ಲ ರೀತಿಯ ಸ್ವಾತಂತ್ರ್ಯ ನೀಡಲಾಯಿತು. ಮುಸ್ಲಿಮರು ಆಳುವ ಜನಾಂಗಕ್ಕೆ ಸೇರಿದವರು, ಹಿಂದೂಗಳು ಆಳಿಸಿಕೊಳ್ಳುವವರು ಎಂಬ ಕಲ್ಪನೆಯನ್ನು

ಮುಸ್ಲಿಮರ ತಲೆಯಲ್ಲಿ ತುಂಬಿ ಅವರನ್ನು ಉದ್ರೇಕಿಸಲಾಗುತ್ತಿತ್ತು. ಇತ್ತೇಹಾದದ ಚಟುವಟಿಕೆಗಳಿಗೆ ನೆರವಾಗುವಂತೆ ನಿಜಾಮನು ಆಗಾಗ ರಾಜ್ಯಾಜ್ಞೆ (ಫರ್ಮಾನು)ಗಳನ್ನು ಹೊರಡಿಸುತ್ತಿದ್ದನು.

ಇತ್ತೇಹಾದಿನ ಕಾಲ ಕಾಲದ ಬೇಡಿಕೆಗಳು ಈ ಫರ್ಮಾನುಗಳು ಹೊರಡುವುದಕ್ಕೆ ಪ್ರಚೋದನೆಯ ಕೆಲಸ ಮಾಡುತ್ತಿದ್ದವು. ಅಂಥ ಕೆಲವು ಬೇಡಿಕೆಗಳನ್ನು ಇಲ್ಲಿ ಗಮನಿಸುವುದು ಆವಶ್ಯಕವೆನಿಸುತ್ತದೆ :

೧. ಹೈದರಾಬಾದ ರಾಜ್ಯದಲ್ಲಿಯ ಅರಸೊತ್ತಿಗೆಯು ಸಾರ್ವಭೌಮವಾಗಿರಬೇಕು. ಮತ್ತು ಅದೇ ಆಳುತ್ತಿರಬೇಕು. ಆಳರಸರು ಆಸಫಜಾಹೀ ವಂಶದಲ್ಲಿ ಹುಟ್ಟಿದವರಾಗಿರಬೇಕು.

೨. ಹೈದರಾಬಾದಿನ ಆಡಳಿತದ ರಚನಾಕ್ರಮದಲ್ಲಿ ಬದಲಾವಣೆ ಮಾಡುವುದು ಅತ್ಯಾವಶ್ಯಕವೆಂದು ಅನಿಸಿದರೆ ಮುಸ್ಲಿಮರ ಪರಂಪರಾಗತವಾದ ರಾಜಕೀಯ ಶ್ರೇಷ್ಠತೆಗೆ ಧಕ್ಕೆಯುಂಟಾಗುವಂಥ ಯಾವುದೇ ಬದಲಾವಣೆಯನ್ನು ಮಾಡಕೂಡದು. ಸ್ಥಳೀಯ ಆಡಳಿತದಲ್ಲಿ ಮತ್ತು ಶಾಸಕಾಂಗಗಳಲ್ಲಿ ಮುಸ್ಲಿಮರೇ ಬಹುಸಂಖ್ಯಾತರಾಗಿರಬೇಕು.

೩. ಮುಸ್ಲಿಮರಿಗಾಗಿ ಪ್ರತ್ಯೇಕವಾಧ ಚುನಾವಣ ಕ್ಷೇತ್ರಗಳಿರಬೇಕು.

೪. ರಾಜ್ಯದ ಅಧಿಕೃತ ಆಡಳಿತ ಭಾಷೆಯಾಗಿ ಉರ್ದು ಭಾಷೆಯೇ ಇರಬೇಕು.

೫. ರಾಜ್ಯದ ಸೇವೆಗಳ ಸಮಸ್ಯೆಯು ಮುಸ್ಲಿಮರ ರಾಜಕೀಯ ಮತ್ತು ಸಾಂಸ್ಕೃತಿಕ ಶ್ರೇಷ್ಠತೆಯೊಂದಿಗೆ ಸೇರಿಕೊಂಡಿರುವುದರಿಂದ, ಅವರ ಆರ್ಥಿಕ ಹಿತಾಸಕ್ತಿಯ ರಕ್ಷಣೆಯನ್ನು ಮತ್ತು ಆರ್ಥಿಕ ವಿತರಣೆಯನ್ನು ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಮಾಡುವುದು ಸಾಧ್ಯವಿಲ್ಲ.

೬. ಧಾರ್ಮಿಕ ಖಾತೆಯು ಮೊದಲಿನಂತೆಯೇ ಕೆಲಸ ಮಾಡಬೇಕು. ಮುಸ್ಲಿಮರ ಧರ್ಮದ ರಕ್ಷಣೆಗಾಗಿ ಕೆಲಸ ಮಾಡುವ ಸಂಸ್ಥೆಗೆ ಮನ್ನಣೆ ಸಿಗತಕ್ಕದ್ದು.

೭. ವ್ಯಾಪಾರ, ಉದ್ಯೋಗ ಮತ್ತು ಒಕ್ಕಲುತನಗಳಲ್ಲಿ ಮುಸ್ಲಿಮರ ಪಾಲು ಬಹು ಸಣ್ಣದು. ಅವರ ಪಾಲನ್ನು ಹೆಚ್ಚಿಸಲು ಈ ಕ್ಷೇತ್ರಗಳಲ್ಲಿ ಅವರಿಗೆ ಎಲ್ಲ ಅನುಕೂಲಗಳು ಸಿಗತಕ್ಕದ್ದು.

(ವಂದೇಮಾತರಂದಿಂದ ....ಪು. ೧೩೪-೩೫).

ಹಿಂದಿನಿಂದ ನಡೆದು ಬಂದಿದ್ದ ಇಂಗ್ಲಿಷರ ಜೊತೆಗಿನ ಒಪ್ಪಂದದಂತೆ ನಿಜಾಮನು ತನ್ನ ರಾಜ್ಯಾಡಳಿತದಲ್ಲಿ ಭಾರತ ಸರಕಾರದ ಗಮನಕ್ಕೆ ತಾರದೇ ಮತ್ತು ಅದರ ಒಪ್ಪಿಗೆ ಪಡೆಯದೇ ಯಾವುದೇ ಹೊಸ ನೀತಿಯನ್ನು ಅನುಸರಿಸುವಂತಿರಲಿಲ್ಲ. ಆದರೆ ತನಗೆ ಅನುಕೂಲವಾಗುವಂತೆ ಇತ್ತೇಹಾದಿನ ಕಾರ್ಯ ಚಟುವಟಿಕೆಯ ಮೂಲಕ ತನ್ನ ರಾಜ್ಯವು ಇಸ್ಲಾಮೀ ರಾಷ್ಟ್ರವಾಗುವುದು ಎಂಬ ನಂಬಿಕೆ ಆತನದಾಗಿತ್ತು. ಹಾಗಾದಾಗ ತಾನು ಸಾರ್ವಭೌಮನೆಂದು ಘೋಷಿಸಿ

ಕೊಳ್ಳಬಹುದೆಂದು ಹವಣಿಸಿದ್ದನು. ಆದರೆ ದಿನದಿಂದ ದಿನಕ್ಕೆ ತಾನು ಹೆಣೆದ ಬಲೆಯಲ್ಲಿ ತಾನೇ ಬಂದಿಯಾಗುತ್ತ ನಡೆದಿದ್ದನು. ಬ್ರಿಟಿಷ್ ರೆಸಿಡೆಂಟನು ಇತ್ತೇಹಾದ ಸಂಘಟನೆಯ ನೀತಿಯನ್ನು ವಿರೋಧಿಸುತ್ತ ನಿಜಾಮನು ಅದನ್ನು ನಿಷ್ಕ್ರಿಯಗೊಳಿಸಬೇಕೆಂದು ನಿರ್ದೇಶನ ನೀಡಿದನು. ಆದರೆ ಅಷ್ಟೊತ್ತಿಗೆ ಇತ್ತೇಹಾದಿನ ಮೇಲಿನ ನಿಜಾಮನ ಹಿಡಿತ ಕಳಚಿಹೋಗಿತ್ತು. ೧೯೪೩ರಲ್ಲಿ ಇತ್ತೇಹಾದಿನ ಅಧ್ಯಕ್ಷನಾಗಿದ್ದ ಬಹಾದ್ದೂರ ಯಾರಜಂಗನ ನಿಧನ (ಕೊಲೆ)ವಾಯಿತು.

ಬಹಾದ್ದೂರ ಯಾರ ಜಂಗನು ಇತ್ತೇಹಾದ ಸಂಘಟನೆಯ ಮುಂಚೂಣಿಯಲ್ಲಿರುವಾಗಲೇ ಲಾತೂರಿನ ಕಾಸಿಂ ರಜವಿ ಎಂಬ ವಕೀಲನೊಬ್ಬನು ಹೈದರಾಬಾದಿಗೆ ಬಂದು ಸೇರಿಕೊಂಡಿದ್ದನು. ಈತ ಬಹು ತೀವ್ರಗತಿಯಲ್ಲಿ ಇತ್ತೇಹಾದ ಸಂಘಟನೆಯ ಮೇಲೆ ತನ್ನ ಹಿಡಿತ ಸಾಧಿಸುತ್ತ ಬಂದನು. ಬಹಾದ್ದೂರ ಯಾರ ಜಂಗನ ನಿಧನಾನಂತರ ಈತನೆ ಆ ಸಂಘಟನೆಯ ಸರ್ವಾಧಿಕಾರಿಯಾದನು. ಮೊದಲೇ ಮೀರ ಉಸ್ಮಾನ ಅಲೀಖಾನನು ತನ್ನ ಅಸಮರ್ಥ ಆಳ್ವಿಕೆಯಿಂದ ಅವನತಿಯ ಕಡೆಗೆ ಇಷ್ಟಿಷ್ಟೇ ಜಾರಿಕೊಂಡು ಹೋಗುತ್ತಿದ್ದ. ಅದು ಬಹಾದ್ದೂರ ಯಾರ ಜಂಗನ ಕಾಲದಲ್ಲಿ ಸುಧಾರಿಸಿಕೊಳ್ಳಲು ಸಾಧ್ಯವಿಲ್ಲದಂಥ ಜಾರಿಕೆಗೆ ಸಿಲುಕಿಕೊಂಡಿದ್ದ. ಆಗಲೇ ಆಸಫಿಯಾ ಮನೆತನದ ಆಳ್ವಿಕೆಯ ಅವಸಾನ ಕಾಣಿಸುತ್ತಿತ್ತಾದರೂ ಅದು ಅಷ್ಟು ಹತ್ತಿರದಲ್ಲಿದೆ ಎಂದು ಅನಿಸಿರಲಿಲ್ಲ. ರಜವಿಯು ಇತ್ತೇಹಾದಿನ ಸೂತ್ರ ಹಿಡಿದ ಮೇಲೆ ತಳವಿಲ್ಲದ ಬಾವಿಗೆ ಬೀಳುವಂತೆ ನಿಜಾಮನ ಶಾಸನವು ನಿರ್ನಾಮವಾಗಿ ಚರಿತ್ರೆಯ ಪುಟ ಸೇರಿತು.

ಶ್ರೀ ಗೋಪಾಲರಾವ ಹೇಜೀಬ್‌ರು ರಜವಿಯನ್ನು ಚಿತ್ರಿಸಿರುವ ರೀತಿ ತುಂಬ ಅರ್ಥಪೂರ್ಣವಾಗಿದೆ. ಅವರು ರಜವಿಯ ಕುರಿತು ಬರೆಯುತ್ತ ಹೀಗೆ ಹೇಳುತ್ತಾರೆ, "ಮಹಮ್ಮದ ಘಜನಿ, ಚಂಗೀಜಖಾನ ಮತ್ತು ಔರಂಗಜೇಬನ ತರುವಾಯ ಈ ಭೂಮಿಯ ಮೇಲೆ ನಡೆದು ಹೋದ ಅಂಥದ್ದೇ ಒಂದು ದುಷ್ಟಚೇತನ ಕಾಸಿಂ ರಜವಿ. ಘಜನಿಯ ಆಕ್ರೋಶ, ಚಂಗೀಜಖಾನನ ಕ್ರೌರ್ಯ ಮತ್ತು ಔರಂಗಜೇಬನ ಮತಾಂಧತೆ – ಈ ಎಲ್ಲ ದುರ್ಗುಣಗಳು ರಜವಿಯಲ್ಲಿ ಸಮಾವೇಶಗೊಂಡಿದ್ದವು." (*ಹೈದರಾಬಾದ ಮುಕ್ತಿ ಸಂಘರ್ಷ, ಪು. ೧೧೩*).

ಇತ್ತೇಹಾದ ಸಂಘಟನೆಯ ಅಡಿಯಲ್ಲಿ ಕಾಸಿಂ ರಜವಿಯು 'ರಜಾಕಾರ' ಎಂಬ ಒಂದು ಪಡೆಯನ್ನು ಹುಟ್ಟುಹಾಕಿದನು. 'ರಜಾಕಾರ' ಶಬ್ದದ ಅರ್ಥ ಸ್ವಯಂಸೇವಕ ಎಂದು. ಇಸ್ಲಾಮ ಧರ್ಮವನ್ನು ಸಂರಕ್ಷಿಸುವ ಸ್ವಯಂಸೇವಕರು ಎಂದು ಪ್ರಚಾರ ಮಾಡಲಾಗುತ್ತಿತ್ತು. ರಜಾಕಾರ ಸಂಘಟನೆಗೆ ಸೇರುವ ವ್ಯಕ್ತಿಯು ಈ ಮುಂದಿನ ಪ್ರಮಾಣವಚನ ತೆಗೆದುಕೊಳ್ಳುವುದಲ್ಲದೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತಿತ್ತು. "ಈ ರಾಜ್ಯಾಡಳಿತದಲ್ಲಿ ಮುಸ್ಲಿಂ ಸತ್ತೆಯನ್ನು ಭದ್ರವಾಗಿಡಲು ನಾನು ನನ್ನ ರಕ್ತದ ಕೊನೆಯ ಹನಿ ಇರುವವರೆಗೂ ಹೋರಾಡುತ್ತೇನೆಂದು ಆಣೆ ಮಾಡುತ್ತೇನೆ." (In the name of Allah, I do hereby promise to fight to the last to maintain the supremacy of the Muslim power in the Deccan- *The End of An Era, p.37*). ರಜಾಕಾರ ಸಂಘಟನೆಯು ಬಹಳ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿತ್ತು. ಅದರ ಶಾಖೆಗಳು ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ

ವ್ಯಾಪಿಸಿದ್ದವು. ವ್ಯವಸ್ಥಿತವಾಗಿ ಅವರಿಗೆ ಸೇನಾ ತರಬೇತಿ ಕೊಡಲಾಗುತ್ತಿತ್ತು. ಪ್ರತಿಯೊಬ್ಬರ ಹತ್ತಿರವು ಕಡ್ಡಾಯವಾಗಿ ಕತ್ತಿ ಮತ್ತು ಚೂರಿಗಳು ಇರುತ್ತಿದ್ದವು. ಸ್ವಲ್ಪ ಮೇಲ್ದರ್ಜೆಯ ರಜಾಕಾರ ನಾಯಕರಲ್ಲಿ ಕತ್ತಿ, ಚೂರಿಗಳಲ್ಲದೆ ಪಿಸ್ತೂಲು ಮತ್ತು ಬಂದೂಕುಗಳೂ ಇರುತ್ತಿದ್ದವು. ರಜಾಕಾರರ ಅತಿರೇಕಗಳು ಸರಿಸುಮಾರು ೧೯೩೬–೩೭ರಿಂದಲೇ ಪ್ರಾರಂಭವಾಗಿದ್ದವು. ೧೯೩೮–೪೨ರಲ್ಲಿ ಅದು ತಾರಕಕ್ಕೆ ಹೋಗಿತ್ತು. ಆರುವ ದೀಪ ಪ್ರಜ್ವಲಿಸಿ ಉರಿಯುತ್ತದೆ ಎಂಬಂತೆ ೧೯೪೬ರಿಂದ ಅದರ ಉಪಟಳವು ಸಹನಾತೀತವಾಗಿತ್ತು.

ಬಡಕಲು ದೇಹದ ರಜವಿಯ ವ್ಯಕ್ತಿತ್ವವು ಅಂಥ ಆಕರ್ಷಕವೇನೂ ಆಗಿರಲಿಲ್ಲ. ಹತ್ತಾರು ಜನರ ಗುಂಪಿನಲ್ಲಿಯೂ ಕೂಡ ಎದ್ದು ಕಾಣುವಂಥ ವ್ಯಕ್ತಿತ್ವ ಅವನದಾಗಿರಲಿಲ್ಲ. ಆದರೆ, ತನ್ನ ಹರಿತವಾದ ಮಾತುಗಾರಿಕೆಯಿಂದ, ಕಟ್ಟಾ ಧರ್ಮಾಂಧತೆಯಿಂದ ರಜವಿಗೆ ನಿಜಾಮನ ಸರಕಾರಿ ಆಸ್ಥಾನದಲ್ಲಿ ಉನ್ನತ ಸ್ಥಾನ ದೊರೆತಿತ್ತು. ಬಹಾದ್ದೂರ ಯಾರ ಜಂಗನ ಭಾಷಣದಲ್ಲಿ ಶಾಲೀನತೆ ಇರುತ್ತಿತ್ತು. ವಿಷಯಕ್ಕೆ ಅನುರೂಪವಾದ ವಿಚಾರ ಮಂಡನೆ ಇರುತ್ತಿತ್ತು. ಸಂದರ್ಭಕ್ಕೆ ತಕ್ಕಂತೆ ತನ್ನ ಮಾತಿನ ಸಮರ್ಥನೆ ಇರುತ್ತಿತ್ತು. ಹೀಗಾಗಿ ಆತನ ಭಾಷಣಗಳು ಪ್ರಭಾವ ಬೀರುತ್ತಿದ್ದವು. ಆದರೆ ಕಾಸಿಂ ರಜವಿಯ ಮಾತುಗಾರಿಕೆಗೆ ಲಂಗುಲಗಾಮು ಇರುತ್ತಿರಲಿಲ್ಲ. ಸಭೆಯ ಗೌರವವನ್ನೂ ಲೆಕ್ಕಿಸದೆ ಜನರನ್ನು ರಂಜಿಸುವುದಕ್ಕಾಗಿ ಬಾಯಿಗೆ ಬಂದುದನ್ನು ಬೊಗಳುತ್ತಿದ್ದನು. ಶಾಲೀನತೆ, ಶಿಷ್ಟಾಚಾರಗಳಿಗೆ ಅಲ್ಲಿ ಆಸ್ಪದವೇ ಇರುತ್ತಿರಲಿಲ್ಲ. ಭಾಷಣ ಮಾಡುತ್ತ ನಡುವೆ ಆವೇಶಕ್ಕೆ ಒಳಗಾಗುತ್ತಿದ್ದ. ವೈಚಾರಿಕ ಗಾಂಭೀರ್ಯದ ಬದಲು ಚಿಲ್ಲರೆತನ ಆತನ ಮಾತುಗಳಲ್ಲಿ ತುಂಬಿರುತ್ತಿತ್ತು. "ಅದೋ ನೋಡಿ, ಇಲಿ (ಹಿಂದೂ)ಗಳು ಬಿಲದಿಂದ ಹೊರಬರುತ್ತಿವೆ. ಅವುಗಳ ಕತ್ತು ಹಿಚುಕಿ ಹಾಕಿರಿ. ಅವುಗಳನ್ನು ಗಜ್ಜರಿ–ಮೂಲಂಗಿಯ ತರಹ ಕಡಿದು ಹಾಕಿರಿ. ಈ ಕಾಫೀರರಿಗೆ ಬದುಕಿರುವಂಥ ಯಾವ ಹಕ್ಕೂ ಇಲ್ಲ." ಈ ರೀತಿಯಾಗಿ ಬೇಜವಾಬ್ದಾರಿಯಿಂದ ನುಡಿಯುತ್ತ ಹೋಗುತ್ತಿದ್ದನು.

ಗುಲಬರ್ಗಾದ ಅಧಿವೇಶನವೊಂದರಲ್ಲಿ ಆತ ಎಷ್ಟೊಂದು ಭಾವುಕನಾಗಿದ್ದನೆಂದರೆ ಭಾವಾವೇಶದಲ್ಲಿ ತನ್ನ ಎಲ್ಲ ಆಸ್ತಿಯನ್ನು ಇತ್ತೇಹಾದ್–ಏ–ಮುಸಲ್ಮೀನ ಸಂಘಟನೆಗೆ ದಾನವಾಗಿ ಕೊಡುವ ಘೋಷಣೆ ಮಾಡಿದ್ದನು. ಆತನ ಆ ಉದಾರತೆಗೆ ಮರುಳಾಗಿ ಜನಸ್ತೋಮ ಆತನಿಗೆ 'ಸಿದ್ದಿಕೇ ದಕ್ಕನ' ಎಂಬ ಬಿರುದನ್ನು ನೀಡಿ ಗೌರವಿಸಿತು.

ರಜವಿಯು ಅಲೀಘಡ ಮುಸ್ಲಿಂ ವಿಶ್ವವಿದ್ಯಾಲಯದಿಂದ ಕಾನೂನು ಪರೀಕ್ಷೆ ಪಾಸು ಮಾಡಿದ್ದನು. ಇಸ್ಲಾಂ ಧರ್ಮದ ಶಿಕ್ಷಣವನ್ನೂ ಅಲೀಗಢದಲ್ಲಿಯೇ ಪಡೆದಿದ್ದನು. ಲಾತೂರಿನಲ್ಲಿ ವಕಾಲತ್ತಿನ ವೃತ್ತಿಯೊಂದಿಗೆ ಅನೇಕ ಗೂಂಡಾಗಳನ್ನು ಸಾಕಿಕೊಂಡಿದ್ದನು. ಹೀಗಾಗಿ ಲಾತೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಆತನೊಬ್ಬ ಭಯೋತ್ಪಾದಕ ವ್ಯಕ್ತಿಯಾಗಿದ್ದನು. ಲೂಟಿ, ದಾದಾಗಿರಿ, ಕೊಲೆ, ಸುಲಿಗೆ, ಡಕೈತಿ, ಹಫ್ತಾವಸೂಲಿ ಮುಂತಾದ ಗೂಂಡಾಗಿರಿಯ ಚಟುವಟಿಕೆಗಳಿಂದಾಗಿ ಆತ ಆಸುಪಾಸಿನಲ್ಲಿ ಭಯಾನಕ ವ್ಯಕ್ತಿಯಾಗಿದ್ದನು. ಇತ್ತೇಹಾದಿನ ಅಧ್ಯಕ್ಷನಾದ ಮೇಲೆ ಸರಕಾರಿ ಹಿರಿಯ ಅಧಿಕಾರಿಗಳ ಮೇಲೆ, ಮಂತ್ರಿಮಂಡಲದ ಸದಸ್ಯರ ಮೇಲೆ, ಮುಸ್ಲಿಂ ನಾಯಕರ ಮೇಲೆ

ತನ್ನ ಪ್ರಭಾವ ಬೀರಲು ಪ್ರಾರಂಭಿಸಿದ್ದನು. ಮೀಟಿಂಗುಗಳಲ್ಲಿ ಅಧಿಕಾರಿಗಳನ್ನು, ಮಂತ್ರಿಗಳನ್ನು ಅವರ ಸ್ಥಾನಮಾನಗಳ ಗೌರವವನ್ನೂ ಲೆಕ್ಕಿಸದೆ ಅವರನ್ನು ಹೀಯಾಳಿಸುತ್ತಿದ್ದನು. ಆತನ ಅಶ್ಲೀಲ ಮಾತುಗಳಿಗೆ ಹೆದರಿ ಯಾರೂ ತುಟಿ ಪಿಟಕ್ ಎನ್ನುತ್ತಿರಲಿಲ್ಲ.

ಧರ್ಮ ಪ್ರಸಾರ ಮತ್ತು ಮುಸಲ್ಮಾನರನ್ನು ಸಂಘಟಿಸುವ ಉದ್ದೇಶದಿಂದ ಹುಟ್ಟಿಕೊಂಡಿದ್ದ ಇತ್ತೇಹಾದ ಸಂಘಟನೆಯು ರಜವಿಯು ಅಧ್ಯಕ್ಷನಾದ ಮೇಲೆ ಅದು ಹಿಂದೂಗಳಲ್ಲಿ ಭಯವನ್ನುಂಟು ಮಾಡುವ ಸಂಸ್ಥೆಯಾಗಿ ಬೆಳೆಯಿತು. ನಿಜಾಮ ರಾಜ್ಯವು ಭಾರತದಲ್ಲಿ ವಿಲೀನವಾಗುವ ವರೆಗೂ ಅದರ ಈ ಧೋರಣೆಯಲ್ಲಿ ಯಾವುದೇ ಬದಲಾವಣೆಯೂ ಆಗಲಿಲ್ಲ. ರಜವಿಯು ನಿಜಾಮ ಸರಕಾರದ ನಡುವೆ ಮತ್ತು ಭಾರತ ಸರಕಾರದ ನಡುವೆ ಯಾವುದೇ ರೀತಿಯ ಒಪ್ಪಂದವಾಗಲು ಆಸ್ಪದ ಕೊಡುತ್ತಿರಲಿಲ್ಲ. ಕ್ಷಣಕ್ಷಣಕ್ಕೂ ನಿಜಾಮ ಸರಕಾರವು ಇಂಗ್ಲಿಷರೊಂದಿಗಿನ ಒಪ್ಪಂದವನ್ನು ಮುರಿಯುತ್ತಿದ್ದುದರಿಂದ ಇಂಗ್ಲಿಷರು 'ಯಥಾಸ್ಥಿತಿ'ಯನ್ನು ಕಾಪಾಡಿಕೊಂಡು ಹೋಗಬೇಕೆಂದು ನಿಜಾಮನ ಮೇಲೆ ಒತ್ತಡಹಾಕಿ ಅದರಂತೆ ಆತನಿಂದ ಕರಾರು ಮಾಡಿಸಿಕೊಂಡರು. ಇದು ರಜವಿಗೆ ರುಚಿಸುವ ಮಾತಾಗಿರಲಿಲ್ಲ. ಯಾಕೆಂದರೆ ಆತ ಲಂಗುಲಗಾಮಿಲ್ಲದೆ ತನ್ನ ಸೈತಾನೀ ಆಟ ಆಡಬೇಕೆಂದಿದ್ದನು. 'ಯಥಾಸ್ಥಿತಿ'ಯ ಒಡಂಬಡಿಕೆಯಾದಾಗ ರಜವಿಯು ತನ್ನ ಇಪ್ಪತ್ತೈದು ಸಾವಿರ ರಜಾಕಾರರ ಮತ್ತು ಮುಸಲ್ಮಾನರ ಮೋರ್ಚಾ ಹೊರಡಿಸಿ ಆ ಒಪ್ಪಂದವನ್ನು ಪ್ರತಿಭಟಿಸುವ ಪ್ರಯತ್ನ ಮಾಡಿದನು.

ಮುಂದೆ ಎಂದಾದರೂ ಒಂದು ದಿನ ಭಾರತ ಸರಕಾರವು ನಿಜಾಮ ರಾಜ್ಯದ ಮೇಲೆ ದಾಳಿ ಮಾಡಬಹುದು. ಆಗ ರಾಜ್ಯದ ಆತ್ಮರಕ್ಷಣೆಗಾಗಿ ಮೊದಲಿನಿಂದಲೇ ವ್ಯವಸ್ಥೆ ಮಾಡಿಕೊಳ್ಳಬೇಕೆಂಬ ವಿಚಾರ ರಜವಿಗೆ ಬರಲೇ ಇಲ್ಲ. ಒಂದು ದಿನ ತಾನೇ ಭಾರತ ಒಕ್ಕೂಟದ ಮೇಲೆ ದಂಡೆತ್ತಿ ಹೋಗಿ ದಿಗ್ವಿಜಯವನ್ನು ಸಾಧಿಸುತ್ತೇನೆ ಎಂಬ ದುರಭಿಮಾನದ ಮಹತ್ವಾಕಾಂಕ್ಷೆ ಆತನದಾಗಿತ್ತು. ಹೈದರಾಬಾದ ರಾಜ್ಯವನ್ನಷ್ಟೇ ಅಲ್ಲ ಇಡೀ ಭಾರತ ದೇಶವನ್ನು ಇಸ್ಲಾಂ ರಾಷ್ಟ್ರವನ್ನಾಗಿ ಮಾಡುವ ಕನಸು ಕಾಣುತ್ತಿದ್ದ ರಜವಿಯ ಈ ಆಕಾಂಕ್ಷೆಯು ಸಹಜವಾದುದೇ ಆಗಿತ್ತೆಂದು ಹೇಳಬೇಕು.

ಹೀಗಾಗಿ ಭಾರತ ಒಕ್ಕೂಟದ ಮೇಲೆ ಯುದ್ಧ ಸಾರಲು ಆತನು ಭರದಿಂದ ತಯಾರಿ ನಡೆಸಿದ್ದನು. ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು, ಮದ್ದು-ಗುಂಡುಗಳನ್ನು ತಯಾರಿಸಲು, ಸಂಗ್ರಹಿಸಲು ಪ್ರಾರಂಭಿಸಿದ್ದನು. ಅನೇಕ ಕಡೆಗಳಲ್ಲಿ ಶಸ್ತ್ರಾಸ್ತ್ರ, ಮದ್ದು-ಗುಂಡುಗಳನ್ನು ತಯಾರಿಸುವ ಕಾರಖಾನೆಗಳನ್ನು ಸ್ಥಾಪಿಸಿದ್ದನು. ಈ ಕಾರಖಾನೆಗಳಲ್ಲಿ ಪ್ರತಿ ದಿನ ೬೦೦ ಜನ ಕಾರ್ಮಿಕರು ಮೂರು ಸರದಿಗಳಲ್ಲಿ ಕೆಲಸ ಮಾಡುತ್ತಿದ್ದರು. ಸ್ಟೇನ್‌ಗನ್ ತಯಾರಿಸುವ ಒಂದು ಕಾರಖಾನೆ ಸ್ಥಾಪಿಸಲಾಗಿತ್ತು. 'ಪ್ರಾಗಾ ಟೂಲ್ಸ್' ಎಂಬ ಕಂಪನಿಯು ವಿವಿಧ ಪ್ರಕಾರದ ಮದ್ದು-ಗುಂಡುಗಳನ್ನು ತಯಾರಿಸುತ್ತಿತ್ತು ಶಸ್ತ್ರಾಸ್ತ್ರಗಳ ಉತ್ಪಾದನೆಯು ರಾಜ್ಯದಲ್ಲಿಯೇ ಇಷ್ಟೊಂದು ಪ್ರಮಾಣದಲ್ಲಿ ಆಗುತ್ತಿರಬೇಕಾದರೂ ಅಷ್ಟೂ ಸಾಲದೆಂಬಂತೆ ರಜವಿಯು ಹೊರಗಿನಿಂದಲೂ ಅಪಾರವಾದ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳುತ್ತಿದ್ದನು. 'ಸಿಡ್ನೀ ಕಾಟನ್' ಎಂಬ ಒಬ್ಬ ಕುಖ್ಯಾತ ಅಂತಾರಾಷ್ಟ್ರೀಯ

ಕಳ್ಳಸಾಗಾಣಿಕೆದಾರನಿದ್ದ. ಈತನು ರಜವಿಗೆ ಅಪಾರವಾದ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದನು. ಶಸ್ತ್ರಾಸ್ತ್ರಗಳ ಪೆಟ್ಟಿಗೆಗಳ ಮೇಲೆ 'ಜೀವ ರಕ್ಷಕ ಔಷಧಿಗಳನ್ನು ದಯಾಭಿಕ್ಷೆಯಾಗಿ ಸಾಗಿಸಲಾಗುತ್ತಿದೆ' ಎಂಬ ಘೋಷಣೆ ಬರೆದು ವಿಮಾನಗಳ ಮೂಲಕ ರಾಜ್ಯಕ್ಕೆ ಗುಟ್ಟಾಗಿ ಕಳಿಸಲಾಗುತ್ತಿತ್ತು. ಈ ಸಿಡ್ನೇ ಕಾಟನ್ನನು ಗೋವಾನನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ಕರಾಚಿ ಮತ್ತು ಹೈದರಾಬಾದಗಳ ನಡುವೆ ಸಂಪರ್ಕದೂತನಾಗಿ ಕೆಲಸ ಮಾಡುತ್ತಿದ್ದನು. ವಿಮೋಚನೆಗೆ ಮುಂಚೆ ಮೇ ೧೯೪೮ರಲ್ಲಿ ಈತನು ಬೀದರಿಗೆ ಶಸ್ತ್ರಾಸ್ತ್ರಗಳನ್ನು ಸಾಗಿಸಿದ್ದು ತಿಳಿದು ಬರುತ್ತದೆ.

ರಜವಿಯು ಯಾವ ಮಟ್ಟದ ವ್ಯಕ್ತಿಯಾಗಿದ್ದನು ಎನ್ನುವುದಕ್ಕೆ ಒಂದು ಪ್ರಸಂಗವನ್ನು ಉಲ್ಲೇಖಿಸಬಹುದು. ಒಮ್ಮೆ ಮಂತ್ರಿಮಂಡಲದ ಸಭೆ ನಡೆಯುತ್ತಿತ್ತು. ರಾಜ್ಯದ ಎಲ್ಲ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಸಂಸ್ಥಾನದ ಮಿಲ್ಟಿಯ ಮೇಜರ್ ಜನರಲ್‌ರಾದ ಸೈಯದ ಅಹಮದ ಅಲ್ ಇದ್ರೂಸ್‌ರವರೂ ಸಭೆಯಲ್ಲಿದ್ದರು. ರಾಜ್ಯದ ಸುರಕ್ಷತೆಯ ಚರ್ಚೆಯ ಸಂದರ್ಭದಲ್ಲಿ ನಿಜಾಮನು ಮೇ.ಜ. ಅಲ್ ಇದ್ರೂಸರನ್ನು ಒಂದು ಪ್ರಶ್ನೆ ಕೇಳಿದರು, "ನಮ್ಮ ಸೈನ್ಯವು ಭಾರತ ಸರಕಾರದ ಸೇನೆಯನ್ನು ಎದುರಿಸಲು ಸಮರ್ಥವಾಗಿದೆಯೆ?"

ಸುಳ್ಳು ಮಾಹಿತಿ ಕೊಡುವುದು ಸೇನಾನಾಯಕರ ಧರ್ಮವಲ್ಲ. ಅಲ್ ಇದ್ರೂಸರು ತಮ್ಮ ಸೈನ್ಯದ ವಸ್ತುಸ್ಥಿತಿಯನ್ನು ಸಾದ್ಯಂತವಾಗಿ ವಿವರಿಸಿ ಹೇಳಿದರು. ಭಾರತ ಒಕ್ಕೂಟದ ಸೈನ್ಯವು ಎಲ್ಲ ರೀತಿಯಿಂದಲೂ ಸುಸಜ್ಜಿತವಾಗಿದ್ದು ಅದನ್ನು ಎದುರಿಸುವಷ್ಟು ಸಾಮರ್ಥ್ಯ ತಮ್ಮ ಸೈನ್ಯಕ್ಕಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರು. ಈ ಮಾತು ಕೇಳುತ್ತಿದ್ದಂತೆ ತಕ್ಷಣ ಕಾಸಿಂ ರಜವಿಯು ಸಿಡುಕಿನಿಂದ ನುಡಿದನು, "ಕತ್ತೆ ನನ ಮಗ! ಹೊರಗೆ ತಳ್ಳಿರಿ ಈತನನ್ನು." ರಾಜ್ಯದ ಸರ್ವಾಧಿಕಾರಿಯಾಗಿದ್ದ ಸ್ವತಃ ನಿಜಾಮನ, ರಾಜ್ಯದ ಇತರ ಹಿರಿಯ ನಾಯಕರ ಮತ್ತು ಅಧಿಕಾರಿಗಳ ಎದುರಿನಲ್ಲಿಯೇ ರಾಜ್ಯದ ಹಿರಿಯ ಸೇನಾನಾಯಕನಿಗೆ ಈ ರೀತಿಯಾಗಿ ನುಡಿದರೂ ಯಾರೊಬ್ಬರೂ ಬಾಯಿ ಬಿಚ್ಚಲಿಲ್ಲ. ಎಲ್ಲರೂ ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತಿದ್ದರು.

ಈ ಅಪಮಾನವನ್ನು ಮನಸ್ಸಿನಲ್ಲಿ ನುಂಗಿಕೊಂಡಿದ್ದ ಅಲ್ ಇದ್ರೂಸರು ಮುಂದೆ ಪೋಲೀಸ ಕಾರ್ಯಾಚರಣೆಯ ಕಾಲಕ್ಕೆ ತಮ್ಮ ಸೇನಾನಾಯಕರಿಗೆ ಒಂದು ಕಿವಿಮಾತು ಹೇಳಿದರು. 'ಇಂಥ ದೊಡ್ಡ ಸೈನ್ಯಕ್ಕೆ ಎದುರಾಗಿ ವ್ಯರ್ಥವಾಗಿ ಯಾಕೆ ಸಾವಿಗೆ ತುತ್ತಾಗುತ್ತೀರಿ? ರಜಾಕಾರ ಪಡೆಯನ್ನು ಹೋರಾಡಲು ಮುಂದೆ ಬಿಡಿ.' ಹೀಗೆ ಅಲ್ ಇದ್ರೂಸರು ಸಾಯಲು ರಜಾಕಾರ ಪಡೆಯನ್ನು ಮುಂದೆ ಬಿಟ್ಟು ತನ್ನ ಸೈನ್ಯವನ್ನು ಹಿಂದೆ ತಡೆಹಿಡಿದಿದ್ದರು ಮತ್ತು ಕೊನೆಯ ಕ್ಷಣದಲ್ಲಿ ಬಿಳಿಯ ಬಾವುಟವನ್ನು ತೋರಿಸಿ ಶರಣಾಗತಿಯನ್ನು ಸಾರಿದ್ದರು.

ಕಾಸಿಂ ರಜವಿಯ ಉದ್ಧಟತನವನ್ನು ಪ್ರತಿಬಿಂಬಿಸುವ ಆತನ ಭಾಷಣದ ಕೆಲವು ತುಣುಕುಗಳನ್ನು ಇಲ್ಲಿ ನೋಡಬಹುದಾಗಿದೆ.

ಒಂದು ಸಾರ್ವಜನಿಕ ಸಭೆಯಲ್ಲಿ, 'ನನ್ನ ಹಿಂದೂ ಮಿತ್ರರೆ! ಒಂಬೈನೂರು ವರ್ಷಗಳಿಂದ ನಾವು ಈ ದೇಶವನ್ನು ಆಳುತ್ತ ಬಂದಿದ್ದೇವೆ. ಈ ದಿನ ನಾನು ಮನಸ್ಸು ಮಾಡಿದರೆ

ನಿಮ್ಮನ್ನೆಲ್ಲ ಕೊಚ್ಚಿಹಾಕಬಹುದು. ನಿಮ್ಮನ್ನು ಈ ಪ್ರಪಂಚದಿಂದಲೇ ಸಾಗಹಾಕಬಹುದು.' (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೧೬೭*).

'ನಾವು ಒಂದು ಕೋಟಿ ನಲವತ್ತು ಲಕ್ಷ ಹಿಂದೂಗಳನ್ನು ಸಾಮೂಹಿಕವಾಗಿ ಕೊಲೆ ಮಾಡುತ್ತೇವೆ. ಅವರನ್ನು ಹೈದರಾಬಾದದಿಂದ ಗಡಿಪಾರು ಮಾಡಿ ಈ ಸಂಸ್ಥಾನವನ್ನು ಮುಸ್ಲಿಂ ರಾಷ್ಟ್ರವನ್ನಾಗಿ ಮಾಡುತ್ತೇವೆ. ನಮ್ಮ ನೆರವಿಗಾಗಿ ಭಾರತದಿಂದ ನಾಲ್ಕೂವರೆ ಕೋಟಿ ಮುಸಲ್ಮಾನರು ಧಾವಿಸಿ ಬರುತ್ತಾರೆ. ೧೫ನೆಯ ಸೆಪ್ಟೆಂಬರ್, ೧೯೪೮ರಂದು ಎರಡು ಲಕ್ಷ ರಜಾಕಾರರು ಹೈದರಾಬಾದದ ಹಿಂದೂಗಳನ್ನು ಮುಗಿಸಿಬಿಟ್ಟು ದಿಲ್ಲಿಯ ಕೆಂಪುಕೋಟೆಯ ಮೇಲೆ ನಿಜಾಮನ ಬಾವುಟ ಹಾರಿಸುವರು.' (*ಮರಾಠವಾಡ್ಯಾಚೇ ಮಾನಕರೀ, ಪು. ೫೬*).

ರಜವಿಯು ಒಳ್ಳೆಯ ಮಾತುಗಾರನಾಗಿದ್ದನು. ಮಾತುಗಾರಿಕೆಯಿಂದ ಇಡೀ ಸಭೆಯನ್ನು ನಗಿಸುತ್ತಲೂ ಇದ್ದನು, ರಜಾಕಾರರನ್ನು ಪ್ರಚೋದಿಸುತ್ತಲೂ ಇದ್ದನು. ಅಂಥ ಒಂದು ಪ್ರಚೋದನಕಾರಕ ಭಾಷಣದ ಒಂದು ತುಣುಕು: "ಆಕಳ ಶಗಣಿ, ಉಚ್ಚೆ ಕುಡಿಯುವ, ಕಲ್ಲು, ಕೋತಿಗಳನ್ನು ಪೂಜಿಸುವ ಕಾಫೀರರು ನಮ್ಮನ್ನು ಆಳಲು ಬಯಸುತ್ತಾರೆ." ಹೀಗೆ ನುಡಿದು ಮುಂದೆ ನಾಟಕೀಯವಾಗಿ ಅಭಿನಯ ಮಾಡುತ್ತ ಹೇಳುತ್ತಿದ್ದ, "ಅದೋ ನೋಡಿ, ಮುಂದೆ ನುಗ್ಗಿದ ನಿಜಾಮ ಮೀರ ಉಸ್ಮಾನ ಅಲೀಖಾನರು ಕೆಂಪುಕೋಟೆಯ ಮೇಲೆ ಆಸಫಿಯಾ ಬಾವುಟ ಹಾರಿಸುತ್ತಿರುವುದು ನನಗೆ ಕಾಣುತ್ತಿದೆ." (*ಜನಸ್ತೋಮದ ಚಪ್ಪಾಳೆ*).

"ಕಾಫಿರರಾದ ಹಿಂದೂಗಳನ್ನು ಗುಲಾಮರನ್ನಾಗಿ ಮಾಡುವುದು ಮುಸಲ್ಮಾನರ ದೈವದತ್ತವಾದ ಹಕ್ಕಾಗಿದೆ. ಹಿಂದೂವು ಅನಾಗರಿಕನು; ಆದ್ದರಿಂದಲೇ ಕಲ್ಲುಗಳನ್ನು ಹಾಗೂ ಕೋತಿಗಳನ್ನು ಪೂಜಿಸುತ್ತಾನೆ. ಓರ್ವ ವ್ಯಕ್ತಿ ಮುಸಲ್ಮಾನನಾಗಿ ಬಾಳಬೇಕಾದರೆ ಅಪಾಯವನ್ನು ಬರಮಾಡಿಕೊಳ್ಳಲೇಬೇಕು. ಪ್ರಾಪಂಚಿಕ ಆಶೆ-ಆಕಾಂಕ್ಷೆಗಳನ್ನು ತುಚ್ಛೀಕರಿಸಿದ ಮುಸಲ್ಮಾನನು ಇಡೀ ಜಗತ್ತೇ ವೈರಿಯಾದರೂ ಅದನ್ನು ಸಮರ್ಥವಾಗಿ ಎದುರಿಸಬಲ್ಲನು." (*ಹೈದರಾಬಾದ ಮುಕ್ತಿ ಸಂಘರ್ಷ, ಪು.೧೧೪*).

೯ನೆಯ ಜೂನ್ ೧೯೪೮ರ ಭಾಷಣದಲ್ಲಿ :

"ಮುಸಲ್ಮಾನರು ತಮಗಾಗಿ ಯಾವಾಗಲೂ ಹೊಸ ಭೂಗೋಳವನ್ನು ನಿರ್ಮಿಸಿಕೊಂಡಿದ್ದಾರೆ. ಇಷ್ಟರಲ್ಲಿಯೇ ಹೈದರಾಬಾದ ರಾಜ್ಯದ ಮೇರೆಗಳು ವಿಸ್ತಾರಗೊಂಡು ದಿಲ್ಲಿ ದಾಟಿ ಮುಂದೆ ಹೋಗುತ್ತವೆ. ಆಗ ದಿಲ್ಲಿಯ ಮೇಲೆ ಆಸಫಿಯಾ ಧ್ವಜ ಹಾರಾಡುತ್ತದೆ. ನಿಜಾಮರು ದಿಲ್ಲಿಯ ಕಡೆಗೆ ಮುನ್ನುಗ್ಗುವುದನ್ನು ನೋಡುತ್ತಿದ್ದೇನೆ." (*ಹೈದರಾಬಾದ ಮುಕ್ತಿ ಸಂಘರ್ಷ, ಪು. ೧೨೨*).

೧ನೆಯ ಜೂನ್, ೧೯೪೮ : "ಪ್ರಾರಂಭದ ದಿನಗಳ ಮುಸಲ್ಮಾನರ ಉದಾಹರಣೆ ನೆನೆಯಿರಿ. ನೀವು ಪಾಕಿಸ್ತಾನದಂತಹ ಸಣ್ಣ ಪ್ರದೇಶಗಳಿಂದ ತೃಪ್ತರಾಗಬಾರದು. ಯಮುನಾ ಮತ್ತು ಮೂಸಾ ನದಿಗಳ ಸಂಗಮವನ್ನು ಏರ್ಪಡಿಸಿ ನಾವು ಭಾರತದ ನಕಾಶೆಯನ್ನು ಪುನಃ ಚಿತ್ರಿಸುತ್ತಿದ್ದೇವೆ. ನಾವು ಘಜನಿ ಹಾಗೂ ಬಾಬರನ ಸಂತತಿಯವರಿದ್ದೇವೆ. ನಾವು ಸಂಕಲ್ಪ

ಮಾಡಿದರೆ ಕೆಂಪುಕೋಟೆಯ ಮೇಲೆ ಆಸಫಿಯಾ ಧ್ವಜವನ್ನು ಹಾರಿಸಬಹುದು. ದಕ್ಷಿಣದ ಮುಸಲ್ಮಾನರು ಒಂದೇ ಪಾಕಿಸ್ತಾನದಿಂದ ತೃಪ್ತರಾಗುವುದಿಲ್ಲ. ಅವರು ಭಾರತ ಹಾಗೂ ಜಗತ್ತನ್ನು ಜೋಡಿಸಿ ಪಾಕಿಸ್ತಾನವನ್ನಾಗಿ ಪರಿವರ್ತಿಸುತ್ತಾರೆ. ನಿಮ್ಮ ಪೂರ್ವಜರು ೧೩೦೦ ವರ್ಷಗಳ ಹಿಂದೆ ಇದನ್ನೇ ಮಾಡಲಿಲ್ಲವೆ?" (*ಹೈದರಾಬಾದ ಮುಕ್ತಿ ಸಂಘರ್ಷ, ಪು. ೧೨೨–೨೩*).

ಕಾಸಿಂ ರಜವಿಯು ಭಾರತ ಒಕ್ಕೂಟಕ್ಕೆ ಎಚ್ಚರಿಕೆಯನ್ನು ನೀಡಿದ್ದನು :

"ಭಾರತ ಒಕ್ಕೂಟವು ಹೈದರಾಬಾದನ್ನು ಆಕ್ರಮಿಸಲು ಯತ್ನಿಸಿದರೆ ಆಕ್ರಮಣಕಾರರು ಒಂದು ಕೋಟಿ ಅರವತ್ತೈದು ಲಕ್ಷ (ಹಿಂದೂಗಳ) ಹೆಣಗಳನ್ನು ಎಲ್ಲೆಲ್ಲೂ ಬೆಂಕಿಯಲ್ಲಿ ಉರಿಯುತ್ತಿರುವುದನ್ನು ಕಾಣಬಹುದು. ನಮಗೆ ಜೀವಿಸಲಾರದ ಪರಿಸ್ಥಿತಿ ಬಂದರೆ ಮುಸಲ್ಮಾನರಾದ ನಾವು ಬೇರೆಯವರನ್ನೂ ಜೀವದಿಂದ ಇರಗೊಡಲಾರೆವು." (*The End of An Era, p.37*).

ಇಷ್ಟೆಲ್ಲ ಹಾರಾಡುತ್ತಿದ್ದ ಕಾಸಿಂ ರಜವಿಯ ಯೋಗ್ಯತೆ ಏನಾಗಿತ್ತು ಎಂಬುದು ಆತನು ಸರದಾರ ವಲ್ಲಭ ಭಾಯಿ ಪಟೇಲರನ್ನು ಭೇಟಿಯಾದಾಗಿನ ಒಂದು ಪ್ರಸಂಗದಿಂದ ಗೊತ್ತಾಗುತ್ತದೆ. ಆಗ ಭಾರತ ಸ್ವತಂತ್ರವಾಗಿತ್ತು. ದೆಹಲಿಯಲ್ಲಿ ಭಾರತ ಒಕ್ಕೂಟದ ಅಧಿಕಾರವಿತ್ತು. ಹೈದರಾಬಾದ ಸಂಸ್ಥಾನದ ಮೇಲೆ ಭಾರತ ಒಕ್ಕೂಟವು ದಾಳಿ ಮಾಡಬಹುದೆಂಬ ಗುಮಾನಿ ರಜವಿಗೆ ಉಂಟಾಗಿತ್ತು. ಹಾಗೇನಾದರೂ ಮಾಡಿದರೆ ಒಳ್ಳೆಯದಾಗಲಿಕ್ಕಿಲ್ಲ ಎಂಬ ಎಚ್ಚರಿಕೆಯನ್ನು ಸರದಾರ ಪಟೇಲರಿಗೆ ಕೊಡಲು ರಜವಿಯು ವಿಮಾನದ ಮೂಲಕ ದಿಲ್ಲಿಗೆ ಹೋಗಿದ್ದನು. ತನ್ನ ಜೊತೆಯಲ್ಲಿ ಮಂತ್ರಿಮಂಡಲದ ಸದಸ್ಯರಾದ ಜೋಶಿ ಎಂಬವರನ್ನೂ ಕರೆದೊಯ್ದಿದ್ದನು. ದಿಲ್ಲಿಗೆ ಹೋಗಿ ಅಲ್ಲಿ ಒಂದು ಹೋಟೇಲಿನಲ್ಲಿ ವಾಸ್ತವ್ಯ ಮಾಡಿ ಜೋಶಿಯ ಮೂಲಕ ಸರದಾರ ಪಟೇಲರ ಮನೆಗೆ ಫೋನ್ ಮಾಡಿಸಿ ತಾನು ದಿಲ್ಲಿಗೆ ಬಂದ ವಿಚಾರವನ್ನು ತಿಳಿಸಿ ಸಂದರ್ಶನಕ್ಕಾಗಿ ಸಮಯ ನಿಗದಿಪಡಿಸಲು ಕೇಳಿಕೊಂಡನು.

ಸರದಾರ ಪಟೇಲರ ಆಪ್ತ–ಕಾರ್ಯದರ್ಶಿಯಾದ ಶಿವಶಂಕರ ಎನ್ನುವವರು ಫೋನ್ ಎತ್ತಿದರು. ನಿಜಾಮನು ಹೇಳಿಸಿದ ವಿಷಯವನ್ನು ಆತ ಪಟೇಲರಿಗೆ ತಿಳಿಸಿದನು. ಪಟೇಲರು ತಿರುಗಿ ಶಿವಶಂಕರನಿಂದಲೇ ನಿಜಾಮನಿಗೆ ಈ ರೀತಿ ತಿಳಿಸಲು ಹೇಳಿದರು :

"ಸಧ್ಯ ದಿಲ್ಲಿಯಲ್ಲಿ ಕೋಮುಗಲಭೆಗಳಾಗುತ್ತಿವೆ. ರಜವಿಯು ಹೋಟೇಲಿನಲ್ಲಿ ಇರುವ ವಿಚಾರವೇನಾದರೂ ತಿಳಿದರೆ ಗಲಭೆಖೋರರು ಅವರನ್ನು ಜೀವಸಹಿತ ಬಿಡಲಾರರು. ಸಧ್ಯಕ್ಕೆ ಯಾರಿಗೂ ತಿಳಿಯದಂತೆ ಅವರು ಹೋಟೇಲಿನಲ್ಲಿಯೇ ಬಚ್ಚಿಟ್ಟುಕೊಂಡಿರಲಿ. ಈ ದಿನ ಶುಕ್ರವಾರವಾದ್ದರಿಂದ ನಮಾಜ ಮಾಡಲು ಜಾಮಾ ಮಸೀದಿಗೆ ಹೋಗುವುದಾದರೆ ಹೋಗಿ ಬರಲಿ, ಅದರ ಸುರಕ್ಷತೆಯ ವ್ಯವಸ್ಥೆ ಮಾಡಲಾಗುವುದು. ರಾತ್ರಿ ಎಂಟು ಗಂಟೆಗೆ ಭೇಟಿಗಾಗಿ ತಮ್ಮ ಮನೆಗೆ ಬರಬಹುದು. ಕರೆತರಲು ಬುಲೇಟ್‌ಪ್ರೂಫ್ ಕಾರು ಕಳಿಸಲಾಗುವುದು."

ಆ ರಾತ್ರಿ ಪಟೇಲರ ಮನೆಗೆ ರಜವಿಯು ಹೋದನು. ಸ್ವತಃ ಪಟೇಲರೇ ಬಾಗಿಲವರೆಗೆ ಬಂದು ಕೈಕುಲುಕಿ ಆತನನ್ನು ಸ್ವಾಗತಿಸಿದರು. ಪಟೇಲರನ್ನು ಕಂಡಾಕ್ಷಣ ರಜವಿಯ ಕಣ್ಣುಗಳು

ಕೆಂಪಗಾದವು. ಯಾವಾಗ ತನ್ನ ರೋಷವನ್ನು ಅವರ ಮೇಲೆ ಕಾರಿಕೊಳ್ಳಲಿ ಎಂದು ಆತುರ ಪಡುತ್ತಿದ್ದನು. ಪಟೇಲರು ಸಮಾಧಾನದಿಂದಲೇ ಹೇಳಿದರು, "ಸ್ವಲ್ಪ ಸುಧಾರಿಸಿಕೊಳ್ಳಿರಿ. ಶರಬತ್ತ ಕುಡಿಯಿರಿ. ಆಮೇಲೆ ಮಾತಾಡುವಿರಂತೆ."

ಹುಲ್ಲುಹಾಸಿನ ಮೇಲೆ ಜೋಡಿಸಿದ ಕುರ್ಚಿಯ ಮೇಲೆ ಕುಳಿತವನೇ ಎದ್ದು ನಿಂತು ಪಟೇಲರ ಎದುರಿಗೆ ಭಾಷಣಕ್ಕೆ ಶುರು ಮಾಡಿದನು. "ಕುಳಿತುಕೊಂಡು ಮಾತಾಡಿರಿ" ಎಂದು ಪಟೇಲರು ವಿನಂತಿಸಿಕೊಂಡರೂ ಕೇಳಲಿಲ್ಲ. "ನನಗೆ ನಿಂತುಕೊಂಡೇ ಮಾತಾಡುವ ರೂಢಿ" ಎಂದು ಹೇಳಿದ. ಪಟೇಲರು ಆತನನ್ನು ಕೂಡಲು ಒತ್ತಾಯಪಡಿಸಲಿಲ್ಲ. ಸುಮಾರು ಒಂದು ಗಂಟೆಯವರೆಗೆ ರಜವಿಯು ಪಟೇಲರ ಎದುರಿಗೆ ಕಿಡಿ ಕಾರಿಕೊಂಡು ಸುಸ್ತಾಗಿ ಕುಳಿತುಕೊಂಡನು.

ಪಟೇಲರು ಸ್ಥಿತಪ್ರಜ್ಞರಂತೆ ಎಲ್ಲವನ್ನೂ ಕೇಳಿಸಿಕೊಂಡರು. ಆಮೇಲೆ ನುಡಿದರು, "ನಾನು ನಿಮ್ಮ ಎಲ್ಲ ಮಾತುಗಳನ್ನು ಕೇಳಿದ್ದೇನೆ. ಈಗ ನನ್ನ ಒಂದೆರಡು ಪ್ರಶ್ನೆಗಳು."

"ಕೇಳಿರಿ."

"ಹೈದರಾಬಾದಿನಲ್ಲಿ ನೀವು ಒಂದು ಕೋಟಿ ನಲವತ್ತು ಲಕ್ಷ ಹಿಂದೂಗಳನ್ನು ಕೊಲ್ಲುತ್ತೀರೆಂದು ಹೇಳಿದಿರಲ್ಲ?"

"ಹೌದು, ಅದು ನನ್ನ ಪ್ರತಿಜ್ಞೆಯಾಗಿದೆ."

"ನೀವು ಒಂದು ಕೋಟಿ ನಲವತ್ತು ಲಕ್ಷ ಹಿಂದೂಗಳನ್ನು ಕೊಲ್ಲುತ್ತಿರಬೇಕಾದರೆ ನಾವು ಕೈಕಟ್ಟಿಕೊಂಡು ಕೂಡುತ್ತೇವೆಂದು ತಿಳಿದಿದ್ದೀರಾ?'

ರಜವಿ ಒಮ್ಮೆಲೆ ಹೌಹಾರಿ ನುಡಿದ, "ಹೈದರಾಬಾದ ಒಂದು ಸ್ವತಂತ್ರ ಸಾರ್ವಭೌಮ ಇಸ್ಲಾಮಿ ರಾಷ್ಟ್ರವಾಗಿದೆ. ಅದರ ಸಾರ್ವಭೌಮತ್ವವು ಸ್ವತಃ ಸಿದ್ಧವಿದೆ. ಅದನ್ನು ನಮ್ಮಿಂದ ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ."

ಹೆದರಿದ ರಜವಿಯನ್ನು ಪಟೇಲರು ಸೂಕ್ಷ್ಮವಾಗಿ ಗಮನಿಸುತ್ತ ಹೇಳಿದರು, "ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದರೆ ಅದನ್ನು ತಡೆಯುವುದು ನಮ್ಮಿಂದ ಹೇಗೆ ಸಾಧ್ಯ?"

ರಜವಿಗೆ ಮಾತೇ ಬರಲಿಲ್ಲ. ಆತ ತಡವರಿಸುತ್ತ ನುಡಿದ, "ನೀವು ನಮ್ಮನ್ನು ಬೆದರಿಸುತ್ತಿದ್ದೀರಿ. ನಮಗೆ ಹೈದರಾಬಾದಿಗೆ ಹೋಗಲು ಅಪ್ಪಣೆ ಕೊಡಬೇಕು."

"ಹೆದರಿಸುತ್ತಾ ಇಲ್ಲ. ತಿಳಿಸಿ ಹೇಳುತ್ತಿದ್ದೇನೆ. ನಾಳೆಯ ವಿಮಾನದಲ್ಲಿ ನಿಮಗಾಗಿ ರಿಜರ್ವ್ ಮಾಡಿಸಲಾಗಿದೆ. ನಿಮ್ಮನ್ನು ನಾವು ತಡೆಯುವುದಿಲ್ಲ."

ಒಟ್ಟಾರೆ ಹೇಳುವುದೆಂದರೆ ನಿಜಾಮನಾದ ಮೀರ ಉಸ್ಮಾನ ಅಲೀಖಾನನು ಮೊದಲಿಗೆ ಬಹಾದ್ದೂರ ಯಾರ ಜಂಗನ ಇತ್ತೇಹಾದ–ಏ–ಮುಸಲ್ಮೀನ ಸಂಘಟನೆಯಲ್ಲಿ, ಆಮೇಲೆ ರಜಾಕಾರ ಮತೀಯ ಭದ್ರ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದನು. ತಾನೇ ಹೆಣೆದ ಬಲೆಯಲ್ಲಿ ಸಿಲುಕಿ

ಒದ್ದಾಡುತ್ತಿದ್ದನು. ಆತ ತನ್ನನ್ನು ತಾನು ಸಂರಕ್ಷಿಸಿಕೊಳ್ಳುವ ಸ್ಥಿತಿಯಲ್ಲಿಯೂ ಇರಲಿಲ್ಲ. ಆಗಿನ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ಆತನು ಭಾರತದೊಂದಿಗೆ ವಿಲೀನಗೊಳ್ಳುವುದೂ ಸಾಧ್ಯವಿರಲಿಲ್ಲ. ಯಾಕೆಂದರೆ ಹಾಗೇನಾದರೂ ಆತ ಬಯಸಿದ್ದರೆ ಆತನನ್ನು ಸುತ್ತುವರಿದಿದ್ದ ಮತಾಂಧ ಮುಸ್ಲಿಮ ಸಮುದಾಯಗಳೇ ಆತನ ಕೊಲೆ ಮಾಡಿ ರಾಜ್ಯಸೂತ್ರವನ್ನು ತಮ್ಮ ಕೈಗೆ ತೆಗೆದುಕೊಳ್ಳಬಹುದಾಗಿತ್ತು. ಮುಸ್ಲಿಂ ಸಂಘಟನೆಗಳಿಂದ ಆ ರೀತಿಯ ತಯಾರಿಯೂ ಮಾಡಿಕೊಳ್ಳಲಾಗಿತ್ತು. ಈ ಸಂಗತಿಯನ್ನು ನಿಜಾಮ ಸೈನ್ಯದ ಮೇಜರ ಜನರಲ್ ಸೈಯದ ಅಹಮದ ಅಲ್ ಇದ್ರೂಸರು ದಾಖಲಿಸಿರುವ ಮಾತುಗಳಿಂದ ಸಮರ್ಥಿಸಬಹುದಾಗಿದೆ.

"............the Razakars had openly declared that they will dispose of the Nizam if he did not comply with their wishes and this made his Exalted Highness more afraid and he accepted the Razvi Government, the head of which was Laiq Ali." -(*Hyderabad of 'The Seven Loaves' by Maj. Gen. Syed Ahmed Al Edroos. p. 120*).

ಮೇಲೆ ಉಲ್ಲೇಖಿಸಿರುವ ಲಾಯಕ ಅಲೀಯು ನಿಜಾಮನ ಪ್ರಧಾನಮಂತ್ರಿಯಾಗಿದ್ದನು. ಕಾಸಿಂ ರಜವಿಯ ಆತ್ಮೀಯ ಗೆಳೆಯನೂ ಆಗಿದ್ದನು. ಲಾತೂರಿನಿಂದ ಓಡಿ ಬಂದಿದ್ದ ರಜವಿಗೆ ಲಾಯಕ್ ಅಲೀಯೇ ಆಶ್ರಯ ನೀಡಿ ಸಂರಕ್ಷಿಸಿದ್ದನು. ಮುಂದೆ ರಜವಿಯು ರಜಾಕಾರರ ಪಡೆಯನ್ನು ತಯಾರಿಸಿದಾಗ ಲಾಯಕ್ ಅಲೀಯು ರಜಾಕಾರರಿಗೆ ಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಡುತ್ತಿದ್ದನು. ರಜಾಕಾರರ ವಿರುದ್ಧ ಏನೇ ದೂರುಗಳು ಬಂದರೂ ಅವುಗಳನ್ನು ಕಸದ ಬುಟ್ಟಿಗೆ ಎಸೆದು ದೂರು ತಂದವರನ್ನೇ ತರಾಟೆಗೆ ತೆಗೆದುಕೊಳ್ಳುತ್ತಿದ್ದನು. ಹೀಗಾಗಿ ರಜಾಕಾರರ ವಿರುದ್ಧ ರಾಜ್ಯದಲ್ಲಿ ಯಾರೂ ಬಾಯಿಬಿಡುತ್ತಿರಲಿಲ್ಲ. ರಜಾಕಾರರ ಬರ್ಬರತೆ, ಅತ್ಯಾಚಾರ, ರಾಕ್ಷಸೀ ಕೃತ್ಯಗಳ ಕುರಿತು ಮುಂದೆ ಒಂದು ಅಧ್ಯಾಯವನ್ನು ಜೋಡಿಸಲಾಗಿರುವುದರಿಂದ ಅದರ ಚರ್ಚೆ ಇಲ್ಲಿ ಹೆಚ್ಚಿಗೆ ಬೆಳೆಸುವುದಿಲ್ಲ.

ಮುಂದೆ ೧೯೪೮ರ ಸೆಪ್ಟೆಂಬರ್ ೧೩ರಂದು ಹೈದರಾಬಾದ ರಾಜ್ಯದ ಮೇಲೆ ಭಾರತ ಸರಕಾರದ ಸೈನಿಕ ಕಾರ್ಯಾಚರಣೆ ನಡೆದಾಗ ರಜವಿ ಬೊಗಳೆ ಬಿಡುತ್ತಿದ್ದಂತೆ ಭಾರತದ ಯಾವ ಪ್ರದೇಶದಿಂದಲೂ ಯಾವ ಮುಸ್ಲಿಮನೂ ರಜಾಕಾರರ ಸಹಾಯಕ್ಕೆ ಬರಲಿಲ್ಲ. ನಿರ್ವಾಹವಿಲ್ಲದೆ ನಿಜಾಮನು ಭಾರತ ಸರಕಾರಕ್ಕೆ ಶರಣಾಗಬೇಕಾಯಿತು. ಆಗ ಕಾಸಿಂ ರಜವಿಯ ಬಂಧನವಾಯಿತು. ಆತನ ಮೇಲೆ ಅನೇಕ ಕೊಲೆಗಳ ಆರೋಪವಿತ್ತು. ಏಳು ವರ್ಷಗಳ ಜೈಲು ಶಿಕ್ಷೆಯನ್ನು ಭೋಗಿಸಿ ಬಿಡುಗಡೆಯಾಗಿ ಮುಂದೆ ಪಾಕಿಸ್ತಾನಕ್ಕೆ ಓಡಿಹೋದನು. ಅಲ್ಲಿ ಆತನಿಗೆ 'ಕ್ಯಾರೇ' ಎಂದು ಯಾರೂ ಕೇಳಲಿಲ್ಲ. ಅಲ್ಲಿ ಒಂದು ರೀತಿಯಿಂದ ಅನಾಮಧೇಯನಾಗಿ ಬದುಕಿ ಒಂದು ದಿನ ಸತ್ತುಹೋದನು.

***

ಚಳವಳಿಗಿಳಿದ ಸಂಘಟನೆಗಳು

ಸಂಘಟನೆಗಳಿಗೆ ಪ್ರೇರಕ ಪರಿಸ್ಥಿತಿ

'ಖಾಕಸಾರ ಪಾರ್ಟಿ', 'ದೀನದಾರ ಸಿದ್ಧಿಕಿ', 'ಇತ್ತೇಹಾದುಲ್ ಮುಸಲ್ಮೀನ' ಮತ್ತು 'ರಜಾಕಾರ' ಸಂಘಟನೆಗಳ ಕೈಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಸೂತ್ರದ ಗೊಂಬೆಯಾಗಿ ಅರಸೊತ್ತಿಗೆಯನ್ನು ನಡೆಸುತ್ತಿದ್ದ ನಿಜಾಮನು ಸಂಪೂರ್ಣವಾಗಿ ನಿಷ್ಕ್ರಿಯನಾಗಿದ್ದನು. ರಾಜ್ಯದಲ್ಲಿ ೮೬% ರಷ್ಟಿದ್ದ ಜನಾಂಗವು ಬರೀ ೧೨% ರಷ್ಟಿದ್ದ ಉಪದ್ರವಕಾರಿಗಳಿಗೆ ಹೆದರಿ ಉಸಿರು ಬಿಗಿ ಹಿಡಿದುಕೊಂಡು ಸುಮಾರು ೨೦-೨೫ ವರ್ಷಗಳ ವರೆಗೆ ಎಲ್ಲವನ್ನೂ ಸಹಿಸಿಕೊಂಡು ಬಂದಿದ್ದೇ ಒಂದು ಪವಾಡವಾಗಿತ್ತು. ವೈಯಕ್ತಿಕ ನೆಲೆಯಲ್ಲಿ ಪ್ರತಿಭಟಿಸಲು ಎದೆ ಸೆಟೆಸಿ ನಿಂತವರನ್ನು ಕಣ್ಣು ಮಿಳುಕಿಸುವಷ್ಟರಲ್ಲಿ ಗುಂಡಿಟ್ಟು ಕೊಲ್ಲಲಾಗುತ್ತಿತ್ತು. ತಮ್ಮ ಪಾಡಿಗೆ ತಾವಿದ್ದರೂ ತಮ್ಮ ವರ್ಚಸ್ಸು ಎಲ್ಲಿ ಕಡಿಮೆಯಾಗುವುದೋ ಎಂಬ ಅಳುಕಿನಿಂದ ಸುಮ್ಮಸುಮ್ಮನೇ ಕಾರಣವಿಲ್ಲದೆ ಬಹುಸಂಖ್ಯಾತ ಜನರನ್ನು ಪೀಡಿಸುತ್ತಿದ್ದ ಪ್ರಸಂಗಗಳಿಗೇನು ಕೊರತೆ ಇರಲಿಲ್ಲ.

ಸ್ವತಃ ನಿಜಾಮನ ಕುರಿತೇ ಹೇಳುವುದಾದರೆ ಆತ ಪ್ರಪಂಚದಲ್ಲೇ ಇರದಂಥ ಜಿಪುಣನಾಗಿದ್ದನು. ಸಂಪತ್ತು ಸಂಗ್ರಹಿಸುವುದು, ಏಕಾಂತದಲ್ಲಿ ಕುಳಿತು ತನ್ನ ಸಂಗ್ರಹದ ವಜ್ರ, ವೈಢೂರ್ಯ, ಸಂಪತ್ತನ್ನು ಈಕ್ಷಿಸುತ್ತ ಸಂತೋಷಪಡುವುದು ಆತನ ಹವ್ಯಾಸವಾಗಿತ್ತು. ನಗರದಲ್ಲಿ ಯಾವುದೇ ಹೊಸ ಮಾದರಿಯ ಕಾರು ಕಂಡರೆ ಮರುದಿನ ಆ ಕಾರು ಮಾಲೀಕನ ಮನೆ ಎದುರಿಗೆ ನಿಜಾಮನ ದೂತ ಹಾಜರಾಗುತ್ತಿದ್ದ. 'ನವಾಬರು ತಮ್ಮ ಕಾರಿನಲ್ಲಿ ಈ ದಿನ ನಮಾಜಿಗಾಗಿ ಜಾಮಾ ಮಸೀದಿಗೆ ಹೋಗಬೇಕಂತೆ ಎಂದು ನವಾಬರ ವಾಂಛೆಯನ್ನು ನಿವೇದಿಸಿಕೊಳ್ಳುತ್ತಿದ್ದ. ಅಯ್ತು ನವಾಜಿಗೆ ಹೋದ ಕಾರು ಸ್ಮಶಾನಕ್ಕೆ ಹೋದ ಹೆಣದಂತೆ ಹಿಂದಿರುಗಿ ಬರುವ ಸಾಧ್ಯತೆಯೇ ಇರಲಿಲ್ಲ. ಇಂಥ ಅನೇಕ ಪ್ರಸಂಗಗಳು ನಿಜಾಮನ ಚರಿತ್ರೆಯಲ್ಲಿ ಸೇರಿಕೊಂಡಿವೆ.

ರಾಜನೇ ಇಂಥ ಸ್ವಭಾವದವನಾದರೆ ಆತನ ಕೃಪಾಪೋಷಿತರಾದ ಜನರು ಯಾವ ಮಟ್ಟಕ್ಕೆ ಇಳಿದಿರಬಹುದು! ಹೊಗಳಿಕೆಗೆ ಸುಲಭವಾಗಿ ಮಾರುಹೋಗುತ್ತಿದ್ದ ನಿಜಾಮನನ್ನು ಮೇಲೆ ಉಲ್ಲೇಖಿಸಿದ ಸಂಘಟನೆಗಳು ಸುಲಭವಾಗಿ ತಮ್ಮ ಬುಟ್ಟಿಗೆ ಹಾಕಿಕೊಂಡು ಪೈಶಾಚಿಕ ಕೃತ್ಯಗಳಲ್ಲಿ ತೊಡಗಿದ್ದವು. ಅವರ ಪೈಶಾಚಿಕ ಕೃತ್ಯಗಳ ಕುರಿತು ಮುಂದಿನ ಒಂದು ಅಧ್ಯಾಯದಲ್ಲಿ ವಿವರಿಸಲಾಗುವುದು. ಇಲ್ಲಿ ಅಂಥ ಸಂಘಟನೆಗಳ ವಿರುದ್ಧವಾಗಿ ದನಿ ಎತ್ತಿ ನಿಂತ ರಾಜ್ಯದ ಕೆಲವು ಬಹುಸಂಖ್ಯಾತ ಜನತೆಯ ಸಂಘಟನೆಗಳ ಕುರಿತು ಚರ್ಚಿಸಲಾಗುವುದು.

ಭಾರತದಲ್ಲಿ ಆಗ ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿತ್ತು. ಮಹಾತ್ಮಾ ಗಾಂಧೀ, ಜವಾಹರಲಾಲ ನೆಹರೂ, ಸುಭಾಷಚಂದ್ರ ಬೋಸ, ಸರದಾರ ವಲ್ಲಭಭಾಯೀ

ಪಟೇಲರಂಥ ಜನನಾಯಕರು ರಾಷ್ಟ್ರೀಯ ಕಾಂಗ್ರೆಸ್ಸಿಗಾಗಿ ದುಡಿಯಲು ಕಂಕಣಬದ್ಧರಾಗಿದ್ದರು. ಆದರೆ ಹೈದರಾಬಾದ ರಾಜ್ಯದಲ್ಲಿ ಅಂಥ ಒಂದು ಯಾವ ಸಂಘಟನೆಯೂ ಇರಲಿಲ್ಲ. ಆ ದಿನಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಗುರಿ ದೇಶದ ಸ್ವಾತಂತ್ರ್ಯದ ಕಡೆಗೆ ಕೇಂದ್ರೀಕೃತವಾಗಿತ್ತು. ದೇಶದಲ್ಲಿಯ ನೂರಾರು ಸಂಸ್ಥಾನಗಳ ಬಗ್ಗೆ ಅದು ತಲೆ ಕೆಡಿಸಿಕೊಂಡಿರಲಿಲ್ಲ. ಹೀಗಾಗಿ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯು ಹೈದರಾಬಾದ ರಾಜ್ಯದಲ್ಲಿಯ ಆಗುಹೋಗುಗಳ ಬಗ್ಗೆ ಅಷ್ಟೊಂದು ಗಮನ ಕೊಟ್ಟಿರಲಿಲ್ಲ. ಆಗಿನ ಸಂಸ್ಥಾನಗಳೂ ಕೂಡ ಹೆಚ್ಚೂಕಡಿಮೆ ಇಂಗ್ಲಿಷರ ಹದ್ದುಬಸ್ತಿನಲ್ಲಿಯೇ ಇದ್ದುದರಿಂದ ಒಮ್ಮೆ ಇಂಗ್ಲಿಷರು ಭಾರತದಿಂದ ತೊಲಗಿ ಹೋದರೆಂದರೆ ಸಂಸ್ಥಾನಿಕರ ಸಮಸ್ಯೆಯನ್ನು ತಾವು ಬಗೆಹರಿಸಿಕೊಳ್ಳಬಹುದೆಂದು ಕಾಂಗ್ರೆಸ್ಸು ಭಾವಿಸಿತ್ತು. ನಿಜಾಮ ರಾಜ್ಯವನ್ನು ನಿಯಂತ್ರಿಸಲು ಬ್ರಿಟಿಷ ಸರಕಾರವು ಇಲ್ಲಿ ಪೊಲಿಟಿಕಲ್ ಸೆಕ್ರೆಟರಿಯನ್ನು ನೇಮಿಸಿದ್ದು ತನ್ನೊಂದಿಗಿನ ಒಡಂಬಡಿಕೆಗೆ ತಪ್ಪಿ ನಡೆದಾಗಲೆಲ್ಲ ಅದು ನಿಜಾಮನನ್ನು ಎಚ್ಚರಿಸುತ್ತಲೇ ಬಂದಿತ್ತು. ಇತ್ತೇಹಾದ ಮತ್ತು ರಜಾಕಾರರ ಚಟುವಟಿಕೆಗಳನ್ನು ಬ್ರಿಟಿಷ ಸರಕಾರವು ಖಂಡಿಸುತ್ತಲೇ ಬಂದಿತ್ತು. ಮುಂದೊಮ್ಮೆ ನಿಜಾಮನೊಂದಿಗೆ 'ಯಥಾಸ್ಥಿತಿ'ಯನ್ನು ಕಾಪಾಡಿಕೊಂಡು ಹೋಗಬೇಕೆಂದು ನಿರ್ದೇಶನ ನೀಡಿತು.

ಇದು ಒಂದು ಕಡೆಗಾದರೆ ಇನ್ನೊಂದು ಕಡೆಗೆ ನಿಜಾಮ ರಾಜ್ಯವು ತೆಲುಗು ಭಾಷೆಯ ಆಂಧ್ರದ ಎಂಟು ಜಿಲ್ಲೆಗಳಲ್ಲಿ, ಮರಾಠಿ ಭಾಷೆಯ ಮಹಾರಾಷ್ಟ್ರದ ಐದು ಜಿಲ್ಲೆಗಳಲ್ಲಿ ಮತ್ತು ಕನ್ನಡ ಭಾಷೆಯ ಕರ್ನಾಟಕ ವಿಭಾಗದ ಮೂರು ಜಿಲ್ಲೆಗಳಲ್ಲಿ ಹಂಚಿ ಹೋಗಿತ್ತು. ಇಡೀ ರಾಜ್ಯದಲ್ಲಿ ಹೋರಾಟಕ್ಕಾಗಿ ಒಂದು ಸಾಮಾನ್ಯವಾದ ವೇದಿಕೆಯನ್ನು ನಿರ್ಮಿಸುವುದು ಕಷ್ಟಸಾಧ್ಯವಾಗಿತ್ತು. ಹೀಗಾಗಿ ಆಂಧ್ರದ ಎಂಟು ಜಿಲ್ಲೆಗಳು ಸೇರಿ 'ಆಂಧ್ರ ಮಹಾಸಭಾ', ಮಹಾರಾಷ್ಟ್ರದ ಐದು ಜಿಲ್ಲೆಗಳು ಸೇರಿ 'ಮಹಾರಾಷ್ಟ್ರ ಪರಿಷತ್' ಮತ್ತು ಕರ್ನಾಟಕದ ಮೂರು ಜಿಲ್ಲೆಗಳು ಸೇರಿ 'ಕರ್ನಾಟಕ ಪರಿಷತ್ತ'ನ್ನು ಸ್ಥಾಪಿಸಿಕೊಂಡಿದ್ದವು. ೧೯೨೬ರಲ್ಲಿ ಸ್ಥಾಪನೆಗೊಂಡಿದ್ದ ಈ ಸಂಸ್ಥೆಗಳು ಸ್ವತಂತ್ರವಾಗಿಯೇ ತಮ್ಮ ತಮ್ಮ ಪ್ರದೇಶಗಳಲ್ಲಿ ಸತ್ಯಾಗ್ರಹಗಳ ಮೂಲಕ ಹೋರಾಟ ನಡೆಸುತ್ತಿದ್ದವು. ಬ್ರಿಟಿಷರೊಂದಿಗೆ ಮಾಡಿಕೊಂಡ 'ಯಥಾಸ್ಥಿತಿ' ಒಪ್ಪಂದವನ್ನು ನಿಜಾಮಪರವಾದ ಸಂಘಟನೆಗಳು ಮುರಿಯುತ್ತಲೇ ಬಂದಿದ್ದವು. ಇದನ್ನು ಈ ಪರಿಷತ್ತುಗಳು ವಿರೋಧಿಸಿ ಸತ್ಯಾಗ್ರಹ ಮಾಡುತ್ತಿದ್ದವು.

೧೯೩೭ರಲ್ಲಿ ಸ್ವಾಮಿ ರಮಾನಂದ ತೀರ್ಥರ ಮುಂದಾಳತ್ವದಲ್ಲಿ ಮೊದಲನೆಯ ಸತ್ಯಾಗ್ರಹ ಪ್ರಾರಂಭಿಸಲಾಯಿತು. ಸ್ವಾಮಿ ರಮಾನಂದ ತೀರ್ಥರು ಬಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಜನಿಸಿದವರಾಗಿದ್ದು ಹೈದರಾಬಾದ ಕರ್ನಾಟ ಪ್ರದೇಶವು ಅವರ ಪ್ರಾರಂಭದ ಕಾರ್ಯಕ್ಷೇತ್ರವಾಗಿತ್ತು. ಕನ್ನಡ, ಮರಾಠಿ, ಉರ್ದು, ಇಂಗ್ಲಿಷ, ಹಿಂದೀ ಮುಂತಾದ ಅನೇಕ ಭಾಷೆಗಳಲ್ಲಿ ಅಧಿಕಾರ ಹೊಂದಿದ್ದ ಸ್ವಾಮಿಗಳು ಉಸ್ಮಾನಾಬಾದ, ಔರಂಗಾಬಾದ ಜಿಲ್ಲೆಗಳಲ್ಲಿ ಶಿಕ್ಷಕರಾಗಿ ದುಡಿದು ಅದೇ ಆಗ ಮಹಾರಾಷ್ಟ್ರ ಪರಿಷತ್ತಿಗೆ ಸೇರಿ ಕೆಲಸ ಪ್ರಾರಂಭಿಸಿದ್ದರು. ವೈಶಂಪಾಯನ ಎಂಬವರ ಅಧ್ಯಕ್ಷತೆಯಲ್ಲಿ ಉಸ್ಮಾನಾಬಾದಿನಲ್ಲಿ 'ಫ್ರೀಡಂ ಕ್ಲಬ್' ಎಂಬ ಒಂದು ಸಂಸ್ಥೆಯನ್ನು ಪ್ರಾರಂಭಿಸಲಾಗಿತ್ತು. ಬೀದರ ಜಿಲ್ಲೆಯ ಚಿಟಗುಪ್ಪಾ ಗ್ರಾಮದ (ಆಗ ಅದೂ ಕೂಡ 'ಪಾಯಗಾ ಜಿಲ್ಲೆ'ಯಾಗಿತ್ತು) ಶ್ರೀ ಆರ್. ವಿ. ಬೀಡಪ್ ಅವರು 'ಫ್ರೀಡಂ ಕ್ಲಬ್ಬಿ'ನ ಕಾರ್ಯದರ್ಶಿಗಳಾಗಿದ್ದರು. ಅದೇ ಕಾಲಕ್ಕೆ ಸೋಲಾಪುರದಲ್ಲಿ

ದಯಾನಂದ ಕಾಲೇಜು (ದಯಾನಂದ ಆರ್ಯ ವಿದ್ಯಾಲಯ – ಡಿಏವಿ) ಪ್ರಾರಂಭವಾಗಿತ್ತು. ಅಲ್ಲಿ ಹೈದರಾಬಾದ ಪ್ರದೇಶದ ವಿದ್ಯಾರ್ಥಿಗಳು ಸೇರಿ 'ಹೈದರಾಬಾದ ಸ್ಟುಡೆಂಟ್ಸ್ ಯೂನಿಯನ್' ಒಂದನ್ನು ಸ್ಥಾಪಿಸಿಕೊಂಡು ಹೈದರಾಬಾದ ರಾಜ್ಯದಲ್ಲಿಯ ಚಳವಳಿಗೆ ನೆರವಾಗುತ್ತಿದ್ದರು.

ನಿಜಾಮ ಕರ್ನಾಟಕ ಪರಿಷತ್ತು

೧೯೩೪ರಲ್ಲಿ ರಾಯಚೂರಿನಲ್ಲಿ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಈ ಸಮ್ಮೇಳನಕ್ಕೆ ಹೈದರಾಬಾದ ಕರ್ನಾಟಕ ಭಾಗದ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳು ಬಂದಿದ್ದರು. ಅವರೆಲ್ಲ ಒಂದು ದಿನ ರಾಯಚೂರಿನಲ್ಲಿ ಬಿ. ಕಿಶನರಾವ ಎಂಬವರ ಮನೆಯಲ್ಲಿ ಖಾಜಗಿಯಾಗಿ ಸಭೆ ಸೇರಿದರು. ಆ ಸಭೆಯಲ್ಲಿ ಕನ್ನಡ ಭಾಷೆಯ ಸ್ಥಿತಿಗತಿಗಳ ಕುರಿತು ಗಂಭೀರವಾಗಿ ಚರ್ಚಿಸಲಾಯಿತಲ್ಲದೆ ಹೈದರಾಬಾದ ರಾಜ್ಯದ ಆಗಿನ ರಾಜಕೀಯ ಪರಿಸ್ಥಿತಿಯಲ್ಲಿ ತಾವು ಏನು ಮಾಡಬಹುದು ಎಂದು ಚಿಂತನೆ ಮಾಡಲಾಯಿತು. ಅದರ ಫಲಸ್ವರೂಪವಾಗಿಯೇ ಆ ದಿನ ಬಿ. ಕಿಶನರಾಯರ ಮನೆಯಲ್ಲಿ ಕರ್ನಾಟಕ ಪರಿಷತ್ತಿನ ರೂಪುರೇಷೆಗಳು ತಯಾರಾಗಿ ಪರಿಷತ್ತು ಅಸ್ತಿತ್ವಕ್ಕೆ ಬಂದಿತು. ತಾಯ್ನುಡಿಯ ಸಂರಕ್ಷಣೆಯ ಜೊತೆಗೆ ರಾಜಕೀಯ ಚಟುವಟಿಕೆಗಳಲ್ಲಿಯೂ ಕೂಡ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಎಲ್ಲರೂ ಪಣ ತೊಟ್ಟರು. ಇದು ಹೈದರಾಬಾದ ಸಂಸ್ಥಾನದ ಸ್ವಾತಂತ್ರ್ಯಾಂದೋಲನದಲ್ಲಿ ಒಂದು ಮಹತ್ವದ ಮಜಲಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಈ ಒಂದು ನಿರ್ಣಯದಿಂದಲೇ ಹೈದರಾಬಾದಿನ ರಾಜಕೀಯಕ್ಕೆ ಒಂದು ವಿಶೇಷವಾದ ತಿರುವು ದೊರಕಿಕೊಂಡು ೧೯೩೮ರ ಸ್ಟೇಟ್ ಕಾಂಗ್ರೆಸ್ಸಿನ ಸ್ಥಾಪನೆಗೆ ನಾಂದಿಯಾಯಿತು. ಹೈದರಾಬಾದ ಸ್ಟೇಟ್ ಕಾಂಗ್ರೆಸ್ಸಿನ ರಚನೆಯಾದ ಮೇಲೆಯೂ ಕರ್ನಾಟಕ ಪರಿಷತ್ತು ತನ್ನ ಪ್ರಾದೇಶಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಯಿತು. ಈ ಪರಿಷತ್ತಿನ ಸಭೆಗಳು ಹೈದರಾಬಾದ, ಗುಲಬರ್ಗಾ, ಬೀದರ ಹಾಗೂ ರಾಯಚೂರು ನಗರಗಳಲ್ಲಿ ಜರುಗಿ ಜನತೆಯಲ್ಲಿ ಅಗಾಧವಾದ ರಾಜಕೀಯ ಸಂಘಟನೆಗೆ ನೆರವಾದವು. (*ಎಂ. ಧ್ರುವನಾರಾಯಣ : ವಿಮೋಚನೆ, ಪು. ೧೮೨*).

ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ರಾಯಚೂರಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದ ನಿಜಾಮ ಕರ್ನಾಟಕ ಪರಿಷತ್ತಿನ ಮೊದಲನೆಯ ಸಮ್ಮೇಳನ ೧೯೩೭ರ ಫೆಬ್ರುವರಿಯಲ್ಲಿ ರಾಯಚೂರಿನಲ್ಲಿ ಕಿಶನರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಎರಡನೆಯ ಸಮ್ಮೇಳನ ಬೀದರಿನಲ್ಲಿ ನಡೆಯಬೇಕೆಂದು ನಿರ್ಣಯಿಸಲಾಗಿತ್ತು. ಆದರೆ ಅಲ್ಲಿಯ ಪರಿಸ್ಥಿತಿಗಳಿಂದಾಗಿ ಸ್ಥಳೀಯ ನಾಯಕರಿಗೆ ಆ ವರ್ಷ ಸಮ್ಮೇಳನ ನಡೆಸಲು ಧೈರ್ಯ ಸಾಲದೇ ಹೋಯಿತು. ಖ್ಯಾತ ಕೀರ್ತನಕಾರರಾದ ಕೊಪ್ಪಳದ ಜಯರಾಮಾಚಾರ್ಯರು ಬೀದರಿನಲ್ಲಿ ಝುಂಡಾ ಹೂಡಿ ವ್ಯಾಪಕವಾದ ಪ್ರಚಾರ ಪ್ರಾರಂಭಿಸಿದರು. ಕೊನೆಗೂ ೧೯೪೦ರಲ್ಲಿ ಜನಾರ್ದನರಾವ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಬೀದರಿನಲ್ಲಿ ನಿಜಾಮ ಕರ್ನಾಟಕ ಪರಿಷತ್ತಿನ ಎರಡನೆಯ ಸಮ್ಮೇಳನ ನಡೆಯಿತು. ಈ ಸಮ್ಮೇಳನ ತನ್ನ ಹಿಂದೆ ಹಿತವಾದ ನೆನಪುಗಳನ್ನು ಬಿಡಲಿಲ್ಲ. ಬೀದರಿನ ಉಸ್ಮಾನಗಂಜ ಪ್ರದೇಶದಲ್ಲಿ

ಅನೇಕ ವ್ಯಾಪಾರಿ ಮಳಿಗೆಗಳಿಗೆ ಬೆಂಕಿ ಹಚ್ಚಿ ಬೂದಿ ಮಾಡಲಾಯಿತು. ಗಾಂಧೀಜಿಯವರು ಕೂಡ ಈ ಘಟನೆಯನ್ನು ಇನ್ನೊಂದು ಲಂಕಾದಹನವೆಂದು ವಿಷಾದಪಟ್ಟಿದ್ದರು.

ಮೂರನೆಯ ಸಮ್ಮೇಳನ ಗುಲಬರ್ಗಾ ಜಿಲ್ಲೆಯ ಸುರಪುರದಲ್ಲಿ ೧೯೪೫ರಲ್ಲಿ ಅಣ್ಣಾರಾವ ಗಣಮುಖಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ನಾಲ್ಕನೆಯ ಸಮ್ಮೇಳನ ೧೯೪೬ರಲ್ಲಿ ರಾಯಚೂರಿನಲ್ಲಿ ಕಕ್ಕೇರಿ ಹಣಮಂತರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಇಷ್ಟೊತ್ತಿಗಾಗಲೇ ವಾತಾವರಣದಲ್ಲಿ ತೀವ್ರವಾಗಿ ಕಾವೇರುತ್ತಿತ್ತು. ಕಾಸಿಂ ರಜವಿಯ ರಜಾಕಾರ ಪುಂಡರ ಹಾವಳಿ ಜನರನ್ನು ಭೀತಿಯ ವಾತಾವರಣದಲ್ಲಿ ಇಟ್ಟಿತ್ತು. ಆದರೂ ಐದನೆಯ ಸಮ್ಮೇಳನವನ್ನು ಯಾದಗಿರಿಯಲ್ಲಿ ನಡೆಸಲಾಯಿತು.

ಇದೇ ಕಾಲಕ್ಕೆ ಹರ್ಡೇಕರ ಮಂಜಪ್ಪ, ಜಯರಾಮಾಚಾರ್ಯ ಕೊಪ್ಪಳ, ಮರುಳಾರಾಧ್ಯ ಶಾಸ್ತ್ರೀ, ಎಚ್. ಕೊಟ್ರಪ್ಪ, ಶಿರೂರ ವೀರಭದ್ರಪ್ಪ, ಹಂಪಿ ನರಸಿಂಗರಾವ, ಬಸವಂತರಾವ ಕಾಟ್ರಳ್ಳಿ, ಇಟಗಿ ವಿರೂಪಾಕ್ಷಯ್ಯ, ಅಗಡಿ ಸಂಗಣ್ಣ, ಶರಣಗೌಡ ಇನಾಮದಾರ, ಕೊಲ್ಲೂರು ಮಲ್ಲಪ್ಪ, ವಿರೂಪಾಕ್ಷಯ್ಯ ಎಕ್ಕಳ್ಳಿ, ಹುಮನಾಬಾದಿನ ಪಂ. ಶಿವಚಂದ್ರಜೀ ಮುಂತಾದ ನಾಯಕರು ಗ್ರಾಮಾಂತರ ಪ್ರದೇಶಗಳಲ್ಲಿ ಜನಜಾಗೃತಿಗಾಗಿ ಪರಿಶ್ರಮಿಸುತ್ತಿದ್ದರು. ೧೯೩೮ರಲ್ಲಿ ಕಾಂಗ್ರೆಸ ಪಕ್ಷವು ಆರಂಭಿಸಿದ ಸತ್ಯಾಗ್ರಹದಲ್ಲಿ ಬಂಧಿತರಾದವರಲ್ಲಿ ಕನ್ನಡಿಗರಾದ ಜನಾರ್ದನರಾವ ದೇಸಾಯಿಯವರು ಮೊದಲಿಗರಾಗಿದ್ದರು.

ಡಿಸೆಂಬರನಲ್ಲಿ ಕಾಂಗ್ರೆಸ ತನ್ನ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿತು. ಆದರೂ ಅದರ ಮೇಲೆ ಹೇರಿದ್ದ ಪ್ರತಿಬಂಧವನ್ನು ಮುಂದುವರಿಸಿಕೊಂಡು ಹೋಗಲಾಯಿತು. ಇಟಗಿ ವಿರೂಪಾಕ್ಷಯ್ಯನವರು ಇತರ ನಾಲ್ವರ ಜೊತೆಯಲ್ಲಿ ಈ ಕಾಲದಲ್ಲಿ ಜೈಲು ಕಂಡವರು. ಇದರ ಹಿಂದೆಯೇ ಶಾಲೆ ಕಾಲೇಜುಗಳಲ್ಲಿ 'ವಂದೇ ಮಾತರಂ' ಹಾಡುವ ಚಳವಳಿ (೧೯೩೮) ನಡೆಯಿತು. ಗುಲಬರ್ಗಾ (ಇಂಟರ್ಮಿಡಿಯಟ್ ಕಾಲೇಜು), ಬೀದರ (ಹೈಸ್ಕೂಲು), ಕೊಪ್ಪಳ (ಮಾಧ್ಯಮಿಕ ಶಾಲೆ) ಇಲ್ಲೆಲ್ಲ ಈ ಚಳವಳಿಯು ಉಗ್ರಸ್ವರೂಪದಲ್ಲಿ ನಡೆದಿತ್ತು. ನೂರಾರು ವಿದ್ಯಾರ್ಥಿಗಳನ್ನು ಶಾಲೆ ಕಾಲೇಜುಗಳಿಂದ ಹೊರದೂಡಲಾಯಿತು. ಆ ಚಳವಳಿಯಲ್ಲಿ ಪಾಲ್ಗೊಂಡ ತರುಣರೇ ಮುಂದೆ ೧೯೪೮ರ ವರೆಗೆ ನಡೆದ ಚಳವಳಿಯ ನಾಯಕರಾದರು. (*ಸೂರ್ಯನಾಥ ಕಾಮತ : ವಿಮೋಚನೆ, ಪು. ೧೯೨–೯೩*).

ಹೈದರಾಬಾದ ಸ್ಟೇಟ್ ಕಾಂಗ್ರೆಸ್

೧೯೩೭ರಲ್ಲಿ ಆಂಧ್ರ ಮಹಾಸಭಾ, ಮಹಾರಾಷ್ಟ್ರ ಪರಿಷತ್ ಮತ್ತು ಕರ್ನಾಟಕ ಪರಿಷತ್‌ಗಳು ಬೇರೆ ಬೇರೆಯಾಗಿದ್ದರೂ ಪರಸ್ಪರ ಹತ್ತಿರಕ್ಕೆ ಬಂದವು. ಈ ಮೂರು ಸಂಘಟನೆಗಳ ಉದ್ದೇಶಗಳು ಒಂದೇಯಾಗಿರುವುದರಿಂದ ಮೂರೂ ಸಂಘಟನೆಗಳು ಒಟ್ಟಿಗೆ ಸೇರಿ ಹೋರಾಡಲು ತಯಾರಾದವು. ಈ ಮೂರು ಸಂಘಟನೆಗಳು ೧೯೩೮ರಲ್ಲಿ 'ಹೈದರಾಬಾದ ಸ್ಟೇಟ ಕಾಂಗ್ರೆಸ' ಎಂಬ ನಾಮಫಲಕದ ಅಡಿಯಲ್ಲಿ ಪರಸ್ಪರ ಬೆರೆಯಲು ನಿಶ್ಚಯಿಸಿದವು. ಮೂಲತಃ ಅವು

ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಜೊತೆಗೆ ಬೆರೆಯುವ ಉದ್ದೇಶ ಹೊಂದಿದ್ದವು. ಆದರೆ ನಿಜಾಮನಿಗೆ ರಾಷ್ಟ್ರೀಯ ಕಾಂಗ್ರೆಸ ಎಂದರೆ ಆಗುತ್ತಿರಲಿಲ್ಲ. ಯಾಕೆಂದರೆ ಭಾರತ ಒಕ್ಕೂಟದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸು ಸ್ವಾತಂತ್ರ್ಯಕ್ಕಾಗಿ ನಿರ್ವಹಿಸುತ್ತಿದ್ದ ಹೋರಾಟವನ್ನು ಕಂಡು ನಿಜಾಮನು ಕಾಂಗ್ರೆಸ್ ಸಂಘಟನೆಯಿಂದ ದೂರ ಉಳಿಯಲು ಬಯಸುತ್ತಿದ್ದನು. ಕಾಂಗ್ರೆಸ್ ಚಟುವಟಿಕೆಗಳು ತನ್ನ ರಾಜ್ಯದಲ್ಲಿ ನಡೆಯಕೂಡದು ಎಂದು ಆತ ತಾಕೀತು ಮಾಡಿದ್ದ. ಇತ್ತೇಹಾದ, ರಜಾಕಾರ ಮುಂತಾದ ಧರ್ಮಾಂಧ ಮುಸ್ಲಿಂ ಸಂಘಟನೆಗಳು ಹೈದರಾಬಾದ ರಾಜ್ಯದ ಗಡಿಯೊಳಗೆ ಕಾಂಗ್ರೆಸ್ ನಾಯಕರುಗಳಾದ ತಿಳಕ, ಗಾಂಧೀ, ನೆಹರೂ ಮುಂತಾದವರ ಹೆಸರುಗಳನ್ನೂ ಕೂಡ ನಿಷೇಧಿಸಿದ್ದರು. ಹೀಗಾಗಿ ರಾಷ್ಟ್ರೀಯ ಕಾಂಗ್ರೆಸ್ಸಿನ ಬದಲು 'ಹೈದರಾಬಾದ ಸ್ಟೇಟ ಕಾಂಗ್ರೆಸ್' ಎಂಬ ಹೆಸರಿನಡಿಯಲ್ಲಿ ಇಲ್ಲಿಯ ಮುಂದಾಳುಗಳು ಕೆಲಸ ಮಾಡಲು ನಿರ್ಧರಿಸಿದ್ದರು.

ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರೊಂದಿಗೆ ಸಮಾಲೋಚಿಸಿ 'ಹೈದರಾಬಾದ ಸ್ಟೇಟ ಕಾಂಗ್ರೆಸ್'ನ್ನು ವಿಧಿವತ್ತಾಗಿ ಅಸ್ತಿತ್ವಕ್ಕೆ ತರುವುದಕ್ಕೆ ಮೊದಲೇ ನಿಜಾಮನು ದಿ. ೮ ಸೆಪ್ಟೆಂಬರ, ೧೯೩೮ರಂದು ಒಂದು ರಾಜಾಜ್ಞೆ(ಫರ್ಮಾನು)ಯನ್ನು ಹೊರಡಿಸಿ 'ಪಬ್ಲಿಕ್ ಸೇಫ್ಟಿ ರೆಗ್ಯುಲೇಶನ್' ಕಾಯ್ದೆಯ ಅಡಿಯಲ್ಲಿ ಅದನ್ನು ನಿಷೇಧಿಸಿದನು. ಯಾಕೆಂದರೆ ನಿಜಾಮನಿಗೆ 'ಕಾಂಗ್ರೆಸ್' ಎಂಬ ಹೆಸರಿನಿಂದಲೂ ಒಂದು ರೀತಿಯ ಅಲರ್ಜಿ ಇತ್ತು. 'ಕಾಂಗ್ರೆಸ ಎಂಬ ಹೆಸರಿನಿಂದ ನನ್ನ ರಾಜ್ಯದೊಳಗಿನ ಬಂಡುಖೋರ ನಾಯಕರು ನನ್ನ ಪ್ರಜೆಗಳನ್ನು ತಪ್ಪು ದಾರಿಗೆ ಎಳೆಯುತ್ತಾರೆ. ಅಲ್ಲದೆ ಕಾಂಗ್ರೆಸ ಸಂಘಟನೆಯಲ್ಲಿ ಕೋಮುವಾದಿಗಳ ಒಂದು ಗುಂಪು ಕೂಡ ಇರುವುದು ತಿಳಿದು ಬಂದಿದೆ' ಎಂದು ನಿಜಾಮನ ಭಾವನೆಯಾಗಿತ್ತು. ಹೀಗಾಗಿ ನಿಜಾಮ ರಾಜ್ಯದಲ್ಲಿ ಕಾಂಗ್ರೆಸ ವಿಧಿವತ್ತಾಗಿ ಹುಟ್ಟಿಕೊಳ್ಳುವುದಕ್ಕೆ ಮೊದಲೇ ನಿಷೇಧಕ್ಕೆ ಒಳಗಾಗಿತ್ತು. ಬದಲಾಗುತ್ತಿರುವ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳಲು ನಿಜಾಮನು ಸುತರಾಂ ತಯಾರಿರಲಿಲ್ಲ. ೧೯೪೪ರ ಜುಲೈ ೨೬ ಮತ್ತು ೨೯ರಂದು ಆತನು ಹೊರಡಿಸಿದ್ದ ಫರ್ಮಾನು (ರಾಜಾಜ್ಞೆ)ಗಳಿಂದ ಈ ಅಂಶ ಸ್ಪಷ್ಟವಾಗುತ್ತದೆ.

ಫರ್ಮಾನ ನಂ. ೧ : 'ಸೂಬಹ್ ಏ ದಕ್ಕನ ಹೈದರಾಬಾದ' ಇದು ಹಿಂದೂಸ್ಥಾನದಲ್ಲಿಯ ಮೊದಲನೆಯ ವರ್ಗಕ್ಕೆ ಸೇರಿದ ಸಂಸ್ಥಾನವಾಗಿದೆ. ಹಿಂದೂಸ್ಥಾನದ (ನಿಜಾಮ ರಾಜ್ಯದ ಹೊರಗಿನ ಭಾರತದ) ರಾಜಕೀಯ ವ್ಯವಸ್ಥೆಯನ್ನು ಯಾವುದೇ ಪರಿಸ್ಥಿತಿಯಲ್ಲಿಯೂ ಸ್ವೀಕರಿಸಲಾರೆವು.

ಫರ್ಮಾನ ನಂ. ೨ : ಹೈದರಾಬಾದ ಸಂಸ್ಥಾನದ ಪ್ರಮುಖರೆಂದು ನಾವು ಸ್ವತಃ ಇಲ್ಲಿಯ ಪ್ರಜೆಗಳ ಪ್ರತಿನಿಧಿಯಾಗಿದ್ದೇವೆ. ನಮ್ಮ ಮತ್ತು ಪ್ರಜೆಗಳ ಸಂಬಂಧವು ಪ್ರಜೆಗಳಿಂದ ನಿಯುಕ್ತರಾದ ಪ್ರತಿನಿಧಿಗಳ ಸಂಬಂಧಗಳಿಗಿಂತಲೂ ಹೆಚ್ಚು ನೈಸರ್ಗಿಕವೂ ಮತ್ತು ಹೆಚ್ಚು ಕಾಲ ಉಳಿಯುವಂಥವುಗಳಾಗಿವೆ.

ಸ್ಟೇಟ ಕಾಂಗ್ರೆಸ ಹುಟ್ಟುವುದಕ್ಕೆ ಮೊದಲೇ ಅದಕ್ಕೆ ಕೋಮುವಾದಿ ಎಂಬ ಹಣೆಪಟ್ಟಿ ಹಚ್ಚಲಾಗಿರುವುದರಿಂದ ಆ ಸಂಘಟನೆಗೆ ತಾನು ಜಾತ್ಯತೀತ ಸಂಘಟನೆ ಎಂದು

ತೋರಿಸಿಕೊಳ್ಳಬೇಕಾಗಿತ್ತು. ಮುಸ್ಲಿಮರನ್ನು ಸೇರಿಸಿಕೊಳ್ಳದೆ ಅದು ಜಾತ್ಯತೀತ ಸಂಘಟನೆ ಹೇಗಾಗುತ್ತದೆ ಎಂದು ಪದ್ಮಜಾ ನಾಯ್ಡುರವರು ಚಡಪಡಿಸಹತ್ತಿದರು. ಹೀಗಾಗಿ ಉದಾರವಾದಿ ಮತ್ತು ಸೆಕ್ಯುಲರ ವಿಚಾರದ ಮುಸಲ್ಮಾನರನ್ನು ಹುಡುಕುವ ಕಾರ್ಯ ಭರದಿಂದ ಸಾಗಿತು. ಬಹಳ ಪ್ರಯಾಸಪಟ್ಟು ಕೊನೆಗೂ ಸಿರಾಜುಲ್ ಹಸ್ಸನ್ ತಿರಮಿಜೀ ಎಂಬುವರನ್ನು ಪತ್ತೆ ಹಚ್ಚಿ ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳಲಾಯಿತು.

ಇನ್ನೊಂದು ವಿಡಂಬನೆಯೆಂದರೆ ಸ್ಟೇಟ ಕಾಂಗ್ರೆಸ ಹುಟ್ಟುವುದಕ್ಕೆ ಮೊದಲೇ ಅದರಲ್ಲಿ ಗುಂಪುಗಾರಿಕೆ ಕಾಣಿಸಿಕೊಂಡಿತು. ಒಂದು ಸೌಮ್ಯವಾದಿ ಗುಂಪು ಮತ್ತು ಇನ್ನೊಂದು ಉಗ್ರವಾದಿ ಗುಂಪು. ಸೌಮ್ಯವಾದಿ ಗುಂಪಿನವರು ನಿಜಾಮನ ಮರ್ಜಿ ಕಾಯ್ದುಕೊಂಡು ಕಾಂಗ್ರೆಸ ಸಂಸ್ಥೆಯನ್ನು ಕಟ್ಟಬೇಕೆಂಬ ವಿಚಾರವುಳ್ಳವರಾಗಿದ್ದರು. ಅದಕ್ಕಾಗಿಯೇ ಅವರು ಸಿರಾಜುಲ್ ಹಸನರನ್ನು ಸೇರಿಸಿಕೊಂಡು ಅಸ್ಥಾಯಿ ಸಮಿತಿಯನ್ನು ರಚಿಸಿಕೊಂಡಿದ್ದರು. ಅದರಲ್ಲಿಯ ಪ್ರಮುಖರೆಂದರೆ ರಾಮಕಿಶನ ಜೀ ಧೂತ, ಬಿ. ರಾಮಕಿಶನರಾವ, ಪಾಂಡುರಂಗರಾವ ಜೋಶಿ ಮುಂತಾದವರಿದ್ದರು. ಉಗ್ರವಾದಿ ಗುಂಪಿನಲ್ಲಿ ಸ್ವಾಮಿ ರಮಾನಂದ ತೀರ್ಥ, ನರೇಂದ್ರ ಜೀ, ವಿನಾಯಕರಾವ ವಿದ್ಯಾಲಂಕಾರ, ಗೋವಿಂದರಾವ ನಾನಲ, ಜನಾರ್ದನರಾವ ದೇಸಾಯಿ ಮುಂತಾದವರಿದ್ದರು. ಎಲ್ಲರೂ ಒಟ್ಟಿಗೆ ಕೆಲಸ ಮಾಡುತ್ತಿದ್ದರೂ ಸೌಮ್ಯ ಹಾಗೂ ಉಗ್ರ ಗುಂಪುಗಳು ಹಾಗೇ ಉಳಿದುಕೊಂಡು ಬಂದವು. ಹೈದರಾಬಾದಿನ ವಿಮೋಚನೆಯಾದ ಮೇಲೆ ಸೌಮ್ಯವಾದಿ ನಾಯಕರು ಅಧಿಕಾರವನ್ನು ಗಿಟ್ಟಿಸಿಕೊಂಡು ಉಗ್ರವಾದಿಗಳನ್ನು ದೂರವೇ ಇಟ್ಟರು.

ಸೌಮ್ಯವಾದಿ ಗುಂಪಿನಿಂದ ಅಸ್ಥಾಯಿ ಸಮಿತಿಯ ಸೂತ್ರ ಉಗ್ರವಾದಿ ಗುಂಪಿನ ಕೈಗೆ ಬಂದಾಗ ಸ್ವಾಮಿ ರಮಾನಂದ ತೀರ್ಥರು ಔರಂಗಾಬಾದಿನ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಗೋವಿಂದರಾವ ನಾನಲರನ್ನು ಅಧ್ಯಕ್ಷರನ್ನಾಗಿ ಮಾಡಿ ತಾವು ನೇರವಾಗಿ ಸತ್ಯಾಗ್ರಹಕ್ಕೆ ಇಳಿದರು. ಮುಂದೆ ಗೋವಿಂದರಾವ ನಾನಲರ ಆರೋಗ್ಯ ಕೈಕೊಟ್ಟಾಗ ಸ್ವಾಮೀಜಿಯವರೇ ಅಧ್ಯಕ್ಷ ಪದವಿಯ ಹೊಣೆಯನ್ನು ಹೊತ್ತುಕೊಳ್ಳಬೇಕಾಯಿತು. ಕಾಂಗ್ರೆಸ್ಸಿಗೆ ಸದಸ್ಯರಾಗಲು ಜನರು ಮುಂದೆ ಬರುತ್ತಿರಲಿಲ್ಲ. ಆರ್ಯಸಮಾಜದ ನಾಯಕರೂ ಕೂಡ ಕಾಂಗ್ರೆಸ್ಸಿಗೆ ಸೇರಿಕೊಳ್ಳಬೇಕೆಂದು ಗಾಂಧೀಜಿಯವರು ಕರೆಕೊಟ್ಟರು. ಆಗ ಅನೇಕ ಜನ ಆರ್ಯಸಮಾಜದ ನೇತಾರರು ಸ್ಟೇಟ ಕಾಂಗ್ರೆಸ್ಸಿಗೆ ಸೇರಿಕೊಂಡು ತಮ್ಮ ಪ್ರಚಾರ ವೈಖರಿಯಿಂದ ಸದಸ್ಯಬಲವನ್ನು ಹೆಚ್ಚಿಸಿದರು.

ಸ್ಟೇಟ ಕಾಂಗ್ರೆಸ ಏನೆಲ್ಲ ಮಾಡಿದರೂ ಎರಡು ವರ್ಷಗಳವರೆಗೆ ಅದು ಅನಧಿಕೃತ ಸಂಸ್ಥೆಯಾಗಿಯೇ ಕೆಲಸ ಮಾಡಬೇಕಾಯಿತು. ಮುಂದೆ ಕೆಲವು ಶರತ್ತುಗಳ ಮೇಲೆ ಅದರ ಮೇಲಿನ ನಿರ್ಬಂಧವನ್ನು ತೆಗೆಯಲಾಯಿತು. ಅನಧಿಕೃತವಾಗಿಯಾದರೂ ಸ್ಟೇಟ ಕಾಂಗ್ರೆಸ ಸಂಸ್ಥೆಯು ವಿಮೋಚನಾ ಚಳವಳಿಯಲ್ಲಿ ಚಾರಿತ್ರಿಕವಾದ ಸಾಧನೆಯನ್ನು ಮಾಡಿದೆ. ನಿಜಾಮನು 'ಯಥಾಸ್ಥಿತಿ'ಯನ್ನು ಪಾಲಿಸಿಕೊಂಡು ಹೋಗಬೇಕಾಗಿತ್ತು. ಆದರೆ ಆತನು ತನ್ನ ಪಕ್ಷಪಾತಪೂರ್ಣವಾದ ಮತೀಯ ನೀತಿಯನ್ನು ಬಿಡಲೇ ಇಲ್ಲ. ಆಗ ಸ್ಟೇಟ ಕಾಂಗ್ರೆಸ್ಸು ಕೆಚ್ಚೆದೆಯಿಂದ ನಿಜಾಮನೊಂದಿಗೆ ಹೋರಾಡಿತು 'ವಂದೇಮಾತರಂ' ಚಳವಳಿಯಲ್ಲಿ ಧುಮುಕಿ ಜನಜಾಗೃತಿಯನ್ನು

ಉಂಟುಮಾಡಿತು. ರಾಜ್ಯಾದ್ಯಂತ ನಿಷೇಧವಿದ್ದರೂ ಭಾರತದ ಸ್ವಾತಂತ್ರ್ಯ ದಿನವನ್ನು ತಿರಂಗಾ ಧ್ವಜವನ್ನು ಹಾರಿಸುವುದರ ಮೂಲಕ ಮತ್ತು ಮೆರವಣಿಗೆಯನ್ನು ತೆಗೆಯುವುದರ ಮೂಲಕ ವೈಭವದಿಂದ ಆಚರಿಸಿತು. ಆಗಸ್ಟ್ ೧೫, ೧೯೪೭ರಂದು ಯಾದಗಿರಿಯಲ್ಲಿ ವಿಶ್ವನಾಥ ರೆಡ್ಡಿ ಮುದನಾಳ, ಕೊಪ್ಪಳದಲ್ಲಿ ಪಂಚಾಕ್ಷರಿ ಹಿರೇಮಠ, ಗುಲಬರ್ಗಾದಲ್ಲಿ ಚೆನ್ನಬಸಪ್ಪಾ ಕುಳಗೇರಿ, ರಾಜೇಶ್ವರದಲ್ಲಿ ಸಿದ್ಧಪ್ಪಾ ಖೇಳಗಿ, ಬಸವ ಕಲ್ಯಾಣದಲ್ಲಿ ಪಂ. ಗೋಪಾಲದೇವ ಶಾಸ್ತ್ರೀ, ಬೀದರಿನಲ್ಲಿ ಸಂಗ್ರಾಮಸಿಂಧ, ರಾಯಚೂರು ಜಿಲ್ಲೆಯಲ್ಲಿ ಶಿವಮೂರ್ತಿ ಸ್ವಾಮಿ ಅಳವಂಡಿ, ಶಿರೂರ ವೀರಭದ್ರಪ್ಪ, ಲಕ್ಷ್ಮಣಾಚಾರ್ಯ ವಕೀಲ, ಹಂಪಿ ಮಾಸ್ತರ ಮುಂತಾದವರು ರಜಾಕಾರರ ಸರ್ಪಗಾವಲಿನ ನಡುವೆಯೂ ತ್ರಿವರ್ಣ ಧ್ವಜವನ್ನು ಹಾರಿಸಿದ್ದರು.

ವಂದೇ ಮಾತರಂ ಚಳವಳಿ

೧೯೩೮ರ ದಸರಾ ಮಹೋತ್ಸವದ ಸಂದರ್ಭದಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯ 'ಬಿ'ಯ ವಿದ್ಯಾರ್ಥಿಗಳು ತಮ್ಮ ಪ್ರಾರ್ಥನಾಗೃಹದಲ್ಲಿ 'ವಂದೇ ಮಾತರಂ' ಎಂಬ ಗೀತೆಯನ್ನು ಹಾಡಲು ಪ್ರಾರಂಭಿಸಿದರು. ಇದು ವಿದ್ಯಾರ್ಥಿನಿಲಯದ ಅಧಿಕಾರಿಗಳಿಗೆ ಗೊತ್ತಾಗಿ ತಕ್ಷಣ ಅವರು ಪ್ರಾರ್ಥನಾಗೃಹಕ್ಕೆ ಬೀಗ ಹಾಕಿದರು. ಆಗ ವಿದ್ಯಾರ್ಥಿಗಳು ಪ್ರಾರ್ಥನಾಗೃಹದ ಮೊಗಸಾಲೆಯಲ್ಲಿ ತಮ್ಮ ಪ್ರಾರ್ಥನಾ ಸಭೆಗಳನ್ನು ಪ್ರಾರಂಭಿಸಿ 'ವಂದೇ ಮಾತರಂ' ಹಾಡಲು ಶುರು ಮಾಡಿದರು. ಇದನ್ನು ಕಂಡು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಬೇಕಾಯಿತು. 'ವಿಶ್ವವಿದ್ಯಾಲಯವು ಒಂದು ಶಿಕ್ಷಣ ಸಂಸ್ಥೆಯಾಗಿರುವುದರಿಂದ ವಿದ್ಯಾರ್ಥಿಗಳು ರಾಜಕೀಯ ಮತ್ತು ವಿವಾದಾಸ್ಪದವಾದ ಹಾಡುಗಳನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಹಾಡತಕ್ಕದ್ದಲ್ಲ' ಎಂದು ಆ ಸುತ್ತೋಲೆಯ ಒಕ್ಕಣೆಯಾಗಿತ್ತು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇದನ್ನು ಇಷ್ಟಕ್ಕೇ ಬಿಡಬಾರದು ಎಂದು ನಿರ್ಧರಿಸಿದರು. ರಾಜ್ಯದ ಎಲ್ಲಾ ಕಡೆಗಳಿಂದ ವಿದ್ಯಾರ್ಥಿಗಳನ್ನು ಸೇರಿಸಿ ಒಂದು ಕ್ರಿಯಾ ಸಮಿತಿ ರಚಿಸಿಕೊಂಡು ಅದರ ಮೂಲಕ ವಿಶ್ವವಿದ್ಯಾಲಯದ ಈ ನೀತಿಯನ್ನು ಪ್ರತಿಭಟಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಒಂದು ಕ್ರಿಯಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಬೀದರಿನ ನರೇಂದ್ರ ದತ್ತ, ಗುಲಬರ್ಗಾದ ದೇಸಾಯಿ ಎಂಬ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಅತ್ತ ಔರಂಗಾಬಾದಿನ ಇಂಟರಮೀಡಿಯೇಟ್ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿಯೂ 'ವಂದೇ ಮಾತತಂ' ಚಳವಳಿ ಪ್ರಾರಂಭವಾಗಿತ್ತು. ಮುಸ್ಲಿಂ ವಿದ್ಯಾರ್ಥಿಗಳಿಗೆ ಕಾಲೇಜಿನ ಕೆಲಸದ ಅವಧಿಯಲ್ಲಿ ನಮಾಜಿಗಾಗಿ ಕಾಲಾವಕಾಶ ನಿಗದಿಪಡಿಸಿಕೊಡಬೇಕಾದರೆ ತಾವು ವಿದ್ಯಾರ್ಥಿನಿಲಯಗಳಲ್ಲಿ ಬಿಡುವಿನ ವೇಳೆಯಲ್ಲಿ 'ವಂದೇ ಮಾತರಂ' ಗೀತೆಯನ್ನು ಯಾಕೆ ಹಾಡಬಾರದು ಎಂಬುದು ವಿದ್ಯಾರ್ಥಿಗಳ ಬೇಡಿಕೆಯಾಗಿತ್ತು. 'ವಂದೇ ಮಾತರಂ' ಹಾಡಿನ ಮೇಲೆ ಹೇರಿದ್ದ ಪ್ರತಿಬಂಧಕಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ವಿದ್ಯಾರ್ಥಿಗಳು ಮನವಿ ಮಾಡಿಕೊಂಡರು. ವಿಬ್ಯಾರ್ಥಿಗಳ ಮನವಿಯನ್ನು ಆಗಿಂದಾಗಲೇ ತಿರಸ್ಕರಿಸಲಾಯಿತು.

ಆದರೆ ವಿದ್ಯಾರ್ಥಿಗಳು ತಮ್ಮ ಹಟ ಬಿಡಲಿಲ್ಲ. ತಮ್ಮ ಹೋರಾಟವನ್ನು ಇನ್ನೂ ತೀವ್ರಗೊಳಿಸಿದರು. ಅಂಗಿ ಮತ್ತು ಕೋಟಿನ ಗುಂಡಿಗಳ ಮೇಲೆ 'ವಂದೇ ಮಾತರಂ' ಅಕ್ಷರಗಳನ್ನು ಕೆತ್ತಿಸಿ ತಾವೂ ಧರಿಸುವುದಲ್ಲದೆ ಅವುಗಳನ್ನು ಮಾರಾಟ ಮಾಡಿ ನಿಷೇಧಾಜ್ಞೆಯನ್ನು ಬಹಿರಂಗವಾಗಿ ಉಲ್ಲಂಘಿಸಿದರು. ಈ ಮುಷ್ಕರ ೨೯ ನವೆಂಬರದಿಂದ ೧೦ ಡಿಸೆಂಬರ, ೧೯೩೮ರವರೆಗೆ ಅವ್ಯಾಹತವಾಗಿ ಮುಂದುವರಿಯಿತು. ಈ ಚಳವಳಿಗೆ ಯಾರ ಪ್ರಚೋದನೆಯೂ ಇರಲಿಲ್ಲ. ಇವರ ಹಿಂದೆ ಯಾವ ಜನನಾಯಕರೂ ಇರಲಿಲ್ಲ. ಇದು ಸ್ವಯಂಸ್ಫೂರ್ತಿಯಿಂದ ಹುಟ್ಟಿಕೊಂಡು ರಾಜ್ಯದ ಉದ್ದಗಲಕ್ಕೂ ವ್ಯಾಪಿಸಿತ್ತು. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದಲೂ ವಿದ್ಯಾರ್ಥಿಗಳು ಬಂದು ಈ ಚಳವಳಿಯಲ್ಲಿ ಸೇರುತ್ತಿದ್ದರು.

ಡಿಸೆಂಬರ ೧೦ ರಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಒಂದು ಆದೇಶವನ್ನು ಜಾರಿಗೊಳಿಸಿದರು. 'ಚಳವಳಿಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ತಕ್ಷಣ ಕ್ಷಮಾಪಣೆ ಕೇಳಿ ತಮ್ಮ ತಮ್ಮ ಕಾಲೇಜುಗಳಿಗೆ ಹಿಂತಿರುಗಿ ಹೋಗಬೇಕು. ತಪ್ಪಿದಲ್ಲಿ ಅವರ ಹೆಸರುಗಳನ್ನು ವಿಶ್ವವಿದ್ಯಾಲಯದ ದಾಖಲಾತಿಯಿಂದ ತೆಗೆದುಹಾಕಲಾಗುವುದು' ಎಂದು ಬೆದರಿಕೆ ಹಾಕಲಾಯಿತು. ಈ ಆದೇಶವನ್ನು ಒಪ್ಪಿಕೊಳ್ಳಲು ವಿದ್ಯಾರ್ಥಿಗಳು ಯಾವ ಸ್ಥಿತಿಯಲ್ಲಿಯೂ ತಯಾರಾಗಲಿಲ್ಲ. ತತ್ಪರಿಣಾಮವಾಗಿ ಸುಮಾರು ೮೫೦ ವಿದ್ಯಾರ್ಥಿಗಳನ್ನು ಹೊರಹಾಕಲಾಯಿತು. ಅದರಲ್ಲಿ ಗುಲಬರ್ಗಾ ಶಾಲಾ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ೩೫೦ ಆಗಿತ್ತು. ಬೀದರ ಮತ್ತು ರಾಯಚೂರಿನ ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಿತ್ತು. ಯಾಕೆಂದರೆ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಶಿಕ್ಷಣ ಸಂಸ್ಥೆಯೆಂದರೆ ಗುಲಬರ್ಗಾದ ಇಂಟರಮೀಡಿಯೆಟ್ ಕಾಲೇಜ್ ಒಂದೇ ಆಗಿತ್ತು. ಬೀದರ ಮತ್ತು ರಾಯಚೂರಿನಲ್ಲಿ ಹೈಸ್ಕೂಲು ಮಟ್ಟದ ವರೆಗೆ ಮಾತ್ರ ಶಿಕ್ಷಣ ಸಂಸ್ಥೆಗಳಿದ್ದವು.

ಇಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಅಧಿಕಾರಿಗಳು ಇನ್ನೊಂದು ದುಷ್ಟ ಕೆಲಸ ಮಾಡಿದರು. ಅವರು ಅಂತರ್ ವಿಶ್ವವಿದ್ಯಾಲಯ ಮಂಡಳಿಗೆ ಒಂದು ಮನವಿಯನ್ನು ಕಳಿಸಿ, ಈ ರೀತಿ ಹೊರಹಾಕಲ್ಪಟ್ಟ ವಿದ್ಯಾರ್ಥಿಗಳಿಗೆ ಭಾರತದ ಯಾವುದೇ ವಿಶ್ವವಿದ್ಯಾಲಯದಲ್ಲಿ ಪ್ರವೇಶ ನೀಡಬಾರದು ಎಂದು ಕೇಳಿಕೊಂಡರು. ಹೀಗಾಗಿ ಹೊರಹಾಕಲ್ಪಟ್ಟ ವಿದ್ಯಾರ್ಥಿಗಳು ಎಲ್ಲೇ ಹೋದರೂ ಅವರಿಗೆ ಪ್ರವೇಶವನ್ನು ನಿರಾಕರಿಸಲಾಗುತ್ತಿತ್ತು. ಮುಂದೇನು ಎಂದು ವಿದ್ಯಾರ್ಥಿಗಳಿಗೆ ಚಿಂತೆಯಾಯಿತು. ಕೆಲವು ವಿದ್ಯಾರ್ಥಿ ಪ್ರತಿನಿಧಿಗಳು ನಾಗಪುರ ವಿಶ್ವವಿದ್ಯಾಲಯಕ್ಕೆ ಹೋಗಿ ಅಲ್ಲಿಯ ಕುಲಪತಿ ಶ್ರೀ ಕದಮರನ್ನು ಕಂಡು ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಶ್ರೀ ಕದಮರು ಕೂಡಲೇ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದಾಗಿ ಹೇಳಿದರು. ವಿದ್ಯಾರ್ಥಿಗಳಿಗೆ ಖುಷಿಯೋ ಖುಷಿ. ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಹೊರಹಾಕಲ್ಪಟ್ಟ ಎಲ್ಲ ವಿದ್ಯಾರ್ಥಿಗಳು ನಾಗಪುರ ವಿಶ್ವವಿದ್ಯಾಲಯದಲ್ಲಿ ಆಶ್ರಯ ಪಡೆದು ತಮ್ಮ ಶಿಕ್ಷಣವನ್ನು ಮುಂದುವರಿಸಿದರು. ಶ್ರೀ ಕದಮ ಅವರು ಆ ಎಲ್ಲ ವಿದ್ಯಾರ್ಥಿಗಳ ಭವಿಷ್ಯವನ್ನು ಕಾಪಾಡಿದರು. ಇಂಥ ವಿದ್ಯಾರ್ಥಿಗಳಲ್ಲಿ ಭಾರತದ ಮಾಜಿ ಪ್ರಧಾನಿ ದಿ. ಪಿ.ವಿ. ನರಸಿಂಹರಾವ ಮತ್ತು ಗುಲಬರ್ಗಾದ ಶ್ರೀ ಶರಣಗೌಡ ಇನಾಮದಾರರೂ ಸೇರಿದ್ದರು.

ವಿದ್ಯಾರ್ಥಿಗಳ ಈ ಚಳವಳಿಯಲ್ಲಿ ಆರ್ಯಸಮಾಜದ ಕಾರ್ಯಕರ್ತರೂ ಸೇರಿಕೊಂಡು ಇದು ಇನ್ನೊಂದಿಷ್ಟು ಪ್ರಜ್ವಲಿಸುವಂತೆ ಮಾಡಿದರು. ಆರ್ಯಸಮಾಜದ ಸತ್ಯಾಗ್ರಹಿಗಳು 'ವಂದೇ ಮಾತರಂ' ಎಂಬುದನ್ನು ತಾರಕ ಮಂತ್ರವನ್ನಾಗಿ ಮಾಡಿಕೊಂಡು ಚಳವಳಿಗೆ ಇಳಿದರು. ಇಂಥ ಸತ್ಯಾಗ್ರಹಿಗಳನ್ನು ಬಂಧಿಸಿ ಜೈಲಿಗೆ ತಳ್ಳಿ ಅವರನ್ನು ಅಮಾನುಷವಾಗಿ ಹಿಂಸಿಸಲಾಗುತ್ತಿತ್ತು. ಒಬ್ಬ ಸತ್ಯಾಗ್ರಹಿಯನ್ನು ಅಕ್ಷರಶಃ ದನಕ್ಕೆ ಬಡಿದಂತೆ ಬಡಿಯುತ್ತಿರಬೇಕಾದರೆ ಆತ ಪ್ರತಿಯೊಂದು ಹೊಡೆತಕ್ಕೂ 'ವಂದೇ ಮಾತರಂ' ಎಂದು ಘೋಷಣೆ ಕೂಗುತ್ತಿದ್ದನು. ಆತ ಘೋಷಣೆ ಕೂಗಿದಂತೆಲ್ಲ ಅತ್ಯಾಚಾರಿಗಳ ರೋಷ ತಾರಕಕ್ಕೇರುತಿತ್ತು. ಇನ್ನೊಂದಿಷ್ಟು ಜೋರಾಗಿ ಬೆತ್ತದಿಂದ, ಬಾರಕೋಲಿನಿಂದ ಹೊಡೆಯುತ್ತಿದ್ದರು. ಆದರೂ ಆ ಧೀರ 'ವಂದೇ ಮಾತರಂ' ಘೋಷಣೆಯನ್ನು ನಿಲ್ಲಿಸುತ್ತಿರಲಿಲ್ಲ. ಮೈತುಂಬ ಬಾಸುಂಡೆಗಳು ಎದ್ದವು. ಬಾಸುಂಡೆಗಳು ಒಡೆದು ರಕ್ತ ಸುರಿಯಲು ಪ್ರಾರಂಭಿಸಿತ್ತು. ಆದರೂ ಆ ರಾಕ್ಷಸರು ಹೊಡೆಯುವುದನ್ನು ನಿಲ್ಲಿಸಲಿಲ್ಲ. ಈತ ಘೋಷಣೆ ಕೂಗುವುದನ್ನು ಬಿಡಲಿಲ್ಲ. ಕೊನೆಗೆ ಹೊಡೆತ ತಾಳಲಾರದೆ ಆತ ಮೂರ್ಛೆ ಹೋದನಾದರೂ ಮೂರ್ಛಾ ಸ್ಥಿತಿಯಲ್ಲಿಯೂ 'ವಂದೇ ಮಾತರಂ' ಎಂದು ಕನವರಿಸುತ್ತಿದ್ದನು. ರಾಮಚಂದ್ರ ಎಂಬ ಹೆಸರಿದ್ದ ಆ ಸತ್ಯಾಗ್ರಹಿಗೆ ಮುಂದೆ 'ವಂದೇ ಮಾತರಂ ರಾಮಚಂದ್ರರಾವ' ಎಂಬ ಹೆಸರು ಶಾಶ್ವತವಾಗಿ ಉಳಿದು ಬಂದಿತ್ತು.

ಆ ದಿನಗಳಲ್ಲಿ 'ವಂದೇ ಮಾತರಂ'ದ ಸಂಕೀರ್ತನೆ ಮಾಡುತ್ತ ಊರೂರು, ಬೀದಿ ಬೀದಿಗಳಲ್ಲಿ ಸತ್ಯಾಗ್ರಹಿಗಳು ಮೆರವಣಿಗೆ ಹೊರಡುತ್ತಿದ್ದರು. ಅವರು ಹಾಡುತ್ತಿದ್ದ 'ವಂದೇ ಮಾತರಂ'ದ ಹಾಡು ಈ ಕೆಳಗಿನಂತಿತ್ತು :

ಛೀನ್ ಸಕ್ತಿ ಹೈ ನಹೀಂ
ಸರಕಾರ ವಂದೇ ಮಾತರಂ
ಹಮ್ ಗರೀಬೋಂಕಾ ಗಲೇ ಕಾ
ಹಾರ ವಂದೇ ಮಾತರಂ

ಹಾಥ್ ಮೇ ಬೇಡೀ ಗಲೇ ಮೇ
ಭೋಂಕ್ ದೇ ಸೂಲಿ ಚಢಾ
ಪರ್ ನ ಛೋಡೇಂಗೇ ಕಭೀ ಹಮ್
ಮಂತ್ರ ವಂದೇ ಮಾತರಂ

ಮಂತ್ರ ವಂದೇ ಮಾತರಂ ಹೈ
ತಂತ್ರ ವಂದೇ ಮಾತರಂ
ಹಮ್ ಗರೀಬೋಂಕಾ ಗಲೇ ಕಾ
ಹಾರ ವಂದೇ ಮಾತರಂ

ಛೀನ್ ಸಕ್ತಿ ಹೈ ನಹೀಂ
ಸರಕಾರ ವಂದೇ ಮಾತರಂ
ಹಮ್ ಗರೀಬೋಂಕಾ ಗಲೇ ಕಾ
ಹಾರ ವಂದೇ ಮಾತರಂ ॥

ಈ ಹಾಡಿನ ಕನ್ನಡ ರೂಪ :

ಸರಕಾರ ಕಸಿಯಲು ಸಾಧ್ಯವಾಗದು
ಇದೋ ವಂದೇ ಮಾತರಂ
ಬಡವರೆಲ್ಲರ ಕೊರಳ ಹಾರವು
ನಮ್ಮ ವಂದೆ ಮಾತರಂ

ಕೈಗೆ ಬೇಡಿ, ಹಾಕಿ ಚೂರಿಯ
ಕತ್ತಿಗೆ, ನೇಣುಗಂಬಕ್ಕೆ ತೂಗಲಿ
ಆದರೂ ನಾವೆಂದಿಗೂ
ನಿಲ್ಲಿಸೆವು ವಂದೇ ಮಾತರಂ

ಮಂತ್ರ ವಂದೇ ಮಾತರಂ
ತಂತ್ರ ವಂದೇ ಮಾತರಂ
ಬಡವರೆಲ್ಲರ ಕೊರಳ ಹಾರವು
ನಮ್ಮ ವಂದೇ ಮಾತರಂ

ಸರಕಾರ ಕಸಿಯಲು ಸಾಧ್ಯವಾಗದು
ನಮ್ಮ ವಂದೇ ಮಾತರಂ
ಮಂತ್ರ ವಂದೇ ಮಾತರಂ
ತಂತ್ರ ವಂದೇ ಮಾತರಂ

(*ದೇವೇಂದ್ರ ಕುಮಾರ ಹಕಾರಿ : ವಿಮೋಚನೆ, ಪು.೨೬೨-೬೩*).

ಬಂಕಿಮಚಂದ್ರರ 'ಆನಂದ ಮಠ' ಕಾದಂಬರಿಯಲ್ಲಿ ರಚಿತವಾದ ಮೂಲ ಬಂಗಾಲಿ ಗೀತೆ 'ವಂದೇ ಮಾತರಂ' ೧೯೨೦ರಲ್ಲಿ ಇಂಗ್ಲಿಷರ ದೌರ್ಜನ್ಯವನ್ನು ಪ್ರತಿಭಟಿಸಲು ಪ್ರೇರಕವಾದರೆ ಆ ಗೀತೆಯ 'ವಂದೇ ಮಾತರಂ' ಎಂಬ ಒಂದು ಸಾಲು ಉದ್ಘೋಷಕವಾಗಿ ಬೇರೊಂದು ರಚನೆಯಾಗಿ ಹೈದರಾಬಾದ ವಿಮೋಚನೆಯ ಚಳವಳಿಗೆ ಸ್ಫೂರ್ತಿಯನ್ನು ನೀಡಿತು.

ಹಿಂದೂ ಮಹಾಸಭೆ

ನಿಜಾಮನ ವಿರುದ್ಧ ಪ್ರತಿಭಟನೆಗೆ ಇಳಿದ ಸಂಘಟನೆಗಳಲ್ಲಿ ಮೂರನ್ನು ಪ್ರಮುಖವಾಗಿ ಉಲ್ಲೇಖಿಸಲಾಗುತ್ತದೆ. ೧. ಹೈದರಾಬಾದ ಸ್ಟೇಟ ಕಾಂಗ್ರೆಸ್, ೨. ಹಿಂದೂ ಮಹಾಸಭೆ ಮತ್ತು ೩. ಆರ್ಯಸಮಾಜ. ಇದರಲ್ಲಿ ಮೊದಲನೆಯದು ರಾಜನೈತಿಕ ಹಿತಾಸಕ್ತಿಗಳಿಗಾಗಿ ಹೋರಾಡುತ್ತಿತ್ತು.

ಎರಡನೆಯದಾದ ಹಿಂದೂ ಮಹಾಸಭೆಯು ಸಾಮಾಜಿಕ ಹಕ್ಕುಗಳಿಗಾಗಿ ಮತ್ತು ಮೂರನೆಯದಾದ ಆರ್ಯಸಮಾಜವು ಧಾರ್ಮಿಕ ಉದ್ದೇಶಗಳಿಗಾಗಿ ಹೋರಾಟಕ್ಕೆ ಇಳಿದಿದ್ದವೆಂದು ಹೇಳಲಾಗುತ್ತದೆ. ಈ ಮೂರೂ ಸಂಘಟನೆಯ ಆಂತರಿಕ ಹಿತಾಸಕ್ತಿಗಳು ಏನೇ ಇದ್ದರೂ ಮೂಲತಃ ನಿಜಾಮನ ಪಾಶವೀ ಆಡಳಿತವನ್ನು ಬಗ್ಗು ಬಡಿದು ಪ್ರಜಾರಾಜ್ಯವನ್ನು ಸ್ಥಾಪಿಸುವುದೇ ಇವುಗಳ ಗುರಿಯಾಗಿತ್ತು.

ಹಿಂದೂ ಮಹಾಸಭೆಯು ಮೂಲತಃ ಗಾಂಧೀಜಿಯವರ ಅತಿ-ಅಹಿಂಸಾವಾದವನ್ನು ಸಮರ್ಥಿಸುತ್ತಿರಲಿಲ್ಲ. ಆದರೂ ಅದು ನಿಜಾಮ ರಾಜ್ಯದಲ್ಲಿ ಗಾಂಧೀಜಿಯ ಅಹಿಂಸಾ ತತ್ತ್ವದ ಮೇಲೆ ನಿಃಶಸ್ತ್ರ ಸತ್ಯಾಗ್ರಹ ನಡೆಸಿತ್ತು. ೨೧ ಅಕ್ಟೋಬರ ೧೯೩೮ರಂದು ಧರ್ಮವೀರ ವಾಮನ ನಾಯಿಕರಿಗೆ ಶ್ರದ್ಧಾಂಜಲಿ ನೀಡುವ ನಿಮಿತ್ತವಾಗಿ ಸತ್ಯಾಗ್ರಹದ ಮೊದಲನೆಯ ತಂಡ ಬೀದಿಗಿಳಿಯಿತು. ಆ ದಿನದ ಎಲ್ಲ ಸತ್ಯಾಗ್ರಹಿಗಳು ಬಂಧನಕ್ಕೊಳಗಾದರು. ಮುಂದೆ ವಾರಕ್ಕೊಂದರಂತೆ ಐದು ತಂಡಗಳು ಸತ್ಯಾಗ್ರಹವನ್ನು ಕೈಕೊಂಡು ಬಂಧನಕ್ಕೊಳಗಾದವು.

ಹಿಂದೂ ಮಹಾಸಭೆಯ ಚಟುವಟಿಕೆಗಳಿಂದಾಗಿ ನಿಜಾಮ ಆಡಳಿತವು ಆತಂಕಿತವಾಗಿತ್ತಾದರೂ ಹೈದರಾಬಾದ ಸ್ಟೇಟ ಕಾಂಗ್ರೆಸ ಹಾಗೂ ಆರ್ಯಸಮಾಜದ ಚಟುವಟಿಕೆಗಳ ಮೇಲೆ ಇಡುತ್ತಿದ್ದಷ್ಟು ಸೂಕ್ಷ್ಮ ನಿಗಾ ಇದರ ಮೇಲೆ ಇಡುತ್ತಿರಲಿಲ್ಲ ಎಂದೆನಿಸುತ್ತದೆ. ಯಾಕೆಂದರೆ ರಾಜ್ಯಾಡಳಿತವು ಆ ಎರಡೂ ಸಂಘಟನೆಗಳೊಂದಿಗೆ ಇಟ್ಟುಕೊಂಡಿದ್ದಂಥ ಸಕಾರಾತ್ಮಕವಾಗಲೀ ನಕಾರಾತ್ಮಕವಾಗಲೀ ಸಂಬಂಧವನ್ನು ಹಿಂದೂ ಮಹಾಸಭೆಯೊಂದಿಗೆ ಹೊಂದಿರಲಿಲ್ಲ. ವೀರ ಸಾವರಕರ, ನಾಥೂರಾಮ ಗೋಡಸೆ ಮುಂತಾದವರು ಹಿಂದೂ ಮಹಾಸಭೆಯ ಚಟುವಟಿಕೆಗಳನ್ನು ಹೊರಗಿನಿಂದ ನಿಯಂತ್ರಿಸುತ್ತಿದ್ದರು, ಆದರೂ ನಿಜಾಮ ರಾಜ್ಯದಲ್ಲಿ ಬೇರೂರಿ ಚಳವಳಿ ನಡೆಸಲು ಅದಕ್ಕೆ ಸಾಧ್ಯವಾಗಲಿಲ್ಲವೆಂದು ಹೇಳಬೇಕು. ಹಿಂದೂ ಮಹಾಸಭೆಯ ಅನೇಕ ಕಾರ್ಯಕರ್ತರು ಜೈಲು ಸೇರಿದರು, ರಜಾಕಾರರ ಅತಿರೇಕಗಳಿಗೆ ತುತ್ತಾದರು, ಕೆಲವರು ಆತ್ಮಾಹುತಿಯನ್ನೂ ಮಾಡಿಕೊಂಡರು. ಹೈದರಾಬಾದ, ಗುಲಬರ್ಗಾ, ಬೀದರ ಮುಂತಾದ ಕಡೆಗಳಲ್ಲಿ ಕಾನೂನು ಮುರಿದು ಸತ್ಯಾಗ್ರಹಗಳನ್ನು ಮಾಡಿದರು. ಆದರೂ ಆರ್ಯಸಮಾಜದ ಚಳವಳಿಗೆ ಸರಿಸಾಟಿಯಾಗಿ ಹೋರಾಡುವುದು ಅದರಿಂದ ಸಾಧ್ಯವಾಗಲಿಲ್ಲ. ಹತ್ತು ತಿಂಗಳ ಕಾಲ ಅದು ನಡೆಸಿದ ಸತ್ಯಾಗ್ರಹವು ಅದರ ಚರಿತ್ರೆಯಲ್ಲಿ ಮೊದಲನೆಯ ಮತ್ತು ಕೊನೆಯ ಸತ್ಯಾಗ್ರಹವಾಗಿತ್ತು. ಹಿಂದೂ ಮಹಾಸಭೆಯು ೧ನೆಯ ಆಗಸ್ಟ್ ೧೯೩೯ಕ್ಕೆ ತನ್ನ ಸತ್ಯಾಗ್ರಹವನ್ನು ನಿಲ್ಲಿಸಿತು. ೧೭ ಆಗಸ್ಟಕ್ಕೆ ಎಲ್ಲ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಾಯಿತು. ಅಲ್ಲಿಗೆ ಹಿಂದೂ ಮಹಾಸಭೆಯ ಕೆಲಸ ಮುಗಿಯಿತು.

ಆರ್ಯಸಮಾಜ

ಹೈದರಾಬಾದ ವಿಮೋಚನಾ ಚಳವಳಿಯಿಂದ ಆರ್ಯಸಮಾಜದ ಹೋರಾಟವನ್ನು ಹೊರತು ಪಡಿಸಿದರೆ ಅಲ್ಲಿ ಏನೂ ಉಳಿಯುವುದಿಲ್ಲ ಎನ್ನುವಷ್ಟರ ಮಟ್ಟಿಗೆ ಆರ್ಯಸಮಾಜವು ಈ ವಿಮೋಚನೆಗಾಗಿ ದುಡಿದಿದೆ. ಅದರಂತೆ ಈ ವಿಮೋಚನೆಗಾಗಿ ಲೆಕ್ಕವಿಲ್ಲದಷ್ಟು ಬಲಿದಾನಗಳನ್ನೂ ಮಾಡಿದೆ. ಆರ್ಯಸಮಾಜವು ಒಂದು ಮತೀಯ ಸಂಘಟನೆಯೆಂದು ಹಣೆಪಟ್ಟಿ ಹೊತ್ತಿದ್ದರೂ ರಜಾಕಾರರ ಹಾಗೆ ಯಾವತ್ತೂ ಮತಾಂತರಕ್ಕಾಗಿ ಬಲವಂತ ಮಾಡಿಲ್ಲ,

ಕ್ರಿಶ್ಚನ್ ಮಿಷನರಿಗಳ ಹಾಗೆ ಆಮಿಷವೊಡ್ಡಿ ಮತಾಂತರ ಮಾಡಿಸಿಲ್ಲ. ಆದರೆ ತನ್ನ ಅಸ್ತಿತ್ವಕ್ಕೆ ಧಕ್ಕೆ ಬಂದಾಗ, ತನ್ನ ಸಿದ್ಧಾಂತಗಳು ಟೀಕೆಗೆ ಗುರಿಯಾದಾಗ, ಕೋಮು ದಳ್ಳುರಿ ತಾಂಡವವಾಡುತ್ತಿದ್ದಾಗ ಅದು ಮೂಕ ಪ್ರೇಕ್ಷಕನಂತೆ ಕೈಕಟ್ಟಿಕೊಂಡು ಕೂಡಲಿಲ್ಲ. ಹರಿತವಾದ ತರ್ಕಗಳಿಂದ, ಧಾರಾಪ್ರವಾಹದ ಮಾತುಗಾರಿಕೆಯಿಂದ ತನ್ನ ನಿಲುವನ್ನು ಸಮರ್ಥಿಸಿಕೊಂಡಿದೆ. ಇದು ಆರ್ಯಸಮಾಜದ ಚರಿತ್ರೆಯಾಗಿದೆ.

೧೮೯೨ರಷ್ಟು ಹಿಂದೆಯೇ ಹೈದರಾಬಾದಿನಲ್ಲಿ ಆರ್ಯಸಮಾಜದ ಸ್ಥಾಪನೆಯಾಗಿತ್ತು. ಅದು ಆರನೆಯ ನಿಜಾಮನಾದ ಮೀರ ಮಹಬೂಬ ಅಲೀಖಾನನ ಆಳ್ವಿಕೆಯ ಕಾಲವಾಗಿತ್ತು. ಆತ ಉಸ್ಮಾನ ಅಲೀಖಾನನ ಹಾಗೆ ಧರ್ಮಾಂಧನಾಗಿರಲಿಲ್ಲ. ರಾಜ್ಯದಲ್ಲಿ ಕೋಮುದ್ವೇಷವೂ ಇರಲಿಲ್ಲ. ಆದರೂ ರಾಜ್ಯದಲ್ಲಿ ಆರ್ಯಸಮಾಜದ ಸ್ಥಾಪನೆಯ ಉದ್ದೇಶ ಹಿಂದೂಸಮಾಜವನ್ನು ಸುಧಾರಿಸುವುದಾಗಿತ್ತು. ಹಿಂದೂಸಮಾಜದಲ್ಲಿ ಬೇರೂರಿರುವಂಥ ಕೆಟ್ಟ ಪರಂಪರೆಗಳನ್ನು, ಕುರುಡು ನಂಬಿಕೆಗಳನ್ನು, ಪಾಷಂಡಿತನವನ್ನು ಕಿತ್ತುಹಾಕಬೇಕಾಗಿತ್ತು. ಹಿಂದೂಗಳಲ್ಲಿಯ ವರ್ಣಭೇದ, ಜಾತಿಭೇದಗಳನ್ನು ತೊಲಗಿಸಬೇಕಾಗಿತ್ತು. ಆಗ ರಾಜ್ಯದಲ್ಲಿ ಮತಾಂಧ ಮುಸ್ಲಿಮರೂ ಇರಲಿಲ್ಲವಾದ ಕಾರಣ ಮುಸ್ಲಿಮರೊಂದಿಗೆ ಹೋರಾಡುವ ಪ್ರಮೇಯವೇ ಇರಲಿಲ್ಲ.

ಆರ್ಯಸಮಾಜದ ಪ್ರಚಾರಕರು ವೇದಗಳ ಆಧಾರಗಳನ್ನು ಕೊಟ್ಟು ಅಸ್ಪೃಶ್ಯತೆ, ಜಾತೀಯತೆ, ಮೂರ್ತಿಪೂಜೆ, ಅನೇಕ ದೇವೋಪಾಸನೆ, ಉಚ್ಚ-ನೀಚ ಎಂಬ ಭೇದಭಾವನೆ ಮುಂತಾದವುಗಳನ್ನು ಕಠೋರವಾಗಿ ಖಂಡಿಸುತ್ತಿದ್ದರು. ಇಸ್ಲಾಂ ಕೂಡ ಇದೇ ವಿಚಾರವುಳ್ಳದ್ದಾಗಿದೆ. ಹೀಗಾಗಿ ಅನೇಕ ಜನ ಮುಸ್ಲಿಂ ವಿದ್ವಾಂಸರು ಆರ್ಯಸಮಾಜದ ಸಿದ್ಧಾಂತಗಳನ್ನು ಮೆಚ್ಚಿಕೊಂಡಿದ್ದರು. ನವಾಬ ಜಫರಜಂಗ ಹಾಗೂ ಇಮಾದುಲ್ಮುಲ್ಕ ಎಂಬ ವಿದ್ವಾಂಸರು ಆರ್ಯ ಸಮಾಜದ ಪ್ರಚಾರವನ್ನು ಒಂದು ಸುಧಾರವಾದಿ ಆಂದೋಲನವೆಂದು ಭಾವಿಸಿದ್ದರು. ಆರ್ಯ ಸಮಾಜದ ಅನೇಕ ಸಭೆ ಸಮಾರಂಭಗಳಿಗೆ ಅವರು ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

ಆದರೆ ಮುಂದೆ ೧೯೧೧ರಲ್ಲಿ ಮೀರ ಉಸ್ಮಾನ ಅಲೀಖಾನನು ಅಧಿಕಾರಕ್ಕೆ ಬಂದ ಮೇಲೆ ಸಂಸ್ಥಾನದ ಬಣ್ಣ ಬದಲಾಗಹತ್ತಿತು. ೧೯೨೨ರಿಂದ ಆತನ ಬಣ್ಣ ಬೆಳಕಿಗೆ ಬರಹತ್ತಿತು. ತಾರುಣ್ಯದ ಮಸ್ತಿ, ಧಾರ್ಮಿಕ ಅಂಧತೆ ಇವುಗಳ ಜೊತೆಗೆ ಅಧಿಕಾರದ ಮದ ಇವೆಲ್ಲ ಸೇರಿ ಆತನಲ್ಲಿ ಒಟ್ಟಿಗೆ ಕೆಲಸ ಮಾಡಹತ್ತಿದವು. ಮೊಗಲರಿಂದ ಮೊದಲನೆಯ ನಿಜಾಮನು ಸ್ವತಂತ್ರನಾದ ಸ್ಮರಣಾರ್ಥವಾಗಿ ೧೯೨೨ರಲ್ಲಿ ಉಸ್ಮಾನ ಅಲೀಯು 'ಹೈದರಾಬಾದ ದಿನಾಚರಣೆ'ಯನ್ನು ಹಮ್ಮಿಕೊಂಡಿದ್ದನು. ಅದು ಪ್ರತಿವರ್ಷ ಆಚರಿಸಲಾಗುತ್ತಿತ್ತು. ಹೈದರಾಬಾದ ಸಂಸ್ಥಾನವು ಕೇವಲ ಆಸಿಫಜಾಹ ಮನೆತನದ ಸೊತ್ತು, ಅದರ ವಿರುದ್ಧ ಯಾರೂ ದನಿ ಎತ್ತುವಹಾಗಿಲ್ಲ ಎಂಬ ಇಂಗಿತವನ್ನು ಪ್ರದರ್ಶಿಸುವ ಉದ್ದೇಶ ಈ ದಿನಾಚರಣೆಯ ಹಿಂದೆ ಇದ್ದಿತು.

ಮುಂದೆ ೧೯೨೯ರಲ್ಲಿ ದೀನದಾರ ಸಿದ್ಧಿಕಿ, ಆಮೇಲೆ ಇತ್ತೇಹಾದುಲ್, ಖಾಕಸಾರ ಪಾರ್ಟಿ ಮುಂತಾದವುಗಳು ನಿಜಾಮನ ಈ ಭಾವನೆಯ ಬೀಜಕ್ಕೆ ನೀರು, ಗೊಬ್ಬರ ಹಾಕಿ ಬೆಳೆಸಿ ಪೋಷಿಸಿದವು. ಒಂದರ ಹಿಂದೆ ಒಂದರಂತೆ ಅತ್ಯಾಚಾರಗಳು, ಅತಿರೇಕಗಳು, ಹಿಂಸಾಚಾರಗಳು

ಕೊಲೆ ಸುಲಿಗೆಗಳು ಪ್ರಾರಂಭವಾದವು. ಆಗ ಆರ್ಯಸಮಾಜಕ್ಕೆ ಕೈಕಟ್ಟಿಕೊಂಡು ಕೂಡುವುದು ಸಾಧ್ಯವಾಗಲಿಲ್ಲ. ಈ ಧರ್ಮಾಂಧ ಮುಸ್ಲಿಂ ಸಂಘಟನೆಗಳ ವಿರುದ್ಧ ಹೋರಾಟಕ್ಕೆ ಇಳಿಯಬೇಕಾಯಿತು. ರಾಜ್ಯದ ಇಸ್ಲಾಮೀಕರಣದ ವಿರುದ್ಧ ಜನಜಾಗೃತಿಯನ್ನುಂಟುಮಾಡಲು ಆರ್ಯಸಮಾಜದ ಸ್ಥಳೀಯ ನಾಯಕರುಗಳಾಧ ರಾಯ ಕುಂವರ ಬಹಾದ್ದೂರ (ಹೈದರಾಬಾದ), ಗಯಾ ಪ್ರಸಾದ (ಹೈದರಾಬಾದ), ಪಂ. ದತ್ತಾತ್ರೇಯ ಪ್ರಸಾದ (ಗುಲಬರ್ಗಾ), ಭಾಯೀ ಬನ್ಸಿಲಾಲ ವಕೀಲ (ಹಳ್ಳಿಖೇಡ–ಬೀದರ), ಭಾಯೀ ಶ್ಯಾಮಲಾಲ (ಉದಗೀರ–ಬೀದರ), ಪಂ. ಗೋಪಾಲದೇವ ಶಾಸ್ತ್ರೀ (ಬಸವ–ಕಲ್ಯಾಣ), ಪಂ. ವೀರಭದ್ರ ಲಿಂಗಪ್ಪ ಆರ್ಯ (ಔರಾದ–ಬೀದರ), ಈಶ್ವರಲಾಲ ಜೀ ಭಟ್ಟಡ (ಯಾದಗಿರಿ) ಮುಂತಾದವರ ಜೊತೆಗೆ ಮೇಲಿಂದ ಮೇಲೆ ರಾಜ್ಯದ ಹೊರಗಿನಿಂದ ಅನೇಕ ವಿದ್ವಾಂಸರು ಬಂದು ತಮ್ಮ ಹರಿತವಾದ ಮಾತುಗಾರಿಕೆಯಿಂದ ಶ್ರೋತೃಗಳನ್ನು ರೋಮಾಂಚನಗೊಳಿಸುತ್ತಿದ್ದರು.

ಇತ್ತೀಹಾದ ಹಾಗೂ ರಜಾಕಾರ ಸಂಘಟನೆಗಳು ಮತಾಂತರಕ್ಕೆ ಹೆಚ್ಚು ಪ್ರಚೋದಿಸುತ್ತಿದ್ದವು. ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆಯನ್ನು ಹೆಚ್ಚಿಸದ ಹೊರತು ತಮಗೆ ಇಲ್ಲಿ ಉಳಿಗಾಲವಿಲ್ಲ ಎಂದು ಅವುಗಳಿಗೆ ಖಾತ್ರಿಯಾಗಿತ್ತು. ಜನಗಣತಿಯ ಪ್ರಕಾರ ಇಡೀ ರಾಜ್ಯದಲ್ಲಿ ೧/೯ ಕ್ಕಿಂತಲೂ ಕಡಿಮೆ ಇದ್ದ ಮುಸ್ಲಿಮರ ಜನಸಂಖ್ಯೆಯು ಪ್ರತಿಯೊಂದು ಜನಗಣತಿಯಲ್ಲಿ ಹೆಚ್ಚಾಗುತ್ತ ಹೋಗಿದ್ದುದನ್ನು ನಾವು ಕಾಣುತ್ತೇವೆ. ಅದಕ್ಕಿಂತ ಹೆಚ್ಚಿನ ಅನುಪಾತದಲ್ಲಿ ಹಿಂದೂಗಳ ಸಂಖ್ಯೆ ಇಳಿಮುಖವಾಗುತ್ತ ಬಂದಿತ್ತು. ಜನಗಣತಿಯ ಒಂದು ವರದಿಯ ಪ್ರಕಾರ 'ರಾಜ್ಯದಲ್ಲಿ ಮಕ್ಕಳ ಸಾವಿನ ಪ್ರಮಾಣ ಹೆಚ್ಚಾಗುತ್ತಿದೆ, ಮುಸ್ಲಿಂ ಜನಾಂಗದ ಸಂಖ್ಯೆ ವೃದ್ಧಿಸುತ್ತಿದೆ' ಎಂದು ದಾಖಲಾಗಿದೆ. ಮಕ್ಕಳ ಸಾವು ಹೆಚ್ಚುತ್ತಿರಬೇಕಾದರೆ, ಒಟ್ಟು ಜನಸಂಖ್ಯೆಯು ಇಳಿಮುಖವಾಗಬೇಕು. ಆದರೆ ಮುಸ್ಲಿಮರ ಜನಸಂಖ್ಯೆ ಅದು ಹೇಗೆ ವೃದ್ಧಿಸುತ್ತಿತ್ತು ಎಂಬುದು ತಾರ್ಕಿಕ ಪ್ರಶ್ನೆಯಾಗಿದೆ.

ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಲು ಎರಡು ಮಾರ್ಗಗಳಿದ್ದವು. ಒಂದು ಮತಾಂತರದ ಮೂಲಕ, ಇನ್ನೊಂದು ಹೊರಗಿನ ರಾಜ್ಯಗಳಿಂದ ಮುಸ್ಲಿಮರನ್ನು ವಲಸೆ ತರುವುದರಿಂದ ಅಥವಾ ಆಮದು ಮಾಡಿಕೊಳ್ಳುವುದರಿಂದ. ಮುಸ್ಲಿಮರನ್ನು ಆಮದು ಮಾಡಿಕೊಳ್ಳುವ ವಿಚಾರ ವಿಚಿತ್ರವಾಗಿ ಕಾಣಬಹುದು. ಆದರೂ ಇದು ಸತ್ಯಸಂಗತಿಯಾಗಿದೆ.

ಹೈದರಾಬಾದ ರಾಜ್ಯದಲ್ಲಿ ಉದ್ಯೋಗ ಮತ್ತು ಆಶ್ರಯ ಕೊಡುವ ಆಮಿಷ ತೋರಿಸಿ ಬೇರೆ ರಾಜ್ಯಗಳಿಂದ ಲಕ್ಷಾಂತರ ಮುಸ್ಲಿಮರನ್ನು ಕರೆಸಿಕೊಳ್ಳಲಾಗಿತ್ತು. ರೈಲುಗಳಲ್ಲಿ ತುಂಬಿ ತುಂಬಿ ಈ ಜನ ಹೈದರಾಬಾದಿಗೆ ಬರುತ್ತಿದ್ದರು. ಈ ರೀತಿ ಬಂದ ಶರಣಾರ್ಥಿ (?) ಗಳಿಗಾಗಿ ತಕ್ಷಣ ಊಟ ವಸತಿಯ ವ್ಯವಸ್ಥೆ ಮಾಡಲಾಗುತ್ತಿತ್ತು. ಒಂದೊಂದು ಕಡೆಗೆ ದಿನಕ್ಕೆ ಒಂದು ಲಕ್ಷ ಜನರಿಗೆ ಅಡಿಗೆ ಮಾಡಿ ಹಾಕುವ ವ್ಯವಸ್ಥೆ ಮಾಡಲಾಗಿತ್ತು. ಅಂಥ ಇಪ್ಪತ್ತೈದು ಲಕ್ಷ ಜನ ಬಂದರೂ ಅವರಿಗಾಗಿ ಅಡಿಗೆ ಮಾಡಿ ಹಾಕುವ ತಯಾರಿ ಮಾಡಿಕೊಳ್ಳಲಾಗಿತ್ತು. ವಿಮೋಚನಾ ಚಳವಳಿಯ ಕೆಲವು ತರುಣರು (ನಿಜಾಮನ ಮೇಲೆ ಬಾಂಬ್ ಹಾಕಿದ್ದ ನಾರಾಯಣ ಪವಾರ ಮತ್ತು ಆತನ ಸಂಗಡಿಗರು) ಮುಸ್ಲಿಮರ ಹಾಗೆ ಶೇರವಾನಿ, ರೂಮಿ ಟೋಪಿ ಧರಿಸಿ ಶುದ್ಧ

ಉರ್ದುವಿನಲ್ಲಿ ಮಾತಾಡುತ್ತ ಇಂಥ ಶರಣಾರ್ಥಿ (?) ತಂಡಗಳಲ್ಲಿ ಸಂಚರಿಸಿ ಅವರೆಲ್ಲ ಹೈದರಾಬಾದಿಗೆ ಬಂದ ಉದ್ದೇಶ ಇತ್ಯಾದಿಗಳನ್ನು ವಿಚಾರಿಸಿದಾಗ ಸತ್ಯಸಂಗತಿ ಹೊರಬಿದ್ದಿತ್ತು.

'ನಿಜಾಮರು ಹೈದರಾಬಾದನ್ನು ಮುಸ್ಲಿಮ ರಾಷ್ಟ್ರವನ್ನಾಗಿ ಮಾಡಲಿದ್ದಾರೆ. ಇಲ್ಲಿ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ನಮ್ಮನ್ನೆಲ್ಲ ಕರೆಸಿಕೊಂಡಿದ್ದಾರೆ. ಇಲ್ಲಿ ನಮಗೆ ವಸತಿ ಉದ್ಯೋಗ ಮುಂತಾದ ಎಲ್ಲ ಅನುಕೂಲತೆಗಳನ್ನು ಮಾಡಿ ಕೊಡಲಿದ್ದಾರೆ' ಎಂದು ಮುಗ್ಧತೆಯಿಂದ ಆ ಜನರು ಹೇಳಿಕೊಂಡರಂತೆ.

ಮುಸ್ಲಿಂ ಸಂಖ್ಯೆಯನ್ನು ಹೆಚ್ಚಿಸಲು ಕೈಕೊಂಡ ಇನ್ನೊಂದು ಮಾರ್ಗವೆಂದರೆ ಮತಾಂತರ. ಅದಕ್ಕೂ ಮುಂಚೆ ಮತಾಂತರಗಳು ಆಗಿಲ್ಲ ಎಂದಲ್ಲ. ಮೀರ ಮಹಬೂಬ ಅಲೀಖನನ ಕಾಲಕ್ಕೂ ಮತಾಂತರಗಳು ನಡೆದಿದ್ದವು. ಸ್ವತಃ ಉಸ್ಮಾನ ಅಲೀಖಾನನೇ ಒಬ್ಬ ಹಿಂದೂ ತಾಯಿಗೆ ಹುಟ್ಟಿದ ಮಗನಾಗಿದ್ದನು. ರಾಜ್ಯದ ಪ್ರಧಾನಮಂತ್ರಿಯಾಗಿದ್ದ ಮಹಾರಾಜಾ ಕಿಶನ ಪ್ರಸಾದರು ತಮ್ಮ ಮಗಳ ಮದುವೆಯನ್ನು ಒಬ್ಬ ಮುಸ್ಲಿಮನೊಂದಿಗೆ ಮಾಡಿದ್ದಲ್ಲದೆ ತಾವೂ ಮುಸಲ್ಮಾನರಾಗುವ ಇಚ್ಛೆ ವ್ಯಕ್ತಪಡಿಸಿರುವ ವಿಚಾರ ನಾವು ಹಿಂದೆ ನೋಡಿದ್ದೇವೆ.

ಆದರೆ ಇತ್ತೇಹಾದ ಹಾಗೂ ರಜಾಕ್ಕಾರರು ಮಾಡಿದ್ದು ಬಲಾತ್ಕಾರದ ಮತಾಂತರ. ರಜಾಕಾರರಿಗೆ ಮತಾಂತರ ಮಾಡಿಸಲು ಹೆಚ್ಚು ವಿರೋಧವಿಲ್ಲದ ಅವಕಾಶಗಳು ಸಿಗುತ್ತಿದ್ದುದು ಜೈಲುಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ. ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿಗಳಿಗೆ 'ಇಸ್ಲಾಂ ಸ್ವೀಕರಿಸಿದರೆ ಜೈಲುಶಿಕ್ಷೆ ಕಡಿಮೆ ಮಾಡಲಾಗುವುದು, ಜೈಲಿನಿಂದ ಬಿಡುಗಡೆಗೊಳಿಸಲಾಗುವುದು' ಎಂದು ಆಮಿಷ ತೋರಲಾಗುತ್ತಿತ್ತು. ಆಗಿನ ಬೀದರ ಜಿಲ್ಲೆಯ ಅಹಮದಪುರ ತಾಲೂಕಿನಲ್ಲಿ ಸಂಭಾ ಮಾಂಗ (ಸಂಭಾ ಮಾದಿಗ)ನ ಮತಾಂತರ ಇದಕ್ಕೊಂದು ದಾಖಲಾಗಿರುವ ನಿದರ್ಶನವಾಗಿದೆ. ತನ್ನ ಹಿಂದೂಧರ್ಮವನ್ನು ಬಿಟ್ಟು ಇಸ್ಲಾಂಧರ್ಮವನ್ನು ಸ್ವೀಕರಿಸಲು ಆತನಿಗೆ ವಿವಶಗೊಳಿಸಲಾಯಿತು. ಆತನಿಗೆ ಮೊದಲು ಮತಾಂತರಕ್ಕಾಗಿ ಬಲವಂತದಿಂದ ಒಪ್ಪಿಸಿ ಅನಂತರ ತಾನು ಸ್ವೇಚ್ಛೆಯಿಂದ ಮತಾಂತರಗೊಳ್ಳುತ್ತಿದ್ದೇನೆ ಎಂದು ಆತನಿಂದ ಒಂದು ಮನವಿ ಪತ್ರ ಬರೆಸಿಕೊಳ್ಳಲಾಯಿತು. ಆ ಮೂಲ ಅರ್ಜಿ ಈ ರೀತಿಯಾಗಿದೆ –

ಅರ್ಜಿ –

ಬಖಿದಮತ್ ಶರೀಫ್ ಆಲೀ ಜನಾಬ್ ಮೋಹತಮೀಮ ಸಾಹೇಬ್
ಜೇಲ ಅದಾಲತ್ ಮುನ್ಸಫಿ ಅಹಮದಪುರ

ಆಲೀಜಾಹ್ (ಉಚ್ಚ ಪದಾಧಿಕಾರಿಗಳೆ) ಯಹ ಕಮತರೀನ (ಈ ಕನಿಷ್ಠನು) ವ ಸಫಹ ದಿಲ (ಸ್ವಚ್ಛ ಮನಸ್ಸಿನವನು) ಹಂಸಿ–ಖುಷಿ ಬಿಲಾ ಜಬರ ವ ಅಕರಾಹ (ಸ್ವಸಂತೋಷದಿಂದ ಯಾವ ಒತ್ತಾಯವೂ ಇಲ್ಲದೆ) ಮಜಹಬ್ ಇಸ್ಲಾಮ ಮೇ ದಾಖಿಲ ಹೋನಾ ಚಾಹತಾ ಹೈ (ಇಸ್ಲಾಂ ಧರ್ಮದಲ್ಲಿ ಸೇರಬಯಸುತ್ತಾನೆ) ಇಸಲಿಯೇ ಇಸ್ತೇದುಆ ಹೈ ಕಿ (ಪ್ರಾರ್ಥಿಸುತ್ತೇನೆ) ಬರಾಯೇ ಕರಮ (ದಯಮಾಡಿ) ಕಿಸೀ ಮಜಹಬೀ ಆದಮಿಕೋ (ಯಾರಾದರೂ

ಧರ್ಮಪುರಷನನ್ನು) ಇಜಾಜತ ಅತಾ (ಒಪ್ಪಿಗೆ) ಫರಮಾಈ ಜಾಯೇ (ಕೊಡಬೇಕು) ಕಿ ಮುಝೆ ರಸೂಲ ಇಸ್ಲಾಮಿ ಅಕಾಯದಾ (ನನಗೆ ರಸೂಲರ ಇಸ್ಲಾಮದಲ್ಲಿ ವಿಶ್ವಾಸ ಉಳ್ಳವನಾಗಿ) ಬನಾಕರ ಮುಸಲ್ಮಾನ ಕರಾ ಲೇ.

(೧೬ ತೀರ ೪೪ ಫಸ್ಲಿ ಸನ್. ಕ್ರಿ.ಶ. ೧೯೩೫)
ಅರ್ಜಿಗುಜಾರ
ಸಕೀನ ಜೇಲ ಅದಾಲತ ಮುನ್ಸಫಿ ಅಹಮದಪುರ
ಮುಲವತಿನ ಮೌಜೇ ಹಿಪ್ಪರಗಾ, ತಾ. ಅಹಮದಪುರ
ಸಂಭಾ ಮಾಂಗ ವಲ್ದ (ತಂದೆ) ಭತ್ರಾ

ಕಾನೂನು ಬಾಹಿರವಾದ ಮತಾಂತರಗಳನ್ನು ಕಾನೂನಿನ ಚೌಕಟ್ಟಿಗೆ ತರಲು ಈ ರೀತಿಯ ಕುತಂತ್ರಗಳನ್ನು ಮಾಡಲಾಗುತ್ತಿತ್ತು. ಮೇಲೆ ಕಾಣಿಸಿದ ಸಂಭಾ ಮಾಂಗನ ಮನವಿ ಪತ್ರದ ಮೇಲೆ ಪಂ. ವಾಮನರಾವ ಎಂಬ ವಕೀಲರ ಎದುರಿನಲ್ಲಿ ಅರ್ಜಿದಾರನ ವಿಚಾರಣೆ ನಡೆಸಿದಂತೆ ನಡಾವಳಿಯನ್ನು ದಾಖಲಿಸಿ ಸಂಭಾ ಮಾಂಗನಿಗೆ ಮತಾಂತರಿಸಿ ಆತನಿಗೆ ಅಬ್ದುಲ ರಹಮಾನ ಎಂದು ನಾಮಕರಣ ಮಾಡಲಾಯಿತು. (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೧೦೨*).

ಇಂಥದ್ದೇ ಇನ್ನೊಂದು ಪ್ರಸಂಗದಲ್ಲಿ ಲಾಲಸಿಂಗ ಆರ್ಯ ಎಂಬ ಒಬ್ಬ ಆರ್ಯ ಸಮಾಜೀಯು ಜೈಲಿನಲ್ಲಿದ್ದನು. ಆತನ ಎದುರಿಗೆ ಒಬ್ಬ ಕೈದಿಯನ್ನು ಬಲವಂತವಾಗಿ ಮತಾಂತರಗೊಳಿಸಲಾಗುತ್ತಿತ್ತು. ಲಾಲಸಿಂಗನು ಅದನ್ನು ಕಟುವಾಗಿ ವಿರೋಧಿಸಿದನು. ಜೈಲಿನ ಹೊರಗೂ ಕೂಡ ಈ ವಿಚಾರ ಪ್ರತಿಭಟನೆಗೆ ಕಾರಣವಾಯಿತು. ಆಗ ಸರಕಾರವು ಒಂದು ಪುಸ್ತಕವನ್ನು ಪ್ರಕಟಿಸಿ ಅಂಥ ಕೃತ್ಯವನ್ನು ತಾನು ಸಮರ್ಥಿಸುವುದಿಲ್ಲ ಎಂದು ಘೋಷಿಸಿಕೊಂಡಿತು. 'ತನ್ನ ಗಮನಕ್ಕೆ ಬಂದಹಾಗೆ ರಾಜ್ಯದ ಯಾವ ಜೈಲಿನಲ್ಲಿಯೂ ಯಾವ ಕೈದಿಗೂ ಇಸ್ಲಾಮಿನ ಬೋಧನೆ ಮಾಡುವ ಯಾವ ಆಜ್ಞೆಯನ್ನೂ ಜಾರಿಗೊಳಿಸಿರುವುದಿಲ್ಲ' ಎಂದು ಸ್ಪಷ್ಟೀಕರಣ ನೀಡಿತು. ಆದರೆ ಮುಂದೆ ಕೆಲವೇ ದಿನಗಳಲ್ಲಿ ಸರಕಾರವು ಒಂದು ವಿಜ್ಞಾಪನೆಯ ಮೂಲಕ ಈ ಸಂಗತಿಯನ್ನು ಒಪ್ಪಿಕೊಂಡಿತು. 'ಕೇವಲ ನಾಲ್ಕು ಜನ ಕೈದಿಗಳು ಮುಸಲ್ಮಾನರಾಗುವ ಇಚ್ಛೆ ವ್ಯಕ್ತಪಡಿಸಿರುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಈ ಆದೇಶ ಹೊರಡಿಸಲಾಗಿದೆ. ಯಾವುದೇ ಕೈದಿಯು ಜೈಲು ಸೇರುತ್ತಿದ್ದಾಗ ಅಥವಾ ಜೈಲಿನಲ್ಲಿರುವಾಗ ಆತ ಯಾವ ಧರ್ಮದವನಾಗಿರುತ್ತಾನೋ ಅದೇ ಧರ್ಮ ಇರುತ್ತದೆ. ಆತನಿಗೆ ಧರ್ಮಾಂತರ ಅನುಮತಿ ಕೊಡಲಾಗುವುದಿಲ್ಲ.' (*ಹೈದರಾಬಾದ ಸತ್ಯಾಗ್ರಹ ಕಾ ರಕ್ತರಂಜಿತ ಇತಿಹಾಸ, ಪು. ೭೫*).

ನಿಜಾಮ ರಾಜ್ಯದಲ್ಲಿ 'ಅಮೂರೇ ಮಜಹಬೀ' ಎಂಬ ಒಂದು ಪ್ರತ್ಯೇಕವಾದ ಇಲಾಖೆಯೇ ತೆರೆಯಲಾಗಿದ್ದು ಅದು ಧಾರ್ಮಿಕ ಕಾನೂನಿನ ಚೌಕಟ್ಟಿನಲ್ಲಿ ಮತಾಂತರಕ್ಕೆ ನೆರವು ನೀಡುತ್ತಿತ್ತು. ವೆಂಕಯ್ಯನೆಂಬ ಒಬ್ಬ ಹಿಂದೂಗೆ ಬರೆದ ಒಂದು ಪತ್ರದ ಸಾರಾಂಶ ಹೀಗಿದೆ. 'ನಿನ್ನ ಹೆಂಡತಿ ಗೇಂದಿಯು ೧೪ ಅವರ ಫಸ್ಲಿಯ ದಿನ ಮುಸಲ್ಮಾನಳಾಗಿದ್ದಾಳೆ. ಈಗ ಆಕೆಯ

ಹೆಸರು ರಹಮಾನೀ ಎಂದು ಇಡಲಾಗಿದೆ. ಮುಸಲ್ಮಾನನಾಗಲು ನಿನಗೂ ಅನೇಕ ಸಲ ಆಮಂತ್ರಿಸಲಾಗಿದೆ. ಒಂದು ವಾರದೊಳಗಾಗಿ ಸ್ವ–ಇಚ್ಛೆಯಿಂದ ಬಂದು ನೀನು ಮುಸಲ್ಮಾನನಾದರೆ ಈಗ ಮುಸಲ್ಮಾನಳಾಗಿರುವ ಹೆಂಡತಿಯ ಜೊತೆಗೆ ಗಂಡನೆಂಬ ನಿನ್ನ ಸಂಬಂಧ ಹಾಗೇ ಉಳಿಯುತ್ತದೆ. ತಪ್ಪಿದಲ್ಲಿ ಆಕೆಯ ಜೊತೆಗೆ ನಿನ್ನ ಯಾವ ಸಂಬಂಧವೂ ಇರಲಾರದು ಮತ್ತು ನಿನ್ನ ಯಾವ ತಕರಾರನ್ನೂ ಕೇಳಲಾಗುವುದಿಲ್ಲ.'

ಲಾತೂರಿನ ಒಬ್ಬ ರೌಡಿಯನ್ನು ಬಸವಕಲ್ಯಾಣದ ಜೈಲಿನಲ್ಲಿ ಇಡಲಾಗಿತ್ತು. ಮುಸಲ್ಮಾನನಾದರೆ ಜೈಲಿನಿಂದ ಬಿಡುಗಡೆ ಮಾಡುವುದಾಗಿ ಆತನಿಗೆ ಆಶೆ ತೋರಿಸಲಾಯಿತು. ಅಬ್ದುಲ ಮುಹಮ್ಮದ ಎಂಬ ಹೆಸರಿನಿಂದ ಆತ ಮುಸಲ್ಮಾನನಾಗಿದ್ದನು. ಜೇಲಿನಿಂದ ಹೊರಬಂದು ಇಡೀ ದಿನ ಊರಲ್ಲಿ ರೌಡಿತನ ಮಾಡಿ ರಾತ್ರಿ ಜೈಲಿನಲ್ಲಿ ಹೋಗಿ ಮಲಗುತ್ತಿದ್ದ. ಆತನ ರೌಡಿತನವನ್ನು ಕಂಡೂ ಕಾಣದಂತೆ ಪೊಲೀಸರು ಸುಮ್ಮನಿರುತ್ತಿದ್ದರು.

ಸುಲಭವಾಗಿ ಮತಾಂತರಕ್ಕಾಗಿ ರಜಾಕಾರರ ಕೈಗೆ ಎಟುಕುತ್ತಿದ್ದ ಜನಾಂಗವೆಂದರೆ ದಲಿತರು, ಅಸಹಾಯಕರು ಮತ್ತು ಬಡವರು, ಹಿಂದೂಧರ್ಮದಲ್ಲಿಯ ಸ್ಪೃಶ್ಯಾಸ್ಪೃಶ್ಯ ಆಚರಣೆಯಿಂದಾಗಿ ದಲಿತ ಜನಾಂಗವು 'ಹಿಂದೂತ್ವದಿಂದ ಸಿಡಿದುಹೋಗುವುದು ಸಹಜವೆಂದೆನಿಸಬಹುದು. ಅದಕ್ಕಾಗಿಯೇ ಆರ್ಯಸಮಾಜವು ಎಲ್ಲ ಜಾತಿ ವರ್ಣಗಳನ್ನು ಮೀರಿ ಎಲ್ಲರನ್ನೂ ಆರ್ಯ(ಶ್ರೇಷ್ಠ)ರನ್ನಾಗಿ ಮಾಡಲು ಪಣತೊಟ್ಟಿತ್ತು. ರಜಾಕಾರರು ಮೂವತ್ತು ಸಾವಿರ ದಲಿತರನ್ನು ಮತಾಂತರಗೊಳಿಸಿದ ದಾಖಲೆಪತ್ರಗಳು ಸಿಗುತ್ತವೆ. ಬಹಾದ್ದೂರ ಯಾರ ಜಂಗನು ನಿಜಾಮ ಸರಕಾರಕ್ಕೆ ೧೯೩೬ರಲ್ಲಿ (ಪತ್ರ ಸಂ. ೧೦೧ ತಾ. ೨೬ ಮೇಹರ್ ವ ೧೩೪೫ ಫಸ್ಲಿ) ಬರೆದ ಒಂದು ಪತ್ರದಲ್ಲಿ 'ಮತಾಂತರ ವರದಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದು. ಇದರಿಂದ ಮತಾಂತರ ಕಾರ್ಯಕ್ಕೆ ತೊಂದರೆಯಾಗುತ್ತದೆ' ಎಂದು ತಿಳಿಸಿದ್ದನು.

ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ವರ್ಗದ ವಿದ್ಯಾರ್ಥಿಗಳನ್ನು ಮತಾಂತರಗೊಳಿಸಲಾಗುತ್ತಿತ್ತು. ಶಿಕ್ಷಣ ಇಲಾಖೆಯಲ್ಲಿಯ ಆಗಿನ ಕಾಲದ ಪತ್ರವ್ಯವಹಾರದಿಂದ ಈ ಮಾತಿಗೆ ಸಮರ್ಥನೆ ಸಿಗುತ್ತದೆ. ಕರೀಮನಗರ ಶಿಕ್ಷಣ ಇಲಾಖೆಯ ಅಧೀಕ್ಷಕರಾದ ಮುಶ್ತಾಕ್ ಅಹಮದ ಎನ್ನುವವನು ನಿರ್ದೇಶಕರಿಗೆ ಹೀಗೊಂದು ವಿಷಯ ತಿಳಿಸಿ ಮನವಿ ಮಾಡಿಕೊಂಡಿದ್ದನು. (ಪತ್ರ ಸಂ. ೧೦೩/೨ ಸನ್ ೧೩೪೭ ಫಸ್ಲಿ, ಕ್ರಿ.ಶ. ೧೯೩೮) ಮನವಿಯ ಸಾರಾಂಶ, 'ಶಾಲೆಯ ಹೆಚ್ಚಿನ ಸಂಖ್ಯೆಯ ದಲಿತ ವಿದ್ಯಾರ್ಥಿಗಳು ಮುಸ್ಲಿಮರಾಗಿದ್ದಾರೆ. ಅವರಿಗೆ ಧಾರ್ಮಿಕ ಶಿಕ್ಷಣ ಕೊಡುವುದು ಆವಶ್ಯಕವಾಗಿದೆ. ಈಗಿರುವ ಹಿಂದೂ ಅಧ್ಯಾಪಕರಾದ ಚಂದ್ರಯ್ಯನ ಸ್ಥಾನದಲ್ಲಿ ಅವರನ್ನು ಇಸ್ಲಾಂ ಧರ್ಮಬೋಧೆ ಮಾಡಲು ಯಾರಾದರೂ ಮುಸ್ಲಿಂ ಅಧ್ಯಾಪಕರ ಹೆಸರನ್ನು ಸೂಚಿಸಬೇಕು.' ಈ ಕುರಿತು ಪತ್ರವ್ಯವಹಾರ ನಡೆದು 'ವಿದ್ಯಾರ್ಥಿಗಳು ಸ್ವ–ಇಚ್ಛೆಯಿಂದ ಮುಸಲ್ಮಾನರಾಗಿದ್ದಾರೆಂದು ಅವರಿಂದ ಬರೆಸಿಕೊಳ್ಳಬೇಕು ಮತ್ತು ಅಂಥ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸವಲತ್ತುಗಳನ್ನು ನೀಡುವುದಲ್ಲದೆ ಅವರಿಗೆ ಶುಲ್ಕ ವಿನಾಯತಿಯನ್ನು ಕೊಡಬೇಕು' ಎಂದು ಮೇಲಿನ ಆದೇಶ ಹೊರಡಿಸಲಾಯಿತು.

ಗೋಮುಖ ವ್ಯಾಘ್ರನಂತೆ ಒಂದು ಕಡೆ ಚೆನ್ನಬಸವಣ್ಣನ ಅವತಾರ ಪುರುಷನೆಂದು ಹೇಳಿಕೊಂಡು ದೀನದಾರ ಸಿದ್ದಿಕಿಯು ಯಾರಿಗೂ ಅನುಮಾನ ಬಾರದ ರೀತಿಯಲ್ಲಿ, ಪ್ರೀತಿಯಿಂದಲೇ ಎಂಬಂತೆ ಅಶಿಕ್ಷಿತ ಮುಗ್ಧ ಲಿಂಗಾಯತ ಜನರನ್ನು ಮತಾಂತರಗೊಳಿಸುತ್ತಿದ್ದನು. ಇದನ್ನೆಲ್ಲ ಕಂಡು ಆರ್ಯಸಮಾಜದ ಜನರ ರಕ್ತ ಕುದಿಯುತ್ತಿತ್ತು. ಅವರು ಇಂಥ ಮತಾಂತರಗಳನ್ನು ಖಂಡಿಸುವುದರ ಜೊತೆಗೆ ಮತಾಂತರಗೊಂಡವರನ್ನು ಶುದ್ಧೀಕರಣದ ಮೂಲಕ ಮತ್ತೆ ಹಿಂದೂ ಸಮುದಾಯಕ್ಕೆ ಸೇರಿಸುತ್ತಿದ್ದರು.

ಆರ್ಯಸಮಾಜದ ಮೇಲಿನ ನಿರ್ಬಂಧಗಳು

ಇಸ್ಲಾಮೀಕರಣದ ತನ್ನ ಜೈತ್ರಯಾತ್ರೆಯಲ್ಲಿ ಆರ್ಯಸಮಾಜವು ಕಾಲಕಂಟಕ ವಾಗಿರುವುದು ಮತಾಂಧ ಮುಸ್ಲಿಮರಿಗೆ ನುಂಗಲಾರದ ತುತ್ತಾಗಿತ್ತು. ಹೇಗಾದರೂ ಮಾಡಿ ಆರ್ಯಸಮಾಜವನ್ನು ಬಗ್ಗುಬಡಿಯಬೇಕೆಂದು ಮತಾಂಧರು ಯೋಚಿಸುತ್ತಿದ್ದರು. ಆರ್ಯ ಸಮಾಜವನ್ನು ರಾಜ್ಯದಲ್ಲಿ ನಿಷೇಧಿಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಅದರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಯಿತು. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು :

೧) ಹಿಂದೂ ದೇವಾಲಯಗಳಾಗಲೀ, ಆರ್ಯಸಮಾಜ ಮಂದಿರಗಳಾಗಲೀ ಹೊಸದಾಗಿ ನಿರ್ಮಿಸುವುದನ್ನು ನಿಷೇಧಿಸಲಾಗಿತ್ತು. ಇಂಥ ನಿರ್ಮಾಣಗಳನ್ನು ನಿಯಂತ್ರಿಸಲು ಮತ್ತು ಅವುಗಳ ಮೇಲೆ ನಿಗಾ ಇಡಲು 'ಅಮೂರೇ ಮಜಹಬೀ' ಎಂಬ ಒಂದು ಹೊಸ ಇಲಾಖೆಯನ್ನೇ ಸ್ಥಾಪಿಸಲಾಗಿತ್ತು. ಹಳೆಯ ದೇವಾಲಯಗಳನ್ನು, ಮಂದಿರಗಳನ್ನು ಜೀರ್ಣೋದ್ಧಾರ ಮಾಡಬೇಕಾದರೂ ಅಮೂರೇ ಮಜಹಬೀ ಇಲಾಖೆಯಿಂದ ಲಿಖಿತ ಅನುಮತಿ ಪಡೆಯುವುದು ಅನಿವಾರ್ಯವಾಗಿತ್ತು. ಅನುಮತಿಗಾಗಿ ಅರ್ಜಿ ಸಲ್ಲಿಸಿದರೂ ವರ್ಷಾನುಗಟ್ಟಲೇ ಅವುಗಳ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಹಾಗೇ ಇಟ್ಟುಬಿಡುತ್ತಿದ್ದರು.

ಬೀದರ ಜಿಲ್ಲೆಯ ಅಹಮದಪುರದ ಎಡ್ವೋಕೇಟ್ ನಿವೃತ್ತಿರೆಡ್ಡಿಯವರು ತಮ್ಮ ಮನೆಯಲ್ಲಿಯೇ ಆರ್ಯಸಮಾಜದ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದರು. ಅನುಮತಿ ಇಲ್ಲದೆ ಹಾಗೆ ಮಾಡುವುದು ಅಪರಾಧ. ಕೂಡಲೇ ಅನುಮತಿಗಾಗಿ ಅರ್ಜಿ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು. ತಪ್ಪಿದರೆ ಕಾನೂನಿನ ಕ್ರಮಕ್ಕೆ ಒಳಗಾಗುತ್ತೀರಿ ಎಂಬ ಎಚ್ಚರಿಕೆಯ ನೋಟೀಸು ಜಾರಿ ಮಾಡಲಾಗಿತ್ತು. (ತಾ. ೧೪ ಅಮರದಾದ ಸನ್ ೪೭ ಫಸ್ಲಿ. ಕ್ರಿ.ಶ. ೧೯೩೮) (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು.೬೮*).

೨) ಆರ್ಯಸಮಾಜದ ಧಾರ್ಮಿಕ ಬಾವುಟವಾದ 'ಓಂ' ಧ್ವಜ ಹಾರಿಸುವುದನ್ನು ನಿಷೇಧಿಸಲಾಗಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಅಷ್ಟೇಯಲ್ಲ ಖಾಜಗಿ ಸ್ಥಳಗಳಲ್ಲಿಯೂ, ಅದು ತನ್ನ ಸ್ವಂತ ಮನೆಯಾಗಿದ್ದರೂ ಕೂಡ 'ಓಂ' ಧ್ವಜ ಹಾರಿಸುವುದನ್ನು ಪ್ರತಿಬಂಧಿಸಲಾಗಿತ್ತು. ಗುಲಬರ್ಗಾದ ಗಾಜಿಪುರ ಓಣಿಯ ಅಂಬುಬಾಯಿ ಗಂಡ ನಾಗಪ್ಪಾ ಗವಳಿ ಎಂಬವರ ಮನೆಯಲ್ಲಿ ಆರ್ಯ ಸಮಾಜದ ಹೋಮ-ಹವನಗಳು ನಡೆಯುತ್ತಿದ್ದವು. ಅವರ ಮನೆಯ ಅಂಗಳದ ಗಿಡದಲ್ಲಿ ಒಂದು 'ಓಂ' ಧ್ವಜ ಹಾರಿಸಲಾಗಿತ್ತು. ಅದಕ್ಕಾಗಿ ಗುಲಬರ್ಗಾ ಆರ್ಯಸಮಾಜದ ಮಂತ್ರಿಯಾಗಿದ್ದ

ಶ್ರೀ ನರಸಿಂಗರಾವ ಅವರಿಗೆ ನೋಟೀಸ ಜಾರಿ ಮಾಡಿ 'ಕಾರಣ ಕೊಡಿ' ಎಂದು ಕೇಳಲಾಗಿತ್ತು. ನೋಟೀಸಿನ ಸಾರಾಂಶ ಈ ಮುಂದಿನಂತಿದೆ –

ನೋಟೀಸ ಮರತಬಾ ಮಹಕಮೇ ಅವ್ವಲ ತಾಲೂಕ್ದಾರಿ
ಜಿಲಾ ಗುಲಬರ್ಗಾ
ತಾ. ದಯರ, ಸನ್ ೪೮ ಫಸ್ಲಿ (ಕ್ರಿ.ಶ. ೧೯೩೯)

ಗುಲಬರ್ಗಾ ಗಾಜಿಪುರದ ಅಂಬುಬಾಯಿ ಗಂಡ ನಾಗಪ್ಪ ಗವಳಿ ಎಂಬವರ ಮನೆಯಲ್ಲಿ ಒಂದು ಆರ್ಯಸಮಾಜ ಸ್ಥಾಪಿಸಲಾಗಿದೆ ಎಂದೂ ಮತ್ತು ಆ ಆರ್ಯಸಮಾಜದೊಳಗಿನ ಗಿಡದ ಮೇಲೆ 'ಓಂ' ಎಂದು ಬರೆದ ಧ್ವಜ ಹಾರಿಸಲಾಗಿದೆ ಎಂದೂ ಪೋಲೀಸ ವರದಿಯ ಮೂಲಕ ತಿಳಿದುಬಂದಿದೆ. ಈ ಸಮಾಜದ ಸ್ಥಾಪನೆಗಾಗಿ ಅನುಮತಿ ಪಡೆದಿರುವ ಬಗ್ಗೆ ಈ ಇಲಾಖೆಯಲ್ಲಿ ಯಾವುದೇ ದಾಖಲೆಗಳಿಲ್ಲ. ಆದ್ದರಿಂದ ಯಾವ ಅನುಮತಿಯ ಮೇರೆಗೆ ಆ ಸಮಾಜವನ್ನು ಸ್ಥಾಪಿಸಲಾಗಿದೆ ಮತ್ತು ಧ್ವಜವನ್ನು ಹಾರಿಸಲಾಗುತ್ತಿದೆ ಎಂಬುದನ್ನು ೨೪ ಗಂಟೆಗಳ ಒಳಗಾಗಿ ದಾಖಲೆಗಳೊಂದಿಗೆ ಸಾದರ ಪಡಿಸತಕ್ಕದ್ದು. (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೬೯–೭೦*).

ಬಸವಕಲ್ಯಾಣದಲ್ಲಿ ಬಸವ ಮಂದಿರದ ಜೀರ್ಣೋದ್ಧಾರದ ಕೆಲಸವನ್ನು ನಿಷೇಧಿಸಲಾಯಿತು. ಯಾಕೆಂದರೆ ಆ ಮಂದಿರದ ಜೀರ್ಣೋದ್ಧಾರವಾದರೆ ಮಂದಿರದ ಎತ್ತರ ಹೆಚ್ಚಾಗುತ್ತದೆ ಆಗ ಅದರ ನೆರಳು ಮಸೀದಿಯ ಮೇಲೆ ಬೀಳುತ್ತದೆ ಎಂದು ಕಾರಣ ಕೊಡಲಾಯಿತು.

ಇದೇ ಕಾರಣಗಳಿಗಾಗಿ ೧೯೨೪ರಲ್ಲಿ ಗುಲಬರ್ಗಾದ ಶ್ರೀ ಶರಣಬಸವೇಶ್ವರ ದೇವಸ್ಥಾನದ ಗೋಪುರದ ಮೇಲೆ ಕಳಶ ಕೂಡಿಸುವುದನ್ನು ನಿಷೇಧಿಸಲಾಗಿತ್ತು. ಶ್ರೀ ಶರಣಬಸವೇಶ್ವರ ದೇವಸ್ಥಾನದ ಆಸುಪಾಸಿನ ಸುಮಾರು ಒಂದೆರಡು ಕಿಲೋಮೀಟರ ವ್ಯಾಪ್ತಿಯೊಳಗೆ ಯಾವುದೇ ಮುಸ್ಲಿಂ ಸ್ಮಾರಕಗಳಿಲ್ಲ. ಆದರೂ ಕಳಶದ ನೆರಳು ದೇವಸ್ಥಾನದ ಪೂರ್ವದಲ್ಲಿರುವ ಐದು ಕಿಲೋಮೀಟರ ದೂರದ ಖಾಜಾ ಬಂದೇನವಾಜ ದರ್ಗಾದ ಮೇಲೆ ಬೀಳುತ್ತದೆ ಎಂದು ಕಾರಣ ಕೊಡಲಾಯಿತು. (*ಈ ಘಟನೆ ಕುರಿತು ಮುಂದೆ ಉಲ್ಲೇಖಿಸಲಾಗಿದೆ*).

೩) ಆರ್ಯಸಮಾಜದ ಒಳಗೆ ಹವನಕುಂಡಗಳನ್ನು ನಿರ್ಮಿಸುವುದನ್ನು ನಿಷೇಧಿಸಲಾಗಿತ್ತು. ಹವನ ಮಾಡುವ ನೆಪದಲ್ಲಿ ಆರ್ಯಸಮಾಜ ಮಂದಿರಗಳಲ್ಲಿ ಪ್ರವಚನದ ಹೆಸರಿನಿಂದ ರಾಜಕೀಯ ಭಾಷಣಗಳನ್ನು ಏರ್ಪಡಿಸಲಾಗುತ್ತದೆ. ಅದರಿಂದ ಜನರನ್ನು ಸರಕಾರದ ವಿರುದ್ಧ ಬಂಡೇಳಲು ಪ್ರಚೋದಿಸಲಾಗುತ್ತದೆ ಎಂದು ಕಾರಣ ಕೊಡಲಾಗುತ್ತಿತ್ತು.

೧೯೩೫ರಲ್ಲಿ ಬೀದರ ಜಿಲ್ಲೆಯ ನಿಲಂಗಾದಲ್ಲಿ ಅಲ್ಲಿಯ ಕಲೆಕ್ಟರನಾದ ಮಿರ್ಜಾ ಮುಹಮ್ಮದನು ಆರ್ಯಸಮಾಜ ಮಂದಿರವನ್ನು, ವ್ಯಾಯಾಮಶಾಲೆಯನ್ನು ಮತ್ತು ಹವನಕುಂಡವನ್ನು ಕಿತ್ತಿಸಿಹಾಕಲು ಆಜ್ಞೆ ಹೊರಡಿಸಿದನು. ಕಲೆಕ್ಟರನ ಆದೇಶವನ್ನು ಪಾಲಿಸಲು ನಿಲಂಗಾದ ಡಿ.ಎಸ್.ಪಿ.ಯು ಅವುಗಳನ್ನು ಅಡಿಗಲ್ಲು ಸಹಿತ ಕಿತ್ತಿ ನಾಶಗೊಳಿಸಬೇಕೆಂದು ತನ್ನ

ಸಿಬ್ಬಂದಿಗೆ ನಿರ್ದೇಶನ ನೀಡಿದನು. ಯಾಕೆಂದರೆ ಆ ಸ್ಥಳದಲ್ಲಿ ಆರ್ಯಸಮಾಜ ಇದ್ದಂಥ ಯಾವ ಕುರುಹೂ ಉಳಿಯಬಾರದು ಎಂಬುದು ಆತನ ಉದ್ದೇಶವಾಗಿತ್ತು. ಆರ್ಯಸಮಾಜದ ಚಟುವಟಿಕೆಗಳು ತೀವ್ರವಾಗಿರುವ ಸ್ಥಳಗಳಲ್ಲಿ ಮಂದಿರಗಳನ್ನು, ಹವನಕುಂಡಗಳನ್ನು ಕಿತ್ತಿ ನೆಲಸಮ ಮಾಡುವುದು ಮತ್ತು ಹೊಸ ಮಂದಿರಗಳನ್ನು ಹವನಕುಂಡಗಳನ್ನು ನಿರ್ಮಿಸಲು ಅನುಮತಿಯನ್ನು ತಡೆಹಿಡಿಯುವುದು ಸರಕಾರದ ನೀತಿಯಾಗಿತ್ತು.

ಇದನ್ನು ಪ್ರತಿಭಟಿಸಿ ಭಾಯೀ ಬನ್ಸಿಲಾಲರು ಇಡೀ ದೇಶದಲ್ಲಿ ಚಳವಳಿ ಪ್ರಾರಂಭಿಸಿದರು. ಅವರ ಸಹೋದರರಾದ ಭಾಯೀ ಶ್ಯಾಮಲಾಲರು ಹೈದರಾಬಾದ ಆರ್ಯ ಪ್ರತಿನಿಧಿ ಸಭೆಯ ಮಂತ್ರಿಯಾಗಿದ್ದರು. ನಿಲಂಗಾದ ಈ ಘಟನೆಯ ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕೆಂದು ಅವರು ನಿಜಾಮ ಸರಕಾರಕ್ಕೆ ಒತ್ತಾಯಿಸಿದರು. ದೇಶದ ಎಲ್ಲ ಮೂಲೆಗಳಿಂದ ಈ ಘಟನೆಯನ್ನು ಖಂಡಿಸಲಾಯಿತು. ಖಂಡನೆಯ ಟೆಲಿಗ್ರಾಂಗಳು ನಿಜಾಮ ಸರಕಾರಕ್ಕೆ ಬರಹತ್ತಿದವು. ಮೂರು ತಿಂಗಳ ವರೆಗೆ ಈ ಚಳವಳಿ ನಡೆಯಿತು. ಕೊನೆಗೆ ನಿಜಾಮ ರಾಜ್ಯದ ಆಗಿನ ಗೃಹಮಂತ್ರಿಯಾಗಿದ್ದ ನವಾಬ ಜುಲ್ಕದರ ಜಂಗನಿಗೆ ಆರ್ಯಸಮಾಜದ ಪರವಾಗಿ ನಿರ್ಣಯ ಕೊಡಬೇಕಾಯಿತು. ತಾಲೂಕದಾರನು ಕೈಕೊಂಡ ಈ ಕ್ರಮ ಅನ್ಯಾಯಪೂರ್ಣವಾಗಿದೆ. ಆತನು ತನ್ನ ಸ್ವಂತ ಖರ್ಚಿನಿಂದ ನಾಶಗೊಳಿಸಿದ ವಾಸ್ತುಗಳನ್ನು ನಿರ್ಮಿಸಿಕೊಡಬೇಕೆಂದು ಆದೇಶಿಸಿದನು. ಅದರಂತೆ ದಿ. ೨೮ ಸೆಪ್ಟೆಂಬರ ೧೯೩೫ರಂದು ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಿಕೊಡಲಾಯಿತು.

ಇಂಥ ಘಟನೆಗಳು ಔಸಾ, ಹಿಂಗೋಲಿ ಮುಂತಾದ ಕಡೆಗಳಲ್ಲಿಯೂ ನಡೆದವು. ಅವುಗಳನ್ನು ಆರ್ಯಸಮಾಜವು ಪ್ರತಿಭಟಿಸುತ್ತಲೇ ಬಂದಿತ್ತು.

೪) ನಿಜಾಮ ರಾಜ್ಯವು ಮುಸ್ಲಿಮರ ಶಿಯಾ ಪಂಥಕ್ಕೆ ಸೇರಿತ್ತು. ಶಿಯಾಗಳು ಮೊಹರಂ ತಿಂಗಳನ್ನು ಶೋಕದ ತಿಂಗಳೆಂದು ಆಚರಿಸುತ್ತಾರೆ. ಇದೇ ತಿಂಗಳಿನಲ್ಲಿ ಮುಸ್ಲಿಮರ ಮೊದಲನೆಯ ಖಲೀಫ ಹಜರತ ಅಲೀ ಹುಸೇನ ಹಾಗೂ ಅವರ ಸಂಗಡಿಗರು ಕರ್ಬಲಾ ಯುದ್ಧದಲ್ಲಿ ಹತರಾಗಿದ್ದರು. ಆ ನೆನಪಿಗಾಗಿ ಶಿಯಾ ಮುಸ್ಲಿಮರು ಮೊಹರಂ ತಿಂಗಳಿನಲ್ಲಿ ಶೋಕವನ್ನು ಆಚರಿಸುತ್ತಾರೆ. ಇಂಥ ಶೋಕಾಚರಣೆಯ ದಿನಗಳಲ್ಲಿ ಯಾರೇ ಆಗಲೀ ಮದುವೆ, ಮುಂಜಿ, ಹಬ್ಬಹರಿದಿನ, ಉತ್ಸವಗಳನ್ನು ಆಚರಿಸುವುದು ಸರಿಯೆ? ಅದಕ್ಕಾಗಿ ಇಂಥ ಆಚರಣೆಗಳನ್ನು, ಮೆರವಣಿಗೆಗಳನ್ನು, ಜಾತ್ರೆಗಳನ್ನು ಮೊಹರಂ ತಿಂಗಳಿನಲ್ಲಿ ನಿಷೇಧಿಸಲಾಗಿತ್ತು.

ಹುಮನಾಬಾದ ತಾಲೂಕಿನ ಮಾಣಿಕನಗರ ಗ್ರಾಮದ ಕಾರ್ಯದರ್ಶಿಗೆ ಜಾರಿಗೊಳಿಸಿದ ಒಂದು ಸರಕಾರಿ ಜ್ಞಾಪನಾ ಪತ್ರವನ್ನು ಇಲ್ಲಿ ಉದ್ಧರಿಸುವುದು ಸೂಕ್ತವೆನಿಸುತ್ತದೆ.

'ನಿಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಸರಕಾರಿ ಆದೇಶವನ್ನು ಉಲ್ಲಂಘಿಸಿ ಮೊಹರಂ ತಿಂಗಳಿನಲ್ಲಿ ಒಂದು ಮದುವೆಕಾರ್ಯ ನಡೆದಿದೆ ಎಂದು ಪೋಲೀಸ ಪಟೇಲರಿಂದ ತಿಳಿದು ಬಂದಿದೆ. ಇದು ನಿಜವೇ ಆಗಿದ್ದರೆ ನೀವು ಅದನ್ನು ತಡೆಯುವ ಕೆಲಸವನ್ನು ಏಕೆ ಮಾಡಲಿಲ್ಲ? ಮದುವೆ ಮಾಡಿದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ತಿಳಿಸಬೇಕು. ಅವರ ವಿರುದ್ಧ ಕ್ರಮ ಕೈಕೊಳ್ಳಬೇಕಾಗಿದೆ.' (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೭೬*).

ಈ ಆದೇಶದ ವಿರುದ್ಧ ಘನಶ್ಯಾಮಸಿಂಹ ಗುಪ್ತ ಎನ್ನುವವರು ಸರಕಾರಕ್ಕೆ ದೂರು ಸಲ್ಲಿಸಿದರು. 'ಮೊಹರಂ ತಿಂಗಳು ಮುಸ್ಲಿಮರಿಗೆ ಶೋಕಾಚರಣೆಯ ತಿಂಗಳು ಆಗಿರಬಹುದು. ಈ ತಿಂಗಳಲ್ಲಿ ಹಿಂದೂಗಳ ಮದುವೆ ಮುಂಜಿ ಮುಂತಾದವುಗಳನ್ನು ನಿರ್ಬಂಧಿಸುವುದು ಸಾಂಪ್ರದಾಯಿಕತೆಯ ಪರಾಕಾಷ್ಠೆಯಾಗಿದೆ. ಈ ತಿಂಗಳನ್ನು ಮುಸ್ಲಿಮರು ಮಾತ್ರ ಅಶುಭವೆಂದು ಭಾವಿಸುವುದರಿಂದ ಮದುವೆ, ಉತ್ಸವ ಮುಂತಾದವುಗಳ ಮೇಲೆ ಆ ಜನಾಂಗಕ್ಕೆ ನಿರ್ಬಂಧ ಹೇರಬೇಕಲ್ಲದೆ ಹಿಂದೂಗಳ ಮೇಲಲ್ಲ. ಇದು ಸಾಂಸ್ಕೃತಿಕ ಅತಿರೇಕವಾಗುತ್ತದೆ.' (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೭೬*).

ಯಾವುದೇ ಮೆರವಣಿಗೆ ಅಥವಾ ಧಾರ್ಮಿಕ ಕಾರ್ಯಗಳನ್ನು ನಡೆಸಬೇಕಾದರೂ ೧೫ ದಿನ ಮುಂಚಿತವಾಗಿ ಅನುಮತಿಗಾಗಿ ಮನವಿ ಸಲ್ಲಿಸಬೇಕಾಗುತ್ತಿತ್ತು. ಆ ೧೫ ದಿನಗಳ ಒಳಗಾಗಿ ಅನುಮತಿ ಸಿಗದಿದ್ದರೆ ಆ ಕಾರ್ಯಕ್ರಮವನ್ನು ನಿರ್ಬಂಧಿಸಲಾಗಿದೆ ಎಂದು ತಿಳಿಯಬೇಕು. ಹಳೆಯ ಕಾರ್ಯಕ್ರಮಗಳಿಗೆ ಲಿಖಿತ ರೂಪವಾಗಿ ಸೂಚನೆ ನೀಡಿದರೆ ಸಾಕಾಗಿತ್ತು. ಆದರೆ ಹಳೆಯ ಕಾರ್ಯಕ್ರಮದಲ್ಲಿಯೂ ಯಾವುದೇ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವುದಾದರೂ ಅದು ಹೊಸ ಕಾರ್ಯಕ್ರಮವೆಂದೇ ಪರಿಗಣಿಸಲ್ಪಡುತ್ತಿತ್ತು. ಉದಾಹರಣೆಗೆ ಮೆರವಣಿಗೆಯನ್ನು ಮೊದಲು ನಿರ್ಧರಿಸಿದ ಬೀದಿಗಳ ಬದಲು ಅಥವಾ ಆ ಬೀದಿಗಳ ಜೊತೆಗೆ ಇನ್ನೊಂದು ಹೊಸ ಬೀದಿಗೆ ಹೋಗಬೇಕಾದರೂ ಅದು ಹೊಸ ಕಾರ್ಯಕ್ರಮ ಎನಿಸುತ್ತಿತ್ತು. ಯಾವುದೇ ಕಾರ್ಯಕ್ರಮಕ್ಕೆ ಒಂದು ವೇಳೆ ಒಪ್ಪಿಗೆ ಕೊಟ್ಟರೂ ಅದಕ್ಕೆ ನೂರೆಂಟು ಶರ್ತುಗಳನ್ನು ಹೇರಲಾಗುತ್ತಿತ್ತು.

ಗುಲಬರ್ಗಾ ಜಿಲ್ಲೆಯ ಆಳಂದದಲ್ಲಿ ಒಮ್ಮೆ ಕೆಲವು ಮುಸ್ಲಿಂ ಮಹಿಳೆಯರು ಒಬ್ಬ ಮುಸ್ಲಿಂ ಪೀರನಲ್ಲಿಗೆ ಹರಕೆಯ ತಟ್ಟೆಗಳನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಅವರು ಹೋಗಬೇಕಾಗಿದ್ದ ಮಾರ್ಗಮಧ್ಯದಲ್ಲಿ ದಿಗಂಬರ ಜೈನಸಮಾಜದ ಯಾವುದೋ ಉತ್ಸವಕ್ಕಾಗಿ ಮಂಟಪ ಹಾಕಲಾಗಿತ್ತು. ಹರಕೆ ಹೊತ್ತುಕೊಂಡು ಹೋಗುವ ಮಹಿಳೆಯರ ಹಾದಿಯಲ್ಲಿ ಬೇರೆ ಧರ್ಮೀಯರ ಉತ್ಸವಗಳು ನಡೆಯಬಾರದೆಂದು ಆ ಮಂಟಪವನ್ನು ಕಿತ್ತಿಹಾಕಲಾಯಿತು. ಇದೇ ರೀತಿ ಇನ್ನೊಂದು ಸಂದರ್ಭದಲ್ಲಿ ಮುಸ್ಲಿಮನೊಬ್ಬನ ಹೆಣ ಸಾಗಿಸುವ ಹಾದಿಯಲ್ಲಿ ಮದುವೆಗಾಗಿ ಶಾಮಿಯಾನಾ ಹಾಕಲಾಗಿತ್ತು. ಹೆಣದ ಮೆರವಣಿಗೆಯವರು ಆ ಶಾಮಿಯಾನಾವನ್ನು ಕಿತ್ತಿಹಾಕಿದರು. ಇನ್ನೊಮ್ಮೆ ರಥೋತ್ಸವವನ್ನು ತಡೆಯುವುದಕ್ಕಾಗಿ ಮುಸ್ಲಿಂ ಮತಾಂಧರು ದೇವರ ಮೂರ್ತಿಯ ಜೊತೆಗೆ ರಥದ ಮೇಲೆ ಸೀಮೆ ಎಣ್ಣೆ ಸುರಿದು ಮೂರ್ತಿಯನ್ನೂ ರಥವನ್ನೂ ಸುಟ್ಟು ಬೂದಿ ಮಾಡಿದರು. ಇಂಥ ಅನೇಕ ಘಟನೆಗಳನ್ನು ಪಟ್ಟಿ ಮಾಡಬಹುದು.

೫) ಆರ್ಯಸಮಾಜ ಇರುವ ಕಡೆಗೆಲ್ಲ ಹವನಕುಂಡವನ್ನೊಳಗೊಂಡ ಒಂದು ಪ್ರಾರ್ಥನಾ ಮಂದಿರ, ಒಂದು ಗ್ರಂಥಭಂಡಾರ ಹಾಗೂ ಒಂದು ವ್ಯಾಯಾಮ ಶಾಲೆ ಹೆಚ್ಚೂ ಕಡಿಮೆ ಕಡ್ಡಾಯವಾಗಿ ಇದ್ದೇ ಇರುತ್ತವೆ. ಶಾರೀರಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಪ್ರತಿಯೊಬ್ಬರೂ ಪ್ರತಿದಿನ ಒಂದಿಷ್ಟಾದರೂ ವ್ಯಾಯಾಮ ಮಾಡಬೇಕು ಎಂದು ಆರೋಗ್ಯ ಶಾಸ್ತ್ರ ಹೇಳುತ್ತದೆ. ಅದರಂತೆ ಆರ್ಯಸಮಾಜದಲ್ಲಿ ಯುವಕರು ಲಾಠಿ ತಿರುವಬೇಕು, ಮರಖಂಬ

ಆಡಬೇಕು, ಕುಸ್ತಿ ಆಡಬೇಕು ಎಂಬ ರೂಢಿ ಇತ್ತು. ಈ ರೀತಿಯ ವ್ಯಾಯಾಮ ಮಾಡುವುದರಲ್ಲಿ ಅದೆಂಥ ಮತೀಯ ಪ್ರಚೋದನೆಯ ಭಾವನೆ ಅಡಗಿರುತ್ತದೆಯೋ ಗೊತ್ತಾಗುವುದಿಲ್ಲ. ಆದರೆ ನಿಜಾಮ ಸರಕಾರವು ವ್ಯಾಯಾಮಶಾಲೆಗಳನ್ನು ನಿಷೇಧಿಸಿ ಹಿಂದೂ ಯುವಕರು ವ್ಯಾಯಾಮದಿಂದ ಶಕ್ತಿ ಸಂಪಾದನೆ ಮಾಡಿ ಬಲಿಷ್ಠರಾಗಬಾರದು ಎಂದು ಬಯಸಿತ್ತು.

ಈ ವ್ಯಾಯಾಮ ಶಾಲೆಗಳ ಉದ್ದೇಶ ವ್ಯಾಯಾಮ ಮಾಡುವುದಲ್ಲ, ಸಾಂಪ್ರದಾಯಿಕ ದಂಗೆಗಳಿಗೆ ಕುಮ್ಮಕ್ಕು ಕೊಡುವುದು ಮತ್ತು ತರುಣರನ್ನು ಆತ್ಮರಕ್ಷಣೆಗಾಗಿ ತಯಾರಿಸುವುದು ಆಗಿದೆ. ಅತ್ಯಾಚಾರೀ ರಜಾಕಾರರನ್ನು ಪ್ರತಿಭಟಿಸಿ ಹಿಂದೂ ತರುಣರು ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಲು ಸಮರ್ಥರಾಗಬಾರದು ಎಂಬುದು ಸರಕಾರದ ಉದ್ದೇಶವಾಗಿತ್ತು. ಸರಕಾರ ಮತ್ತು ರಜಾಕಾರರು ಸೇರಿ ಹಿಂದೂಗಳನ್ನು ಹೇಡಿಗಳಾಗಿ ಮಾಡಿಡಲು ಪ್ರಯತ್ನಿಸುತ್ತಿದ್ದರು. ಅಪ್ಪೀತಪ್ಪೀ ಯಾವುದೇ ಅಧಿಕಾರಿಯು ವ್ಯಾಯಾಮಶಾಲೆಗೆ ಅನುಮತಿ ನೀಡಿದ್ದರೂ ಅದನ್ನು ಮುಂದೆ ಹಿಂತೆಗೆದುಕೊಳ್ಳಲಾಗುತ್ತಿತ್ತು.

ಬೀದರ ಜಿಲ್ಲೆಯ ಕಾಸಾರ ಸಿರ್ಸಿಯ ಆರ್ಯಸಮಾಜದಲ್ಲಿ ವ್ಯಾಯಾಮಶಾಲೆ ಸ್ಥಾಪಿಸಲು ಭೀಮಾಶಂಕರ ಎನ್ನುವವರಿಗೆ ಮೊದಲು ಅನುಮತಿ ನೀಡಲಾಗಿತ್ತು. ಆದರೆ ಜಿಲ್ಲಾಧಿಕಾರಿಯು ಪೊಲೀಸ ಸುಪರಿಂಟೆಂಡೆಂಟರ ಮೂಲಕ ಆದೇಶ ಕಳಿಸಿ ಮೊದಲು ನೀಡಲಾದ ಅನುಮತಿಯನ್ನು ರದ್ದುಪಡಿಸಿದನು. ಇದೇ ರೀತಿಯ ಮುಧೋಳದ ಮಾಸ್ಟರ ಗಂಗಾರಾಮ ಆರ್ಯ ಮತ್ತು ನಲಗೀರದ ಭಗವಾನರಾವ ಆರ್ಯರಿಗೆ ನೀಡಿದ ಅನುಮತಿಗಳನ್ನು ರದ್ದುಪಡಿಸಲಾಯಿತು.

೬) ರಾಜ್ಯದ ಸತ್ಸಂಗ ಮತ್ತು ಧಾರ್ಮಿಕ ಪ್ರವಚನಗಳ ಮೇಲೆ ನಿರ್ಬಂಧ ಹೇರಲಾಗಿತ್ತು. ೧೨ ಎಪ್ರೀಲ್, ೧೯೩೪ ರಂದು ಸರಕಾರವು ಒಂದು ಅಧ್ಯಾದೇಶವನ್ನು ಹೊರಡಿಸಿ ಆರ್ಯ ಸಮಾಜದ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಿತ್ತು.

"ಸಮಾಜವು ಮಂದಿರದೊಳಗೆ ಹವನ ಮಾಡುವುದಾಗಲೀ ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸುವುದಾಗಲೀ ಅಥವಾ ಯಾವುದೇ ಉಪದೇಶ ನೀಡುವುದಾಗಲೀ ಮಾಡಕೂಡದು. ಅಂಥ ಉಪದೇಶದ ಕಾರ್ಯಕ್ರಮವನ್ನು ಏರ್ಪಡಿಸುವುದಾದರೆ ಉಪದೇಶದ ಒಂದು ನಕಲು ಪ್ರತಿಯನ್ನು ಸರಕಾರಕ್ಕೆ ಸಲ್ಲಿಸಿ ಪೂರ್ವಾನುಮತಿಯನ್ನು ಪಡೆಯತಕ್ಕದ್ದು. ಹೈದರಾಬಾದದ ಸಿ.ಐ.ಡಿ. ಉಪ–ಕೋತ್ವಾಲರು ಸುಲ್ತಾನಬಾಜಾರದ ಆರ್ಯಸಮಾಜದ ಮಂತ್ರಿಗಳಿಗೆ ಅರೆಸರಕಾರಿ ಪತ್ರವೊಂದನ್ನು (೧೯೩೮) ಬರೆದು "ಪಂ. ದೇವೇಂದ್ರನಾಥರ ಸತ್ಸಂಗ ಪ್ರವಚನದ ಬಗ್ಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಹೊರಗಿನವರನ್ನು ಕರೆಸಿ ಭಾಷಣಗಳನ್ನು ಏರ್ಪಡಿಸುವುದು ಒಳ್ಳೆಯದಲ್ಲ. ತಾವು ಈ ಭಾಷಣವನ್ನು ಏರ್ಪಡಿಸಕೂಡದು ಎಂದು ಈ ಮೂಲಕ ತಿಳಿಸಲಾಗುತ್ತದೆ. ಒಂದು ವೇಳೆ ಈ ಆದೇಶವನ್ನು ಉಲ್ಲಂಘಿಸಿದರೆ, ಈ ಕಾರ್ಯಕ್ರಮದ ಬಗ್ಗೆ ನೀವೇ ಹೊಣೆಗಾರರಗುತ್ತೀರಿ."(*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ,ಪು. ೮೬*).

ಆರ್ಯಸಮಾಜದಲ್ಲಷ್ಟೇಯಲ್ಲ ಖಾಸಗಿ ಮನೆಗಳಲ್ಲಿಯೂ ಕೂಡ ಇಂಥ ಪ್ರವಚನಗಳನ್ನು ಏರ್ಪಡಿಸುವುದಕ್ಕೆ ನಿಷೇಧವಿತ್ತು. ಬಸವ ಕಲ್ಯಾಣ ತಾಲೂಕಿನ ರಾಜೇಶ್ವರ

ಗ್ರಾಮಕ್ಕೆ ದಿ. ೨ ಆಗಸ್ಟ್, ೧೯೩೩ ರಂದು ಹಳ್ಳಿಖೇಡದಿಂದ ಭಾಯೀ ಬನ್ಸಿಲಾಲ ಬಂದು ನರಸಿಂಗರಾವ ಆರ್ಯ ಎಂಬುವವರ ಮನೆಯಲ್ಲಿ ತಂಗಿದ್ದರು. ಕೂಡಲೇ ನರಸಿಂಗರಾವ ಅವರಿಗೆ ಎಚ್ಚರಿಕೆಯ ಪತ್ರ ಬಂದಿತು. 'ಬನ್ಸಿಲಾಲರು ನಿಮ್ಮ ಮನೆಯಲ್ಲಿ ವಸತಿ ಮಾಡಿದ್ದು ಅವರ ಭಾಷಣ ಏರ್ಪಡಿಸಲಾಗಿದೆ ಎಂದು ತಿಳಿದುಬಂದಿದೆ. ತಕ್ಷಣ ಅವರ ಭಾಷಣವನ್ನು ರದ್ದುಪಡಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಕೊಳ್ಳಲಾಗುವುದು' ಎಂದು ಅದರಲ್ಲಿ ಬರೆಯಲಾಗಿತ್ತು.

ನಿಜಾಮ ರಾಜ್ಯದಲ್ಲಿ ಸಾಯುವುದಕ್ಕೂ ಅನುಮತಿ ಪಡೆಯಬೇಕಾದಂಥ ಪರಿಸ್ಥಿತಿ ಇತ್ತು. ಯಾಕೆಂದರೆ ಸತ್ತ ಮೇಲೆ ಹೆಣ ಯಾವ ಯಾವ ಮಾರ್ಗವಾಗಿ ಸಾಗಿಸಲಾಗುತ್ತದೆ, ಶವಯಾತ್ರೆಯಲ್ಲಿ ಎಷ್ಟು ಜನ ಪಾಲ್ಗೊಳ್ಳುತ್ತಾರೆ, ಶವಯಾತ್ರೆಯು ಎಷ್ಟು ಗಂಟೆಗೆ ಹೊರಟು ಎಷ್ಟು ಗಂಟೆಗೆ ಮುಗಿಯುತ್ತದೆ ಎಂಬ ಎಲ್ಲ ವಿವರಣೆಗಳನ್ನು ಕೊಟ್ಟು ಅನುಮತಿ ಪಡೆಯಬೇಕಾಗುತ್ತಿತ್ತು.

ಯಾವುದೇ ರೀತಿಯ ಮೆರವಣಿಗೆಗಳು ಮಸೀದಿಯ ಮುಂದಿನಿಂದ ಸಾಗಬೇಕಾದರೆ ಬ್ಯಾಂಡಬಾಜಿಗಳನ್ನು ಬಾರಿಸುವಹಾಗಿರಲಿಲ್ಲ. ದೇವಾಲಯಗಳಲ್ಲಿ ದೂರದ ವರೆಗೆ ಕೇಳಿಸುವ ಹಾಗೆ ಗಂಟೆ, ಜಾಗಟೆಗಳನ್ನು ಬಾರಿಸುವುದು ನಿರ್ಬಂಧಿಸಲಾಗಿತ್ತು.

ಈ ರೀತಿ ನಿರ್ಬಂಧಗಳ ಮೇಲೆ ನಿರ್ಬಂಧಗಳನ್ನು ಹೇರಲಾಗುತ್ತಿತ್ತು. ಆರ್ಯಸಮಾಜದ ಹೈದರಾಬಾದಿನ ಸಾರ್ವದೇಶಿಕ ಸಭೆಯ ಮಂತ್ರಿ ಪ್ರೊ. ಸುಧಾಕರ ಜೀ ಅವರು ನಿಜಾಮನ ಪಾಲಿಟಿಕಲ್ ಮೆಂಬರ್ ಹಾಗೂ ಪೋಲೀಸ್ ಉಚ್ಚಾಧಿಕಾರಿಗಳನ್ನು ಸ್ವತಃ ಭೇಟಿಯಾಗಿ ವಸ್ತುಸ್ಥಿತಿಯನ್ನು ನಿವೇದಿಸಿಕೊಂಡರು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಸಾರ್ವದೇಶಿಕ ಸಭೆ ದಿಲ್ಲಿಯ ಪ್ರಧಾನರಾದ ನಾರಾಯಣ ಸ್ವಾಮಿಯವರು ನಿಜಾಮ ಸರಕಾರದ ವಿರುದ್ಧ ದೂರುಗಳನ್ನು ಪಟ್ಟಿ ಮಾಡಿ ಕೆಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಕೇಳಿಕೊಂಡರು. ನಾಲ್ಕೈದು ಜ್ಞಾಪನ ಪತ್ರಗಳನ್ನು ಬರೆದಾಗ ಕೊನೆಗೆ ಒಂದು ಉತ್ತರ ಬಂತು. 'ನಿಜಾಮ ರಾಜ್ಯದಲ್ಲಿ ನೀವು ನಮೂದಿಸಿರುವಂಥ ಯಾವ ಅತಿರೇಕಗಳು ನಡೆದಿಲ್ಲ. ಇಲ್ಲಿ ಎಲ್ಲ ಧರ್ಮದವರೂ ಸೋದರ ಭಾವನೆಯಿಂದ ಬಾಳುತ್ತಿದ್ದಾರೆ. ಸರಕಾರವು ಎಲ್ಲ ಧರ್ಮದವರನ್ನು ಗೌರವಿಸುತ್ತದೆ' ಎಂದು ಉತ್ತರ ಬರೆದಿದ್ದರು. ಇದು ನಿಜಾಮ ಸರಕಾರದ ಹಳೆಯ ರಾಗ ಮತ್ತು ಏಕತಾನತೆಯಾಗಿತ್ತು.

ಸಾರ್ವದೇಶಿಕ ಸಭೆಯು 'ಆರ್ಯ ರಕ್ಷಾ ಸಮಿತಿ'ಯ ಹೆಸರಿನಿಂದ ನಿಜಾಮ ಸರಕಾರಕ್ಕೆ ಸಲ್ಲಿಸಿದ ಬೇಡಿಕೆಗಳಲ್ಲಿ ಕೆಲವು ಈ ಕೆಳಗಿನಂತಿವೆ –

೧. ಧಾರ್ಮಿಕ ನಿಯಮವನ್ನು ರದ್ದುಪಡಿಸಬೇಕು.

೨. ಸುತ್ತೋಲೆ ಸಂ. ೫೩ನ್ನು ರದ್ದುಪಡಿಸಬೇಕು.

೩. ಸಾಂಪ್ರದಾಯಿಕ ದಂಗೆಗಳಿಗೆ ಸಂಬಂಧಿಸಿದ ದಾವೆಗಳ ವಿಚಾರಣೆಯನ್ನು ನಿಷ್ಪಕ್ಷವಾಗ ಕಮಿಶನ್ನಿನಿಂದ ಮಾಡಿಸಬೇಕು.

೪. ಹೊರಗಿನಿಂದ ಬರುವ ಉಪದೇಶಕರಿಗಾಗಿ ಪೂರ್ವಾನುಮತಿ ಪಡೆಯುವ ನಿರ್ಬಂಧ ಇರಕೂಡದು. ಅವರು ಕಾನೂನು ಬಾಹಿರವಾಗಿ ವರ್ತಿಸಿದರೆ ಅವರ ಮೇಲೆ ದಾವೆ ಹೂಡಬಹುದು. ಈಗಾಗಲೇ ಯಾರಯಾರ ಪ್ರವೇಶವನ್ನು ನಿರ್ಬಂಧಿಸಲಾಗಿದೆಯೋ ಅದನ್ನು ತೆರವುಗೊಳಿಸಬೇಕು.

೫. ಪುಸ್ತಕಗಳನ್ನು ಪರೀಕ್ಷಿಸದೆ ಮುಟ್ಟುಗೋಲು ಹಾಕಿಕೊಳ್ಳಬಾರದು.

೬. ಸಮಾಚಾರ ಪತ್ರಗಳ ಪ್ರಕಟಣೆಗೆ ಅನುಮತಿ ನೀಡಬೇಕು.

೭. ಹಿಂದೂ, ಮುಸಲ್ಮಾನ ಮತ್ತು ಆರ್ಯರ ಹಬ್ಬಗಳು ಒಟ್ಟಾಗಿ ಬಂದರೆ ಅವುಗಳನ್ನು ಆಚರಿಸುವ ಸ್ವಾತಂತ್ರ್ಯ ಇರಬೇಕು.

೮. ಆರ್ಯಸಮಾಜ ಮತ್ತು ಹವನಕುಂಡಗಳನ್ನು ನಿರ್ಮಿಸುವುದಕ್ಕೆ ಪೂರ್ವಾನುಮತಿಯ ಅವಶ್ಯಕತೆ ಇರಬಾರದು.

೯. ಜೈಲುಗಳಲ್ಲಿ ಕೈದಿಗಳಿಗೆ ಮುಸ್ಲಿಮರನ್ನಾಗಿ ಮತಾಂತರಗೊಳಿಸಕೂಡದು ಮತ್ತು ಅವರಲ್ಲಿ ಪ್ರಚಾರ ಕಾರ್ಯಕ್ಕೆ ಅನುಮತಿ ಇರಬೇಕು.

೧೦. ಸರಕಾರಿ ಕೆಲಸದಲ್ಲಿರುವ ಆರ್ಯ ಸಿಬ್ಬಂದಿಯ ಮೇಲೆ ಅವರು ಆರ್ಯರಾಗಿರುವ ಕಾರಣದಿಂದ ಒತ್ತಡ ಹೇರಬಾರದು.

೧೧. ಆರ್ಯರ ಮನೆಗಳ ಮೇಲೂ ಮತ್ತು ಆರ್ಯಸಮಾಜದ ಮೇಲೂ ಧ್ವಜ ಹಾರಿಸುವ ಸ್ವಾತಂತ್ರ್ಯ ಇರಬೇಕು.

೧೨. ಗುಲಬರ್ಗಾ, ನಿಜಾಮಾಬಾದ ಮತ್ತು ಹೈದರಾಬಾದಗಳಲ್ಲಿ ನಡೆದ ದಂಗೆಗಳ ಕುರಿತು ನಿಷ್ಪಕ್ಷಪಾತವಾದ ಕಮಿಶನ್ನಿನಿಂದ ತನಿಖೆ ಮಾಡಿಸಬೇಕು.

ನಿಜಾಮ ಸರಕಾರವು ಈ ಬೇಡಿಕೆಗಳನ್ನು ಕಡೆಗಣಿಸಿತು. ಆಗ ೯ ಅಕ್ಟೋಬರ್, ೧೯೩೮ರಂದು ಹೈದರಾಬಾದ ಸಮಸ್ಯೆಗಳ ಕುರಿತು ಚಿಂತನೆ ಮಾಡಲು ಮತ್ತು ಸರಿಯಾದ ಕ್ರಮ ಕೈಕೊಳ್ಳಲು ಒಂದು ಮಹಾಸಭೆಯನ್ನು ಆಯೋಜಿಸಲು ನಿರ್ಣಯಿಸಲಾಯಿತು. ಆ ನಿರ್ಣಯದಂತೆ ದಿ. ೨೫, ೨೬ ಮತ್ತು ೨೭ ಡಿಸೆಂಬರ್ ೧೯೩೮ ಈ ಮೂರು ದಿನ ಸೋಲಾಪುರದಲ್ಲಿ ಆರ್ಯ ಮಹಾ ಸಮ್ಮೇಳನ (ಆರ್ಯನ್ ಕಾನ್‌ಫರನ್ಸ್) ನಡೆಯಿತು. ಈ ಸಮ್ಮೇಳನದ ಸಂಪೂರ್ಣ ಹೊಣೆಯನ್ನು ನಾರಾಯಣ ಸ್ವಾಮಿಯವರಿಗೆ ವಹಿಸಿಕೊಡಲಾಗಿತ್ತು. ಹೈದರಾಬಾದ ಸಮಸ್ಯೆಯ ಕುರಿತು ಇಡೀ ಭಾರತ ದೇಶದ ಆರ್ಯರ ಅಭಿಪ್ರಾಯಗಳನ್ನು ಪಡೆದು ಸತ್ಯಾಗ್ರಹವನ್ನು ಸುಸೂತ್ರವಾಗಿ ನಡೆಸಬೇಕೆಂಬುದು ನಾರಾಯಣ ಸ್ವಾಮಿಗಳ ಆಶಯವಾಗಿತ್ತು. ನಿಜಾಮ ಸರಕಾರದ ಮೇಲೆ ತಮ್ಮ ಮನವಿಗಳು ಯಾವ ಪ್ರಭಾವವನ್ನೂ ಬೀರದೇ ಇರುವುದನ್ನು ಕಂಡು ಕೊನೆಯ ಅಸ್ತ್ರವಾಗಿ ಸತ್ಯಾಗ್ರಹದ ಹಾದಿ ತುಳಿಯಬೇಕಾಗಿತ್ತು.

ನಾರಾಯಣ ಸ್ವಾಮಿಗಳು ೩೦ ಅಕ್ಟೋಬರ ೧೯೩೮ಕ್ಕೇನೆ ಸೋಲಾಪುರಕ್ಕೆ ಬಂದು ವಾಸ್ತವ್ಯ ಹೂಡಿ ಸಮ್ಮೇಳನದ ತಯಾರಿಯಲ್ಲಿ ತೊಡಗಿದ್ದರು. ಅವರ ಹಗಲಿಗೆ ಹೆಗಲು ಕೊಟ್ಟು

ದುಡಿದವರೆಂದರೆ ಗುಲಬರ್ಗಾದ ವಿಖ್ಯಾತ ವಕೀಲರಾಗಿದ್ದ ಪಂ. ದತ್ತಾತ್ರಯ ಪ್ರಸಾದರು. ಇವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿಯೂ ಮಾಡಲಾಗಿತ್ತು. ಈ ಸಮ್ಮೇಳನದಲ್ಲಿ ಒಟ್ಟಿಗೆ ಇಪ್ಪತ್ತು ಪ್ರಸ್ತಾವನೆಗಳು ಪಾಸಾದವು. ಹೆಚ್ಚೂಕಡಿಮೆ ಹಿಂದೆ ಆರ್ಯ ರಕ್ಷಾ ಸಮಿತಿಯು ನಿಜಾಮನಿಗೆ ಕಳಿಸಿದ ಬೇಡಿಕೆಗಳೇ ಈ ಪ್ರಸ್ತಾವನೆಗಳಲ್ಲಿ ಇದ್ದುವು.

ಈ ಪ್ರಸ್ತಾವನೆಗಳ ಜೊತೆಗೆ ಸಮ್ಮೇಳನವು ಸರಕಾರಕ್ಕೆ ಒಂದು ಸ್ಪಷ್ಟವಾದ ಮಾತನ್ನು ತಿಳಿಸಿತು. ಈ ಸಮ್ಮೇಳನವು ಕೇವಲ ಧಾರ್ಮಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮಾತ್ರ ಸತ್ಯಾಗ್ರಹವನ್ನು ಘೋಷಿಸುತ್ತಿದೆ. ನಿಜಾಮ ಸರಕಾರದ ವಿರುದ್ಧ ರಾಜ್ಯದಲ್ಲಿ ಯಾವುದೇ ರೀತಿಯ ಚಳವಳಿಯನ್ನು ಹುಟ್ಟು ಹಾಕುವ ವಿಚಾರ ಖಂಡಿತವಾಗಿಯೂ ಈ ಸಮ್ಮೇಳನಕ್ಕೆ ಇಲ್ಲ. ಅದು ಶುದ್ಧವಾಗಿ ಧಾರ್ಮಿಕ ಅಧಿಕಾರಿಗಳನ್ನು ಪಡೆಯುವುದಕ್ಕಾಗಿ ಸತ್ಯಾಗ್ರಹದ ಮಾರ್ಗವನ್ನು ಆರಿಸಿಕೊಳ್ಳುತ್ತಿದೆ. ಅಥವಾ ಅದಕ್ಕೆ ಈ ಮಾರ್ಗವನ್ನು ಆರಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಆರ್ಯಸಮಾಜದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದ ಸಂಘಟನೆಗಳು ನೇರವಾಗಿ ಸಹಕರಿಸದಿದ್ದರೂ ಈ ಸತ್ಯಾಗ್ರಹದ ಜೊತೆಗೆ ಅವುಗಳು ಕೂಡ ತಮ್ಮ ಬೇಡಿಕೆಗಳಿಗಾಗಿ ಸ್ವತಂತ್ರವಾಗಿ ಸತ್ಯಾಗ್ರಹಗಳನ್ನು ಪ್ರಾರಂಭಿಸಿದವು. ಹಿಂದೂ ಮಹಾಸಭೆಯ ನಾಗರಿಕ ಅಧಿಕಾರಗಳಿಗಾಗಿ ನಡೆದ ಹೋರಾಟ, ಸ್ಟೇಟ ಕಾಂಗ್ರೆಸ್ಸಿನ ರಾಜನೈತಿಕ ಸುಧಾರಣೆಗಳಿಗಾಗಿ ನಡೆದ ಚಳವಳಿ ಮತ್ತು ವಿದ್ಯಾರ್ಥಿಗಳ 'ವಂದೇ ಮಾತರಂ' ಚಳವಳಿಗಳು ಈ ಆರ್ಯ ಸತ್ಯಾಗ್ರಹಕ್ಕೆ ಪೂರಕವಾಗಿದ್ದವು. ಈ ಎಲ್ಲ ಚಳವಳಿಗಳ ಸಂಯುಕ್ತ ಬಲದಿಂದ ನಿಜಾಮ ಸರಕಾರದ ಅಡಿಪಾಯ ಅಲ್ಲಾಡಹತ್ತಿತು.

ದೇಶದ ಮೂಲೆ ಮೂಲೆಗಳಿಂದ ಹಿಂದೂ, ಜೈನ, ಬೌದ್ಧ, ಸಿಕ್ಖ ಮುಂತಾದ ಎಲ್ಲ ಜನಾಂಗದ ಪ್ರತಿನಿಧಿಗಳು ಸೋಲಾಪುರ ಕೇಂದ್ರದಲ್ಲಿ ಬಂದು ಸೇರುತ್ತಿದ್ದರು. ಅಲ್ಲಿಂದ ಒಂದರ ಹಿಂದೆ ಒಂದರಂತೆ ಕೆಲ ದಿನಗಳ ಅಂತರದಲ್ಲಿ ಸತ್ಯಾಗ್ರಹಿಗಳ ತಂಡಗಳು ಗುಲಬರ್ಗಾಕ್ಕೆ ಬರುತ್ತಿದ್ದವು. ಅವು ಬರುತ್ತಿದ್ದಂತೆ ಗುಲಬರ್ಗಾ ರೈಲು ನಿಲ್ದಾಣದಲ್ಲಿ ಆ ಸತ್ಯಾಗ್ರಹಿಗಳನ್ನು ಬಂಧಿಸಲಾಗುತ್ತಿತ್ತು. ಅವರ ಮೇಲೆ ದಾವೆ ಹೂಡಿ ಒಂದೆರಡು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತಿತ್ತು. ಒಂದೊಂದು ತಂಡದಲ್ಲಿ ನೂರರಿಂದ ಇನ್ನೂರು, ಮುನ್ನೂರು ಸತ್ಯಾಗ್ರಹಿಗಳು ಇರುತ್ತಿದ್ದರು. ಕೊಪ್ಪಳದಲ್ಲಿ ಸತ್ಯಾಗ್ರಹಿಗಳ ಮೇಲೆ ಆಕ್ರಮಣ ಮಾಡಲಾಯಿತು. ಆಳಂದದಲ್ಲಿ ರಾಮಚಂದ್ರ ಬುಬುಲೆಯವರ ಮೇಲೆ ಕೈಮಾಡಲಾಯಿತು.

ಈ ಹೋರಾಟದಿಂದ ಆ ಕಡೆ ಮುಸ್ಲಿಂ ಸಂಘಟನೆಗಳಾಗಲೀ, ಅಥವಾ ಈ ಕಡೆ ಸತ್ಯಾಗ್ರಹಿಗಳಾಗಲೀ ಹಿಂದೆ ಸರಿಯಲು ಸಿದ್ಧರಿರಲಿಲ್ಲ. ಇದರಿಂದಾಗಿ ನಿಜಾಮ ಸರಕಾರವು ರಾಜ್ಯದ ಒಳಗೂ ಹೊರಗೂ ತುಂಬ ಟೀಕೆಗೆ ಗುರಿಯಾಗಬೇಕಾಯಿತು. ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿಯೂ ಹೈದರಾಬಾದಿನ ಸಮಸ್ಯೆ ಕುರಿತು ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಅಷ್ಟೊತ್ತಿಗೆ ಸತ್ಯಾಗ್ರಹಿಗಳ ನಾಲ್ಕು ತಂಡಗಳು ನಿಜಾಮ ರಾಜ್ಯದೊಳಕ್ಕೆ ಬಂದು ಬಂಧನಕ್ಕೊಳಗಾಗಿದ್ದವು.

ಇದನ್ನು ಸುಮ್ಮನೆ ಬಿಟ್ಟರೆ ನಿಜಾಮ ಸರಕಾರಕ್ಕೆ ಇನ್ನೊಂದಿಷ್ಟು ಕೆಟ್ಟ ಹೆಸರು ಬರುತ್ತದೆ ಎಂದು ತಿಳಿದು ಹೈದರಾಬಾದ ರಾಜ್ಯದ ಪೋಲೀಸ ಹಾಗೂ ಜೈಲು ವಿಭಾಗದ ಮಹಾನಿರ್ದೇಶಕರಾದ

ಎಸ್. ಟಿ. ಹಾಲೆನ್ಸ್, ಗುಲಬರ್ಗಾ ಡಿವಿಜನ್ನಿನ ಕಮಿಶನರರಾದ ನವ್ವಾಬ ಘೋಸಯಾರ ಜಂಗ ಮತ್ತು ಗುಲಬರ್ಗಾ ಜಿಲ್ಲಾ ಕಲೆಕ್ಟರ ರಿಜವಿ ಹಾಗೂ ಜೈಲ ಸುಪರಿಂಟೆಂಡೆಂಟ ಮುಂತಾದ ಅಧಿಕಾರಿಗಳು ಗುಲಬರ್ಗಾ ಜೈಲಿನಲ್ಲಿ ಸತ್ಯಾಗ್ರಹದ ನಾಯಕರುಗಳಾದ ಮಹಾತ್ಮಾ ನಾರಾಯಣ ಸ್ವಾಮಿ, ಕುಂವರ ಚಾಂದಕರಣ ಶಾರದಾ, ಲಾಲಾ ಖುಶಹಾಲ ಚಂದಜೀ ಹಾಗೂ ಸ್ವಾಮಿ ವಿವೇಕಾನಂದ ಜೀಯವರನ್ನು ದಿ. ೨೭ ಮಾರ್ಚದಂದು ಭೇಟಿಯಾದರು. ಆರ್ಯ ನಾಯಕರೊಂದಿಗೆ ಚರ್ಚೆ ಮಾಡಿ 'ರಾಜ್ಯದಲ್ಲಿ ಧಾರ್ಮಿಕ ಆಚರಣೆಗಳ ಮೇಲೆ ಹೇರಲಾಗಿರುವ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವುದಾಗಿ, ಮಾತು ಕೊಟ್ಟರು. ಅವರ ಮಾತಿಗೆ ಮರ್ಯಾದೆ ಕೊಟ್ಟು ಸತ್ಯಾಗ್ರಹವನ್ನು ನಿಲ್ಲಿಸಲಾಯಿತು.

ಅದರಂತೆ ೪ ಏಪ್ರಿಲ್, ೧೯೩೯ಕ್ಕೆ ಗುಲಬರ್ಗಾ ಜೈಲಿನ ಅಧಿಕಾರಿಯು ಈ ಮಾತುಕತೆಯನ್ನು ದೃಢೀಕರಿಸುತ್ತ ಮುಂದಿನ ಮಾತುಕತೆಗಾಗಿ ಸೋಲಾಪುರದಿಂದ ಇತರ ಆರ್ಯ ನಾಯಕರನ್ನು ಕರೆಸಿಕೊಳ್ಳಬಹುದೆಂದು ಪತ್ರ ಬರೆದು ತಿಳಿಸಿದನು. ಈ ಮಾತುಕತೆಗಳಿಗಾಗಿ ದಿ. ೮ ಏಪ್ರಿಲ್‌ರಂದು ಸತ್ಯಾಗ್ರಹಿಗಳು ಸೋಲಾಪುರದಿಂದ ಗುಲಬರ್ಗಾಕ್ಕೆ ಹೊರಡುತ್ತಿರಬೇಕಾದರೆ ನಿಜಾಮ ಸರಕಾರವು ಪತ್ರಿಕೆಗಳಲ್ಲಿ ಒಂದು ಹೇಳಿಕೆಯನ್ನು ಪ್ರಕಟಿಸಿತು. 'ನಿಜಾಮ ಸರಕಾರವು ಆರ್ಯ ಪ್ರತಿನಿಧಿಗಳನ್ನು ಮಾತುಕತೆಗಾಗಿ ಕರೆದಿದೆ ಎಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ಆ ಸುದ್ದಿ ಶುದ್ಧ ಸುಳ್ಳು.'

ಆದರೂ ಆರ್ಯ ಪ್ರತಿನಿಧಿಗಳು ಗುಲಬರ್ಗಾಕ್ಕೆ ಬಂದರು. ಬಂದು ಮಿ. ಹಾಲಿನ್ಸ್ ಮತ್ತು ಜಿಲ್ಲಾ ಕಲೆಕ್ಟರರನ್ನು ಭೇಟಿಯಾದರು. ಸರಕಾರವು ತನ್ನ ಮಾತಿಗೆ ಭಂಗ ತಂದಿದೆ ಎಂದು ಅವರಿಗೆ ತಿಳಿಸಲಾಯಿತು. ಈ ರೀತಿ ಸರಕಾರವು ತನ್ನ ಮಾತು ಬದಲಾಯಿಸುವುದಕ್ಕೆ ಉಗ್ರವಾದಿ ಮುಸ್ಲಿಂ ಸಂಘಟನೆಗಳೇ ಕಾರಣ ಎಂದು ತಿಳಿದುಬಂತು.

ಮತ್ತೆ ಸತ್ಯಾಗ್ರಹಿಗಳ ತಂಡಗಳ ಸರದಿಗಳು ಪ್ರಾರಂಭವಾದವು. ೮ನೆಯ ತಂಡಕ್ಕೆ ಬ್ಯಾರಿಸ್ಟರ್ ವಿನಾಯಕರಾವ್ ವಿದ್ಯಾಲಂಕಾರರನ್ನು ನಾಯಕರನ್ನಾಗಿ ಆರಿಸಲಾಯಿತು. ಇವರು ಹೈದರಾಬಾದ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಶ್ರೀ ಕೇಶವರಾವ ಕೋರಟಕರ ಅವರ ಮಗನಾಗಿದ್ದರು. ಶಿಕ್ಷಣ ಮುಗಿದ ತಕ್ಷಣ ಅವರು ಆರ್ಯಸಮಾಜದ ಸಂಪರ್ಕ ಹೊಂದಿ ಇಡೀ ಜೀವಮಾನವನ್ನು ಸಮಾಜಸೇವೆಗಾಗಿಯೇ ಮುಡಿಪಾಗಿಟ್ಟಿದ್ದರು.

ವಿನಾಯಕರಾಯರು ಸತ್ಯಾಗ್ರಹ ತಂಡದ ನಾಯಕರೆಂದು ತಿಳಿದ ತಕ್ಷಣ ಅವರ ತಂಡದಲ್ಲಿ ಸೇರಲು ಸುಮಾರು ಮೂರು ಸಾವಿರ ಜನರು ಸೋಲಾಪುರ ಕೇಂದ್ರದಲ್ಲಿ ಬಂದು ಸೇರಿದರು. ಈ ವರೆಗೆ ನಡೆದ ಸತ್ಯಾಗ್ರಹಗಳಲ್ಲಿ ರಾಜ್ಯದ ಹೊರಗಿನವರೇ ತಂಡದ ನಾಯಕರಾಗಿರುತ್ತಿದ್ದರು. ಹೀಗಾಗಿ ರಾಜ್ಯದ ಒಳಗಿನ ನಾಯಕರು ಸತ್ಯಾಗ್ರಹದಿಂದ ದೂರವೇ ಉಳಿದಿದ್ದಾರೆ ಎಂದು ಸರಕಾರ ಭ್ರಮಿಸಿತ್ತು. ವಿನಾಯಕರಾಯರು ತಂಡದ ನೇತೃತ್ವವನ್ನು ವಹಿಸಿಕೊಂಡ ಮೇಲೆ ಸರಕಾರದ ಭ್ರಮೆ ನಿರಸನವಾಯಿತು. ವಿನಾಯಕರಾಯರ ಹಿಂದೆ ತಯಾರಾಗಿ ನಿಂತ ಜನಬಲವನ್ನು ಕಂಡು ಸರಕಾರದ ಗುಂಡಿಗೆ ಹೊಡೆದುಕೊಳ್ಳಹತ್ತಿತು.

'ಮಹಕಮ್‌-ಏ-ಉಮೂರ್‌-ಏ-ಮಜಹಬೀಟ (ಧಾರ್ಮಿಕ ಇಲಾಖೆ)ಯು 'ವಕ್ತ' ಎಂಬ ತನ್ನ ಪತ್ರಿಕೆಯ ೭ನೇ ಜುಲೈ ೧೯೩೯ರ ಸಂಚಿಕೆಯ ಅಗ್ರ ಲೇಖನದ ಮೂಲಕ ಸರಕಾರದ ಘೋಷಣೆಯನ್ನು ಪ್ರಕಟಿಸಿತು. ೨೨ ಜುಲೈಗೆ ಮೊದಲು ನಿಜಾಮ ಸರಕಾರವು ಆರ್ಯಸಮಾಜದ ಎಲ್ಲ ಬೇಡಿಕೆಗಳನ್ನು ಈಡೇರಿಸುವುದು ಎಂದು ತಿಳಿಸಲಾಯಿತು. ಅದರಂತೆ ೧೯ ಜುಲೈ ೧೯೩೯ರಂದು ಸರಕಾರವು ಆರ್ಯಸಮಾಜದ ಸತ್ಯಾಗ್ರಹದ ಎದುರಿಗೆ ತಲೆಬಾಗಿಸಿತು.

ಹೈದರಾಬಾದ ರಾಜ್ಯದ ವಿಮೋಚನಾ ಚಳವಳಿಯಲ್ಲಿ ೧೯೩೮-೩೯ನೆಯ ವರ್ಷಗಳು ತುಂಬ ಮಹತ್ವಪೂರ್ಣವಾದವುಗಳಾಗಿವೆ. ಇದೇ ಅವಧಿಯಲ್ಲಿ ಹೆಚ್ಚಿನ ಪ್ರತಿಭಟನೆಗಳು, ಸತ್ಯಾಗ್ರಹಗಳು, ಬಂಧನಗಳು, ರಾಜಕೀಯ ಚದುರಂಗದ ಆಟಗಳು ನಡೆದವು. ಈ ಅವಧಿಯಲ್ಲಿ ನಿಜಾಮನ ಕೃಪಾಪೋಷಿತವಾಗಿ ಬೆಳೆದ ಇಸ್ಲಾಮಿನ ಧರ್ಮಾಂಧತೆಯು ಮುಂದಿನ ವರ್ಷಗಳ ಮಾರಣ ಹೋಮಕ್ಕೆ ಕಾರಣವಾಯಿತು. ಇದೇ ಕಾಲದಲ್ಲಿ ನಿಜಾಮನು ತನ್ನ ಐಡೆಂಟಿಟಿಯನ್ನು ಕಳೆದುಕೊಂಡು ಉಗ್ರವಾದಿ ಮುಸ್ಲಿಂ ಸಂಘಟನೆಗಳ ಕೈಗೊಂಬೆಯಾಗಿ ಈ ಭಸ್ಮಾಸುರರ ಹಿಡಿತದಿಂದ ತಾನು ಬದುಕಿ ಉಳಿದರೆ ಸಾಕು ಎಂಬಂಥ ಶೋಚನೀಯ ಸ್ಥಿತಿಗೆ ಬಂದಿದ್ದನು. ಆತ ಜಾತ್ಯಾಂಧತೆಯ ನರಕದ ಹಾದಿಯಲ್ಲಿ ಎಷ್ಟೊಂದು ಮುಂದೆ ಸಾಗಿಬಂದಿದ್ದನೆಂದರೆ ಹಿಂತಿರುಗಿ ಹೋಗುವುದಂತೂ ದೂರೇ ಉಳಿಯಿತು, ಹಿಂತಿರುಗಿ ನೋಡಲು ಕೂಡ ಸಾಧ್ಯವಾಗದಂಥ ಇಕ್ಕಟ್ಟಿಗೆ ಸಿಲುಕಿಕೊಂಡಿದ್ದನು. ಮನುಷ್ಯನು ಒಮ್ಮೆ ಸರ್ಪಬಂಧದಲ್ಲಿ ಸಿಲುಕಿದನೆಂದರೆ ಅದರಿಂದ ಬದುಕಿ ಹೊರಬರಲು ಸಾಧ್ಯವಾಗುವುದಿಲ್ಲವಂತೆ. ನಿಜಾಮನ ಸ್ಥಿತಿಯೂ ಅದೇ ಆಗಿತ್ತು.

****

ರಾಕ್ಷಸರಿಂದ ಮಾರಣ ಹೋಮ

ಹೈದರಾಬಾದ ವಿಮೋಚನಾ ಚಳವಳಿಯ ಕುರಿತು ಹಿಂದಿನ ಅಧ್ಯಾಯಗಳಲ್ಲಿ ನಿರೂಪಿಸಿದ ವಿಚಾರಗಳು ಎಷ್ಟರಮಟ್ಟಿಗೆ ಓದುಗರ ಹೃದಯಗಳನ್ನು ಝಲ್ಲೆನಿಸುತ್ತವೆಯೋ ತಿಳಿಯದು. ನಿಜಾಮ ರಾಜ್ಯದಲ್ಲಿ ಸ್ವಾತಂತ್ರ್ಯದ ನಿಕಟ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯದ ನಂತರದಲ್ಲಿ ಉದ್ಭವಿಸಿದ ಪರಿಸ್ಥಿತಿಯ ಕುರಿತು, ನಿಜಾಮ ಹಾಗೂ ಮತಾಂಧ ಮುಸ್ಲಿಮ ಸಂಘಟನೆಗಳ ದಾನವೀ ಪ್ರವೃತ್ತಿಯ ಬಗ್ಗೆ ವಿವರಿಸಲು ಪ್ರಯತ್ನಿಸಲಾಗಿದೆ. ಅಂಥ ಪರಿಸ್ಥಿತಿಯಲ್ಲಿ ನಿಜಾಮ ರಾಜ್ಯದಲ್ಲಿ ನಡೆದ ಮಾರಣ ಹೋಮದ ಕತೆ ಬಹುಶಃ ಮುಂಬರಲಿರುವ ಪೀಳಿಗೆಗೆ ಒಂದು ಪೌರಾಣಿಕ ಕಲ್ಪನೆಯಾಗಿ ಕಾಣಿಸುತ್ತದೆಯೋ ಎಂಬ ಅನುಮಾನಕ್ಕೆ ಎಡೆಮಾಡಿಕೊಡುವಂತಿದೆ. ಯಾಕೆಂದರೆ ಪ್ರಪಂಚದ ಯಾವ ಧರ್ಮಗ್ರಂಥವೂ ಕೋಮು ಭಾವನೆಯನ್ನು ಪ್ರಚೋದಿಸುವಂಥ ಉಪದೇಶ ಕೊಡುವುದಿಲ್ಲ. ಇಸ್ಲಾಮಿನ ಪ್ರವರ್ತಕರಾದ ಸ್ವತಃ ಪ್ರವಾದಿವರ್ಯರ ೨೫೭೬ನೆಯ ವಚನ (ಹದೀಸ) ಹೀಗೆ ಹೇಳುತ್ತದೆ –

> **'ಕೋಮು ಪಕ್ಷಪಾತದ ಕಡೆಗೆ ಕರೆ ನೀಡುವವನು ನಮ್ಮವನಲ್ಲ. ಕೋಮು ಭಾವನೆಯೊಂದಿಗೆ ಯುದ್ಧಮಾಡುವವನೂ ನಮ್ಮವನಲ್ಲ. ಕೋಮು ಪಕ್ಷಪಾತದೊಂದಿಗೆ ಸಾಯುವವನೂ ನಮ್ಮವನಲ್ಲ.'**

ಈ ವಚನಕ್ಕೆ 'ದಾರಿದೀಪ' ಎಂಬ ಗ್ರಂಥದಲ್ಲಿ ಈ ಮುಂದಿನಂತೆ ಟಿಪ್ಪಣಿ ಕೊಡಲಾಗಿದೆ – 'ಕೋಮು ಪಕ್ಷಪಾತವೆಂದರೆ 'ಸತ್ಯದಲ್ಲಿದ್ದರೂ, ಅಸತ್ಯದಲ್ಲಿದ್ದರೂ ನನ್ನ ಜನಾಂಗ' ಎಂಬ ಭಾವನೆ. ಇದು ಅಜ್ಞಾನಜನ್ಯ ಪಕ್ಷಪಾತವಾಗಿದೆ. ಈ ಸಿದ್ಧಾಂತದ ಕಡೆಗೆ ಜನರನ್ನು ಆಹ್ವಾನಿಸುವುದು, ಈ ಭಾವನೆಯೊಂದಿಗೆ ಯುದ್ಧಮಾಡುವುದು, ಇದೇ ಮನೋಭಾವವನ್ನು ಹೊತ್ತುಕೊಂಡು ಮರಣ ಹೊಂದುವುದು ಮುಸ್ಲಿಮರಿಗೆ ಹೇಳಿಸಿದ್ದಲ್ಲ. ಅಂತಹ ವ್ಯಕ್ತಿಗಳೊಂದಿಗೆ ತನ್ನ ಸಂಬಂಧವೇ ಇಲ್ಲವೆಂದು ಪ್ರವಾದಿ (ಸ) ಹೇಳಿದ್ದಾರೆ.'

ಮೇಲಿನ ವಚನ ಹಾಗೂ ಅದರ ಟಿಪ್ಪಣಿಯ ಮಾತುಗಳು ಇಸ್ಲಾಮದ ರಾಜಕೀಯ ಚರಿತ್ರೆಯಲ್ಲಿ ವಿಡಂಬನಾತ್ಮಕವಾಗಿ ಕಾಣುತ್ತವೆ. ಆ ಕುರಿತಾದ ಚರ್ಚೆ ಇಲ್ಲಿ ಅಪ್ರಸ್ತುತ. ಆದರೆ ನಿಜಾಮ ರಾಜ್ಯದಲ್ಲಿ ಮುಸ್ಲಿಂ ಮತಾಂಧರು ಹಾಗೂ ರಜಾಕಾರರು ಎಂಥ ಧರ್ಮವಿರೋಧಿಯಾದ ಸೈತಾನನ ಕೆಲಸ ಮಾಡಿದರು ಎಂಬುದನ್ನು ತೋರಿಸುವುದಕ್ಕಾಗಿ ಇಲ್ಲಿ ಈ ವಚನವನ್ನು ಉಲ್ಲೇಖಿಸಲಾಗಿದೆ. ಕ್ರೂರ ಪ್ರಾಣಿಗಳೂ ಮಾಡದಂಥ ಹತ್ಯಾಕಾಂಡವನ್ನು ನಿಜಾಮ ರಾಜ್ಯದ ಚರಿತ್ರೆಯಲ್ಲಿ ಈ ಮತಾಂಧರು ದಾಖಲಿಸಿದ್ದಾರೆ. ಲೆಕ್ಕವಿಲ್ಲದಷ್ಟು ಕೊಲೆಗಳು, ಅತ್ಯಾಚಾರಗಳು, ಬಲಾತ್ಕಾರಗಳು, ದುಂಡಾವರ್ತಿಗಳು ಇಡೀ ರಾಜ್ಯದಲ್ಲಿಯೇ ನಡೆದರೂ ಸಾಧ್ಯವಾದ ಮಟ್ಟಿಗೆ

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ನಡೆದ ಘಟನೆಗಳನ್ನೇ ಇಲ್ಲಿ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಉಲ್ಲೇಖಿಸಲಾಗಿದೆ. ಇಲ್ಲಿ ಸಂಗ್ರಹಿಸಿರುವ ಘಟನೆಗಳು ಸಮಗ್ರವಾಗಿವೆ ಎಂದು ತಿಳಿಯಬಾರದು. ಕೆಲವನ್ನು ಮಾತ್ರ ಇಲ್ಲಿ ನಮೂದಿಸಲಾಗುತ್ತಿದೆ.

'ಎಮ್ಮೆ, ಆಕಳು ಹಾಲು ಕೊಡದಿದ್ದರೆ ಇಲ್ಲ. ತಕ್ಷಣ ನಿಮ್ಮ ಹೆಂಡಂದಿರ ಮೊಲೆಹಾಲು ತೆಗೆದುಕೊಂಡು ಬನ್ನಿರಿ. ನಮಗೆ ಚಹ ಕುಡಿಯಬೇಕಾಗಿದೆ.'

ಒಂದು ಹಳ್ಳಿಗೆ ಹೋದಾಗ ಕಾಸಿಂ ರಜವಿಯ ತಮ್ಮನಾದ ತಯ್ಯಬ, ಭೋತಕೂರದ ಗಡ್ಡದ ಅಮೀನ, ಸಿಕಂದರಾಬಾದದ ಮಹಮ್ಮದ ಹಾಜಿ ಎಂಬವರು ನಡುಮಧ್ಯಾಹ್ನದಲ್ಲಿ ಹಾಲು ಇಲ್ಲ ಎಂದು ಊರ ಗೌಡನು ಹೇಳಿದಾಗ ಉನ್ಮತ್ತರಾಗಿ ಈ ಮೇಲಿನಂತೆ ಆದೇಶ ನೀಡಿದ್ದರು.

ಬೀದರಿನಲ್ಲಿ ಗಂಜಿಗೆ ಬೆಂಕಿ

೧೯೩೮ರಲ್ಲಿ ಬೀದರಿನಲ್ಲಿ ನಿಜಾಮ ಕರ್ನಾಟಕ ಪರಿಷತ್ತಿನ ಎರಡನೆಯ ಸಮ್ಮೇಳನ ನಡೆಯಬೇಕಾಗಿತ್ತು. ಆದರೆ ಇಲ್ಲಿಯ ನಾಯಕರು ಸ್ಥಳೀಯ ಅನಾನುಕೂಲ ಪರಿಸ್ಥಿತಿಗಳಿಂದಾಗಿ ಸಮ್ಮೇಳನವನ್ನು ನಡೆಸಲು ಹಿಂದೇಟು ಹಾಕಿದ್ದರು. ಆ ವರ್ಷ ತಪ್ಪಿಹೋದ ಸಮ್ಮೇಳನ ಮುಂದೆ ೧೯೪೦ರಲ್ಲಿ ಆಯೋಜಿಸಲಾಯಿತು. ಆದರೆ ಅದೂ ಕೂಡ ಸುಸೂತ್ರವಾಗಿ ನಡೆಯಲಿಲ್ಲ. ಸಮ್ಮೇಳನಕ್ಕೆ ಅನೇಕ ವ್ಯಾಪಾರಿಗಳು ಆರ್ಥಿಕ ನೆರವು ನೀಡಿದ್ದರು. ಇಂಥ ಸಮ್ಮೇಳನ ನಡೆಸಕೂಡದೆಂದು ಮತಾಂಧ ಮುಸ್ಲಿಮರು ಬೆದರಿಕೆ ನೀಡಿದ್ದರಾದರೂ ಸಮ್ಮೇಳನ ಏರ್ಪಟ್ಟಿತ್ತು. ಬಹಳೇ ಹುರುಪಿನಿಂದ ಸಮ್ಮೇಳನ ನಡೆದಿತ್ತು. ಜನರೆಲ್ಲ ಸಮ್ಮೇಳನದ ಕಾರ್ಯಕ್ರಮಗಳಲ್ಲಿ ಮೈಮರೆತಿರುವಾಗ ಆ ಕಡೆ ನಗರದ ಉಸ್ಮಾನ ಗಂಜನಲ್ಲಿ ಅಂಗಡಿಗಳಿಗೂ, ವ್ಯಾಪಾರಿ ಮಳಿಗೆಗಳಿಗೂ, ಅಡತಿ ಅಂಗಡಿಗಳಿಗೂ ಬೆಂಕಿ ಇಡಲಾಗಿತ್ತು. ನೋಡನೋಡುತ್ತಿದ್ದಂತೆ ಇಡೀ ಗಂಜ ಪ್ರದೇಶದಲ್ಲಿ ಬೆಂಕಿ ವ್ಯಾಪಿಸಿಕೊಂಡು ಧೋ ಧೋ ಎಂದು ಜ್ವಾಲೆಗಳು ಆಕಾಶದೆತ್ತರಕ್ಕೆ ಏರಿದ್ದವು. ಬೆಂಕಿಯನ್ನು ಆರಿಸುವ ಎಲ್ಲ ಪ್ರಯತ್ನಗಳು ವಿಫಲವಾದವು. ಪರಿಸ್ಥಿತಿಯು ನಿಯಂತ್ರಣಕ್ಕೆ ಬರುವಷ್ಟರಲ್ಲಿ ಇಡೀ ಗಂಜ ಪ್ರದೇಶ ಸುಟ್ಟು ಬೂದಿಯಾಗಿತ್ತು.

ವಿಷ ಕೊಟ್ಟು ಜೈಲಿನಲ್ಲಿ ಭಾಯೀ ಶ್ಯಾಮಲಾಲರ ಕೊಲೆ

ಭಾಯೀ ಶ್ಯಾಮಲಾಲ ಮತ್ತು ಭಾಯೀ ಬನ್ಸಿಲಾಲ ಎಂಬ ಸಹೋದರರು ಈಗಿನ ಬೀದರ ಜಿಲ್ಲೆಯ ಹಳ್ಳಿಖೇಡ (ಬಿ) ಗ್ರಾಮದ ಆರ್ಯ ಸಮಾಜೀಗಳಾಗಿದ್ದರು. ಶ್ಯಾಮಲಾಲರು ತಮ್ಮ ವಕೀಲಿ ವೃತ್ತಿಗಾಗಿ ಆಗ ಬೀದರ ಜಿಲ್ಲೆಯ ಒಂದು ತಾಲೂಕಾ ಪಟ್ಟಣವಾದ ಉದಗೀರದಲ್ಲಿ ವಾಸವಾಗಿದ್ದರು. ಇಬ್ಬರೂ ಸಹೋದರರು ಸಕ್ರಿಯವಾಗಿ ವಿಮೋಚನಾ ಚಳವಳಿಯಲ್ಲಿ ದುಡಿಯುತ್ತಿದ್ದರು. ಶ್ಯಾಮಲಾಲನ ಮೇಲೆ ಮೊದಲಿನಿಂದಲೂ ರಜಾಕಾರರು ಒಂದು ಕಣ್ಣು ಇಟ್ಟುಕೊಂಡೇ ಇದ್ದರು. ೧೯೩೮ರ ದಸರಾ ಹಬ್ಬದ ದಿನ ಬನ್ನಿಪೂಜೆಗೆ ಹಿಂದೂಗಳ ಮೆರವಣಿಗೆ ಊರು ದಾಟಿ ಹೊರಗೆ ನಡೆದಿತ್ತು. ಯಾರೋ ಕಿಡಿಗೇಡಿ ಮುಸ್ಲಿಮನೊಬ್ಬನು 'ಊರಲ್ಲಿ ಹಿಂದೂ ಹೆಣ್ಣುಮಕ್ಕಳ ಮೇಲೆ ಬಲಾತ್ಕಾರ ನಡೆದಿದೆ' ಎಂದು ಸುಳ್ಳುಸುದ್ದಿ ಹಬ್ಬಿಸಿದ. ಸುದ್ದಿ ತಿಳಿದದ್ದೇ ತಡ

ಮೆರವಣಿಗೆಯಲ್ಲಿ ಕೋಲಾಹಲ ಪ್ರಾರಂಭವಾಯಿತು. ಸೀಮೋಲ್ಲಂಘನಕ್ಕೆ ಹೊರಟಿದ್ದ ಹಿಂದೂಗಳು ಆವೇಶಕ್ಕೆ ಒಳಗಾಗಿ ಊರಿನ ಕಡೆಗೆ ಧಾವಿಸಿದರು. ನಿಜಪರಿಸ್ಥಿತಿ ಏನು ಎಂದು ತಿಳಿಯುವ ಮೊದಲೇ ಕಾದಾಟಕ್ಕೆ ಮೊದಲಾಯಿತು. ಒಂದೆರಡು ಹೆಣ ಬಿದ್ದವು. ಈ ಘಟನೆಯ ಹಿಂದೆ ಭಾಯೀ ಶ್ಯಾಮಲಾಲರ ಕೈವಾಡವಿದೆ ಎಂದು ರಜಾಕಾರರು ಆಪಾದಿಸಿದರು. ಶ್ಯಾಮಲಾಲರನ್ನು ಬಂಧಿಸಿ ದಾವೆ ಹೂಡಲಾಯಿತು. ಈ ಎಲ್ಲ ಷಡ್ಯಂತ್ರದ ಹಿಂದೆ ಮತಾಂಧರಾದ ಸೈಯದ ಬಾದಶಾಹ ಕಾದರಿ ಮತ್ತು ವಲೀವುದ್ದೀನ ಎನ್ನುವವರ ಕೈವಾಡವಿತ್ತು.

ಯಾವುದೋ ಒಂದು ಆರೋಪದ ಅಡಿಯಲ್ಲಿ ಶ್ಯಾಮಲಾಲರನ್ನು ಬಂಧಿಸಬೇಕಾಗಿತ್ತು. ಈ ಒಂದು ಘಟನೆಯಲ್ಲಿ ಅವರ ಮೇಲೆ ಸುಳ್ಳು ಆರೋಪ ಹೊರಿಸಲಾಯಿತು. ಸುಳ್ಳು ಸಾಕ್ಷಿಗಳನ್ನು ಹುಟ್ಟುಹಾಕಿ ಅವರನ್ನು ಅಪರಾಧಿಯೆಂದು ಸಾಬೀತು ಪಡಿಸಲಾಯಿತು. ಬೀದರ ಜೈಲಿನಲ್ಲಿ ಅವರನ್ನು ಇಡಲಾಯಿತು. ಆಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಬರೀ ಹಾಲು ಹಣ್ಣು ಮಾತ್ರ ಕೊಡಬೇಕೆಂದು ಡಾಕ್ಟರರು ಹೇಳಿದ್ದರು. ಆದರೂ ಅಲ್ಲಿಯ ಜೇಲರನಾದ ಅಬು ಅಯ್ಯೂಬನು ಇತರ ಸಾಮಾನ್ಯ ಕೈದಿಗಳಿಗೆ ಕೊಡುತ್ತಿದ್ದ ಹಸಿಬಿಸಿ ಬೆಂದ ರೊಟ್ಟಿಯನ್ನೇ ಕೊಡುತ್ತಿದ್ದನು. ಹೀಗಾಗಿ ಶ್ಯಾಮಲಾಲರ ಆರೋಗ್ಯ ಇನ್ನೊಂದಿಷ್ಟು ಹದಗೆಡುತ್ತ ಹೋಯಿತು. ಶ್ಯಾಮಲಾಲರು ನಿಜಾಮನಿಗೆ ಒಂದು ತಲೆನೋವಾಗಿದ್ದಾರೆಂಬುದು ಜೇಲರಿಗೆ ಗೊತ್ತಿತ್ತು. ಆದ್ದರಿಂದ ಜೈಲಿನಲ್ಲಿಯೇ ಅವರನ್ನು ಮುಗಿಸಿಬಿಡಬೇಕೆಂದು ಯೋಚಿಸಿ ಒಂದು ದಿನ ಔಷಧಿ ಕೊಡುವ ನೆಪದಲ್ಲಿ ಔಷಧದಲ್ಲಿ ವಿಷ ಬೆರೆಸಿ ಕುಡಿಸಿದ. ಇಡೀ ರಾತ್ರಿ ಅವರಿಗೆ ವಾಂತಿಭೇದಿಯಾಗಿ ಬೆಳಗಾಗುವುದರಲ್ಲಿ ತಮ್ಮ ಬ್ಯಾರೇಕ್ಕಿನಲ್ಲಿ ಸತ್ತು ಬಿದ್ದಿದ್ದರು.

ಪತ್ರಕರ್ತ ಶೋಯೇಬುಲ್ಲಾ ಖಾನನ ಕೊಲೆ

ಉಸ್ಮಾನಿಯಾ ವಿಶ್ವವಿದ್ಯಾಲಯದ ಗ್ರ್ಯಾಜುಯೇಟನಾಗಿದ್ದ ಶೋಯೇಬುಲ್ಲಾ ಖಾನ ಎಂಬ ೨೭-೨೮ ವರ್ಷದ ತರುಣನೊಬ್ಬನು ಪತ್ರಿಕೋದ್ಯಮ ವೃತ್ತಿಗೆ ಆಕರ್ಷಿತನಾಗಿ 'ತಾಜ' ಎಂಬ ಸಾಪ್ತಾಹಿಕ ಪತ್ರಿಕೆಯಲ್ಲಿ ವರದಿಗಾರನಾಗಿ ಸೇರಿಕೊಂಡಿದ್ದ. ಆತನಿಗೆ ಅದಮ್ಯವಾದ ಇಚ್ಛಾಶಕ್ತಿ ಇತ್ತು. ಮೃದುಭಾಷಿಯಾಗಿದ್ದರೂ ಬಂಡೆಗಲ್ಲಿನಂಥ ಕಾಠಿಣ್ಯವೂ ಆತನಲ್ಲಿತ್ತು. ಜನಸಾಮಾನ್ಯರ ಸಮಸ್ಯೆಗಳಿಗಾಗಿ ಹೋರಾಡುವ ಧೀರನಾಯಕನಾಗಿದ್ದನು. ಈ ಎಲ್ಲ ಗುಣಗಳಿಂದಾಗಿ ಆತ ಒಂದು ಆಕರ್ಷಣೆಯ ವರ್ತುಲವನ್ನೇ ಬೆಳೆಸಿಕೊಂಡಿದ್ದನು. 'ತಾಜ' ಪತ್ರಿಕೆಯಲ್ಲಿ ನಿಜಾಮ ಸರಕಾರವನ್ನೂ, ಕಾಸಿಂ ರಜವಿಯ ಇತ್ತೇಹಾದುಲ್ ಮುಸಲ್ಮೀನ ಸಂಘಟನೆಯ ಚಟುವಟಿಕೆಗಳನ್ನು ಕಟುವಾಗಿ ಟೀಕಿಸುತ್ತಿದ್ದನು. ಅದರಿಂದ ಸರಕಾರ ಮತ್ತು ಇತ್ತೇಹಾದ ಸಂಸ್ಥೆಯು 'ತಾಜ' ಪತ್ರಿಕೆಯ ಮೇಲೆ ನಿಷೇಧವನ್ನು ಹೇರಿ ಅದರ ಪ್ರಕಟಣೆಯನ್ನು ನಿಲ್ಲಿಸಿತು.

ಆಮೇಲೆ ಶೋಯೆಬುಲ್ಲಾ ಖಾನನು ಎಂ. ನರಸಿಂಗರಾಯರು ನಡೆಸುತ್ತಿದ್ದ 'ರೈಯತ' ಎಂಬ ಪತ್ರಿಕೆ ಸೇರಿದನು. ಒಂದು ರೀತಿಯಿಂದ ಆತ ಪತ್ರಿಕೋದ್ಯಮದಲ್ಲಿ ಎಂ. ನರಸಿಂಗರಾಯರ ಶಿಷ್ಯನೇ ಆಗಿದ್ದನು. 'ರೈಯತ' ಪತ್ರಿಕೆಯಲ್ಲಿ ಉಪ-ಸಂಪಾದಕನಾಗಿ ಕೆಲಸಕ್ಕೆ ಸೇರಿದ ಕೆಲವೇ

ದಿನಗಳಲ್ಲಿ ನಿಜಾಮ ಸರಕಾರವು ಆ ಪತ್ರಿಕೆಯ ಮೇಲೂ ನಿರ್ಬಂಧ ಹೇರಿತು. ಹೀಗಾಗಿ 'ರೈಯತ' ಪತ್ರಿಕೆಯ ಬಾಗಿಲು ಮುಚ್ಚಿಕೊಂಡಿತು. ನಿಜಾಮ ಶಾಸನದ ಕುರಿತು ಮನಸ್ಸಿನಲ್ಲಿ ತಳಮಳವನ್ನು, ಅತೃಪ್ತಿಯನ್ನು ತುಂಬಿಕೊಂಡಿದ್ದ ಶೋಯೇಬುಲ್ಲಾ ಖಾನನು ತನ್ನ ಅಸಹಾಯಕ ಸ್ಥಿತಿಗಾಗಿ ಚಡಪಡಿಸುತ್ತಿದ್ದನು.

ವಿಮೋಚನೆಯ ನಂತರ ಹೈದರಾಬಾದ ರಾಜ್ಯದ ಮೊದಲನೆಯ ಮುಖ್ಯಮಂತ್ರಿಯಾಗಿದ್ದ ಬಿ. ರಾಮಕಿಶನರಾವ ಅವರು ಎಂ. ನರಸಿಂಗರಾಯರ ಗೆಳೆಯರಾಗಿದ್ದರು. ಅವರು ಶೋಯೇಬುಲ್ಲಾನಿಗಾಗಿ ತಮ್ಮ ಮನೆಯ ಹಿಂಬದಿಯಲ್ಲಿ ಒಂದು ಕೋಣೆ ತೆರವು ಮಾಡಿಕೊಟ್ಟರು. ಶೋಯೇಬುಲ್ಲಾನು ಆ ಕೋಣೆಯಲ್ಲಿಯೇ ತನ್ನದೊಂದು ಆಫೀಸು ತೆಗೆದು 'ಇಮ್ರೋಜ್' ಎಂಬ ದಿನಪತ್ರಿಕೆಯನ್ನು ಪ್ರಾರಂಭಿಸಿದನು. ತನ್ನ ಹಿರಿಯ ಸ್ನೇಹಿತರಾದ ಬಿ. ರಾಮಕಿಶನರಾವ ಮುಂತಾದವರ ನೆರವಿನಿಂದ ಆತನ ಕೆಲಸ ನಡೆಯುತ್ತಿತ್ತು. ಕೆಲವೇ ದಿನಗಳಲ್ಲಿ ಪತ್ರಿಕೆಯ ಪ್ರಚಾರ ಮತ್ತು ಪ್ರಸಾರ ನಿರೀಕ್ಷೆಗೂ ಮೀರಿ ಬೆಳೆಯಿತು. ತಿಲಕರ 'ಕೇಸರಿ' ಪತ್ರಿಕೆಯಿಂದಾಗಿ ಇಂಗ್ಲಿಷ ಸಾಮ್ರಾಜ್ಯದ ಬೇರುಗಳು ಅಲ್ಲಾಡಲು ಪ್ರಾರಂಭಿಸಿದಂತೆ 'ಇಮ್ರೋಜ್'ದ ಅಗ್ರ ಲೇಖನಗಳಿಂದಾಗಿ ನಿಜಾಮನ ಸಿಂಹಾಸನವೂ ಕೂಡ ಅಲ್ಲಾಡಲು ಪ್ರಾರಂಭಿಸಿತು. ಶೋಯೇಬುಲ್ಲಾನು ರಜಾಕಾರರ ಮತ್ತು ಅವರ ಹಿಟ್ಲರನಾದಂಥ ಕಾಸಿಂ ರಜವಿಯ ಮತೀಯ ಹಾಗೂ ಫ್ಯಾಸಿಸ್ಟ ನೀತಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಮತ್ತು ನಿಷ್ಠುರವಾಗಿ ಹಲ್ಲೆ ಮಾಡುತ್ತಿದ್ದನು.

ಆತನಿಗೆ ಬೆದರಿಕೆ ಪತ್ರಗಳು ಬರಲು ಪ್ರಾರಂಭವಾದವು. 'ಲೋ ಶೋಯೇಬ! ನೀನು ಏನು ಬರೆಯುತ್ತಿರುವಿ? ನಿನ್ನ ವಿದ್ರೋಹಾತ್ಮಕ ಪೆನ್ನು ಶಾಹ ಉಸ್ಮಾನ ಅಲೀಖಾನರ ವಿರುದ್ಧವಾಗಿ, ಇಸ್ಲಾಮೀ ರಿಯಾಸತ್ತಿನ ವಿರುದ್ಧವಾಗಿ ಬರೆಯುತ್ತಿದೆ. ಇದರ ಪರಿಣಾಮ ನೆಟ್ಟಗಾಗಲಾರದು.....'

'ಲೋ ಶೋಯೇಬ! ನೀನು 'ಇಮ್ರೋಜ್' ಪತ್ರಿಕೆಯನ್ನು ನಿಲ್ಲಿಸಿ ಬಿಡು... ಸ್ವತಂತ್ರ ಹೈದರಾಬಾದಿನಿಂದ ನಿನಗೆ ಗಡಿಪಾರು ಮಾಡಲಾಗುವುದು.'

'ಬೇವಖೂಬ ಶೋಯಿಬ, ನೀನು ನರ ಸತ್ತ ಕಾಂಗ್ರೆಸ್ಸಿನ ನಾಯಿಯಾಗಿರುವಿ....'

೨೪ ಜುಲೈ ೧೯೪೮ರ ಒಂದು ಸಭೆಯಲ್ಲಿ ಕಾಸಿಂ ರಜವಿಯು ಶೋಯೇಬುಲ್ಲಾನನ್ನು ಉದ್ದೇಶಿಸಿ ಭಾಷಣ ಮಾಡಿದನು–

'ಈಗ ಈ ಗೊಂಬೆಗಳನ್ನು ಕುಣಿಸುತ್ತಿರುವವರು ಯಾರೇ ಆಗಿರಲಿ, ಅದು ನನಗೆ ಸಂಬಂಧವಿಲ್ಲ. ಅದರೆ ಮುಸ್ಲಿಮರ ಮರ್ಯಾದೆಯ ವಿರುದ್ಧ, ಮುಸಲ್ಮಾನರ ಯಶಸ್ಸಿನ ವಿರುದ್ಧ, ಮುಸಲ್ಮಾನೀ ಶಾಸನದ ವಿರುದ್ಧ ಏಳುವಂಥ ಕೈ ಬಿದ್ದುಹೋಗಬೇಕು, ಇಲ್ಲವೆ ಕಡಿದು ಹಾಕಲ್ಪಡಬೇಕು.'

೨೦.೮.೧೯೪೮ರ ರಾತ್ರಿ ಶೋಯೇಬನಿಗೆ ಕೊನೆಯ ಪತ್ರ ಬಂದಿತು. 'ನಿನ್ನ ಪೆನ್ನನ್ನು ಹಿಡಿತದಲ್ಲಿಟ್ಟುಕೋ. ಇಲ್ಲವಾದರೆ ಸಾಯಲು ಸಿದ್ಧನಾಗು.' ಇದು ಕಡೆಯ ಎಚ್ಚರಿಕೆಯಾಗಿತ್ತು.

ಆಗಸ್ಟ್ ೨೧ರಂದು ರಾತ್ರಿ ಶೋಯೇಬನು ತನ್ನ ಹೆಂಡತಿಯ ಸಹೋದರನಾದ ಮಹಮ್ಮದ ಇಸ್ಮಾಯಿಲನ ಜೊತೆಗೆ ತನ್ನ ಕೆಲಸಗಳನ್ನು ಮುಗಿಸಿಕೊಂಡು ಪತ್ರಿಕೆಯ ಆಫೀಸಿನಿಂದ

ಮನೆಯ ಕಡೆಗೆ ಹೊರಟಿದ್ದನು. ನಡುದಾರಿಯಲ್ಲಿ ಅಕಸ್ಮಾತ್ತಾಗಿ ನಾಲ್ಕಾರು ಜನ ರಜಾಕಾರರು ಆತನ ಮೇಲೆ ಎರಗಿ ಬಿದ್ದರು. ಕತ್ತಿ, ಚೂರಿಗಳಿಂದ ಚುಚ್ಚಿ ಚುಚ್ಚಿ ಆತನನ್ನು ನಿರ್ಜೀವಗೊಳಿಸಿದರು. ಮಹಮ್ಮದ ಇಸ್ಮಾಯಿಲನ ಮೇಲೆಯೂ ಮಾರಣಾಂತಿಕವಾದ ಹಲ್ಲೆ ಮಾಡಿ ಗಾಯಗೊಳಿಸಿದರು. 'ಸ್ಸಾಲಾ ಮರಗಯಾ' ಎಂದು ಸೇಡು ತೀರಿಸಿಕೊಂಡ ಸಂತೋಷದ ಭಾವನೆಯಿಂದ ರಜಾಕಾರರು ಅಲ್ಲಿಂದ ಕಾಲು ಕಿತ್ತಿದರು.

ಆದರೆ ಶೋಯೇಬ ಸತ್ತಿರಲಿಲ್ಲ. ಆತನಿಗೆ ಇನ್ನೂ ಜೀವ ಇತ್ತು. ಕೆಲವು ಜನರು ಆತನನ್ನು ಹೊತ್ತುಕೊಂಡು ಮನೆಗೆ ಸಾಗಿಸಿದರು. ಶೋಯೇಬ ತನ್ನ ತಾಯಿ, ಹೆಂಡತಿ, ಮಕ್ಕಳನ್ನು ಹತ್ತಿರಕ್ಕೆ ಕರೆದುಕೊಂಡ. ಹಿಂದೆ ಗಾಂಧೀಜಿಯವರ ಕೊಲೆಯಾದಾಗ ತನ್ನ ತಾಯಿಯ ಎದುರಿಗೆ ನುಡಿದಿದ್ದ, 'ಬಾಪೂಜೀಯವರು ಎಂಥ ವೈಭವದ ಸಾವನ್ನು ಪಡೆದಿದ್ದರು' ಎಂದು. ಈಗ ತನ್ನ ಕೊನೆಯ ಉಸಿರಿನಲ್ಲಿ ತನ್ನ ತಾಯಿಯ ಕಿವಿಗಳಲ್ಲಿ ನಿಧಾನವಾಗಿ ಉಸುರಿದ್ದ, 'ಬಾಪೂಜಿಯವರು ಎಂಥ ವೈಭವದ ಸಾವನ್ನು ಪಡೆದಿದ್ದರು' ಎಂದು.

'ಶೋಯೇಬನು ಹುತಾತ್ಮನಾಗಿ ಹೈದರಾಬಾದ ಪೋಲೀಸ ಕಾರ್ಯಾಚರಣೆಯ ದಿನಾಂಕವನ್ನು ಇನ್ನೊಂದಿಷ್ಟು ಹತ್ತಿರಕ್ಕೆ ತಂದನು' ಎಂದು ಎಂ. ನರಸಿಂಗರಾಯರು ಶೋಕತಪ್ತರಾಗಿ ನುಡಿದಿದ್ದರು. ಮುಂದೆ ಇಪ್ಪತ್ತೆರಡೇ ದಿನಗಳಲ್ಲಿ ಪೋಲೀಸ ಕಾರ್ಯಾಚರಣೆ ಆರಂಭವಾಯಿತು. ಶೋಯೇಬನಂಥ ಕೆಚ್ಚೆದೆಯ ಯುವಕರನೇಕರನ್ನು ನಿರ್ಮಮವಾಗಿ ಕೊಲೆ ಮಾಡಿದ ರಜಾಕಾರರೂ ಉಳಿಯಲಿಲ್ಲ, ರಜಾಕಾರರನ್ನು ಪೋಷಿಸುತ್ತಿದ್ದ ನಿಜಾಮನ ಆಡಳಿತವೂ ಉಳಿಯಲಿಲ್ಲ. ಆದರೆ ಸೆಕ್ಯೂಲರ್ ರಾಷ್ಟ್ರವೆಂದು ಜಂಭ ಕೊಚ್ಚಿಕೊಳ್ಳುತ್ತಿರುವ ಇಂದಿನ ಸ್ವಾರ್ಥ ರಾಜಕಾರಣಿಗಳ ಕುರುಕ್ಷೇತ್ರದಲ್ಲಿ ಶೋಯೇಬುಲ್ಲಾ ಖಾನನಂಥ ರಾಷ್ಟ್ರವಾದಿಗಳ ಹೆಸರು ಮಾತ್ರ ಎಷ್ಟರಮಟ್ಟಿಗೆ ಉಳಿದುಕೊಂಡಿದೆಯೋ ಗೊತ್ತಿಲ್ಲ.

ನಿಜಾಮನ ಮೇಲೆ ಬಾಂಬ

ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ರಜಾಕಾರರು ನಡೆಸಿದ ಹುನ್ನಾರನ್ನು ಪ್ರತಿಭಟಿಸಲು ಏನೇನೋ ಹೋರಾಟಗಳು ನಡೆದಿದ್ದವು. ಆದರೆ ರಾಜನೇ ಅವರ ಕೈಗೊಂಬೆಯಾಗಿರುವಾಗ ಪ್ರತಿಭಟನೆಗೆ ಯಶಸ್ಸು ಸಿಗಲು ಹೇಗೆ ಸಾಧ್ಯ? ಆಸಫಿಯಾ ಮನೆತನದ ಹೆಸರಿನಲ್ಲಿ ದುಂಡಾವರ್ತಿ ಮಾಡುತ್ತಿದ್ದ ಮುಸ್ಲಿಮ ಸಂಘಟನೆಗಳ ಸೊಕ್ಕು ಅಡಗಿಸಬೇಕಾದರೆ ನಿಜಾಮನನ್ನೇ ಮುಗಿಸಿಬಿಟ್ಟರೆ ಹೇಗೆ ಎಂಬ ವಿಚಾರ ಕೆಲವು ತರುಣರ ಮನಸ್ಸಿನಲ್ಲಿ ಬಂದಿತು. ರಾಜ್ಯವಾಳಲು ನಾಲಾಯಕನಾದ ಇಂಥ ರಾಜನು ಇರುವುದಾದರೂ ಯಾತಕ್ಕೆ? ಎಂಬುದು ಅವರ ಅಂಬೋಣವಾಗಿತ್ತು. ಹಿಂದೆ ಸರದಾರ ಭಗತಸಿಂಗನು ಸ್ಯಾಂಡರ್ಸನ ಮೇಲೆ ಬಾಂಬ್ ಎಸೆದು ಗಲ್ಲಿಗೇರಿದ್ದ. ಭಗತಸಿಂಗನ ಸಾವಿನಿಂದ ಸ್ವಾತಂತ್ರ್ಯದ ಚಳವಳಿ ನಿಂತಿರಲಿಲ್ಲ. ಅದಕ್ಕೆ ಇನ್ನೊಂದಿಷ್ಟು ಬಲ ಬಂದಿತ್ತು. ಅದರಂತೆ ನಿಜಾಮನ ಮೇಲೆ ಬಾಂಬ್ ಹಾಕಿ ಆತನನ್ನು ಮುಗಿಸಿಬಿಟ್ಟರೆ ಮುಂದೇನಾಗುವುದೋ ಆಗಲಿ. ಯಶ ಸಿಕ್ಕರೆ ಒಳ್ಳೆಯದೇ ಆಯಿತು. ಇಲ್ಲದಿದ್ದರೆ ವಿಮೋಚನಾ ಚಳವಳಿಗೆ ಒಂದಿಷ್ಟು ಕಾವಾದರೂ ಬಂದೀತು ಎಂಬ ಸಂಕಲ್ಪದಿಂದ ನಾರಾಯಣ

ಪವಾರ ಎಂಬ ಯುವಕನು ತನ್ನ ಗೆಳೆಯರಾದ ಜಗದೀಶ ಮತ್ತು ಗಂಗಾರಾಮರೊಂದಿಗೆ ಒಂದು ಯೋಜನೆಯನ್ನು ಹಾಕಿಕೊಂಡನು.

ನಿಜಾಮನು ತನ್ನ ಅರಮನೆಯಾದ ಕಿಂಗ್‌ಕೋಠಿಯಿಂದ ಪ್ರತಿದಿನ ನಮಾಜಿಗಾಗಿ ಹೋಗುತ್ತಿದ್ದನು. ದಿ. ೪-೧೨-೧೯೪೭ರಂದು ಆತ ನಮಾಜಿಗಾಗಿ ಮಸೀದಿಗೆ ಹೋಗುವ ಕಾರ್ಯಕ್ರಮ, ಅದರ ವೇಳಾಪಟ್ಟಿ ಎಲ್ಲವನ್ನೂ ಖಚಿತವಾಗಿ ಗುರುತಿಸಿಕೊಂಡು ಈ ಮೂವರೂ ಗೆಳೆಯರು ನಿಜಾಮನು ಹೋಗುವ ದಾರಿಯಲ್ಲಿ ಇಷ್ಟಿಷ್ಟು ಅಂತರದಲ್ಲಿ ಕೈಯಲ್ಲಿ ಬಾಂಬ್ ಹಿಡಿದು ನಿಂತುಕೊಂಡರು. ಮೊದಲನೆಯವನ ಕೈಯಿಂದ ತಪ್ಪಿಸಿಕೊಂಡರೆ ಎರಡನೆಯವನು, ಎರಡನೆಯವನ ಕೈಯಿಂದ ತಪ್ಪಿಸಿಕೊಂಡರೆ ಮೂರನೆಯವನು ಬಾಂಬ್ ಹಾಕಿ ಯಾವುದೇ ಸ್ಥಿತಿಯಲ್ಲಿ ನಿಜಾಮನನ್ನು ಮುಗಿಸಿಯೇ ಬಿಡಬೇಕು ಎಂದು ಅವರು ನಿರ್ಧರಿಸಿದ್ದರು.

ನಿಜಾಮನ ಕಾರು ರಸ್ತೆಯ ಒಂದು ಮೂಲೆಗೆ ಬರುತ್ತಿದ್ದಂತೆ ನಾರಾಯಣ ಪವಾರನು ಮೊದಲೇ ಯೋಜಿಸಿದ್ದಂತೆ ಕಾರಿನ ಮೇಲೆ ಬಾಂಬ್ ಎಸೆದನು. ಬಾಂಬೇನೋ ಸರಿಯಾಗಿ ಗುರಿಯ ಮೇಲೆಯೇ ಬಿದ್ದಿತು. ಆದರೆ ಕಾರಿನ ಬೈನೆಟ್‌ಗೆ ಅಪ್ಪಳಿಸಿ ವಿಸ್ಫೋಟಗೊಂಡಿತು. ತಕ್ಷಣ ಅಪಾಯದ ಸಂಕೇತ ಕಂಡು ಡ್ರೈವರನು ಕಾರನ್ನು ಹಿಂದಕ್ಕೆ ತಿರುಗಿಸಿಕೊಂಡು ನಿಜಾಮನನ್ನು ಮನೆಗೆ ಕರೆದುಕೊಂಡುಹೋದನು. ಎರಡನೆಯ ಹಂತದಲ್ಲಿ ನಿಂತಿದ್ದ ಗಂಗಾರಾಮನಿಗೆ ಬಾಂಬಿನ ಸ್ಫೋಟ ಕೇಳಿಸಿತು. ಸ್ಫೋಟವಾದ ಮೇಲೆ ಕಾರು ಮುಂದೆ ಬರಲಿಲ್ಲ. ಆದ್ದರಿಂದ ಒಂದೇ ಬಾಂಬಿನಲ್ಲಿ ಕೆಲಸ ಮುಗಿಯಿತು ಎಂದು ಸಂತೋಷಪಟ್ಟು ಆತ ಮತ್ತು ಕೊನೆಯ ಹಂತದಲ್ಲಿದ್ದ ಜಗದೀಶ ಇಬ್ಬರೂ ಅಲ್ಲಿಂದ ಪಲಾಯನ ಮಾಡಿದರು. ನಾರಾಯಣ ಪವಾರನೂ ಅಲ್ಲಿಂದ ಕಾಲ್ಕಿತ್ತಿದನು.

ಆದರೆ ಈ ಮೂವರನ್ನೂ ಬಂಧಿಸಲಾಯಿತು. ಗಂಗಾರಾಮ ಮತ್ತು ಜಗದೀಶರಿಗೆ ಐದು ವರ್ಷ ಜೈಲುಶಿಕ್ಷೆಯಾಯಿತು. ನಾರಾಯಣ ಪವಾರನಿಗೆ ಗಲ್ಲುಶಿಕ್ಷೆಯಾಯಿತು. ಈ ದಾವೆಯ ವಿಚಾರಣೆ, ಮೇಲ್ಮನವಿ ಮುಂತಾದವುಗಳು ನಡೆಯುತ್ತಲೇ ಇದ್ದವು. ಬ್ಯಾರಿಸ್ಟರ್ ವಿನಾಯಕರಾವ ವಿದ್ಯಾಲಂಕಾರ, ಜಿ.ಎಸ್. ಮೇಲ್ಕೋಟೆ ಮುಂತಾದವರು ನಾರಾಯಣ ಪವಾರನ ಪರವಾಗಿ ವಾದಿಸುತ್ತಿದ್ದರು. ತಾನು ಮಾಡಿದ್ದು ತಪ್ಪು ಎಂದು ಒಂದು ಸಲ ನ್ಯಾಯಾಲಯದ ಎದುರಿಗೆ ಹೇಳು, ಶಿಕ್ಷೆ ಕಡಿಮೆಯಾಗುತ್ತದೆ. ಬದುಕಿ ಉಳಿದರೆ ಮುಂದೆ ಅವಕಾಶ ಸಿಕ್ಕಾಗ ಏನೆಲ್ಲ ಮಾಡಬಹುದು, ಜೀವದೊಂದಿಗೆ ಆಟ ಆಡಬಾರದು ಎಂದು ತಿಳಿಸಿ ಹೇಳಿದರು. ಆದರೆ ನಾರಾಯಣ ಪವಾರನು ಅದಕ್ಕೆ ಒಪ್ಪಲಿಲ್ಲ. ತಾನು ಮಾಡಿದ್ದು ತಪ್ಪಲ್ಲ ತನಗೆ ಯಾವ ಶಿಕ್ಷೆ ಬೇಕಾದರೂ ಆಗಲಿ ಎಂದು ತನ್ನ ಸತ್ಯದ ಮೇಲೆ ಸ್ಥಿರವಾಗಿ ಉಳಿದ. ಗಲ್ಲುಶಿಕ್ಷೆ ಸ್ಥಿರವಾಗುವಷ್ಟರಲ್ಲಿ ಹೈದರಾಬಾದ ಸಂಸ್ಥಾನದ ವಿಮೋಚನೆಯಾಯಿತು. ನಾರಾಯಣ ಪವಾರ ಹಾಗೂ ಆತನ ಗೆಳೆಯರು ಬಿಡುಗಡೆ ಹೊಂದಿದರು. ಈ ಎಲ್ಲ ಕಥೆ ಹೇಳಲು ನಾರಾಯಣ ಪವಾರ ಇನ್ನೂ ಬದುಕಿದ್ದಾನೆ.

ವಿಮೋಚನಾ ಚಳವಳಿಯ ಮೊದಲನೆಯ ಬಲಿ ಗುಂಜೋಟಿಯ ವೇದಪ್ರಕಾಶ

ಹೈದರಾಬಾದ ರಾಜ್ಯದ ವಿಮೋಚನಾ ಚಳವಳಿಯಲ್ಲಿ ಮೊದಲನೆಯ ಬಲಿ ಎಂದರೆ ಗುಂಜೋಟಿಯ ವೇದಪ್ರಕಾಶನೆಂಬ ತರುಣನದು. ಗುಂಜೋಟಿ ಗ್ರಾಮ ಈಗ ಮಹಾರಾಷ್ಟ್ರಕ್ಕೆ ಸೇರಿದ್ದರೂ ಆಳಂದ ತಾಲೂಕಿನ ಗಡಿಯಲ್ಲಿರುವ ಗ್ರಾಮವಾಗಿದೆ. ಕಡು ಬಡವ ಮನೆತನದಲ್ಲಿ ಜನಿಸಿದ ವೇದಪ್ರಕಾಶನು ಗುಂಜೋಟಿಯಲ್ಲಿ ಒಂದು ಚಿಕ್ಕದಾದ ಪಾನಡಬ್ಬ ಅಂಗಡಿ ಇಟ್ಟುಕೊಂಡಿದ್ದನು. ಅದಕ್ಕೂ ಮೊದಲು ಊರಲ್ಲಿ ಇದ್ದುದು ಒಂದೇ ಪಾನ ಅಂಗಡಿ. ಅದು ಮುಸ್ಲಿಮನಿಗೆ ಸೇರಿದ್ದು. ವೇದಪ್ರಕಾಶನು ಅಂಗಡಿ ಇಟ್ಟ ಮೇಲೆ ಮುಸ್ಲಿಮನ ಅಂಗಡಿಯಲ್ಲಿ ವ್ಯಾಪಾರ ಕಡಿಮೆಯಾಗಹತ್ತಿತು. ಇದರಿಂದ ಇಡೀ ಮುಸ್ಲಿಂ ಜನರು ವೇದಪ್ರಕಾಶನಿಗೆ ವಿರೋಧಿಗಳಾದರು. ಈತನ ಅಂಗಡಿ ಮುಚ್ಚಿಸಲು ಪ್ರಯತ್ನಿಸಹತ್ತಿದರು. ಸಾಧ್ಯವಾಗಲಿಲ್ಲ. ವೇದಪ್ರಕಾಶನು ಆರ್ಯಸಮಾಜಕ್ಕೆ ಸೇರಿದ್ದನು. ಆತನ ಪೂರ್ಣ ಹೆಸರು ವೇದಪ್ರಕಾಶ ಕರಬಸಪ್ಪ ಹರ್ಕೆ ಎಂದಾಗಿತ್ತು.

೨೩. ಡಿಸೆಂಬರ್ ೧೯೩೭ರಂದು ಭಾಯೀ ಬನ್ಸಿಲಾಲರು ಮತ್ತು ಶಾಹಜಾನೀ ಔರಾದದ ವೀರಭದ್ರಪ್ಪ ಲಿಂಗಪ್ಪ ಆರ್ಯ ಇವರು ಗುಂಜೋಟಿಯಲ್ಲಿ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅದಕ್ಕಾಗಿ ಭರ್ಜರಿ ತಯಾರಿ ಮಾಡಿಕೊಳ್ಳಲಾಗಿತ್ತು. ಗುಂಜೋಟಿಯ ಸುತ್ತಮುತ್ತಲ ಗ್ರಾಮಗಳಾದ ಔರಾದ, ತೂಗಾಂವ, ನಾಗರಾಳ , ಬೇಡಗಾ, ಏಕೋಂಡಿ ಮುಂತಾದ ಕಡೆಗಳಿಂದ ಸಾವಿರಾರು ಜನರು ಸಭೆಗಾಗಿ ಬಂದಿದ್ದರು. ಅತಿಥಿಗಳನ್ನು ಕರೆದು ತರಲು ವೇದಪ್ರಕಾಶನು ಗಾಡಿ ಕಟ್ಟಿಕೊಂಡು ಉಮರ್ಗಾಕ್ಕೆ ಹೋಗಿದ್ದನು. ಸುಮಾರು ಹೊತ್ತಿನ ವರೆಗೆ ಉಮರ್ಗಾ ಬಸ್‌ಸ್ಟ್ಯಾಂಡಿನ ಮೇಲೆ ಕಾಯ್ದರೂ ಅತಿಥಿಗಳು ಬರಲಿಲ್ಲ. ವೇದಪ್ರಕಾಶನು ಅಲ್ಲಿ ಅತಿಥಿಗಳ ಸ್ವಾಗತಕ್ಕಾಗಿ ಬೇರೆಯವರನ್ನು ಕೂಡಿಸಿ ತಾನು ಊರಿಗೆ ಬಂದನು.

ಮುಸ್ಲಿಮರು ವೇದಪ್ರಕಾಶನಿಗಾಗಿ ಹೊಂಚುಹಾಕಿಕೊಂಡು ಕುಳಿತಿದ್ದರು. ಆದರೆ ಬೇರೆ ಬೇರೆ ಊರುಗಳಿಂದ ಸಾವಿರಾರು ಜನರು ಬಂದು ಜಮಾಯಿಸಿದ್ದರಿಂದ ಅವರ ಕಾರ್ಯಾಚರಣೆಗೆ ತೊಡಕಾಗಿತ್ತು. ರಾತ್ರಿಯಾದಂತೆ ಅತಿಥಿಗಳಿಗಾಗಿ ಕಾಯ್ದೂ ಕಾಯ್ದೂ ಜನರು ನಿರಾಶರಾಗಿ ತಮ್ಮ ತಮ್ಮ ಊರುಗಳಿಗೆ ವಾಪಸ್ಸಾದರು. ವೇದಪ್ರಕಾಶನು ಉಮರ್ಗಾದಿಂದ ಸುಸ್ತಾಗಿ ಬಂದು ತನ್ನ ಮನೆಯಲ್ಲಿ ಸುಧಾರಿಸಿಕೊಳ್ಳುತ್ತಿದ್ದನು. ಆಗ ಹೊರಗಿನಿಂದ ಘೋಷಣೆಗಳು ಕೇಳಿಸಹತ್ತಿದವು. 'ಜೋ s s s ಬೋಲೇ s s s s s ಸೋ s s s ಅಭಯ; ವೈದಿ s s ಕ ಧರ್ಮ ಕೀ ಜಯ.' ಇದು ಆರ್ಯಸಮಾಜದವರ ಘೋಷಣೆಯಾಗಿತ್ತು.

(ಮುಸ್ಲಿಮರು ಎತ್ತರದ ದನಿಯಲ್ಲಿ 'ಅಲ್ಲಾ s s s ಹೂ ಅಕ್ಬರ್' ಎಂದು ಘೋಷಣೆ ಕೂಗುತ್ತಿದ್ದರು. ಆ ದಿನಗಳಲ್ಲಿ ಈ ಘೋಷಣೆಯನ್ನು ಕೇಳಿದ ತಕ್ಷಣ ಎಲ್ಲ ಮುಸ್ಲಿಮರು ಧಾವಿಸಿ ಬರುತ್ತಿದ್ದರು. ಈ ಘೋಷಣೆಯು ಮುಸ್ಲಿಮರಿಗೆ ಹೋರಾಟದ ಒಂದು ಕರೆಯೇ ಆಗಿತ್ತು. ಈ 'ಅಲ್ಲಾ s s s ಹೂ ಅಕ್ಬರ್' ಎಂಬ ಧ್ವನಿ ಸಾಮ್ಯದ ಮೇರೆಗೆ ಆರ್ಯಸಮಾಜದವರು ಎತ್ತರದ ದನಿಯಲ್ಲಿ 'ಜೋ s s s ಬೋಲೇ s s s s ಸೋ s s s ಅಭಯ' ಎಂಬ ಘೋಷಣೆಯನ್ನು

ರೂಢಿಸಿಕೊಂಡಿದ್ದರು. ಅದರ ಅರ್ಥ 'ಏನೇ ಹೇಳುವುದಿದ್ದರೂ ನಿರ್ಭಯವಾಗಿ ಹೇಳಿರಿ, ಯಾರಿಗೂ ಹೆದರಬೇಕಾಗಿಲ್ಲ' ಎಂದು. ಇದಕ್ಕೆ ಪ್ರತ್ಯುತ್ತರವಾಗಿ ಹಿಂಬದಿಯ ಜನರು ಒಕ್ಕೊರಲಿನಿಂದ 'ವೈದಿಕ ಧರ್ಮ ಕೀ ಜಯ' ಎಂದು ಜಯಘೋಷ ಮಾಡುತ್ತಿದ್ದರು).

'ಜೋ ऽ ऽ ऽ ಬೋಲೇ ऽ ऽ ऽ ಸೋ ऽ ऽ ऽ ಅಭಯ' ಎಂಬ ಕೂಗು ಕೇಳಿಸಿದ ಕೂಡಲೇ ಬಹುಶಃ ಭಾಯೀ ಬನ್ಸಿಲಾಲರು ಮತ್ತು ವೀರಭದ್ರಜೀಯವರು ಬಂದಿರಬೇಕೆಂದು ವೇದಪ್ರಕಾಶನು ಭಾವಿಸಿದನು. ಗಂಟಲಲ್ಲಿಯ ನೀರು ಗಂಟಲಲ್ಲಿಯೇ ಹಿಡಿದು ಸಂಭ್ರಮದಿಂದ ಹೊರಗೋಡಿ ಬಂದನು. ಒಂದೆರಡು ಬೀದಿಗಳನ್ನು ದಾಟಿ ಧಾವಿಸಿ ಬರಬೇಕಾದರೆ ರಜಾಕಾರರ ಗುಂಪೊಂದು ಆತನಿಗೆ ಎದುರಾಯಿತು. ಆ ಗುಂಪಿನವರೇ ಆ ಆರ್ಯಸಮಾಜದ ಘೋಷಣೆಯನ್ನು ಕೂಗುತ್ತಿದ್ದರು. 'ಘಾತವಾಯಿತಲ್ಲ' ಎಂದು ವೇದಪ್ರಕಾಶನಿಗೆ ಅನಿಸಿತು. ಅಷ್ಟರಲ್ಲಿ ರಜಾಕಾರರು ಹಿಂದಿನಿಂದಲೂ ಮುಂದಿನಿಂದಲೂ ಅವನನ್ನು ಸುತ್ತುವರಿದುಕೊಂಡಿದ್ದರು. ಮೊದಲು ಲಾಠಿಯಿಂದ ನಾ ಮುಂದು – ತಾ ಮುಂದು ಎಂದು ಒಂದೇ ಸವನೆ ಹೊಡೆದು ಆತನನ್ನು ನೆಲಕ್ಕೆ ಉರುಳಿಸಿದರು. ಆಮೇಲೆ ಮಾರೆಮ್ಮನ ಜಾತ್ರೆಯಲ್ಲಿ ಕುರಿ ಕೋಣಗಳನ್ನು ಕಡಿಯುವಂತೆ ಕೊಡಲಿ, ಮಚ್ಚುಗಳಿಂದ ವೇದಪ್ರಕಾಶನ ದೇಹವನ್ನು ತುಂಡು ತುಂಡು ಮಾಡಿ ಬೀದಿಯಲ್ಲಿ ಎಸೆದು ಹೋದರು.

ಆಳಂದದಲ್ಲಿ ಸಾಲಿಟ್ಟು ಒಂಬತ್ತು ಜನರ ಕೊಲೆ

ಆರ್ಯಸಮಾಜದ ಕಾರ್ಯಕರ್ತರು ರಜಾಕಾರರ ಉಪಟಳವನ್ನು ಪ್ರತಿರೋಧಿಸಲು ಯಾವಾಗಲೂ ಮುಂದಾಗುತ್ತಿದ್ದರು. ಇಂಥ ಆರ್ಯಸಮಾಜದ ಜನರೆಂದರೆ ರಜಾಕಾರರಿಗೆ ಆಗುತ್ತಿರಲಿಲ್ಲ. ಆಳಂದದಲ್ಲಿ ಯಾವ ಕಾರಣವಿಲ್ಲದೆ ದಿ. ೧೭ ಆಗಸ್ಟ್ ೧೯೪೮ರಂದು ಆರ್ಯ ಸಮಾಜದ ಒಂಬತ್ತು ಜನರನ್ನು ಅಕ್ಷರಶಃ ಹಗ್ಗದಿಂದ ಕಟ್ಟಿ ಊರ ಹೊರಗಿನ ಬಯಲು ಹೊಲಕ್ಕೆ ಕರೆದುಕೊಂಡು ಹೋದರು. ಅವರನ್ನು ಸಾಲಾಗಿ ನಿಲ್ಲಿಸಿ ಮಿಲ್ಟ್ರಿ ತರಬೇತಿಯಲ್ಲಿ ಡೆಮ್ಮಿಗಳ ಮೇಲೆ ಗುಂಡು ಹಾರಿಸುವಂತೆ ಅವರಲ್ಲಿ ಒಬ್ಬೊಬ್ಬರ ಮೇಲೆ ಸರದಿಯ ಪ್ರಕಾರ ಗುಂಡು ಹಾರಿಸಿ ಕೊಲೆ ಮಾಡಿದರು. ಗುಂಡಿಗೆ ಆಹುತಿಯಾಗಿ ನೆಲಕ್ಕೆ ಉರುಳುತ್ತಿದ್ದ ಆ ಆರ್ಯಸಮಾಜದವರನ್ನು ಕಂಡು ರಜಾಕಾರರು ಕೇಕೆ ಹಾಕಿ ಅಟ್ಟಹಾಸದಿಂದ ನಗುತ್ತಿದ್ದರು. ಅದರಲ್ಲಿ ಬಲಿಯಾದವರೆಂದರೆ ಚಂದ್ರಪ್ಪ, ಭೀಮಣಪ್ಪ, ರೇವಣಸಿದ್ಧಪ್ಪ, ಬಸವಣ್ಣೆಪ್ಪ, ರಾಮಚಂದ್ರ, ರಾಹೂಚಂದ್ರ, ಚಂದ್ರನಾಥ, ಜಿನದಾಸ ಮತ್ತು ವಿಠ್ಠಲ ಎಂಬುವವರು.

ಯಾದಗಿರಿಯ ದಸರಾ ಮೆರವಣಿಗೆಯ ಮೇಲೆ ಹಲ್ಲೆ

೧೯೪೭ರ ವಿಜಯದಶಮಿಯ ದಿನ ಯಾದಗಿರಿಯಲ್ಲಿ ಸೀಮೋಲ್ಲಂಘನದ ಮೆರವಣಿಗೆ ಹೊರಟಿತ್ತು. ನಡುವೆಯೇ ರಜಾಕಾರರು ಮೆರವಣಿಗೆಯ ಮೇಲೆ ದಾಳಿ ಮಾಡಿದರು. ಈಶ್ವರಲಾಲ ಭಟ್ಟದ ಎಂಬ ಆರ್ಯಸಮಾಜದ ನಾಯಕರ ಮೇಲೆ ಹಲ್ಲೆ ಮಾಡುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅದರಂತೆ ಅವರ ಮೇಲೆ ಹಲ್ಲೆ ಮಾಡಿ ಹೊಟ್ಟೆಯಲ್ಲಿ ಚೂರಿ ಹಾಕಿಯೇ

ಬಿಟ್ಟರು. ಈಶ್ವರಲಾಲರು ನೆಲಕ್ಕೆ ಉರುಳುತ್ತಿದ್ದಂತೆ ಜನರು ಅವರನ್ನು ಹೊತ್ತುಕೊಂಡು ಆಸ್ಪತ್ರೆಗೆ ಸಾಗಿಸಿದರು.

ಇಷ್ಟೆಲ್ಲ ನಡೆಯುತ್ತಿರಬೇಕಾದರೆ ಇಲ್ಲಿ ಹಲ್ಲೆ ಮಾಡಿ ರಜಾಕಾರರು ತಾವೇ ಮೊದಲು ಪೊಲೀಸ ಠಾಣೆಗೆ ಹೋಗಿ ತಮ್ಮ ಪಾಡಿಗೆ ತಾವು ಬರುತ್ತಿರಬೇಕಾದರೆ ಮೆರವಣಿಗೆಯಲ್ಲಿ ಬರುತ್ತಿದ್ದ ಕೊಲ್ಲೂರು ಮಲ್ಲಪ್ಪ, ಜ್ಞಾನೇಂದ್ರ ಶರ್ಮಾ, ಈಶ್ವರಲಾಲ ಭಟ್ಟಡ, ಜಗನ್ನಾಥರಾವ ಚಂಡರ್ಕಿ, ಹರಿದಾಸ ಭಾಯೀ ಮುಂತಾದವರು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಅವರೊಂದಿಗೆ ಹೋರಾಡಿ ಆತ್ಮರಕ್ಷಣೆ ಮಾಡಿಕೊಂಡು ಓಡಿಬಂದಿದ್ದೇವೆ ಎಂದು ದೂರು ಸಲ್ಲಿಸಿದ್ದರು. 'ಅಂಧೇರ ನಗರೀ'ಯ ಆಡಳಿತದಲ್ಲಿ ಆ ಐವರ ಮೇಲೂ ದಾವೆ ಹೂಡಲಾಯಿತು. ಬಸವ ಕಲ್ಯಾಣದ ಖ್ಯಾತ ವಕೀಲರಾದ ಗಣಪತ ಶಾಸ್ತ್ರೀಯವರು ಎಷ್ಟೇ ಪೈರವಿ ಮಾಡಿದರೂ ಆ ಎಲ್ಲರಿಗೂ ಎರಡು ವರ್ಷಗಳ ಜೈಲು ಶಿಕ್ಷೆಯಾಯಿತು.

ಶರಣಬಸವೇಶ್ವರ ಗೋಪುರದ ಮೇಲೆ ಕಳಶಾರೋಹಣದ ಪ್ರಕರಣ

ಗುಲಬರ್ಗಾದ ಶ್ರೀ ಶರಣಬಸವೇಶ್ವರ ಸಂಸ್ಥಾನವು ಆಗ ಸುಮಾರು ೮೦ ವರ್ಷಗಳಿಂದ ನಡೆದುಕೊಂಡು ಬಂದಿದ್ದ ದೊಡ್ಡ ಧಾರ್ಮಿಕ ಕೇಂದ್ರವಾಗಿತ್ತು. ಶ್ರೀ ಶರಣಬಸವೇಶ್ವರರು ಲಿಂಗೈಕ್ಯರಾಗಿ ಸುಮಾರು ಶತಮಾನವೇ ಗತಿಸಿಹೋಗಿತ್ತು. ಅವರ ಸಮಾಧಿಯ ಮೇಲೆ ಗೋಪುರ ಕಟ್ಟಿಸಿದ್ದಾಗಿತ್ತು. ಈಗ ಕಳಶ ಏರಿಸುವುದೊಂದು ಬಾಕಿ ಉಳಿದಿತ್ತು. ಅಷ್ಟೊತ್ತಿಗೆ ಯಾವುದೇ ದೇವಸ್ಥಾನ ಕಟ್ಟಬೇಕಾದರೂ ಪೂರ್ವಾನುಮತಿ ಪಡೆಯುವುದು ಕಡ್ಡಾಯವೆಂದು ಸರಕಾರ ಆದೇಶ ಹೊರಡಿಸಿತ್ತು. ೧೯೨೪ರ ಶ್ರಾವಣ ಮಾಸದ ನಡುವಿನ ಸೋಮವಾರದ ದಿನ ಗೋಪುರದ ಮೇಲೆ ಕಳಶಾರೋಹಣ ಮಾಡಬೇಕೆಂದು ಭಕ್ತವೃಂದ ಸಂಕಲ್ಪ ಮಾಡಿತ್ತು. ಚಿತ್ತಾಪುರದ ಒಬ್ಬ ಸದ್ಭಕ್ತಳು ತನ್ನ ಭಕ್ತಿಯ ಸೇವೆಗಾಗಿ ಒಂದು ಸುಂದರವಾದ ಕಳಶವನ್ನು ಮಾಡಿಸಿಕೊಟ್ಟಿದ್ದಳು.

ಆ ವರ್ಷ ಮೊಹರಂ ತಿಂಗಳೂ ಕೂಡ ಶ್ರಾವಣ ಮಾಸದಲ್ಲಿಯೇ ಬಂದಿತ್ತು. ಮೊದಲನೆಯದಾಗಿ ಪೂರ್ವಾನುಮತಿಯಿಲ್ಲದೆ ಕಳಶ ಏರಿಸುವ ಹಾಗಿರಲಿಲ್ಲ. ಎರಡನೆಯದಾಗಿ ಮುಸ್ಲಿಮರ ಶೋಕಾಚರಣೆಯ ತಿಂಗಳಿನಲ್ಲಿ ಬೇರೆ ಕೋಮಿನ ಜನರು ಯಾವುದೇ ಉತ್ಸವ ನಡೆಸುವ ಹಾಗಿರಲಿಲ್ಲ. ಆದರೂ ಆಗಿನ ಪೀಠಾಧಿಪತಿಗಳಾಗಿದ್ದ ಪೂಜ್ಯ ದೊಡ್ಡಪ್ಪ ಅಪ್ಪಾರವರು ಸರಕಾರಕ್ಕೆ ಅನುಮತಿಗಾಗಿ ಬರೆದುಕೊಂಡಿದ್ದರು. ಅವರಿಗೆ ಅನುಮತಿ ಸಿಗಲಿಲ್ಲ. ಅದಕ್ಕೆ ಮುಖ್ಯವಾಗಿ ಶ್ರೀ ಶರಣಬಸವೇಶ್ವರ ದೇವಸ್ಥಾನದ ಪೂರ್ವ ದಿಕ್ಕಿನಲ್ಲಿ ಸುಮಾರು ನಾಲ್ಕೈದು ಕಿಲೋಮೀಟರಿನಷ್ಟು ದೂರದಲ್ಲಿರುವ ಖಾಜಾ ಬಂದೇನವಾಜ ದರ್ಗಾದ ಮೇಲೆ ಸಾಯಂಕಾಲದ ಹೊತ್ತು ಮುಳುಗುವ ಸೂರ್ಯನಿಂದಾಗಿ ಕಳಶದ ನೆರಳು ಬೀಳುತ್ತದೆ ಎಂದು ಕಾರಣ ಕೊಡಲಾಯಿತು.

ಶ್ರಾವಣದ ನಡುವಿನ ಸೋಮವಾರ ಕಳಶಾರೋಹಣ ಮಾಡಬೇಕೆಂದು ಆಗಲೇ ತೀರ್ಮಾನಿಸಿಕೊಳ್ಳಲಾಗಿತ್ತು. ಈಗೇನು ಮಾಡುವುದು ಎಂದು ಭಕ್ತಸಮುದಾಯಕ್ಕೆ ಚಿಂತೆಯಾಯಿತು. ಆಗ ಬಾಬೂರಾವ ಪರೂತೆ ಎನ್ನುವವರು ಅಸ್ಲಿ ಕಳಶದ ಬದಲಿಗೆ ಇನ್ನೊಂದು

ಕಳಶ ತಂದು ಅದನ್ನು ಏರಿಸಲು ಅನುಮತಿ ನೀಡಬೇಕೆಂದು ಪೂಜ್ಯ ಅಪ್ಪಾ ಅವರಲ್ಲಿ ಕೇಳಿಕೊಂಡರು. ಆತನ ಗೆಳೆಯರೆಲ್ಲ ಸೇರಿ ನಿರ್ಧರಿಸಿದ ದಿನದಂದು ಕಳಶ ಏರಿಸಿಯೇ ಬಿಟ್ಟರು.

ಈ ಸುದ್ದಿ ಭುಗಿಲ್ಲೆಂದು ಊರಿನ ತುಂಬ ಹಬ್ಬಿತು. ಅದು ಮೊಹರಂ ತಿಂಗಳಾದ್ದರಿಂದ ಕವಡಿ ಪೀರನ ಸವಾರಿ ಹೊರಟಿತ್ತು. ಅದರಲ್ಲಿ ಸೇರಿಕೊಂಡಿದ್ದ ರಜಾಕಾರ ಗೂಂಡಾಗಳು ದೇವಸ್ಥಾನದ ಮೇಲೆ ಹಲ್ಲೆ ಮಾಡಿ ನಂದೀವಿಗ್ರಹವನ್ನು ಮತ್ತು ಮೂಲ ವಿಗ್ರಹವನ್ನು ಭಗ್ನಗೊಳಿಸಿದರು. ಗೋಪುರದ ಮೇಲೆ ಏರಿಸಿದ್ದ ಕಳಶವನ್ನು ತೆಗೆದು ಎಸೆದುಬಿಟ್ಟರು. ಅದು ಅಸ್ಲಿ ಕಳಶವಾಗಿರಲಿಲ್ಲ ಎಂಬ ವಿಚಾರ ಹಿಂದೂಗಳಿಗೂ ಕೂಡ ತಿಳಿದಿರಲಿಲ್ಲ.

ಈ ದಂಗೆಯನ್ನು ನಿಯಂತ್ರಿಸಲು ಪೋಲೀಸರು ಬಂದರು. ಪೊಲೀಸ ತಂಡದಲ್ಲಿ ಸ್ವತಃ ಐ.ಜಿ.ಪಿ ಕ್ರಾಫರ್ಡ್ ಮತ್ತು ಡಿ.ಐ.ಜಿ. ಕಾಶಿಂ ಅಲೀಯವರೂ ಇದ್ದರು. ಅವರು ರಜಾಕಾರರನ್ನು ನಿಯಂತ್ರಿಸಲು ಬಂದಿದ್ದರು. ತಮಗಾಗಿಯೇ ಪೊಲೀಸ ಬಂದಿದೆ ಎಂದು ರಜಾಕಾರರಿಗೂ ಗೊತ್ತಿತ್ತು. ಆದರೂ ಹಿಂದೂಗಳ ತಲೆಯ ಮೇಲೆ ಗೂಬೆ ಕೂಡಿಸಬೇಕಾಗಿತ್ತು. ಆದ್ದರಿಂದ ರಜಾಕಾರ ತಂಡದವರು ಕೈಬಾಂಬನ್ನು ಸಿಡಿಸಿ ಆ ದಂಗೆಯಲ್ಲಿ ಹೊಗೆ ಮುಸುಕುವಂತೆ ಮಾಡಿದರು. ಆ ಹೊಗೆಯಲ್ಲಿ ಒಬ್ಬ ರಜಾಕಾರನು ಡಿ.ಐ.ಜಿ. ಕಾಶಿಂ ಅಲೀಯವರ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದನು. ತಕ್ಷಣ 'ಹಿಂದೂಗಳು ಒಬ್ಬ ಮುಸ್ಲಿಮ ಅಧಿಕಾರಿಯನ್ನು ಕೊಲೆ ಮಾಡಿದರು' ಎಂದು ಗುಲ್ಲುಗಾವಳಿ ಮಾಡಲು ಶುರು ಮಾಡಿದರು. ಆ ಸಂದರ್ಭದಲ್ಲಿ ಬಾಬೂರಾವ ಪರೂತೆ, ಚೆನ್ನಬಸಪ್ಪ ಕುಳಗೇರಿ ಮತ್ತು ಆ ದಿನ ತಮ್ಮ ಸಂಬಂಧಿಕರ ಮನೆಗೆ ಬಂದು ಕಟಗರಪುರದಲ್ಲಿ ವಾಸವಾಗಿದ್ದ ಭಾಯೀ ಬನ್ಸಿಲಾಲ ಹಾಗೂ ಇನ್ನೂ ಕೆಲವರ ಮೇಲೆ ದಾವೆ ಹೂಡಲಾಯಿತು.

ನಿಜಾಮನ ಆಳ್ವಿಕೆ ಇರುವವರೆಗೆ ಶ್ರೀ ಶರಣಬಸವೇಶ್ವರ ಗೋಪುರದ ಮೇಲೆ ಕಳಶ ಏರಲೇ ಇಲ್ಲ. ಮುಂದೆ ಹೈದರಾಬಾದ ವಿಮೋಚನೆಯಾದ ಮೇಲೆ ೧೯೪೯ರಲ್ಲಿ ಹೋಳಿ ಹಬ್ಬದ ನಂತರ ಜರುಗುವ ಜಾತ್ರೆಯ ಕಾಲದಲ್ಲಿ ಮಾರ್ಚ್ ೬ನೆಯ ತಾರೀಕಿನಂದು ಸರದಾರ ಶರಣಗೌಡರು, ಚೆನ್ನಬಸಪ್ಪಾ ಕುಳಗೇರಿ, ಪೇಂಟರ ಬಾಬೂರಾವ ಪರೂತೆ ಮುಂತಾದವರ ಮುಂದಾಳ್ತನದಲ್ಲಿ ಅಸ್ಲಿ ಕಳಶ ಏರಿಸಲಾಯಿತು.

ಬಸವ ಕಲ್ಯಾಣ ಮತ್ತು ಹುಮನಾಬಾದಗಳಲ್ಲಿ ಬಲಿ

ಭಾಯೀ ಬನ್ಸಿಲಾಲ ಮತ್ತು ಭಾಯೀ ಶ್ಯಾಮಲಾಲರು ಬೀದರ ಜಿಲ್ಲೆಯಾದ್ಯಂತ ಆರ್ಯಸಮಾಜದ ಚಳವಳಿಯನ್ನು ಪ್ರಬಲಗೊಳಿಸಿದ್ದರು. ಚಿಟಗೋಪ್ಪಾದಲ್ಲಿ ಹಕೀತರಾವ, ದಶರಥರಾವ ಘಂಟೋಜಿ (ಮಹೀಂದ್ರಕರ), ರಾಮಚಂದ್ರ ಬೋಡಕೆ, ಭೀಮರಾವ ಪಟವರ್ಧನ, ವಿಠ್ಠಲರಾವ ಕುಕಡಾಲ ಮುಂತಾದವರು 'ಮಾಡು ಇಲ್ಲವೆ ಮಡಿ' ಎಂಬಂಥ ಸಂಕಲ್ಪದಿಂದ ಹೋರಾಟಕ್ಕೆ ಇಳಿದಿದ್ದರು. ಬಸವ ಕಲ್ಯಾಣದಲ್ಲಿ ಪಂ. ಗೋಪಾಲದೇವ ಶಾಸ್ತ್ರೀ, ಡಾ. ವಾಮನರಾವ ಏಳಣೂರಕರ ಹಾಗೂ ಅವರ ಪತ್ನಿ ಸರಳಾಬಾಯಿ, ಉದಯಭಾನು ವಕೀಲರು ಹಾಗೂ ಅವರ ಪತ್ನಿ ಝುಂಪಾಬಾಯಿ, ಮೋಹನಸಿಂಗ, ಗಂಗಾರಾಮ, ಧರ್ಮಪ್ರಕಾಶ ಮುಂತಾದವರು

ಮುಂಚೂಣಿಯಲ್ಲಿದ್ದರು. ಧರ್ಮಪ್ರಕಾಶ (ಮೊದಲಿನ ಹೆಸರು ನಾಗಪ್ಪ) ನನ್ನು ೨೪-೬-೧೯೩೮ರಂದು ನಡುಬೀದಿಯಲ್ಲಿ ಕೊಲೆ ಮಾಡಲಾಯಿತು.

ಹುಮನಾಬಾದಿನಲ್ಲಿ ಕ್ರಾಂತಿಯ ಕಹಳೆಯನ್ನು ಊದಿದವರೆಂದರೆ ಪಂ. ಶಿವಚಂದ್ರ ಜೀ (ಮೊದಲಿನ ಹೆಸರು ಶಿವಲಿಂಗಪ್ಪ ನೆಲ್ಲೋಗಿ). ಬಡಕಲಾದ ಎತ್ತರದ ಆ ವ್ಯಕ್ತಿಯಲ್ಲಿ ಅಪಾರವಾದ ಆಕರ್ಷಣೆ ಇತ್ತು. ಮಾತು ಕಡಿಮೆಯಾದರೂ ಆಡಿದ್ದೆಲ್ಲ ಕಲ್ಲಿನ ಮೇಲೆ ಕೊರೆದ ಗೆರೆಯಂತೆ ಅಟಲ. ಇವರ ಸಾತ್ವಿಕ ಬದುಕಿಗೆ ಮಾರುಹೋಗಿ ನೂರಾರು ಜನರು ತಮ್ಮ ದುರ್ವ್ಯಸನಗಳನ್ನು ತೊರೆದು ಸಾತ್ವಿಕರಾಗಿ ಬಾಳಿದ ಅನೇಕ ಉದಾಹರಣೆಗಳು ಈಗಲೂ ಸಿಗುತ್ತವೆ. ಇವರ ಸಂಪರ್ಕದಿಂದಾಗಿಯೇ ದಿ. ಲಕ್ಷ್ಮಣ ವೀರಪ್ಪ ಮತ್ತು ಅವರ ತಮ್ಮ ದಿ. ರಾಮಚಂದ್ರ ವೀರಪ್ಪ (ಶಾಸಕರು ಮತ್ತು ಸಂಸದರು ಆಗಿದ್ದರು) ಆರ್ಯರಾಗಿ ಗೌರವದಿಂದ ಬಾಳಿದರು.

ಶಿವಚಂದ್ರರು ಮೊದಲಿಗೆ ಪ್ರಾರಂಭಿಸಿದ್ದುದು ಹಿಂದೂಗಳಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು ಮತ್ತು ಕುರುಡು ನಂಬಿಕೆಗಳನ್ನು ಹೊಡೆದೋಡಿಸುವುದು. ಇದೆಲ್ಲ ರಜಾಕಾರರಿಗೆ ಸರಿಬರುತ್ತಿರಲಿಲ್ಲ. ಯಾಕೆಂದರೆ ಹಿಂದೂಗಳಲ್ಲಿ ಬೌದ್ಧಿಕ ಜಾಗೃತಿ ಉಂಟಾಗುವುದು ಅವರಿಗೆ ಬೇಕಾಗಿರಲಿಲ್ಲ. ಹಿಂದೂಗಳು ಮೂಢರಾಗಿದ್ದರೇನೆ ದೀನದಾರ ಸಿದ್ದಿಕಿಯಂಥವರು ಮತಾಂತರದ ಕೆಲಸದಲ್ಲಿ ಸುಲಭವಾಗಿ ತೊಡಗಬಹುದು ಎಂದು ಅವರ ನಂಬಿಕೆಯಾಗಿತ್ತು. ಆದ್ದರಿಂದ ರಜಾಕಾರರು ಶಿವಚಂದ್ರರ ಕೊಲೆ ಮಾಡಲು ಅನೇಕ ಸಲ ಪ್ರಯತ್ನಿಸಿ ವಿಫಲರಾಗಿದ್ದರು. ೧೯೪೨ರ ಹೋಳಿಹಬ್ಬದ ದಿನ ಆರ್ಯಸಮಾಜದಿಂದ ಶಿವಚಂದ್ರರು ಹತ್ತಿಪ್ಪತ್ತು ಜನ ಸಂಗಡಿಗರೊಂದಿಗೆ ಮೆರವಣಿಗೆ ಹೊರಟಿದ್ದರು. ಹೋಳಿಹಬ್ಬವೆಂದರೆ ಬೈಗಳ, ಅಶ್ಲೀಲ ವರ್ತನೆಯ ಮತ್ತು ಬಣ್ಣ ಹಾಕಿಕೊಂಡು ಕುಣಿಯುವ ಒಂದು ರಾಕ್ಷಸೀ ಹಬ್ಬವಾಗಿತ್ತು. ಅದೆಲ್ಲ ತಪ್ಪು. ಹಾಗೆಲ್ಲ ಹೋಳಿಹಬ್ಬ ಆಚರಿಸಬಾರದು ಎಂದು ಪ್ರಚಾರ ಮಾಡುವುದೇ ಆರ್ಯಸಮಾಜದ ಮೆರವಣಿಗೆಯ ಉದ್ದೇಶವಾಗಿತ್ತು.

ಆದರೆ ಆ ದಿನ ಇವರು ಮೆರವಣಿಗೆ ಹೊರಡುತ್ತಿದ್ದಂತೆ ಎದುರಿನಿಂದ ಸುಮಾರು ನೂರಾ ಐವತ್ತು ಜನ ರಜಾಕಾರರು ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡು ಬಂದರು. ಮೆರವಣಿಗೆಕಾರರು ನಿಃಶಸ್ತ್ರರಾಗಿದ್ದರು. ರಜಾಕಾರರು ಒಂದೇ ಸವನೆ ಗುಂಡು ಹಾರಿಸಲು ಪ್ರಾರಂಭಿಸಿದರು. ಶಿವಚಂದ್ರರು ಬಲವಂತವಾಗಿ ತಮ್ಮೆಲ್ಲ ಸಂಗಡಿಗರನ್ನು ಅಲ್ಲಿಂದ ಓಡಿಹೋಗಲು ಹೇಳಿ ತಾವೊಬ್ಬರೆ ರಜಾಕಾರರಿಗೆ ಎದುರಾಗಿ ನಡೆದರು. ಅವರೊಬ್ಬರನ್ನೇ ಬಿಟ್ಟು ಹೋಗಲು ಯಾರೂ ಸಿದ್ಧರಿರಲಿಲ್ಲ. ಆದರೂ ಶಿವಚಂದ್ರರು ಕಠೋರ ದನಿಯಲ್ಲಿ ಅವರನ್ನೆಲ್ಲ ಹಿಂದಕ್ಕೆ ಕಳಿಸಿದರು.ಸಂಗಡಿಗರೆಲ್ಲ ಹಿಂದೆ ಸರಿಯುತ್ತಿದ್ದಂತೆ ರಜಾಕಾರರು ಶಿವಚಂದ್ರರ ಎದೆಗೆ ಗುರಿಯಿಟ್ಟು ಎರಡು ಮೂರು ಸುತ್ತು ಗುಂಡು ಹಾರಿಸಿದರು. ಶಿವಚಂದ್ರರು ನೆಲಕ್ಕೆ ಉರುಳುತ್ತಿದ್ದಂತೆ ಇನ್ನೂ ಮೂರು ಜನ ಸಂಗಡಿಗರು ಅಲ್ಲಿ ರಜಾಕಾರರ ಗುಂಡಿಗೆ ಬಲಿಯಾದರು.

ಗಂಡ ಮತ್ತು ಸಹೋದರನ ಎದುರಿಗೆ ಮಹಿಳೆಯ ಮೇಲೆ ಸಾಲುಗಟ್ಟಿ ಅತ್ಯಾಚಾರ

ಆಳಂದ ತಾಲೂಕಿನ ಸರಸಂಬಾ ಗ್ರಾಮದ ದೊಡ್ಡವ್ವ ತನ್ನ ಗಂಡನಾದ ಗುರಪ್ಪ ಮತ್ತು ಸಹೋದರನಾದ ಶಿವಲಿಂಗಪ್ಪನ ಜೊತೆಗೆ ಅಕ್ಕಲಕೋಟ ತಾಲೂಕಿನ ತನ್ನ ಗಂಡನೂರಿಗೆ ಹೊರಟಿದ್ದಳು. ಗುಲಬರ್ಗಾ ಜಿಲ್ಲೆಯ ಗಡಿಯ ಗ್ರಾಮವಾದ ಹಿರೋಳಿಯ ಗುಡ್ಡದ ಕೆಳಭಾಗಕ್ಕೆ ಹೋಗುತ್ತಿದ್ದಂತೆ ಪಠಾಣರ ಒಂದು ಗುಂಪು ಅವರಿಗೆ ಎದುರಾಯಿತು. ಕುಡಿದು ಅಮಲೇರಿದ ಪಠಾಣರಿಗೆ ಹೆಣ್ಣು ಕಂಡು ಅವರಲ್ಲಿ ಅಡಗಿದ್ದ ಕೀಚಕ ಎಚ್ಚರಾದನು. ಮೊದಲು ಗುರಪ್ಪ ಮತ್ತು ಶಿವಲಿಂಗಪ್ಪನನ್ನು ಚೆನ್ನಾಗಿ ಥಳಿಸಿದರು. ಅವರಲ್ಲಿರುವುದನ್ನೆಲ್ಲ ದೋಚಿಕೊಂಡರು. ಆಮೇಲೆ ಅವರಿಬ್ಬರಿಗೂ ಹಿಂದೆ ಕೈಕಟ್ಟಿದರು. ಈಗ ದೊಡ್ಡವ್ವಳ ಕೊರಳಿನಲ್ಲಿದ್ದ ಮಂಗಳಸೂತ್ರಕ್ಕೆ ಕೈ ಹಾಕಿದರು. ಮಂಗಳಸೂತ್ರ ಹರಿದುಕೊಳ್ಳುವ ನೆಪದಲ್ಲಿ ಆಕೆಯ ಸೆರಗು ಹಿಡಿದು ಎಳೆದರು. ಬಾಳಿಗಂಟು ಹಾಕಿ ಉಟ್ಟಿದ್ದ ಸೀರೆ ಬೇಗನೆ ಬಿಚ್ಚಲಿಲ್ಲ. ಒಬ್ಬ ಪಠಾಣ ಸೀರೆಗೆ ಕೈಹಾಕಿ ಸೀರೆ ಬಿಚ್ಚಿ ಆಕೆಯನ್ನು ಬೆತ್ತಲೆಗೊಳಿಸಿದ. ಇನ್ನಿಬ್ಬರು ಆಕೆಯನ್ನು ಅನಾಮತ್ತಾಗಿ ನೆಲಕ್ಕೆ ಹಾಕಿದರು. ಒಬ್ಬರಾದ ಮೇಲೆ ಒಬ್ಬರಂತೆ ಐದಾರು ಜನ ಪಠಾಣರು ಆ ಅಬಲೆಯ ಮೇಲೆ ಬಲಾತ್ಕಾರ ಮಾಡಿದರು. ಅಷ್ಟೊತ್ತಿಗೆ ದೊಡ್ಡವ್ವ ಮೂರ್ಛೆ ಹೋಗಿದ್ದಳು. ಆಕೆಯ ಗಂಡ ಹಾಗೂ ಸಹೋದರನ ಎದುರಿಗೆ ಆಕೆಯ ಗುಪ್ತಾಂಗದ ಮೇಲೆ ಚೂರಿ ಚುಚ್ಚಿ ಚುಚ್ಚಿ ಕೊಲೆ ಮಾಡಿದರು. ಆಮೇಲೆ ಇಬ್ಬರೂ ಗಂಡಸರನ್ನೂ ಕೊಲೆ ಮಾಡಿದರು.

ಮಳ್ಳಿ ಗ್ರಾಮದಲ್ಲೊಂದು ಮಾರಣ ಹೋಮ

ಗುಲಬರ್ಗಾ ಜಿಲ್ಲೆ ಶಾಹಪೂರ ತಾಲೂಕಿನಲ್ಲಿ ಮಳ್ಳಿ ಗ್ರಾಮವಿದೆ. ಹಳ್ಳಿ ಚಿಕ್ಕದಾದರೂ ದೊಡ್ಡ ವಿಚಾರವುಳ್ಳ ಜನರು. ವಿಮೋಚನಾ ಚಳವಳಿಯಲ್ಲಿ ಮಳ್ಳಿ ಗ್ರಾಮದ ಕೊಡುಗೆ ಸ್ಮರಣೀಯವಾಗಿದೆ. ಅಲ್ಲಿಯ ಕಿಶನರಾವ ದೇಶಪಾಂಡೆ ಒಬ್ಬ ತರುಣ ೧೫ ಆಗಸ್ಟ್ ೧೯೪೭ರಂದು ಭಾರತ ಸ್ವತಂತ್ರವಾದಾಗ ಊರಿನ ತುಂಬೆಲ್ಲ ರಾಷ್ಟ್ರಧ್ವಜಗಳನ್ನು ಹಾರಿಸಿ ಉತ್ಸವವನ್ನು ಆಚರಿಸಿದ್ದರು. ಅದರ ಪರಿಣಾಮ ಏನಾಗಬಹುದೆಂದು ಊರಿನ ಹಿರಿಯರು ಯೋಚಿಸಿ ನಿಜಾಮ ರಾಜ್ಯದಲ್ಲಿ ನೀನು ಮಾಡಿದ್ದು ಅಪರಾಧವಾಗುತ್ತದೆ, ರಜಾಕಾರರು ಯಾವುದೇ ಕ್ಷಣವಾದರೂ ಊರಿನ ಮೇಲೆ ದಾಳಿ ಮಾಡಬಹುದು. ನೀನು ಕೆಲವು ದಿನ ಊರು ಬಿಟ್ಟು ಹೋಗುವುದು ಒಳ್ಳೆಯದು ಎಂದು ಸಲಹೆ ಮಾಡಿದರು. ಹಿರಿಯರ ವಿಚಾರ ಸರಿಯಾಗಿಯೇ ಇತ್ತು. ತಾನು ಮಾಡಿದ ಕೃತ್ಯಕ್ಕಾಗಿ ಊರವರನ್ನೇಕೆ ತೊಂದರೆಗೆ ಸಿಲುಕಿಸಬೇಕು ಎಂದು ಯೋಚಿಸಿ ಕಿಶನರಾವ ಊರು ಬಿಟ್ಟು ತುಮಕೂರು, ಬೆಂಗಳೂರಿನ ಕಡೆಗೆ ಹೋದರು.

ರಾಷ್ಟ್ರಧ್ವಜ ಹಾರಿಸಿದ ಸುದ್ದಿ ತಿಳಿದ ರಜಾಕಾರರು ಮುಂದೆ ೯-೯-೧೯೪೮ರಂದು ಮಳ್ಳಿ ಗ್ರಾಮದ ಮೇಲೆ ದಾಳಿ ಮಾಡಿದರು. ಮಹ್ಮದ ಅಲೀ ಗುತ್ತೇದಾರ ಎಂಬವನು ದಾಳಿಕೋರರ ನೇತೃತ್ವವನ್ನು ವಹಿಸಿದ್ದನು. 'ಕಿಶನರಾವ ಎಲ್ಲಿ?' ಎಂದು ಊರೆಲ್ಲ ಜಾಲಾಡಿದರು. ಕೊನೆಗೆ ಕಿಶನರಾಯರ ಮನೆಯನ್ನು ಹೊಕ್ಕು ಅವರ ತಂದೆ ಮತ್ತು ಸಹೋದರರನ್ನು ಪೀಡಿಸಲು ಪ್ರಾರಂಭಿಸಿದರು. ಕಿಶನರಾವ ಅಲ್ಲಿ ಇರಲೇ ಇಲ್ಲ ಎಂದ ಮೇಲೆ ಎಲ್ಲಿಂದ ತೋರಿಸುವುದು?

ರಜಾಕಾರರ ಪಿತ್ತ ನೆತ್ತಿಗೇರಿತು. ಮೊದಲು ಕಿಶನರಾಯರ ತಂದೆ ಮಹಿಪತಿರಾವ ದೇಶಪಾಂಡೆಯವರ ಮೇಲೆ ಗುಂಡು ಹಾರಿಸಿ ಅವರ ಕೊಲೆ ಮಾಡಿದರು. ಆಮೇಲೆ ಚಿಕ್ಕಪ್ಪನವರಾದ ರಾಮಚಂದ್ರರಾವ ದೇಶಪಾಂಡೆ ಹಾಗೂ ಅಣ್ಣಂದಿರಾದ ಗುರುರಾವ ಮತ್ತು ನಾರಾಯಣರಾವ ದೇಶಪಾಂಡೆಯವರನ್ನು ಸರದಿಯ ಪ್ರಕಾರ ಗುಂಡು ಹಾರಿಸಿ ಕೊಲೆ ಮಾಡಿದರು. ಮನೆಯ ಹೆಣ್ಣುಮಕ್ಕಳ ಮೈಮೇಲಿನ ಚಿನ್ನಾಭರಣಗಳನ್ನು ದೋಚಿದರು.

ಈ ಅತ್ಯಾಚಾರವನ್ನು ತಡೆಯಲು ಗ್ರಾಮದ ಜನರು ಮುಂದಾದರು. ಬರಿಗೈಯಲ್ಲಿದ್ದ ಗ್ರಾಮಸ್ಥರಿಗೆ ಶಸ್ತ್ರಾಸ್ತ್ರಗಳನ್ನು ಹಿಡಿದಿದ್ದ ರಜಾಕಾರರನ್ನು ಎದುರಿಸುವುದು ಸಾಧ್ಯವಾಗಲಿಲ್ಲ. ಆ ಘರ್ಷಣೆಯಲ್ಲಿ ರಜಾಕಾರರು ಇನ್ನೂ ಏಳು ಜನರನ್ನು ಗುಂಡಿಟ್ಟು ಕೊಂದರು. ಅದರಲ್ಲಿ ಸತ್ತವರೆಂದರೆ ೧. ನಾಗೋಜಿ ಆಶಣ್ಣ, ೨. ಶೇಷಪ್ಪಾ, ೩. ಹಳ್ಳೆಪ್ಪಾ, ೪. ಬಸಲಿಂಗಪ್ಪಾ, ೫. ಯಲ್ಲಪ್ಪಾ ಧನಗರ, ೬, ಸಿದ್ರಾಮಪ್ಪಾ ಲಿಂಗಪ್ಪ, ೭. ಖಾನೂಜಿ. ಈ ಹೆಣಗಳು ಲಾವಾರಿಸ ಆಗಿ ನಾಲ್ಕು ದಿನಗಳ ವರೆಗೆ ಮನೆಯಲ್ಲಿಯೇ ಕೊಳೆಯುತ್ತ ಬಿದ್ದಿದ್ದವು. ಅವುಗಳನ್ನು ಗತಿಕಾಣಿಸುವವರೂ ದಿಕ್ಕಿಲ್ಲದಂತಾಗಿತ್ತು. ನಾಲ್ಕು ದಿನಗಳ ನಂತರ ಊರಲ್ಲಿ ದುರ್ನಾತ ಹಬ್ಬಿದಾಗ ಹರಿಜನರಿಂದ ಎತ್ತಿನ ಬಂಡಿಯಲ್ಲಿ ಹೆಣಗಳನ್ನು ಊರ ಹೊರಗೆ ಸಾಗ ಹಾಕಿ ಗತಿಕಾಣಿಸಲಾಯಿತು.

ಕವಲೂರಿನ ಕಣ್ಣೀರಿನ ಕಥೆ

ಕೊಪ್ಪಳ ಜಿಲ್ಲೆಯ ಕವಲೂರಿನ ಕಥೆಯು ಕರುಳು ಕಿವುಚುವಂತಿದೆ. ನಿಜಾಮ ರಾಜ್ಯದ ಗಡಿಯಾಚೆಗೆ ಇರುವ ಮುಂಡರಗಿಗೆ ಕವಲೂರು ತೀರ ಹತ್ತಿರ. ಆ ದಿನಗಳಲ್ಲಿ ನಿಜಾಮ ಗಡಿಯ ಹೊರಗೆ, ಗಡಿಗೆ ಹತ್ತಿಕೊಂಡೇ ವಿಮೋಚನಾ ಚಳವಳಿಕಾರರ ಅನೇಕ ಶಿಬಿರಗಳಿದ್ದವು. ಸಾರ್ವಜನಿಕರಿಂದಲೇ ಆ ಶಿಬಿರಗಳ ಖರ್ಚುವೆಚ್ಚಗಳು ನಡೆಯುತ್ತಿದ್ದವು. ಹೊಟ್ಟೆಗೆ ಊಟವೊಂದನ್ನು ಬಿಟ್ಟರೆ ಶಿಬಿರದ ಜನರಿಗೆ ಹೇಳಿಕೊಳ್ಳುವಂಥ ಯಾವ ಖರ್ಚೂ ಇರಲಿಲ್ಲ. ಅಡಿಗೆಗಾದರೂ ಕಾಳುಕಡಿ ಬೇಕಲ್ಲ. ಆದ್ದರಿಂದ ಶಿಬಿರದ ಜನರು ಆಗಾಗ ಗಡಿಯೊಳಕ್ಕೆ ಹೋಗಿ ಕಾಳುಕಡಿಗಳನ್ನು ಸಂಗ್ರಹಿಸಿಕೊಂಡು ಬರುತ್ತಿದ್ದರು.

ಇಂಥ ಒಂದು ಸಂದರ್ಭದಲ್ಲಿ ಒಂದು ದಿನ ಎಂಟು ಹತ್ತು ಜನ ಪೊಲೀಸರು ಗುಡಗೇರಿ ಬಾಳನಗೌಡ ಎಂಬ ವಿಮೋಚನಾ ವೀರನನ್ನು ಹುಡುಕುತ್ತ ಕವಲೂರಿಗೆ ಬಂದು ಊರ ಜನರನ್ನು ಯದ್ವಾ ತದ್ವಾ ಹೊಡೆಯಲು ಪ್ರಾರಂಭಿಸಿದರು. 'ಬಾಳನಗೌಡ ಎಲ್ಲಿ ಅಡಗ್ಯಾನ?' ಎಂದು ಕಿರುಚುತ್ತ ಎದುರಿಗೆ ಬಂದವರನ್ನು ಒದೆಯುತ್ತ ಬಂದೂಕಿನ ಬಟ್‌ದಿಂದ ಹೊಡೆಯುತ್ತ ಊರೆಲ್ಲ ಜಾಲಾಡಿಬಿಟ್ಟರು. ಆಮೇಲೆ ಇಡೀ ಊರಿನಲ್ಲಿ ತಮಗೆ ಬೇಕಾದ ಧನ ಸಂಪತ್ತನ್ನು ಲೂಟಿ ಮಾಡಿ ಚೀಲ ತುಂಬಿಕೊಂಡರು. ಆ ದಿನ ಊರಲ್ಲಿ ಗಂಡಗುದರಿ ಎಂಬವರ ಮನೆಯಲ್ಲಿ ಮದುವೆ ಇತ್ತು. ಈ ಪೊಲೀಸರು ಮದುವೆ ಮನೆಗೆ ನುಗ್ಗಿದರು. ದಿಬ್ಬಣದವರೆಲ್ಲ ದಿಕ್ಕಾಪಾಲಾಗಿ ಓಡಿಹೋದರು. ಆಗ ಪೊಲೀಸರು ಕಂಠಪೂರ್ತಿ ಮದುವೆ ಅಡಿಗೆಯನ್ನು ಊಟಮಾಡಹತ್ತಿದರು.

ಇಷ್ಟೆಲ್ಲ ಆಗಬೇಕಾದರೆ ಅತ್ತ ಮುಂಡರಗಿ ಶಿಬಿರಕ್ಕೆ ಈ ಸಮಾಚಾರ ತಿಳಿಯಿತು. ಹೋರಾಟಗಾರರು ಕವಲೂರಿಗೆ ಧಾವಿಸಿ ಬಂದರು. ಅವರ ಗುಲ್ಲುಗಾವಳಿ ಕೇಳಿ ಪೋಲೀಸರು ಗಂಡಗುದರಿಯವರ ಮನೆಯಿಂದ ಹೊರಬಂದರು. ಮೊದಲು ಗಾಳಿಯಲ್ಲಿ ಒಂದೆರಡು ಸುತ್ತು ಗುಂಡು ಹಾರಿಸಿ ಜನರನ್ನು ಚದುರಿಸಲು ಪ್ರಯತ್ನಿಸಿದರು. ಆದರೆ ಹೋರಾಟಗಾರರು ಪೋಲೀಸರ ಹಿಡಿತಕ್ಕೆ ಬರಲಿಲ್ಲ. ಆಗ ಪೋಲೀಸರು ಯದ್ವಾತದ್ವಾ ಗುಂಡು ಹಾರಿಸಲು ಪ್ರಾರಂಭಿಸಿದರು. ಬರಿಗೈಯಲ್ಲಿದ್ದ ಅಮಾಯಕ ಜನರು ಬಿರುಗಾಳಿಗೆ ಉದುರುವ ಹೀಚುಗಾಯಿಗಳಂತೆ ನೆಲಕ್ಕೆ ಉರುಳಿದರು. ಆ ರೀತಿ ಸತ್ತವರ ಒಟ್ಟು ಸಂಖ್ಯೆ ತಿಳಿದು ಬಂದಿಲ್ಲ. ಕೆಲವು ಜನರ ವಿವರಣೆ ಮಾತ್ರ ಸಿಗುತ್ತದೆ. ೧. ಹೊಳಲಪ್ಪ ಗುಡಸಲಮನಿ ಎಂಬವನ ಕರುಳುಗಳು ಕಿತ್ತು ಹೊರಬಿದ್ದು ರಕ್ತದ ಮಡುವಿನಲ್ಲಿ ಹೆಣವಾಗಿದ್ದ. ೨. ಶಿವಯ್ಯ ಕರಿಸಿದ್ಧಯ್ಯ ಸಿಂದೋಗಿ, ಈತನ ತಲೆಗೆ ಗುಂಡು ತಗುಲಿ ಮಿದುಳಿನ ಮಾಂಸಖಂಡ ಹೊರಬಿದ್ದು ಮೂಲೆಗಲ್ಲಿಗೆ ತಲೆಕೊಟ್ಟು ಹೆಣವಾಗಿ ಬಿದ್ದಿದ್ದ. ೩. ಮುದಿಯಪ್ಪ ಗಾವರಾಳ, ಈತ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ. ಆತನನ್ನು ಎತ್ತಿ ಮುಖಕ್ಕೆ ನೀರು ಚಿಮುಕಿಸಿ, ನೀರು ಕುಡಿಸಲಾಯಿತು. ಗಟಗಟನೇ ನೀರು ಕುಡಿಯುತ್ತಿದ್ದಂತೆ ಆತನ ಪ್ರಾಣ ಹಾರಿಹೋಯಿತು. ೪. ಈರಪ್ಪ ಹೆಬ್ಬಾಳ, ಈತನಿಗೆ ಚಪ್ಪೆ ಹೊಟ್ಟೆ ಹಾಗೂ ಕಾಲಿಗೆ ಗುಂಡು ತಗುಲಿ ಎಚ್ಚರ ತಪ್ಪಿ ಬಿದ್ದಿದ್ದ. ಒಂದೇ ಸವನೇ ರಕ್ತ ಸುರಿಯುತ್ತಿತ್ತು. ಈತನಿಗೆ ಪ್ರಥಮೋಪಚಾರ ಮಾಡಿ ಗದಗಿಗೆ ಡಾ. ಗೋಸಬೋಲೆ ಎಂಬವರ ಆಸ್ಪತ್ರೆಗೆ ಒಯ್ಯಲಾಯಿತು. ಅಲ್ಲಿ ಸೂಕ್ತವಾದ ಚಿಕಿತ್ಸೆ ನೀಡಲಾಯಿತು. ಏನೇ ಮಾಡಿದರೂ ರಕ್ತಸ್ರಾವ ನಿಲ್ಲಲಿಲ್ಲ. ಕ್ಷಣಕ್ಷಣಕ್ಕೂ ಆತ ಶಕ್ತಿಗುಂದುತ್ತ ಹೋಗಿ ಕೊನೆಗೆ ಸಾವನ್ನಪ್ಪಿದ. ಈರಪ್ಪ ಹೆಬ್ಬಾಳನ ಜೊತೆಗೆ ಈರಬಸಪ್ಪ ವರ್ಕನಹಳ್ಳಿ ಎನ್ನುವವನೂ ಗಾಯಾಳುವಾಗಿದ್ದ. ಡಾಕ್ಟರರ ಚಿಕಿತ್ಸೆಯಿಂದ ಆತ ಬದುಕಿಕೊಂಡ.

ಕವಲೂರಿನ ಇನ್ನೊಂದು ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಒಮ್ಮೆ ಕವಲೂರಿಗೆ ಬಂದ ಪೋಲೀಸರ ಮತ್ತು ರಜಾಕಾರರ ದಂಡು ಊರನ್ನೆಲ್ಲ ಕೊಳ್ಳೆ ಹೊಡೆದು ಎರಡು ಬಂಡಿಗಳಲ್ಲಿ ಲೂಟಿ ಮಾಡಿದ ಸಂಪತ್ತನ್ನು ಹೇರಿಕೊಂಡು ಬಸನಗೌಡರು ಅಲ್ಲೀಪುರ ಇವರ ಎತ್ತುಗಳನ್ನು ಬಂಡಿಗೆ ಹೂಡಿಕೊಂಡು ಹೊರಟರು. ಬಂಡಿ ಹೊಡೆಯಲು ಬಸನಗೌಡರ ಮಗ ಬಸಲಿಂಗನಗೌಡನನ್ನೂ, ಕಲ್ಲಯ್ಯ ಸಜ್ಜದಮಠ ಮತ್ತು ಹೊನ್ನಪ್ಪ ತೆಗ್ಗಿನಮನಿ ಎಂಬವರನ್ನು ಕರೆದುಕೊಂಡು ಕೊಪ್ಪಳದ ಮಾರ್ಗವಾಗಿ ಹೊರಟರು. ಕೊಪ್ಪಳದಿಂದ ನೇರವಾಗಿ ಡ್ಯಾಮಿನ ಕಡೆಗೆ ತಿರುಗಿದರು. ಅವರು ಡ್ಯಾಮ ಪ್ರದೇಶದಲ್ಲಿ 'ಛೋಟಾ ಪಾಕಿಸ್ತಾನ' ಎಂಬ ಒಂದು ಕ್ಯಾಂಪನ್ನು ಮಾಡಿಕೊಂಡಿದ್ದರು. ಅಲ್ಲಿಗೆ ಹೋದಮೇಲೆ ಕವಲೂರಿಗೆ ಬಸನಗೌಡರಿಗೆ ಸುದ್ದಿ ಕಳಿಸಿದರು, 'ಇಂತಿಷ್ಟು ಹಣ ಕಳಿಸಿದರೆ ನಿಮ್ಮ ಮಕ್ಕಳನ್ನು ಬಿಡುತ್ತೇವೆ' ಎಂದು. ಬಸನಗೌಡರು ಹಣ ತೆಗೆದುಕೊಂಡು ಹೋದಾಗ ಆ ಹಣವನ್ನು ದೋಚುವುದಲ್ಲದೆ ಆ ಎಲ್ಲರನ್ನೂ ಗುಂಡಿಟ್ಟು ಕೊಂದರು. ಆ ಅತ್ಯಾಚಾರಿಗಳು ಅಲ್ಲಿ ಸುಮಾರು ಎಂಬತ್ತು ಜನ ಹಿಂದೂ ತರುಣಿಯರನ್ನು ಅಪಹರಿಸಿಕೊಂಡು ಹೋಗಿ ಅವರನ್ನು ಭೋಗಿಸುತ್ತ ಇಟ್ಟುಕೊಂಡಿದ್ದರು. ಆ ಎಲ್ಲ ಹೆಣ್ಣುಮಕ್ಕಳನ್ನು ಆಮೇಲೆ ಬಿಡಿಸಿಕೊಂಡು ಬರಲಾಯಿತು. (*ಸಿ.ಎಂ. ಚುರ್ಚಿಹಾಳಮಠ: ವಿಮೋಚನೆ, ಪು. ೨೦೦–೨೦೭ರಿಂದ ಸಂಗ್ರಹಿಸಿದ್ದು*).

ಔರಾದದಲ್ಲಿ ಹೋಳೀಕಾಂಡ

೨೩ ಮೇ ೧೯೪೭ರಂದು ಬೀದರ ಜಿಲ್ಲೆಯ ಔರಾದನಲ್ಲಿ ಕಾಸಿಂ ರಜವಿಯ ಭಾಷಣ ಏರ್ಪಡಿಸಲಾಗಿತ್ತು. ಆ ದಿನ ಆತ ಮಾಡಿದ ಭಾಷಣದ ಸಾರಾಂಶ, 'ಸ್ವತಂತ್ರ ಹೈದರಾಬಾದಿನಲ್ಲಿರುವ ಕಾಫಿರರೆ! ನೀವು ಇರಲು ಬಯಸುವುದಾದರೆ ಇಸ್ಲಾಮಿ ಶಾಸನಕ್ಕೆ ಅನುಗುಣವಾಗಿ ಇರತಕ್ಕದ್ದು. ಇಲ್ಲವಾದರೆ ಹೈದರಾಬಾದ ಬಿಟ್ಟು ಹೋಗತಕ್ಕದ್ದು. ಇಲ್ಲಿ ಕೇವಲ ಮುಸಲ್ಮಾನೀ ಕಾಯ್ದೆ ಕಾನೂನುಗಳು ನಡೆಯುತ್ತವೆ. ಸ್ವತಂತ್ರ ಹೈದರಾಬಾದನ್ನು ವಿರೋಧಿಸುವವರನ್ನು ನನ್ನ ರಜಾಕಾರರು ಕಡಿದು ಹಾಕುತ್ತಾರೆ. ಆರ್ಯಸಮಾಜದವರು ಮತ್ತು ಕಾಂಗ್ರೆಸ್ಸಿನವರು ರಿಯಾಸತ್ತಿನ ಪರಿಸ್ಥಿತಿಯನ್ನು ಕೆಡಿಸಿಬಿಟ್ಟಿದ್ದಾರೆ. ಅವರಿಗೆ ನಾವು ಪಾಠ ಕಲಿಸುತ್ತೇವೆ. ತಪ್ಪಿದಲ್ಲಿ ಅವರು ಮುಸಲ್ಮಾನರಾಗಿ ರಿಯಾಸತ್ತಿನಲ್ಲಿ ಇರಬೇಕು ಇಲ್ಲವೆ ಸಾಯಲು ಸಿದ್ಧರಾಗಬೇಕು.' (*ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ, ಪು. ೩೪೮*).

ಕಾಸಿಂ ರಜವಿಯ ಭಾಷಣದ ಪರಿಣಾಮ ರಜಾಕಾರರ ಮೇಲೆ ದಿಢೀರನೆ ಆಯಿತು. ಮರುದಿನ ದಿ. ೨೪-೫-೧೯೪೭ರಂದು ಬೆಳಗಾಗುತ್ತಿದ್ದಂತೆ ರಜಾಕಾರರು ಹಿಂದೂಗಳ ಅಂಗಡಿಗಳ ಮೇಲೂ ಮನೆಗಳ ಮೇಲೂ ದಾಳಿ ಮಾಡಲು ಪ್ರಾರಂಭಿಸಿದರು. ಅಂಗಡಿ ಮನೆಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚಲು ಶುರು ಮಾಡಿದರು. ಹಿಂದಿನ ದಿನ ರಜವಿಯ ಪ್ರಚೋದನಕಾರಿ ಭಾಷಣದಿಂದಲೇ ಕಾಂಗ್ರೆಸ್ ಮತ್ತು ಆರ್ಯಸಮಾಜದ ಕಾರ್ಯಕರ್ತರಿಗೆ ರಜಾಕಾರರ ಮುಂದಿನ ಕ್ರಮ ಏನಾಗಬಹುದು ಎಂಬುದರ ಕಲ್ಪನೆ ಬಂದಿತ್ತು. ರಾತ್ರಿಯಲ್ಲಿ ಪ್ರತಿಭಟನೆಯ ತಯಾರಿ ಮಾಡಿಕೊಂಡಿದ್ದರು. ಆದರೆ ಅಷ್ಟು ಬೇಗ ರಜಾಕಾರರು ಎರಗಿ ಬೀಳುತ್ತಾರೆಂದು ಅನಿಸಿರಲಿಲ್ಲ. ಮರುದಿನವೇ ರಜಾಕಾರರು ಅನಿರೀಕ್ಷಿತವಾಗಿ ದಾಳಿಮಾಡಿದರು. ಅದರಿಂದ ಹೋರಾಟಗಾರರಿಗೆ ಗಾಬರಿಯಾಗಿತ್ತು. ಆ ದಿನ ರಜಾಕಾರರ ದಂಗೆಯಲ್ಲಿ ವೆಂಕಟರಾವ ಆನಂದರಾವ ಭಂಡಾರೆ ಎನ್ನುವವರು ರಜಾಕಾರರ ಗುಂಡಿಗೆ ಬಲಿಯಾದರು. ಜನರು ಹೆದರಿ ಮನೆಗಳಲ್ಲಿ ಬಂದಿಯಾಗಿ ಕುಳಿತರು. ಆಗ ಪಂ. ವೀರಭದ್ರ ಲಿಂಗಪ್ಪ ಆರ್ಯರು ಪಿಸ್ತೂಲು, ಕರಾಬಿನ್ನು ಹಿಡಿದು ರಜಾಕಾರರೊಂದಿಗೆ ಮುಖಾಮುಖಿ ಹೋರಾಟಕ್ಕೆ ಇಳಿದರು. ಆ ಕಡೆ ರಜಾಕಾರರು ಪಂ. ವೀರಭದ್ರ ಆರ್ಯರ ಮನೆಗೆ ಸೀಮೆಎಣ್ಣೆ ಸುರಿದು ಸುಟ್ಟುಬಿಟ್ಟರು. ವೆಂಕಟರಾವ ಭಂಡಾರೆಯವರ ಹೆಣವನ್ನು ಪೇಟೆಗೆ ಹೊತ್ತು ತಂದು ಒಂದು ಅಂಗಡಿಯಲ್ಲಿ ಹಾಕಿ ಅಂಗಡಿಯ ಜೊತೆಗೆ ಹೆಣವನ್ನೂ ಸುಟ್ಟು ಬೂದಿಮಾಡಿದರು. ಇಂಥ ಎಷ್ಟೋ ಹೆಣಗಳು ಆ ಕಿಚ್ಚಿನಲ್ಲಿ ಉರಿದುಹೋದವು.

ಇಷ್ಟೆಲ್ಲ ಆಗಿಯೂ ಪಂ. ವೀರಭದ್ರರನ್ನೇ ಅಪರಾಧಿಗಳೆಂದು ಸಾಧಿಸಿ ಅವರಿಗೆ ಏಳು ವರ್ಷಗಳ ಶಿಕ್ಷೆ ವಿಧಿಸಲಾಯಿತು. ೧೯೩೮ರಿಂದ ೧೯೪೮ರ ವರೆಗೆ ಅವರು ನಿರಂತರವಾಗಿ ನಿಜಾಮ ಸರಕಾರದೊಂದಿಗೆ ಸೆಣಸಾಡುತ್ತಲೇ ಬಂದರು. ಗುಲಬರ್ಗಾ ಜೈಲಿನಲ್ಲಿಇ ಏಳು ವರ್ಷದ ಶಿಕ್ಷೆಯನ್ನು ಅನುಭವಿಸುತ್ತಿದ್ದಾಗ ಜೈಲಿನ ತನಿಖೆಗಾಗಿ ಮುನ್ಸಿಫ್ ಫಜ್ಲೇಹಕ್ ಎನ್ನುವವರು ಬಂದಿದ್ದರಂತೆ. ಆಗ ವೀರಭದ್ರ ಜೀಯವರು ಅವರೆದುರಿಗೆ ಒಂದು ಶೇರ ಹೇಳಿದರಂತೆ. ಅದರ ಅರ್ಥ ಈ ರೀತಿಯಾಗಿದೆ –

"ಅಪರಾಧಿಗಳ ಸಾಲಿಗೆ ಸೇರಿದ್ದೇನೆ, ಅಪರಾಧ ಏನೆಂಬುದು ಗೊತ್ತಿಲ್ಲ,
ಶಿಕ್ಷೆಯೇನೋ ಗೊತ್ತಾಗಿದೆ, ತಪ್ಪು ಏನೆಂಬುದು ದೇವರೇ ಬಲ್ಲ."

ಗೋರ್ಟಾ ಗ್ರಾಮ ಬೇ-ಚಿರಾಗದ (ದೀಪ ಹಚ್ಚುವವರೂ ಇಲ್ಲದ) ದಾರಿಯಲ್ಲಿ

ನಾದಿರ ಶಾಹನು ದಿಲ್ಲಿಯ ಮೇಲೆ ದಾಳಿ ಮಾಡಿದಾಗ ನರಸಂಹಾರದ ಆದೇಶ ಕೊಟ್ಟಿದ್ದನಂತೆ. ಎದುರಿಗೆ ಕಂಡವರನ್ನೆಲ್ಲ ಸಂಹರಿಸುತ್ತ ಹೋಗುವುದೇ ಆತನ ಸೈನಿಕರ ಕೆಲಸವಾಗಿತ್ತಂತೆ. ಆಗ ಹೊರಗೆ ಕಾಣಿಸಿಕೊಳ್ಳುವ ಗುಂಡಿಗೆ ಯಾರಿಗೂ ಇಲ್ಲವಾಗಿತ್ತಂತೆ. ಅಂಥ ಸಂದರ್ಭದಲ್ಲಿ ಒಬ್ಬ ಶಾಯರನು ನಾದಿರಶಾಹನ ಎದುರಿಗೆ ಬಂದು ಒಂದು ಶೇರ ಹೇಳಿದನಂತೆ. ಅದರ ಅರ್ಥ ಹೀಗಿದೆ, "ನಿನ್ನ ಪ್ರೀತಿಯ ಕತ್ತಿಯು ಇಲ್ಲಿ ಯಾರನ್ನೂ ಜೀವಂತವಾಗಿ ಉಳಿಸಿಲ್ಲ. ಈಗ ಈ ಸತ್ತವರಲ್ಲೇ ಜೀವ ತುಂಬಿ ನಿನ್ನ ಮಾರಣ ಹೋಮವನ್ನು ಮುಂದುವರಿಸು."

ಇತಿಹಾಸ ಪುನರಾವರ್ತನೆಗೊಳ್ಳುತ್ತದೆ ಎನ್ನುವುದಕ್ಕೆ ಈ ಉದಾಹರಣೆಯನ್ನು ಆರಿಸಿಕೊಳ್ಳಲಾಗಿದೆ. ನಿಜಾಮ ರಾಜ್ಯದಲ್ಲಿ ಇಂಥದ್ದೆ ಒಂದು ಜ್ವಲಂತವಾದ ಘಟನೆ ನಡೆದು ಹೋಗಿದೆ. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಗೋರ್ಟಾ ಎಂಬ ಗ್ರಾಮದಲ್ಲಿ ನಡೆದ ನಗಸಂಹಾರದ ಘಟನೆ ನಾದಿರಶಾಹನ ನರಸಂಹಾರವನ್ನು ನೆನಪಿಗೆ ತರುತ್ತದೆ. ರಜಾಕಾರರು ಗ್ರಾಮದಲ್ಲಿ ಸಂಹಾರ ಮಾಡುತ್ತ ಹೋಗಿ ಕೊನೆಗೆ ಎಂಥ ಪರಿಸ್ಥಿತಿ ಬಂತೆಂದರೆ ಅವರ ಸಂಹಾರಕ್ಕೆ ಬಲಿಯಾಗಲು ಊರಲ್ಲಿ ಒಬ್ಬನೂ ಉಳಿದಿರಲಿಲ್ಲ. ರಜಾಕಾರರ ಸೈತಾನೀ ಕತೆಯನ್ನು ಹೇಳಲು ಇಡೀ ರಿಯಾಸತ್ತಿನ ಕತೆಯನ್ನು ಒಂದು ಕಡೆಗಿಟ್ಟು ಗೋರ್ಟಾದ ಕತೆಯನ್ನು ಇನ್ನೊಂದು ಕಡೆಗೆ ಇಟ್ಟು ನೋಡಿದರೆ ಮನುಷ್ಯ ಹೃದಯವುಳ್ಳಂಥ ಯಾರಿಗಾದರೂ ದಿಕ್ಕು ತಪ್ಪಬಹುದು.

ಹೈದರಾಬಾದ ಕರ್ನಾಟಕ ವಿಮೋಚನಾ ಚಳವಳಿಯ ಪ್ರಮುಖ ಘಟ್ಟವೆಂದರೆ ಈ ಗೋರ್ಟಾ ಗ್ರಾಮದ ಹತ್ಯಾಕಾಂಡ. ಗೋರ್ಟಾ, ಮುಚಳಂಬ, ಹೊನ್ನಳ್ಳಿ, ಬೇಲೂರು, ಘೋಡವಾಡಿ ಎಂಬ ಗ್ರಾಮಗಳು ಹತ್ತಿರ-ಹತ್ತಿರದಲ್ಲೇ ಇವೆ. ಇವುಗಳಲ್ಲಿ ಗೋರ್ಟಾ ಎಂಬುದು ಶ್ರೀಮಂತವಾದ ಗ್ರಾಮ. ಅಲ್ಲಿ ಎಲ್ಲಕಡೆಗೂ ಕಲ್ಲಿನ ಮಾಳಿಗೆಯ ಮನೆಗಳೆ ಕಾಣುತ್ತವೆ. ಅಪರೂಪಕ್ಕೆ ಗುಡಿಸಲುಗಳು ಸಿಗಬಹುದು. ಯಾಕೆಂದರೆ ಅಲ್ಲಿಯ ರೈತರು ಶ್ರಮಜೀವಿಗಳು ಮತ್ತು ಶ್ರಮಕ್ಕೆ ತಕ್ಕಂತೆ ಫಲವನ್ನೂ ಕಾಣುವಂಥವರು. ರಜಾಕಾರ ಚಳವಳಿಯ ಕಾಲಕ್ಕೆ ಗೋರ್ಟಾ, ಮುಚಳಂಬ, ಹೊನ್ನಾಳಿ ಗ್ರಾಮಗಳು ಆರ್ಯಸಮಾಜ ಹಾಗೂ ಕಾಂಗ್ರೆಸ್ಸಿನ ಕಾರ್ಯಕರ್ತರಿಗೆ ಆಶ್ರಯ ನೀಡುವ ಸ್ಥಳಗಳಾಗಿದ್ದವು. ಈ ಹಳ್ಳಿಯ ಜನರು ಕೂಡ ತುಂಬ ಅಭಿಮಾನಿಗಳು, ದೇಶಪ್ರೇಮಿಗಳು, ಉದಾರ ಹೃದಯಿಗಳು ಆಗಿದ್ದರು.

ಭಾರತ ಸ್ವತಂತ್ರವಾದ ದಿನ ಹೊನ್ನಾಳಿಯಲ್ಲಿ ಅಲ್ಲಿಯ ಭಾವುರಾವ ಪಾಟೀಲರು ಮತ್ತು ಗೋರ್ಟಾದಲ್ಲಿ ವಿಠೋಬಾ ನರಸಪ್ಪ ನಿರೋಡೆ ಎಂಬವರು ರಾಷ್ಟ್ರಧ್ವಜವನ್ನು ಹಾರಿಸಿ ಸ್ವಾತಂತ್ರ್ಯ ದಿನವನ್ನು ಆಚರಿಸಿದ್ದರು. ಇಸಾಮುದ್ದೀನ ಎಂಬ ರಜಾಕಾರ ಮುಖಂಡನೊಬ್ಬನಿದ್ದ; ಆತ ಪೋಲೀಸರಿಗೆ ಕರೆದು ತಂದು ಆ ತ್ರಿವರ್ಣ ಧ್ವಜಗಳನ್ನು ಕೆಳಗೆ ಇಳಿಸಿದ್ದಲ್ಲದೆ ಭಾವುರಾವ ಪಾಟೀಲರ ಮೇಲೆ ಸಾರ್ವಜನಿಕರ ಎದುರಿಗೆ ಕೈಮಾಡಿ ಅಪಮಾನಗೊಳಿಸಿದ್ದ. ಆ ದಿನ ಅವರ

ಮನೆಯನ್ನೂ ಲೂಟಿ ಮಾಡಲಾಯಿತು. ಆತನ ಜೊತೆಯಲ್ಲಿ ಪೊಲೀಸರು ಇದ್ದುದರಿಂದ ಪಾಟೀಲರು ಬಾಯಿ ಮುಚ್ಚಿಕೊಂಡು, ಎಲ್ಲವನ್ನೂ ನುಂಗಿಕೊಂಡು ಸುಮ್ಮನಿರಬೇಕಾಯಿತು. ಈ ಇಸಾಮುದ್ದೀನನು ಮತಾಂತರಗೊಂಡು ಮುಸ್ಲಿಮನಾದವನಿದ್ದ.

ಭಾವುರಾವ ಪಾಟೀಲರು ಇಸಾಮುದ್ದೀನನ ಮೇಲೆ ಯಾವಾಗಲೂ ಒಂದು ಕಣ್ಣು ಇಟ್ಟುಕೊಂಡೇ ಇದ್ದರು. ಒಮ್ಮೆ ಇಸಾಮುದ್ದೀನನು ಬಸವಕಲ್ಯಾಣದಿಂದ ಗೋರ್ಟಾ ಗ್ರಾಮಕ್ಕೆ ಹಿಂತಿರುಗಿ ಬರುತ್ತಿರಬೇಕಾದರೆ ಬುದ್ದೇನಹಳ್ಳದ ಹತ್ತಿರ ಪಾಟೀಲರು ಹೊಂಚುಹಾಕಿ ಆತನನ್ನು ಗುಂಡಿಟ್ಟು ಕೊಂದುಹಾಕಿದರು. ಇದರಿಂದಾಗಿ ರಜಾಕಾರರು ಕೆರಳಿಹೋದರು. ಅವರು ಇಸಾಮುದ್ದೀನನ ಕೊಲೆಯ ಸೇಡು ತೀರಿಸಿಕೊಳ್ಳಲು ಕಾದುಕೊಂಡಿದ್ದರು. ಪಾಟೀಲ ಜೊತೆಗೆ ಗೋರ್ಟಾ ಗ್ರಾಮದ ವಿಠೋಬಾ ನಿರೋಡೆಯೂ ಇದ್ದುದರಿಂದ ರಜಾಕಾರರಿಗೆ ಹೊನ್ನಳ್ಳಿ ಮತ್ತು ಗೋರ್ಟಾ ಎರಡೂ ಗ್ರಾಮಗಳು ಬೇಟೆಯ ತಾಣಗಳಾಗಿದ್ದವು. ಅವರು ತಮ್ಮ ಕರ್ಮಕಾಂಡಕ್ಕೆ ಗೋರ್ಟಾವನ್ನೇ ಆರಿಸಿಕೊಳ್ಳಲು ಇನ್ನೊಂದು ಕಾರಣವೂ ಇತ್ತು. ಗೋರ್ಟಾದ ಮಹಾದಪ್ಪ ಡುಮಣಿ ಎನ್ನುವ ಸಾಹುಕಾರರು ಇಡೀ ಗ್ರಾಮದಲ್ಲೇ ಗೌರವಾನ್ವಿತ ವ್ಯಕ್ತಿಯಾಗಿದ್ದರು. ಅವರ ಮನೆ ಒಂದು ಭದ್ರಕೋಟೆಯಂತೆ ಇದೆ. ಆಗಾಗ ಚಳವಳಿಗಾರರು ಆ ಮನೆಯಲ್ಲಿ ಬಂದು ವಾಸ್ತವ್ಯ ಮಾಡುತ್ತಿದ್ದರು. ಎಷ್ಟೇ ಜನರು ಬಂದರೂ ಅಲ್ಲಿ ಆಶ್ರಯ ಹಾಗೂ ರಕ್ಷಣೆ ಸಿಗುತ್ತಿತ್ತು. ಡುಮಣಿ ಸಾಹುಕಾರರು ಈ ರೀತಿಯಾಗಿ ರಜಾಕಾರರ ವಿರೋಧಕ್ಕೆ ಭಾಜನರಾಗಿದ್ದರು. ಗೋರ್ಟಾದಲ್ಲಿಯೂ ಸಾಕಷ್ಟು ಮುಸ್ಲಿಂ ಜನಸಂಖ್ಯೆ ಇತ್ತು ಮತ್ತು ಅವರೆಲ್ಲ ಒಂದಿಲ್ಲ ಒಂದು ರೀತಿಯಿಂದ ಡುಮಣಿ ಸಾಹುಕಾರರ ಅನುಗ್ರಹಕ್ಕೆ ಒಳಗಾಗಿದ್ದರು. ಆದ್ದರಿಂದ ನೇರವಾಗಿ ಸಾಹುಕಾರರನ್ನು ಎದುರಿಸುವುದು ರಜಾಕಾರರಿಗೆ ಸಾಧ್ಯವಾಗಿರಲಿಲ್ಲ.

ಗೋರ್ಟಾದ ಮೇಲೆ ರಜಾಕಾರರು ದಾಳಿ ಮಾಡಿದ್ದು ದಿ. ೯ ಮೇ, ೧೯೪೮ರಂದು. (ಇದನ್ನು ಕೆ. ಎಂ. ಮುನ್ಶಿಯವರು ೧೦ನೆಯ ಮೇ ಎಂದು ನಮೂದಿಸಿರುತ್ತಾರೆ). ಆ ದಿನ ಮಹಾದಪ್ಪ ಡುಮಣೆಯವರ ಮನೆಯಲ್ಲಿ ೮೦೦ ಜನ ವಿಮೋಚನಾ ಚಳವಳಿಯ ಜನರು ಆಶ್ರಯ ಪಡೆದಿದ್ದರೆಂದು ತಿಳಿದುಬರುತ್ತದೆ. ಇಷ್ಟೊಂದು ದೊಡ್ಡಸಂಖ್ಯೆಯಲ್ಲಿ ಒಂದೇ ಕಡೆಗೆ ರಜಾಕಾರರಿಗೆ ಬೇಟೆಗಳು ಎಲ್ಲಿ ಸಿಕ್ಕಾವು? ಅದಕ್ಕಾಗಿ ಅವರು ಗೋರ್ಟಾವನ್ನು ತಮ್ಮ ದಾಳಿಗೆ ಕೇಂದ್ರವನ್ನಾಗಿ ಆರಿಸಿಕೊಂಡಿದ್ದರು.

ಆ ದಿನ ಮುಂಜಾನೆ ಎಂಟು ಗಂಟೆಗೆ ಸುಮಾರು ಇನ್ನೂರು ಜನ ರಜಾಕಾರರು ಗೋರ್ಟಾ ಗ್ರಾಮದ ಮೇಲೆ ದಾಳಿ ಮಾಡಿದರು. ಇಸಾಮುದ್ದೀನನ ಕೊಲೆಯ ಸೇಡು ತೀರಿಸಕೊಳ್ಳಲು ಬಂದಿದ್ದ ಈ ರಜಾಕಾರರ ತಂಡದ ನಾಯಕತ್ವವನ್ನು ಇಸಾಮುದ್ದೀನನ ಅಣ್ಣನಾದ ಚಾಂದಪಟೇಲನು ವಹಿಸಿಕೊಂಡಿದ್ದನು. ಗ್ರಾಮಕ್ಕೆ ನುಗ್ಗಿದವರೇ ಸಿಕ್ಕ ಸಿಕ್ಕ ಮನೆಗಳಿಗೆ ನುಗ್ಗಿ ಜನರನ್ನು ಹಿಸುಕಾಡುವುದು, ಲೂಟಿ ಮಾಡುವುದು ಪ್ರಾರಂಭಿಸಿದರು. ಡುಮಣೆಯವರ ಮನೆ ಊರಲ್ಲಿಯೇ ಅತಿ ದೊಡ್ಡದು ಹಾಗೂ ಎತ್ತರವಾದುದು. ಅದರ ಮಾಳಿಗೆಯ ಮೇಲೆ ನಿಂತರೆ ಇಡೀ ಊರಿನ ದೃಶ್ಯ ಕಾಣಿಸುತ್ತದೆ. ಆ ದಿನ ಡುಮಣೆಯವರ ಮನೆಯಲ್ಲಿ ೮೦೦ ಜನರು ಆಶ್ರಯ ಪಡೆದಿದ್ದರು. ಊರಲ್ಲಿಯ ಚೀರಾಟ ಕಿರುಚಾಟ ಕೇಳಿ ಮನೆಯಲ್ಲಿ ಆಶ್ರಯ ಪಡೆದಿದ್ದ

ಜನರು ಮಾಳಿಗೆ ಹತ್ತಿ ನೋಡಿದರು. ರಜಾಕಾರರ ಸೈತಾನೀ ಕೃತ್ಯ ಕಣ್ಣಿಗೆ ರಾಚಿತು. ಮಾಳಿಗೆಯ ಮೇಲೆ ಸುರಕಿ ಹಾಕಲು ಚಿಂಪು ಕಲ್ಲುಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಜನರು ಕವಣೆಯಿಂದ ಕಲ್ಲುಗಳನ್ನು ರಜಾಕಾರರ ಮೇಲೆ ತೂರಿ ಬಿಡಲು ಪ್ರಾರಂಭಿಸಿದರು. ಡುಮಣೆಯವರ ಮನೆಯಲ್ಲಿ ಲೈಸನ್ಸು ಪಡೆದಿದ್ದ, ನ್ಯಾಯಬದ್ಧವಾದ ಎರಡು ಬಂದೂಕುಗಳಿದ್ದವು. ಆದರೆ ಅವು ಹಳೆಯ ಮಾದರಿಯ ಬಂದೂಕುಗಳು, ಬುಲೆಟ್ಟಿನಿಂದ ಹೊಡೆಯುವಂಥವು ಅಲ್ಲ. ಪ್ರತಿಬಾರಿಯೂ ಅವುಗಳಲ್ಲಿ ಗನ್‌ಪೌಡರ್ ತುಂಬಿ ಹೊಡೆಯಬೇಕಾಗುತ್ತಿತ್ತು. ಗನ್‌ಪೌಡರ್ ಜೊತೆಗೆ 'ಛರ್ರಾ' (ಬಾಲ್ ಬೇರಿಂಗ್) ತುಂಬುತ್ತಿದ್ದರು. ಇಷ್ಟೆಲ್ಲ ಮಾಡುವುದು ತುಂಬ ವಿಳಂಬದ ಕೆಲಸವಾಗಿತ್ತು. ಒಂದು ಮಾತೆಂದರೆ ರಜಾಕಾರರು ಎಷ್ಟೇ ಒದ್ದಾಡಿದರೂ ಡುಮಣೆ ಮನೆಯ ಒಂದು ಕಲ್ಲು ಕೂಡ ಕೊಂಕಿಸಲು ಸಾಧ್ಯವಿರಲಿಲ್ಲ.

೨, ೫೦೦ ಜನಸಂಖ್ಯೆಯ ಸುಮಾರು ೪೦೦ ಮನೆಗಳಿರುವ ಆ ಗ್ರಾಮಕ್ಕೆ ೨೦೦ ಜನ ರಜಾಕಾರರ ದಂಡು ಬಹಳ ಭಾರಿಯೇ ಆಗಿತ್ತು. ರಜಾಕಾರರು ಮುಸ್ಲಿಮರ ಹಾಗೂ ದಲಿತರ (ಪಸ್ತಕೌಮ) ಮನೆಗಳಿಗೆ ಕೈ ಹಚ್ಚಿರಲಿಲ್ಲ. ಹಿಂದೂಗಳ ಒಂದೊಂದು ಮನೆಗೆ ನುಗ್ಗುವುದು, ಕೈಗೆ ಸಿಕ್ಕಿದ್ದನ್ನೆಲ್ಲ ಲೂಟಿ ಮಾಡುವುದು, ಮೊದಲು ಗಂಡಸರನ್ನು ಎಳೆದು ಹೊರಗೆ ತರುವುದು, ಹೆಂಗಸರೇನಾದರೂ ಅಡ್ಡಿ ಪಡಿಸಿದರೆ ಅವರನ್ನೂ ಎಳೆದು ತರುವುದು ಆಮೇಲೆ ಬೀದಿಯಲ್ಲಿ ಹೆಣ ಹಾಕುವುದು ಅವರ ಕೆಲಸವಾಗಿತ್ತು.

ಆ ಹತ್ಯಾಕಾಂಡದಲ್ಲಿ ಬದುಕಿ ಉಳಿದವರ ಬಾಯಿಯಿಂದ ಘಟನೆಯ ವಿವರಗಳನ್ನು ಕೇಳಿದಾಗ ಈಗಲೂ ರಕ್ತ ಕುದಿಯಲು ಪ್ರಾರಂಭಿಸುತ್ತದೆ. ಒಂದೆರಡು ಜೀವಂತ ಸಾಕ್ಷಿಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಬಸಪ್ಪ ಮಾಲಿಪಾಟೀಲರ ಮನೆಗೆ ನುಗ್ಗಿದ ರಜಾಕಾರರನ್ನು ಕಂಡು ಪಾಟೀಲರ ಪತ್ನಿ ಮುಕ್ತಾಬಾಯಿ ತನ್ನ ಎಲ್ಲ ಒಡವೆಗಳನ್ನು ತಂದು ರಜಾಕಾರರ ಎದುರಿಗಿಟ್ಟು ಗಂಡನನ್ನು ಬಿಟ್ಟುಬಿಡಬೇಕೆಂದು ಕಣ್ಣೀರು ಸುರಿಸುತ್ತ ಯಾಚಿಸಿದಳು. ಆಕೆ ಕೊಟ್ಟ ಒಡವೆಗಳನ್ನೆಲ್ಲ ಚೀಲಕ್ಕೆ ಸೇರಿಸಿಕೊಂಡು ಬಸಪ್ಪ ಮಾಲೀಪಾಟೀಲರನ್ನು ಹೊರಕ್ಕೆ ಎಳೆದುಕೊಂಡು ಹೋಗಿಬಿಟ್ಟರು. ಮನೆಯಲ್ಲಿದ್ದ ಒಬ್ಬ ಅಜ್ಜಿ ಸಮಯಪ್ರಜ್ಞೆಯಿಂದ ಮುಕ್ತಾಬಾಯಿಯನ್ನು ಬಲವಂತವಾಗಿ ದಿಡ್ಡಿಬಾಗಿಲಿನಿಂದ ಓಡಿಸಿಕೊಂಡು ಪರಾರಿಯಾದಳು. ಬಸಪ್ಪನನ್ನು ಕಡಿದು ಮುಕ್ತಾಬಾಯಿಗಾಗಿ ರಜಾಕಾರರು ಮತ್ತೆ ಮನೆಯೊಳಕ್ಕೆ ಬರುವಷ್ಟರಲ್ಲಿ ಆಕೆ ಪಾರಾಗಿ ಹೋಗಿದ್ದಳು.

ರಾಮರಾವ ಕುಲಕರ್ಣಿಯವರು ರಜಾಕಾರರ ಚಲನವಲನಗಳನ್ನು ಚೆನ್ನಾಗಿ ಗುರುತಿಸಿದ್ದು ಒಂದು ದಿನ ಈ ರಾಕ್ಷಸರಿಂದ ಅಪಾಯ ತಪ್ಪಿದ್ದಲ್ಲ ಎಂದು ಮನಗಂಡಿದ್ದರು. ಆದ್ದರಿಂದ ಅವರು ಮುಂಚಿತವಾಗಿಯೇ ತಮ್ಮ ಪತ್ನಿ ಕೋಂಡುಬಾಯಿಗೆ ಅಕ್ಕಲಕೋಟೆಗೆ ಕಳಿಸಿಕೊಟ್ಟಿದ್ದರು. ಆಕೆ ಆಗ ಗರ್ಭಿಣಿ. ರಜಾಕಾರರು ತನಗೆ ಏನೂ ಮಾಡುವುದಿಲ್ಲ ಎಂಬ ಭ್ರಮೆಯಲ್ಲಿದ್ದ ರಾಮರಾವ ಅವರಿಗೆ ಆ ದಿನ ಎಳೆದುಕೊಂಡು ಹೋಗಿ ಲಕ್ಷ್ಮೀ ಗುಡಿಯ ಎದುರಿಗೆ ಬಲಿಕೊಟ್ಟರು. ಆಗ ಕೋಂಡುಬಾಯಿಯ ಗರ್ಭದಿಂದ ಜನಿಸಿದ ಮಗ ಮುರಲೀಧರರಾವ ಕುಲಕರ್ಣಿ ಈ ದಿನ ಮೂಕಸಾಕ್ಷಿಯಾಗಿದ್ದಾರೆ.

ಈ ನರಸಂಹಾರದಲ್ಲಿ ಬದುಕಿ ಉಳಿದ ಮಹಾರುದ್ರಪ್ಪ ಡೊಣಗಾಪುರೆ ಎಂಬ ವಯೋವೃದ್ಧರ ಹೇಳಿಕೆಯ ಸಾರಾಂಶ ಹೀಗಿದೆ –

'ಆ ದಿನ ಮುಂಜಾನೆ ಸುಮಾರು ಒಂದು ಸಾವಿರ ರಜಾಕಾರರು ಗೋರ್ಟಾದ ಮೇಲೆ ದಾಳಿ ಮಾಡಿದರು. ಪ್ರತಿಯೊಬ್ಬರೂ ಬಂದೂಕು, ಬರ್ಚಿ, ಕಠಾರಿ, ಕತ್ತಿಗಳನ್ನು ಹಿಡಿದುಕೊಂಡಿದ್ದರು. ಘೋಷಣೆ ಹಾಕುತ್ತ ಊರೊಳಗೆ ನುಗ್ಗಿದರು. ಗೋರ್ಟಾ ಗ್ರಾಮದ ಪೊಲೀಸ ಠಾಣೆಯಲ್ಲಿ ಆಗ ಇದ್ದ ಹನ್ನೆರಡು ಜನ ಪೊಲೀಸರ ಪೈಕಿ ದೇವರಾಯ ಸ್ವಾಮಿ ಎನ್ನುವವನು ನಮ್ಮಲ್ಲಿ ಕೆಲವರಿಗೆ ತಕ್ಷಣ ಊರು ಬಿಟ್ಟು ಎಲ್ಲಾದರೂ ಹೊರಟು ಹೋಗಿರಿ ಎಂದು ಸೂಚನೆ ಕೊಟ್ಟನು. ನಾವೆಲ್ಲ ಓಡಿಹೋಗುವುದರಲ್ಲಿದ್ದೆವು. ಅಷ್ಟರಲ್ಲಿ ರಜಾಕಾರರು ಸಿಕ್ಕಸಿಕ್ಕವರನ್ನು ಕತ್ತಿಯಿಂದ ಇರಿಯುವುದನ್ನು, ಲೂಟಿ ಮಾಡುವುದನ್ನು, ಬೆಂಕಿ ಹಚ್ಚುವುದನ್ನು ಕಂಡೆನು: ಎಲ್ಲಾ ರಜಾಕಾರರು ಗೋರ್ಟಾ ಗ್ರಾಮದವರೇ ಆಗಿದ್ದರು. ಅವರನ್ನು ಕಂಡು ನನಗೆ ಆಶ್ಚರ್ಯವಾಯಿತು.

'ಒಂದು ವಾರದ ನಂತರ ನಾನು ಊರಿಗೆ ಬಂದು ನೋಡಿದಾಗ ಎಲ್ಲೆಂದರಲ್ಲಿ ಮನುಷ್ಯರ ಹೆಣಗಳು, ಸತ್ತ ದನಗಳು ಬಿದ್ದಿರುವುದನ್ನು ಕಂಡು ನನ್ನ ಕರುಳು ಕಿವುಚಿದಂತಾಯಿತು. ಊರಲ್ಲಿ ಹದ್ದುಕಾಗೆಗಳು ಹಾರಾಡುತ್ತಿದ್ದವು. ಈ ಎಲ್ಲ ಕತೆ ಹೇಳಲು ನಾನು ಇನ್ನೂ ಬದುಕಿದ್ದೇನೆ.'

ಊರಿನ ಮುಂಭಾಗದಲ್ಲಿ ಚಿಕ್ಕದಾದ ಲಕ್ಷ್ಮೀಗುಡಿಯೊಂದಿದೆ. ಮನೆಮನೆಗಳಿಂದ ಮಕ್ಕಳನ್ನು, ಹೆಣ್ಣುಮಕ್ಕಳನ್ನು, ಮುದುಕರನ್ನು, ಯಾರು ಸಿಗುತ್ತಾರೋ ಅವರನ್ನು ಹಿಡಿದು ಗುಡಿಯ ಮುಂದೆ ತಂದು ಕತ್ತಿಯಿಂದ ರುಂಡವನ್ನು ಕಡಿದು, ಬಸಿಯುವ ರಕ್ತವನ್ನು ಲಕ್ಷ್ಮಿಯ ಮೂರ್ತಿಯ ಮೇಲೆ ಸುರಿಯ್ಲುತ್ತಿದ್ದರು. ಭೀಮರಾವ ಪೊಲೀಸಪಾಟೀಲರ ಮನೆಯ ಮೇಲೆ ದಾಳಿ ಮಾಡಿದಾಗ ಭೀಮರಾಯರು ತಮ್ಮ ಹೆಂಡತಿ ಹಾಗೂ ಇಬ್ಬರು ಮಕ್ಕಳ ಜೊತೆಗೆ ಇದ್ದರು. ತಮ್ಮ ಮನೆಯಲ್ಲಿದ್ದ ಎಲ್ಲ ಬೆಳ್ಳಿ ಬಂಗಾರ, ನಗನಾಣ್ಯಗಳನ್ನು ರಜಾಕಾರರ ಪಾದದಡಿಯಲ್ಲಿಟ್ಟು ಗೋಗರೆದು ಬೇಡಿಕೊಂಡರು. ರಜಾಕಾರರಿಗೆ ಕರುಣೆ ಬರಲಿಲ್ಲ. ಆ ಎಲ್ಲರನ್ನು ಎಳೆದುಕೊಂಡು ಲಕ್ಷ್ಮೀಗುಡಿಯ ಎದುರಿಗೆ ತಂದರು. ತಂದೆ ತಾಯಿಯ ಎದುರಿಗೆ ಆ ಇಬ್ಬರೂ ಮಕ್ಕಳನ್ನು ಸೌತೆಕಾಯಿ ಹೋಳುವಂತೆ ಹೋಳಿ ಮಾಂಸದ ತುಂಡುಗಳನ್ನು ತಂದೆ ತಾಯಿಯರ ಮುಖದ ಮೇಲೆ ಎಸೆದರು. ತಾಯಿ ಇದನ್ನೆಲ್ಲ ಕಂಡು ಪ್ರಜ್ಞೆ ಕಳೆದುಕೊಂಡಳು. ಆಗ ರಜಾಕಾರರು ಆಕೆಯ ಮಾನಕ್ಕೆ ಕೈಹಾಕಿ ಗಂಡನ ಎದುರಿಗೆ ಕತ್ತಿಯಿಂದ ಚುಚ್ಚಿ ಚುಚ್ಚಿ ಕೊಂದರು. ಕೊನೆಗೆ ಭೀಮರಾಯನನ್ನು ದನ ಕಡಿಯುವಂತೆ ಕಡಿದುಹಾಕಿದರು.

ಒಬ್ಬ ಗರ್ಭಿಣಿ ಮಹಿಳೆ ತನ್ನ ಅಣ್ಣನ ಜೀವ ಉಳಿಸಲು ಮುಂದಾದಾಗ ರಜಾಕಾರರು ಆಕೆಯ ಕಿಬ್ಬೊಟ್ಟೆಯ ಮೇಲೆ ಬಲವಾಗಿ ಒದ್ದರು. ತತ್ಪರಿಣಾಮವಾಗಿ ಆ ಮಹಿಳೆಗೆ ಅಲ್ಲೇ ಹೆರಿಗೆಯಾಯಿತು. ಆಗ ಹುಟ್ಟಿದ ಮಗು ಬಾಬೂ ಎಂಬ ಹೆಸರಿನಿಂದ ಈಗ ಪ್ರೌಢಾವಸ್ಥೆಯನ್ನು ತಲುಪಿದ್ದಾನೆ. ಗ್ರಾಮ ಪುರೋಹಿತ ಕಾಶೀನಾಥ ಬಟ್ಟ ಎಂಬವರ ಅತ್ತಿಗೆಯನ್ನು ಅನಾಮತ್ತಾಗಿ ಎತ್ತಿಕೊಂಡು ಲಕ್ಷ್ಮೀಗುಡಿಯ ಎದುರಿಗೆ ಒಯ್ದು, ಬೆತ್ತಲೆಗೊಳಿಸಿ ಸಾಮೂಹಿಕ ಬಲಾತ್ಕಾರ ಮಾಡಿದರು. ಆ ಬಲಾತ್ಕಾರದಲ್ಲಿಯೇ ಆಕೆ ಅಸು ನೀಗಿದಳು. ಈ ರೀತಿ ಹತ್ತಾರು ಜನ ಮಹಿಳೆಯರ ಮೇಲೆ ಬಲಾತ್ಕಾರ, ಅತ್ಯಾಚಾರ, ಮಾಡಲಾಯಿತು. ಆ ಹೆಣ್ಣುಮಕ್ಕಳ ಮೇಲೆ ಆದ

ಅತ್ಯಾಚಾರದ ಸಂಗತಿಗಳನ್ನು ವಿವರಿಸಿ ಹೇಳಲು ನಾಚಿಕೆಯಾಗುತ್ತದೆ, ಶಿಷ್ಟ ಸಂಸ್ಕಾರಗಳು ಅಡ್ಡ ಬರುತ್ತವೆ.

ಈ ಹತ್ಯಾಕಾಂಡದಲ್ಲಿ ಕೊಲೆಯಾದವರ ಹೆಣಗಳನ್ನು ಎಲ್ಲೆಂದರಲ್ಲಿ ಬಣಿವೆಗಳಲ್ಲಿ, ಬೆರಣಿಯ ರಾಶಿ (ಕುಳಬಾನ)ಯಲ್ಲಿ, ಮನೆಗಳಲ್ಲಿ ಹಾಕಿ ರಜಾಕಾರರೇ ಸುಟ್ಟರು. ಅವು ಅರ್ಧಮರ್ಧ ಬೆಂದು ವಾರಾನುಗಟ್ಟಲೇ ಊರಲ್ಲಿ ದುರ್ನಾತ ಬೀರುತ್ತ ಕೊಳೆತು ಬಿದ್ದಿದ್ದವು. ಯಾವ ಹೆಣ ಯಾರದು ಎಂದು ಗುರುತಿಸಲು ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಅದಾಗಿತ್ತು. ಈ ಘಟನೆ ನಡೆದ ನಂತರ ಆಚಾರ್ಯ ವಿನೋಬಾ ಭಾವೆ, ಸ್ವಾಮಿ ರಮಾನಂದ ತೀರ್ಥ ಮುಂತಾದವರು ಈ ಗ್ರಾಮಕ್ಕೆ ಭೇಟಿಕೊಟ್ಟು ಸಾಂತ್ವನ ನೀಡಿ ಹೋದರಂತೆ. ಆಗ ಅಧಿಕಾರಕ್ಕೆ ಬಂದಿದ್ದ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಬುರುಗುಲ ರಾಮಕಿಶನರಾಯರೂ ಕೂಡ ಈ ವಿಮೋಚನಾ ಚಳವಳಿಯ ಮುಂಚೂಣಿಯಲ್ಲಿದ್ದವರೇ ಆಗಿದ್ದರು. ಆದರೆ ಅವರು ಒಮ್ಮೆಯೂ ಈ ಗ್ರಾಮಕ್ಕೆ ಭೇಟಿ ಕೊಡಲಿಲ್ಲ. ಯಾವ ಪರಿಹಾರವನ್ನೂ ನೀಡಲಿಲ್ಲ.

ಘಟನೆ ನಡೆದ ಒಂದು ವಾರದಲ್ಲಿಯೇ ದಿ. ೧೭-೫-೧೯೪೮ರಂದು ಶ್ರೀ ಕೆ. ಎಂ ಮುನ್ಶಿಯವರು ಹೈದರಾಬಾದ ವಕೀಲರ ಒಂದು ಜಾಗೃತ ಸಮಿತಿಯನ್ನು ಕರೆದುಕೊಂಡು ಬಂದಿದ್ದರು. ಗೋರ್ಟಾ ಘಟನೆಯ ಕುರಿತು ಯಾರು ಏನೇ ಹೇಳಿದರೂ ಅದರಲ್ಲಿ ಅತಿಶಯೋಕ್ತಿ ಇದೆ ಎಂಬ ಅನುಮಾನಕ್ಕೆ ಆಸ್ಪದ ಇರುವ ಸಾಧ್ಯತೆ ಇರುತ್ತದೆ. ಯಾಕೆಂದರೆ ಯಾವ ಮನುಷ್ಯನೂ ಇಂಥ ಒಂದು ಘಟನೆ ನಡೆದಿರಬಹುದೆಂದು ಊಹಿಸಲೂ ಕೂಡ ಸಾಧ್ಯವಿಲ್ಲದಂತಾಗಿದೆ. ಆದರೆ ಈ ಕಾಂಡ ನಡೆದ ಒಂದೇ ವಾರದಲ್ಲಿ ಶ್ರೀ ಮುನ್ಶಿಯವರು ದಾಖಲಿಸಿರುವ ವರದಿಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆ ವರದಿಯ ಸಂಕ್ಷಿಪ್ತ ಕನ್ನಡ ರೂಪದೊಂದಿಗೆ ಇಂಗ್ಲಿಷಿನ ಪೂರ್ಣಪಾಠ ಇಲ್ಲಿ ಕೊಡಲಾಗುತ್ತಿದೆ.

"ಹೈದರಾಬಾದ ವಕೀಲರ ಜಾಗೃತ ಸಮಿತಿಯ ವರದಿ, ದಿ. ೧೭-೫-೧೯೪೮

ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಒಳಗೊಂಡಂತೆ ವಕೀಲರ ಜಾಗೃತ ಸಮಿತಿಯು ಇಲ್ಲಿಯ ಅನೇಕ ನತದೃಷ್ಟ ಹಳ್ಳಿಗಳಿಗೆ ಭೇಟಿ ನೀಡಿ ವರದಿ ಮಾಡಿತು. ಚಿಂಚೋಳಿಯ ನಂತರ ನಾವು ೧೭ ಮೇ ೧೯೪೮ರಂದು ಮುಂಜಾನೆ ೧೧ ಗಂಟೆಗೆ ಗೋರ್ಟಾ ತಲುಪಿದೆವು. ಅದೊಂದು ಭಯಾನಕವೂ ಹೃದಯವಿದ್ರಾವಕವೂ ಆದಂಥ ದೃಶ್ಯವಾಗಿತ್ತು. ಒಬ್ಬ ಗಾಯಗೊಂಡ ಮನುಷ್ಯ ಹಾಗೂ ಇಬ್ಬರು ಮುದುಕಿಯರ ಹೊರತು ಊರಲ್ಲಿ ಯಾರೂ ಇರಲಿಲ್ಲ. ನೂರಾರು ದನಗಳು ಮೇವು ನೀರಿಲ್ಲದೆ ಕೊನೆಯುಸಿರು ಎಳೆಯುತ್ತಿದ್ದವು. ಹಳ್ಳಿಯ ತುಂಬೆಲ್ಲ ಸತ್ತು ಕೊಳೆತ ದನಗಳು, ಮನುಷ್ಯರ ಅಸ್ಥಿಪಂಜರಗಳು, ಮೂಳೆಗಳು, ಅರೆಬರೆ ಸುಟ್ಟ ಹೆಣಗಳು ಚದುರಿಹೋಗಿದ್ದವು. ಅಲ್ಲಿ ಉಸಿರಾಡಲು ಆಗದಂಥ ದುರ್ಗಂಧ ತುಂಬಿತ್ತು.

ಕರೀಮಾಬಾದದ ಶ್ರೀ ಅಬ್ದುಲ ಹಮೀದ ಖಾನ ಎಂಬ ಸಬ್ ಇನ್ಸ್‌ಪೆಕ್ಟರ್ ಆರು ಜನ ಪೇದೆಗಳೊಂದಿಗೆ ಲಕ್ಷ್ಮೀಗುಡಿಯಲ್ಲಿದ್ದರು. ೨,೫೦೦ ಜನಸಂಖ್ಯೆಯ ೪೦೦ ಮನೆಗಳ ಹಳ್ಳಿ ಅದಾಗಿತ್ತು. ಸರಕಾರಿ ಗೋದಾಮು, ದಲಿತರ ಮತ್ತು ಮುಸ್ಲಿಮರ ಮನೆಗಳನ್ನು ಬಿಟ್ಟು

ಉಳಿದ ಎಲ್ಲ ಮನೆಗಳನ್ನು ನಾಶಗೊಳಿಸಲಾಗಿತ್ತು. ನಾವು ಆ ಹಳ್ಳಿಗೆ ಭೇಟಿ ಕೊಡುವವರೆಗೆ ಇನ್ನೂ ಅಲ್ಲಿಯ ಮನುಷ್ಯರ ಮೂಳೆಗಳ ಕುರಿತಾಗಲೀ, ಹೆಣಗಳ ಕುರಿತಾಗಲೀ, ನಾಶವಾದ ಮನೆಗಳ ಕುರಿತಾಗಲೀ, ನಷ್ಟದ ಬಗ್ಗೆಯಾಗಲೀ ಪೊಲೀಸ ಪಂಚನಾಮೆ ಆಗಿರಲಿಲ್ಲ. ಪಂಚನಾಮೆ ತಯಾರಿಸಲು ಯಾವ ಪಂಚರೂ ಲಭ್ಯವಿಲ್ಲ ಮತ್ತು ಮೂಳೆಗಳನ್ನು ಹಾಗೂ ಸುಟ್ಟ ಹೆಣಗಳನ್ನು ಗುರುತಿಸುವುದು ತನ್ನಿಂದ ಸಾಧ್ಯವಿಲ್ಲವಾಗಿದೆ ಎಂದು ಸಬ್ ಇನ್ಸ್‌ಪೆಕ್ಟರ್‌ನು ತಿಳಿಸಿದನು.

ಅಷ್ಟೊತ್ತಿಗೆ ಪಕ್ಕದ ಹಳ್ಳಿಯಲ್ಲಿ ಆಶ್ರಯ ಪಡೆದಿದ್ದ ಗೋರ್ಟಾ ಗ್ರಾಮದ ಒಬ್ಬ ಮನುಷ್ಯನು ತನ್ನ ದನವನ್ನು ಹುಡುಕಿಕೊಂಡು ಬಂದನು. ಆತ ತುಂಬ ಭಯಭೀತನಾಗಿದ್ದನು. ಆತನಿಗೆ ಸಾಂತ್ವನ ಹೇಳಿ ಘಟನೆಯ ಬಗ್ಗೆ ವಿಚಾರಿಸಿದೆವು. ಆತ ಹೇಳಿದ, '೨೦೦ ಕ್ಕೂ ಹೆಚ್ಚು ಜನರನ್ನು ನಿರ್ದಯವಾಗಿ ಕೊಲ್ಲಲಾಯಿತು. ಕೊಂದವರನ್ನು ಬೆರಣಿಗಳ ರಾಶಿಯಲ್ಲಿ (ಕುಳಬಾನದಲ್ಲಿ), ಕಣಕಿಯ ಬಣಿವೆಗಳಲ್ಲಿ ಹಾಕಿ ಸುಡಲಾಯಿತು.' ಹೆಣಗಳನ್ನು ಗುಡ್ಡೆಹಾಕಿ ಸುಟ್ಟ ಸ್ಥಳವನ್ನು ಆತ ತೋರಿಸಿದನು.

ಹೆಣಗಳನ್ನು ಗುಡ್ಡೆಹಾಕಿದ ಮನೆಯ ಒಳಗೆ ನಾವು ಹೋದೆವು. ಮನುಷ್ಯರ ತಲೆಬುರುಡೆಗಳು, ಮೂಳೆಗಳು ಎಲ್ಲೆಂದರಲ್ಲಿ ಹರಡಿಕೊಂಡಿದ್ದವು. ಅಲ್ಲಿ ನಮ್ಮೆದುರಿಗೆ ಪಂಚನಾಮೆ ಮಾಡಿಕೊಳ್ಳಲಾಯಿತು. ಆಮೇಲೆ ನಾವು ನಾರಾಯಣರಾವ ಮಕ್ತೇದಾರರ ಹೊಲಕ್ಕೆ ಹೋದೆವು. ಹೆಣಗಳನ್ನು ಸುಟ್ಟ ಬಣಿವೆಗಳನ್ನು ನೋಡಿದೆವು. ಚೆನ್ನಪ್ಪ ಎನ್ನುವವರ ಹೊಲದ ಎರಡು ಬಣಿವೆಗಳಲ್ಲಿಯೂ ಹೆಣಗಳನ್ನು ಸುಟ್ಟಿದ್ದನ್ನು, ತಲೆಬುರುಡೆ, ಮೂಳೆಗಳನ್ನು ಕಂಡೆವು.

ಅದನ್ನೆಲ್ಲ ನೋಡಿ ೨೦೦ಕ್ಕೂ ಹೆಚ್ಚು ಜನರನ್ನು ಕೊಂದಿದ್ದು ಸ್ಪಷ್ಟವಾಯಿತು. ಆಕ್ರಮಣಕಾರಿಗಳು ಮುಸ್ಲಿಮರು ಮತ್ತು ದಲಿತರಿದ್ದರೆಂದು ಒಬ್ಬ ಸಾಕ್ಷಿದಾರನು ಹೇಳಿದನು. ಅವರು ಗೌಡಗಾಂವ, ಬೋರೋಳ, ಕನಕಟ್ಟಾ, ಘೋಡವಾಡಿ, ಚಿಂಚಲಿ ಮುಂತಾದ ಹಳ್ಳಿಯವರಾಗಿದ್ದರೆಂದು ಆತ ತಿಳಿಸಿದ. ಇನ್ನೊಬ್ಬ ಸಾಕ್ಷಿಯ ಪ್ರಕಾರ ಆಕ್ರಮಣಕಾರಿಗಳ ಸಂಖ್ಯೆ ೫೦೦ ರಷ್ಟಿತ್ತು. ಅನೇಕರನ್ನು ಆತ ಗುರುತಿಸುತ್ತಾನೆ. ಖದರತುಲ್ಲಾ ಎಂಬ ಕಾನ್‌ಸ್ಟೇಬಲ್ (ಬಿಲ್ಲೆ ಸಂ. ೩೮) ಆ ಗುಂಪಿನಲ್ಲಿದ್ದನು. ಎರಡು ದಿನಗಳ ವರೆಗೆ ಹಳ್ಳಿಯ ಜನರು ಅವರನ್ನು ಎದುರಿಸಿದರು. ಕೊನೆಗೆ ಜೀವಭಯದಿಂದ ಓಡಿಹೋದರು. ಕೋಟೆಯಂತಿದ್ದ ಮಹಾದಪ್ಪ ಎನ್ನುವವರ ಮನೆಯನ್ನು ನಾಶಗೊಳಿಸಿದರು. ಎಲ್ಲ ಮನೆಗಳನ್ನೂ ಸುಟ್ಟು ಹಾಕಿದರು. ಸರಕಾರಿ ಗೋದಾಮುಗಳನ್ನು, ಮುಸ್ಲಿಮರ ಮತ್ತು ದಲಿತರ ಮನೆಗಳನ್ನು ಅವರು ಮುಟ್ಟದೇ ಇರುವುದನ್ನು ಕಂಡು ನಮಗೆ ಆಶ್ಚರ್ಯವಾಯಿತು.

ಪಕ್ಕದ ಹಳ್ಳಿಯಲ್ಲಿ ಆಶ್ರಯ ಪಡೆದಿದ್ದ ಇಬ್ಬರು ಕುರಿ ಕಾಯುವವರು ಅಲ್ಲಿಗೆ ಬಂದರು. ಸಾಕ್ಷಿಗಳು ನಮಗೆ ಕೊಟ್ಟ ಮಾಹಿತಿಯನ್ನು ಅವರು ದೃಢೀಕರಿಸಿದರು. ನಾವು ಅಲ್ಲಿ ನಾಶಗೊಂಡ ಮನೆಗಳ, ಮೂಳೆಗಳ ಫೋಟೋ ತೆಗೆದುಕೊಂಡೆವು. ಗಾಯಗೊಂಡವರಲ್ಲಿ ಮತ್ತು ಹತರಾದವರಲ್ಲಿ ಹೆಚ್ಚಿನವರು ಲಿಂಗಾಯತರೇ ಆಗಿದ್ದರು.'

ಇದರ ಇಂಗ್ಲಿಷ್ ಪಾಠ :

Hyderabad Lawyers' Vigilance Committee Report 17-5-1948.

Later, the Lawyers' Vigilance Committee, including a Member of the Legislative Council, visited several of these unfortunate villages and made their report. A lurid picture was given by the Vigilance Committee of the village of Gorta, which was destroyed on May 10 as a part of the campaign which began in February.

After Chincholi we reached Gorta on the 17th of May 1948 at 11 a.m. Gorta presented an awful and heart -rending sight. Nobody was there except one wounded person and three aged women. The whole village and its surroundings, even from afar, were stinking awfully. Hundreds of cattle were breathing their last for want of water and fodder. All round the village the dead bodies of animals were seen lying in a decomposed state. Heaps of human skeletons and bones and half-burnt dead bodies were seen lying even at the time of our visit in different places in the whole village. Even in the very village the bad odour is unbearable.

The village in completely desolated. The houses and the localities have been entirely ruined. Mr. Abdul Hamid Khan, Sub-Inspector, Karimabad, along with six constables, is staying in the Luxmi Temple.

There (had been) many wealthy Hindu inhabitants in the village before this incident. There were 400 houses in the village with a population of 2,500. But now, except the Government godown and the houses belonging to the community of the depressed classes and the Muslims, the rest have been gutted. The loss is estimated at Rs. 70 lakhs.

Till our visit to the village, no *panchanama* had been prepared by the police either of (the) human bones or (the) dead bodies or the gutted houses, (or) that of the loss. The said Sub-Inspector stated that no *Panch* was available for preparing the *panchanama*, and that he was unable to identify the bones and the dead bodies burnt.

Meanwhile a resident of the village who had taken shelter in the adjoining village, came there in search of his cattle. (He) appeared to be utterly frightened. In the absence of the Sub-Inspector we consoled him and on enquiry he started weeping, and said : 'More than 200 persons have been mercilessly murdered and the dead bodies have been burnt in cow-dung cakes and heaps of fodder.' He even pointed out where the

dead bodies (had been) heaped together and burnt.

We stepped into the house, along with the Sub-Inspector, where the dead bodies had been gathered together and burnt. Human skulls and bones were found everywhere. Their *panchanama* was prepared in our presence. After (that) we and the Sub-Inspector proceeded to the field of Mr. Narayan Rao Moktedar, where heaps of *kadbi* were lying. Many dead bodies (had been) gathered and burnt in the heaps. Here also human bones and the remains of the dead bodies were found, half burnt. Moreover, there were two heaps of *kadbi* in the field of one Channappa in which dead bodies (had been) burnt. Human skulls and bones were found there.

It is evident from the inspection of these places that over 200 persons (had been) murdered. After the preparation of (the) *panchanama* the Sub-Inspector collected the bones and sent them for medical examination. One witness said that the raiders were Muslims and Dheds. They belonged to different villages. Most of them belonged to the villages Godgaon, Boral, Kankat, Borwadi, Kamla, Chincholi and Panchnal.

Another witness said that the raiders numbered 500 and (he) knew many of them. One constable named Qudrat Ullah bearing badge No. 38 (had been) present on the occasion. He stated that the attack had taken place on 10th May and 300 goondas took part in the raid, and the villagers resisted for two days, but due to constant and serious attack, they had to run for their lives. The house of Mhadappa, which was more or less a fort, was gutted completely. All the other houses were also fully burnt. But we are surprised that the Government godowns and the houses belonging to Muslims and the depressed classes were left untouched.

Meanwhile two shepherds, who had taken shelter in the adjoining village, happened to come over there. Both of them corroborated the statement of the witness. We have taken many snapshots of the gutted houses and the bones. Most of the wounded and the mudered belonged to the Lingayat community.

(*The End of An Era*)

***

ಗಡಿ ಶಿಬಿರಗಳು

ಹೈದರಾಬಾದ ರಾಜ್ಯದ ಒಳಗಿದ್ದು ಪ್ರತಿಭಟಿಸುವುದು ಚಳವಳಿಕಾರರ ಮೊದಲನೆಯ ಮಾರ್ಗವಾಗಿತ್ತು. ಆದರೆ ಅದರಿಂದ ಸರಕಾರಕ್ಕೆ ಬಗ್ಗು ಬಡಿಯುವುದು ಕಠಿಣವೆನಿಸಹತ್ತಿತು. ಈ ಚಳವಳಿಕಾರರು ಹಿಡಿದಿದ್ದು ನ್ಯಾಯದ ಮಾರ್ಗ. ತಮ್ಮ ಏನೇ ಬೇಡಿಕೆಗಳಿದ್ದರೂ ನ್ಯಾಯೋಚಿತವಾಗಿ ಅವುಗಳನ್ನು ಈಡೇರಿಸಿಕೊಳ್ಳಬೇಕೆಂಬುದು ಅವರ ವಿಚಾರವಿತ್ತು. ಉದಾಹರಣೆಗಾಗಿ, ಧಾರ್ಮಿಕ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಎಲ್ಲ ಜನಾಂಗದವರ ಸಮಾನತೆಯ ಹಕ್ಕು ಇವೆಲ್ಲ ಈ ಚಳವಳಿಗಾರರ ಬೇಡಿಕೆಗಳಾಗಿದ್ದವು. ಒಂದು ನಿಯಮದ ಚೌಕಟ್ಟಿನಲ್ಲಿ, ಒಂದು ವಿಧಿವಿಧಾನಕ್ಕೆ ಒಳಗಾಗಿ, ಒಂದು ಸಂವಿಧಾನಕ್ಕೆ ತಲೆಬಾಗಿ ಆಡಳಿತ ನಡೆಸುವಂಥ ಸರಕಾರದ ಎದುರಿನಲ್ಲಿ ಈ ಎಲ್ಲ ಬೇಡಿಕೆಗಳಿಗೆ ಒಂದು ಅರ್ಥವಿರುತ್ತದೆ. ಆದರೆ ಯಾವ ನೀತಿನಿಯಮವೂ ಇಲ್ಲದ, ದುಂಡಾವರ್ತಿಯೇ ತನ್ನ ತತ್ವಸಿದ್ಧಾಂತವೆಂದು ಭಾವಿಸಿದ ಸೈತಾನೀ ಆಡಳಿತದಲ್ಲಿ ಈ ಚಳವಳಿಕಾರರು ಕೈಕೊಂಡ ಮಾರ್ಗ ಯಶಸ್ಸಿ ತರುವಂಥದ್ದಾಗಿರಲಿಲ್ಲ. ಅದಕ್ಕಾಗಿ ಒಂದು ಬೇರೆಯ ವಿಧಾನವನ್ನೇ ಕೈಕೊಳ್ಳಬೇಕೆಂದು ಚಳವಳಿಯ ನಾಯಕರು ಯೋಚಿಸಿದರು. ಈ ಹಂತದಲ್ಲಿ ಆರ್ಯಸಮಾಜ, ಸ್ಟೇಟ ಕಾಂಗ್ರೆಸ ಮುಂತಾದ ಸಂಘಟನೆಗಳು ತಮ್ಮ ಎಲ್ಲ ಐಡೆಂಟಿಟಿಗಳನ್ನು ಮರೆತು ತಾವು ವಿಮೋಚನಾ ಚಳವಳಿಯ ಹೋರಾಟಗಾರರು ಎಂಬ ಒಂದೇ ಒಂದು ಐಡೆಂಟಿಟಿಯನ್ನು ಇಟ್ಟುಕೊಂಡು ಮುಂಧಿನ ಕಾರ್ಯಯೋಜನೆಯನ್ನು ಕುರಿತು ಚಿಂತನೆ ಮಾಡಿದರು.

ನಿಜಾಮನ ರಾಜ್ಯಾಡಳಿತವನ್ನು ಹದಗೆಡಿಸಬೇಕಾದರೆ ಆಡಳಿತಯಂತ್ರದ ಮೂಗು ಹಿಡಿಯಬೇಕು. ಆಡಳಿತದಲ್ಲಿ ಗೊಂದಲವುಂಟಾಗುವಂತೆ ಮಾಡಬೇಕು. ಆಡಳಿತ ನಡೆಯದಂತೆ ಮಾಡಬೇಕು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಕೆಲವು ಸಂಘಟನೆಗಳು ರೈಲು ಹಳಿ ಕಿತ್ತುವುದನ್ನು, ಟೆಲಿಫೋನ ತಂತಿಗಳನ್ನು ಕಡಿದು ಹಾಕುವುದನ್ನು, ಪೊಲೀಸ ಠಾಣೆಗಳಿಗೆ ಬೆಂಕಿ ಇಡುವುದನ್ನು ಮಾಡುತ್ತಿದ್ದರು. ಅದು ಸಜ್ಜನರು ಮಾಡುವ ಕೆಲಸವಲ್ಲ. ಆದರೆ 'ಕತ್ತೆಗೆ ಲತ್ತೆ ಪೆಟ್ಟು' ಎನ್ನುವಂತೆ ಎಂಥವರೊಂದಿಗೆ ಅಂಥದ್ದೇ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಚಳವಳಿಕಾರರು ಯೋಚಿಸಿದರು. ಈ ಕೆಲಸ ರಾಜ್ಯದ ಒಳಗಿದ್ದು ಮಾಡುವುದು ಸುಲಭವಾಗಲಾರದು. ಈ ರೀತಿ ಯೋಚಿಸಿ ಚಳವಳಿಕಾರರು ರಾಜ್ಯದ ಗಡಿಯ ಉದ್ದಕ್ಕೂ ಗಡಿಗೆ ಅಂಟಿಕೊಂಡು ಹೊರರಾಜ್ಯಗಳಲ್ಲಿರುವ ಗ್ರಾಮಗಳನ್ನು ತಮ್ಮ ಕೇಂದ್ರಗಳನ್ನಾಗಿ ಮಾಡಿಕೊಂಡು ಕಾರ್ಯಾಚರಣೆ ಮುಂದುವರಿಸಬೇಕೆಂದು ನಿಶ್ಚಯಿಸಿದರು. ಈ ಶಿಬಿರಗಳ ಸ್ಥಾಪನೆಯ ರೂವಾರಿ ಸ್ವಾಮಿ ರಮಾನಂದ ತೀರ್ಥರಾಗಿದ್ದರು. ಅದರಂತೆ ಹೈದರಾಬಾದ ರಾಜ್ಯದ ಪಶ್ಚಿಮ ಗಡಿಯ ಉದ್ದಕ್ಕೂ ಅನೇಕ ಶಿಬಿರಗಳು ಏರ್ಪಟ್ಟವು. ಅಂಥ ಶಿಬಿರಗಳು ಮತ್ತು ಅವುಗಳ

ಪ್ರಮುಖ ಸಂಚಾಲಕರು (ಶಿಬಿರಾಧಿಕಾರಿಗಳು) ಇವರ ಕುರಿತ ಮಾಹಿತಿ ಈ ಕೆಳಗಿನಂತಿದೆ :

೧.	ದುಧನಿ	ಗುರುಭೀಮರಾವ ಪಾಟೀಲ
೨.	ಸೋಲಾಪುರ	ಅಪ್ಪಾರಾವ ಪಾಟೀಲ ಮಹಾಗಾಂವಕರ
೩.	ಸಿಂದಗಿ	ಸರದಾರ ಶರಣಗೌಡರು ಇನಾಮದಾರ
೪.	ಕಕ್ಕಳಮೇಲಿ	ಸರದಾರ ಶರಣಗೌಡರು ಮತ್ತು ದಾಸರಾವ ಮಕ್ತೆದಾರ ಇವರಿಬ್ಬರ ನಾಯಕತ್ವದಲ್ಲಿತ್ತು.
೫.	ಕೇಸರ ಜಾವಳಗಾ	ಡಿ.ಬಿ. ಕಲ್ಮಣಕರ
೬.	ಹೊಟಗಿ	ನಾರಾಯಣರಾವ ಕಾನಿಹಾಳ
೭.	ಮೈಂದರ್ಗೀ	ಹಕೀಕತರಾವ ಚಿಟಗೋಪಕರ
೮.	ವಾಗದರಿ	ಅಣ್ಣಾರಾವ ಪಾಟೀಲ ಆಳಂದ
೯.	ಗೌಡಗಾಂವ	ಭೈರಪ್ಪ ಗೌಡ ಭೂಸನೂರು
೧೦.	ಮಾದನಹಿಪ್ಪರಗಾ	ಸಾಬಣ್ಣ
೧೧.	ಮುಂಡರಗಿ	ಅಳವಂಡಿ ಶಿವಮೂರ್ತಿ ಸ್ವಾಮಿಗಳು
೧೨.	ಗಜೇಂದ್ರಗಡ	ಪುಂಡಲೀಕಪ್ಪ ಜ್ಞಾನಮೋತೆ
೧೩.	ಇಟಗಿ	ತಿರುಮಲರಾವ ಎ.
೧೪.	ಮಂತ್ರಾಲಯ	ಜಿ. ರಾಘವೇಂದ್ರರಾವ
೧೫.	ಆದವಾನಿ	ಗುರುನಾಥ ಗೌಡ
೧೬.	ತುಂಗಭದ್ರಾ	ಗುಡ್ಡದ ರಾಘವೇಂದ್ರರಾವ
೧೭.	ಸಾಲೋಟಗಿ	ಬಸವಂತರಾಯ ಪಾಟೀಲ, ಹಗರಟಗಿ
೧೮.	ಗುಡ್ಡದ ಮಲ್ಲಾಪೂರ	ಆರ್. ವಿ. ಬೀಡಪ, ಚಿಟಗೋಪಾ
೧೯.	ಹೆಸರೂರು	ವಿರೂಪಾಕ್ಷಪ್ಪಾ
೨೦.	ಬರದೂರು	ಅನಂತಜೋಶಿ ಮತ್ತು ಮುಡಿಯಪ್ಪ ಗೌಡ, ಕವಲೂರು
೨೧.	ಹಳ್ಳೀಕೇರಿ	ಲಿಂಗನಗೌಡ ಪೊಲೀಸಪಾಟೀಲ
೨೨.	ಸೂಡಿ	ಇಟಗಿ ವಿರೂಪಾಕ್ಷಯ್ಯ
೨೩.	ತಿಮ್ಮಾಪೂರ	ಕುಕನೂರು ನಾಗಪ್ಪಾ
೨೪.	ನರೇಗಲ	ಅಬ್ಬೀಗೇರಿ ನಾಗಪ್ಪಾ
೨೫.	ನಿಡಗುಂದಿ	ಡಂಬಳ ಸೋಮಣ್ಣ
೨೬.	ಕೊಪ್ಪ	ಆನಂದ ಗೌಡ

೨೭.	ತಂಬ್ರಹಳ್ಳಿ	ಸಿದ್ಧಲಿಂಗಪ್ಪಾ
೨೮.	ಹಂಪಸಾಗರ	ಪಂಚಾಕ್ಷರಿ ಹಿರೇಮಠ
೨೯.	ಬಾಚಿಕೊಂಡನ ಹಳ್ಳಿ	ಕೆ. ಚೆನ್ನಬಸವನ ಗೌಡ
೩೦.	ಇಲಕಲ್	ಸೌದೆ ಗುರಪ್ಪ
೩೧.	ತಾಳಿಕೋಟೆ	ರಾಜಾ ವೆಂಕಟಪ್ಪ ನಾಯಕ ಸುರಪುರ ಮುಖ್ಯಸ್ಥರು. ಅಪ್ಪಾರಾವ ವಕೀಲರು ಸಹಾಯಕರಾಗಿದ್ದರು.
೩೨.	ಹಳ್ಳಿಕರೂರ	ಶಂಕರಗೌಡ ಬೆಟ್ಟದೂರು
೩೩.	ತೊಂಚೇರ	ಅಣ್ಣಾರಾವ ಪಾಟೀಲ ಕೌಳಖೇಡ
೩೪.	ಲಿಂಗದಳ್ಳಿ	ಭಾವುಪಾಟೀಲ

ಈ ಎಲ್ಲ ಶಿಬಿರಗಳ ಮೂಲ ಉದ್ದೇಶಗಳು ಒಂದೇಯಾಗಿದ್ದರೂ ಆಯಾ ಶಿಬಿರಗಳ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯಕ್ರಮಗಳಲ್ಲಿ ಶಿಬಿರಾಧಿಪತಿಗಳು ಬದಲಾವಣೆ ಮಾಡಿಕೊಳ್ಳುತ್ತಿದ್ದರು. ಈ ಪ್ರಮುಖ ಶಿಬಿರಗಳಲ್ಲದೆ ಇವುಗಳ ಆಧೀನದಲ್ಲಿ ಇನ್ನೂ ಕೆಲವು ಚಿಕ್ಕ ಚಿಕ್ಕ ಶಿಬಿರಗಳಿರುತ್ತಿದ್ದವು. ಅವುಗಳ ಉಸ್ತುವಾರಿಯನ್ನು ಈ ಪ್ರಮುಖ ಶಿಬಿರಾಧಿಪತಿಗಳೇ ನೋಡಿಕೊಳ್ಳುತ್ತಿದ್ದರು. ಈ ಎಲ್ಲ ಶಿಬಿರಗಳಲ್ಲಿ ವ್ಯವಸ್ಥಿತವಾಗಿ ಆಡಳಿತ ಸಮಿತಿ, ಸಂರಕ್ಷಣಾ ಸಮಿತಿ, ಕ್ರಿಯಾ ಸಮಿತಿ ಮತ್ತು ಸಹಾಯಕ ಸಮಿತಿ ಎಂದು ಸಮಿತಿಗಳನ್ನು ರಚಿಸಿಕೊಂಡು ಎಲ್ಲರೂ ಕೆಲಸ ಹಂಚಿಕೊಳ್ಳುತ್ತಿದ್ದರು. ಒಂದು ಕಟ್ಟುನಿಟ್ಟಾದ ನಿಯಮ ನಿಬಂಧನೆಗಳು ಇಲ್ಲದಿದ್ದರೆ ಯಾವ ಸಂಘಟನೆಯೂ ಸುಸೂತ್ರವಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಶಿಬಿರದ ಎಲ್ಲ ಸದಸ್ಯರು ತಮ್ಮನ್ನು ತಾವು ಅಲಿಖಿತ ನಿಬಂಧನೆಗಳಿಗೆ ಕಟ್ಟುಹಾಕಿಕೊಂಡಿರುವುದರಿಂದ ಎಲ್ಲ ಕಾರ್ಯಗಳು ಬಹಳ ಯಶಸ್ವಿಯಾಗಿ ನಡೆಯುತ್ತಿದ್ದವು.

ಈ ಶಿಬಿರಗಳ ಪ್ರಮುಖವಾದ ಹೋರಾಟದ ರೂಪರೇಷೆಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ಪಟ್ಟಿ ಮಾಡಬಹುದು :

೧. ನಿಜಾಮ ಸರಕಾರದ ಎಲ್ಲ ಬಗೆಯ ಆಡಳಿತದ ಕಾಯ್ದೆಗಳನ್ನು ಮುರಿಯುವುದು.

೨. ಸರಕಾರದ ಕಾಗದ ಪತ್ರಗಳು ಎಂದರೆ ಗೌಡ, ಕುಲಕರ್ಣಿಯರ ದಪ್ತರಗಳನ್ನು ಸುಟ್ಟುಹಾಕುವುದು.

೩. ಅಬಕಾರಿ ಕಾಯ್ದೆಯನ್ನು ಮುರಿದು ಗಡಿಯಲ್ಲಿರುವ ಎಲ್ಲಾ ಸೇಂದಿ ಅಂಗಡಿಗಳನ್ನು ಸುಟ್ಟು ನಾಶಗೊಳಿಸುವುದು.

೪. ಲೇವಿ ಎತ್ತುವುದನ್ನು ಹಾಗೂ ವಸೂಲಿ ಮಾಡುವುದನ್ನು ನಿಲ್ಲಿಸುವುದು.

೫. ಗಡಿ ಪ್ರದೇಶಗಳಲ್ಲಿರುವ ಎಲ್ಲ ಕರೋಡಗಿರಿ (ಕಸ್ಟಮ್ಸ್ ಕಚೇರಿ) ನಾಕಾಗಳನ್ನು ನಾಶಗೊಳಿಸಿ ಎಲ್ಲಾ ರಿಕಾರ್ಡ್‌ಗಳನ್ನು ಸುಟ್ಟುಹಾಕುವುದು.

೬. ಜನರಿಗೆ ಹೈದರಾಬಾದ ವಿಮೋಚನೆಯ ಚಳವಳಿಯ ಬಗ್ಗೆ ತಿಳಿವಳಿಕೆ ಕೊಟ್ಟು ಅವರನ್ನು ಅದಕ್ಕಾಗಿ ಪ್ರಚೋದಿಸುವುದು.

೭. ನಿಜಾಮ ಸರಕಾರದಲ್ಲಿ ಅಧಿಕಾರದಲ್ಲಿರುವ ಹಿಂದೂ ಅಧಿಕಾರಿಗಳನ್ನು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಡುವಂತೆ ಮನ ಒಲಿಸುವುದು.

೮. ಗಡಿಭಾಗದಲ್ಲಿ ಪ್ರಜೆಗಳಿಗೆ ಪಠಾಣರು, ರಜಾಕಾರರು ಮತ್ತು ನಿಜಾಮ ಪೋಲೀಸರು ಕೊಡುವ ಕಿರುಕುಳ, ಅತ್ಯಾಚಾರ ಹಾಗೂ ಸುಲಿಗೆಗಳನ್ನು ತಡೆಯಲು ಅವರೊಂದಿಗೆ ಹೋರಾಡುವುದು.

ಮೇಲೆ ಉಲ್ಲೇಖಿಸಿದ ರೂಪರೇಷೆಗಳಂತೆ ಕಾರ್ಯಾಚರಣೆ ಕೈಕೊಳ್ಳಲಾಗುತ್ತಿತ್ತು. ಗಡಿ ಭಾಗದಲ್ಲಿಯ ಜನರ ಪ್ರಾಣ, ಮಾನ ಹಾಗೂ ಸಂಪತ್ತನ್ನು ನಿಜಾಮ ಸರಕಾರದ ಪೋಲೀಸ ಪಡೆ, ಪಠಾಣರ ಸೈನ್ಯ ಹಾಗೂ ರಜಾಕಾರರು ಲೂಟಿ ಮಾಡುವುದು, ಆಕ್ರಮಣ ಮಾಡುವುದು ಮತ್ತು ಕೊಲೆ ಮಾಡುವುದು ಮಾಡುತ್ತಿದ್ದರು. ಇಂಥ ಸಮಸ್ಯೆಯನ್ನು ಎದುರಿಸಲು ಸತ್ಯಾಗ್ರಹದಂಥ ಅಸ್ತ್ರಗಳು ಕೆಲಸಕ್ಕೆ ಬಾರದಾಗಿದ್ದವು. ಅದಕ್ಕಾಗಿ ಸಶಸ್ತ್ರ ಹೋರಾಟವೇ ಬೇಕಾಗಿತ್ತು. ಹಿಂದೆ ಇದ್ದಂಥ ಸೌಮ್ಯವಾದಿ ನೇತಾರರ ಮಾತುಗಳನ್ನು ಕೇಳುತ್ತ ಕುಳಿತರೆ ಸಾಧ್ಯವಾಗುತ್ತಿರಲಿಲ್ಲ. ಈ ಶಿಬಿರಗಳಲ್ಲಿ ವ್ಯವಸ್ಥಿತವಾಗಿ ಸಶಸ್ತ್ರ ಹೋರಾಟಕ್ಕೆ ತಯಾರಿ ಮಾಡಿಕೊಳ್ಳಲಾಗುತ್ತಿತ್ತು.

ಮುಂಡರಗಿ ಶಿಬಿರದ ಮುಖಂಡತ್ವವನ್ನು ವಹಿಸಿದ್ದ ಶಿವಮೂರ್ತಿ ಸ್ವಾಮಿ ಅಳವಂಡಿಯವರು ತಮ್ಮ ಮಠದಿಂದ ಶಿಬಿರಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನು ದೊರಕಿಸಿಕೊಳ್ಳುತ್ತಿದ್ದರು. ತಮ್ಮ ಮಠದ ಸ್ಥಿರ ಚರ ಸಂಪತ್ತನ್ನೆಲ್ಲ ಅವರು ಈ ಹೋರಾಟಕ್ಕಾಗಿ ಮೀಸಲಾಗಿಟ್ಟಿದ್ದರು. ರಜಾಕಾರರಿಗೆ ಇದೆಲ್ಲ ಗೊತ್ತಿತ್ತು. ಅಳವಂಡಿ ಮಠವನ್ನೇ ಲೂಟಿ ಮಾಡಿದರೆ ಹೇಗೆ ಎಂದು ಅತ್ಯಾಚಾರಿಗಳು ಯೋಚಿಸಿ ಒಂದು ದಿನ ಮಠದ ಮೇಲೆ ದಾಳಿ ಮಾಡಿದರು. ಮಠದಲ್ಲಿದ್ದ ಶಿವಮೂರ್ತಿ ಸ್ವಾಮಿಗಳ ತಂದೆ, ತಾಯಿ, ತಮ್ಮಂದಿರು, ಬಂಧುಗಳು ಮತ್ತು ಸೇವಕರನ್ನು ಮಠದಿಂದ ಹೊರಹಾಕಿ ಮಠವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಮಠದಲ್ಲಿದ್ದ ಚರಸಂಪತ್ತೇನೋ ಲೂಟಿ ಮಾಡಿದರು. ಆದರೆ ಅಮೂಲ್ಯವಾದ ಅನೇಕ ತಾಡೋಲೆ ಗ್ರಂಥಗಳನ್ನು ಸುಟ್ಟುಹಾಕಿದರು. ಲೂಟಿ ಮಾಡಿದ ಸಂಪತ್ತನ್ನು ಲಾರಿಯಲ್ಲಿ ತುಂಬಿಕೊಂಡು ಒಯ್ದರು. ಮಠದಲ್ಲಿದ್ದ ವೀರಭದ್ರ ಮೂರ್ತಿಯನ್ನು ಒಡೆದು ನಾಶಗೊಳಿಸಿದರು. ಇಲ್ಲಿ ಒಂದು ಪವಾಡ ನಡೆಯಿತೆಂದು ಹೇಳುತ್ತಾರೆ. ಈ ಮಠದ ಮೂಲ ಗದ್ದುಗೆ ಶ್ರೀ ಮರುಳಸಿದ್ಧೇಶ್ವರನನ್ನು ವಿಧ್ವಂಸಗೊಳಿಸಲು ಹೋಗಹೋಗುತ್ತಲೇ ಕೆಲವರು ತಲೆ ತಿರುಗಿ ಬಿದ್ದರು. ಇನ್ನೂ ಕೆಲವರು ಹೊಟ್ಟೆನೋವಿನಿಂದ ಒದ್ದಾಡಿ ಒಳಗೆ ಪ್ರವೇಶಮಾಡದವರಾದರು. ಈ ಮಧ್ಯೆ ಆ ಊರಲ್ಲಿದ್ದ ಮುಸಲ್ಮಾನ ಬಾಂಧವರು ಅಲ್ಲಿಗೆ ಬಂದು ಪರಿಪರಿಯಾಗಿ ಕೇಳಿಕೊಂಡರು, ಈ ಮಠ ಪವಿತ್ರ ಸ್ಥಾನವಾಗಿದೆ. ಈ ಗದ್ದುಗೆ ಗ್ರಾಮದ ಅಧಿದೇವತೆ. ಕೂಡಲೇ ಈ ಮಠವನ್ನು ಖಾಲಿ ಮಾಡಿರಿ.

ಇಟಗಿ ಶಿಬಿರದ ಸುತ್ತಮುತ್ತ ಇರುವ ಗುಳಗುಳಿ, ಘಾಗಳಿ, ಶಾಂತಗಿರಿ, ಹಿರೇಅಳಗುಂಡಿ, ಚಿಕ್ಕಳಗುಂಡಿ, ತಳ್ಳಿಹಾಳ, ಹೊನ್ನಿಗನೂರು ಮುಂತಾದ ೧೩ ಹಳ್ಳಿಗಳನ್ನು ಸೇರಿಸಿಕೊಂಡು 'ಆಝಾದ ಐಲ್ಯಾಂಡ' ಎಂದು ನಾಮಕರಣ ಮಾಡಿಕೊಂಡು ಕೆಲಸ ಮಾಡಲಾಗುತ್ತಿತ್ತು. ಪ್ರತಿ ಗ್ರಾಮದಿಂದ ೧೦೦ ಜನ ಶಿಬಿರಾರ್ಥಿಗಳಂತೆ ಒಟ್ಟು ೧,೩೦೦ ಶಿಬಿರಾರ್ಥಿಗಳು ಈ ಶಿಬಿರದಲ್ಲಿದ್ದರು. ಅವರಿಗೆಲ್ಲ ಮಿಲ್ಟ್ರಿ ಸಮವಸ್ತ್ರಗಳನ್ನು ಹೊಲಿಸಿ ಸೈನಿಕರಂತೆ ತಯಾರು ಮಾಡಿದರು. ಲಾಠಿ, ಬರ್ಚಿ, ಬಂದೂಕು,

ಬಾಂಬ್, ಪಿಸ್ತೂಲು, ಕತ್ತಿ ಮುಂತಾದ ಆಯುಧಗಳ ಬಳಕೆಗಾಗಿ ವಿಧಿವತ್ತಾಗಿ ತರಬೇತಿ ಕೊಡಲಾಗುತ್ತಿತ್ತು. ಈ ತರಬೇತಿಗಾಗಿ ಕಾಲಕಾಲಕ್ಕೆ ಆಳಂದದಿಂದ ವೇಣುಗೋಪಾಲ, ತಾಂಡೂರದಿಂದ ಸಿದ್ಧರಾಮಪ್ಪ, ಬಾರ್ಸಿಯಿಂದ ರಾಮಜೀ, ಸುಭಾಷಚಂದ್ರ ಬೋಸರ ಆಝಾದ ಹಿಂದ ಸೇನೆಯಲ್ಲಿ ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿದ ಪಂಜಾಬಿನವರಾದ ಕ್ಯಾಪ್ಟನ್ ಜಗತ್‌ಸಿಂಗ ಮುಂತಾದವರನ್ನು ಕರೆಸಿಕೊಳ್ಳಲಾಗುತ್ತಿತ್ತು. ಆ ವರ್ಷ ಹೊಲಗಳಲ್ಲಿಯ ಬೆಳೆ ಕಟಾವು ಮಾಡದೇ ಹಾಗೇ ಬಿಟ್ಟಿದ್ದರು. ಯಾಕೆಂದರೆ ಆ ಬೆಳೆಗಳ ನಡುವೆ ಅಡಗಿ ಕುಳಿತು ವೈರಿಗಳ ಮೇಲೆ ದಾಳಿ ಮಾಡಲು ಅನುಕೂಲವಾಗುತ್ತಿತ್ತು. ಖಾರಪುಡಿಯ ಚಿಕ್ಕ ಚಿಕ್ಕ ಪೊಟ್ಟಣಗಳನ್ನು ತಯಾರಿಸಿ ರಾಜ್ಯದ ಗಡಿಯ ಒಳಗಿನ ಹಳ್ಳಿಗಳಲ್ಲಿಯ ಹೆಣ್ಣುಮಕ್ಕಳಲ್ಲಿ ಹಂಚಲಾಗಿತ್ತು. ಅತ್ಯಾಚಾರಿಗಳೇನಾದರೂ ಆಕ್ರಮಣ ಮಾಡಲು ಬಂದರೆ ಅವರ ಕಣ್ಣಲ್ಲಿ ಖಾರಪುಡಿ ಉಗ್ಗಿ ತಮ್ಮ ರಕ್ಷಣೆ ಮಾಡಿಕೊಳ್ಳಬೇಕೆಂದು ಅವರಿಗೆ ಹೇಳಿದ್ದರು.

ನಿಜಾಮ ಸರಕಾರದ ಪೊಲೀಸ ಪಡೆ ಮತ್ತು ರಜಾಕಾರರ ತಂಡಗಳು ಕುಕನೂರಿನ ಪೊಲೀಸ ಠಾಣೆಯಲ್ಲಿ ಬೀಡುಬಿಟ್ಟಿದ್ದವು. ಅದನ್ನು ಕೇಂದ್ರವಾಗಿಟ್ಟುಕೊಂಡು ಅವರು ತಮ್ಮ ಸೈತಾನಿ ಕಾರ್ಯಾಚರಣೆಯನ್ನು ಮಾಡುತ್ತಿದ್ದರು. ಮುಂಡರಗಿ ಶಿಬಿರದ ಗುಪ್ತದಳದಿಂದ ಪ್ರತಿದಿನ ಇದರ ಮಾಹಿತಿ ದೊರೆಯುತ್ತಿತ್ತು. ಆಗ ಮುಂಡರಗಿ ಶಿಬಿರದ ನಾಯಕರು ಒಂದು ಕಾರ್ಯಯೋಜನೆಯನ್ನು ರೂಪಿಸಿಕೊಂಡರು. ಕೆ.ಎಸ್. ಪಾಟೀಲ, ಡಾ. ಚುರ್ಚಿಹಾಳಮಠ ಇವರ ನೇತೃತ್ವದಲ್ಲಿ ಕಾಳಪ್ಪ ಯರಾಶಿ, ಗೂಳಪ್ಪ ಅಗಸರ, ಮುರಗೋಡು ಮಹಾದೇವಪ್ಪನವರ ಶಿಷ್ಯಳಾದ ಈರಮ್ಮ ಶಿರಹಟ್ಟಿಮಠ ಇವರೆಲ್ಲ ಪೊಲೀಸ ಠಾಣೆಯ ಮೇಲೆ ದಾಳಿ ಮಾಡಲು ತಯಾರಾಗಿ ಹೊರಟರು. ಮಧ್ಯರಾತ್ರಿಯಲ್ಲಿ ಪಠಾಣರು ಮತ್ತು ರಜಾಕಾರರು ಗಾಢನಿದ್ರೆಯಲ್ಲಿರಬೇಕಾದರೆ ಈ ವೀರರು ಠಾಣೆಯ ಒಳಗೆ ನುಗ್ಗಿದರು. ಪ್ರಭುರಾಜ ಪಾಟೀಲ ಎನ್ನುವವರು ಒಬ್ಬ ಪಠಾಣನ ಎದೆಗೆ ಗುರಿಯಿಟ್ಟು ಗುಂಡುಹಾರಿಸಬೇಕೆನ್ನುವಷ್ಟರಲ್ಲಿ ಆ ಪಠಾಣನು ಎಚ್ಚರಾಗಿ ಗುಂಡಿನ ಗುರಿಯಿಂದ ತಪ್ಪಿಸಿಕೊಂಡು ತಿರುಗಿ ಅವರ ಎದೆಗೆ ಪಿಸ್ತೂಲು ಹಿಡಿದು ನಿಂತನು. ಇನ್ನೇನು ಆತ ಪಿಸ್ತೂಲಿನಿಂದ ಗುಂಡು ಹಾರಿಸಬೇಕು ಅಷ್ಟರಲ್ಲಿ ಹಿಂದಿನಿಂದ ಕರಿಸಿದ್ಧಸ್ವಾಮಿಗಳೆನ್ನುವವರು ತಮ್ಮಲ್ಲಿದ್ದ ಪಿಸ್ತೂಲಿನಿಂದ ಗುಂಡು ಹಾರಿಸಿ ಪಠಾಣನ ಕೆಲಸ ಮುಗಿಸಿದರು. ಈ ರೀತಿ ಬಹಳ ಹೊತ್ತಿನ ವರೆಗೆ ಘರ್ಷಣೆ ನಡೆದು ಕೊನೆಗೂ ಪೊಲೀಸ ಠಾಣೆಯನ್ನು ವಶಪಡಿಸಿಕೊಳ್ಳಲಾಯಿತು.

ಗುಲಬರ್ಗಾ ಜಿಲ್ಲೆಯ ಗಡಿಯಲ್ಲಿರುವ ವಾಗದರಿ ಶಿಬಿರದ ಹೊಣೆಯನ್ನು ಆಳಂದದ ಅಣ್ಣಾರಾವ ವೀರಭದ್ರಪ್ಪ ಪಾಟೀಲ ಇವರಿಗೆ ವಹಿಸಲಾಗಿತ್ತು. ಇವರು ನಾಲ್ಕಾರು ಜನ ಸಂಗಡಿಗರೊಂದಿಗೆ ವಾಗದರಿಗೆ ಹೋದರೆ ಯಾರೂ ಇವರಿಗೆ ವಾಸಕ್ಕಾಗಿ ಜಾಗ ಕೊಡಲು ಕೂಡ ತಯಾರಾಗಲಿಲ್ಲ. ಒಂದೆರಡು ದಿನ ಹೇಗೋ ಕಾಲ ಕಳೆದು ನಿಧಾನವಾಗಿ ಅಲ್ಲಿಯ ಜನರ ವಿಶ್ವಾಸ ಗಳಿಸಿಕೊಂಡು ವಾಸಕ್ಕೆ ಒಂದು ಮನೆ ಹೊಂದಿಸಿಕೊಂಡರು. ಏಳೆಂಟು ಜನರಿಂದ ಪ್ರಾರಂಭವಾದ ಈ ಶಿಬಿರಕ್ಕೆ ತಿಂಗಳೆನ್ನುವಷ್ಟರಲ್ಲಿ ಸುಮಾರು ನೂರರಷ್ಟು ಜನರು ಬಂದು ಸೇರಿಕೊಂಡರು. ಗುಂಜೋಟಿ, ನಾಯಿಚಾಕೂರ, ಮುರುಮ, ಭಾಲ್ಕಿ, ಬಸವ ಕಲ್ಯಾಣ, ಜಾವಳಿ,

ಸರವಡಿ, ಸರಸಂಬಾ, ಬೇನೂರು, ಲಾತೂರು ಮುಂತಾದ ದೂರದ ಮತ್ತು ಹತ್ತಿರದ ಜನರು ಈ ಶಿಬಿರದಲ್ಲಿದ್ದರು. ಮಧ್ಯಪ್ರದೇಶದ ಸೇವಾ ನಿವೃತ್ತ ಸೈನಿಕನೊಬ್ಬನು ಇಲ್ಲಿ ವಾಸವಾಗಿದ್ದನು. ಆತನ ಹೆಸರು ಹುಕುಮಚಂದ. ಆತನು ಇವರಿಗೆ ಸೇನಾ ತರಬೇತಿಯನ್ನು ಕೊಡುತ್ತಿದ್ದನು. ಮತ್ತು ಆಯುಧಗಳನ್ನು ತಯಾರಿಸಿ ಕೊಡುತ್ತಿದ್ದನು. ವಿಮೋಚನಾ ಚಳವಳಿಯ ಕೇಂದ್ರ ಕಚೇರಿಯಿಂದಲೂ ಆಯುಧಗಳು ಸರಬರಾಜಾಗುತ್ತಿದ್ದವು. ಮೊದಮೊದಲಿಗೆ ಸಾರ್ವಜನಿಕರು ಈ ಶಿಬಿರದ ಜನರನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿದ್ದರು. ಆಮೇಲೆ ಇವರಿಗೆ ಎಲ್ಲರೂ ಹೃದಯ ತುಂಬಿ ಎಲ್ಲ ರೀತಿಯ ಸಹಾಯ ಮಾಡಲು ಪ್ರಾರಂಭಿಸಿದರು.

ಶಿಬಿರದ ನಾಯಕರಾದ ಅಣ್ಣಾರಾವ ಪಾಟೀಲರು ಬಹಳ ಶಿಸ್ತಿನ ವ್ಯಕ್ತಿಗಳಾಗಿದ್ದರು. ಯಾವ ದುಶ್ಚಟಗಳೂ ಇರಲಿಲ್ಲ. ಅವರ ಕಟ್ಟುನಿಟ್ಟುತನ ಶಿಬಿರವನ್ನು ನಿಯಂತ್ರಿಸುತ್ತಿತ್ತು. ಶಿಬಿರಗಳ ಕೇಂದ್ರ ಕಚೇರಿಯಿಂದ ನಿರ್ದೇಶಿಸಲ್ಪಟ್ಟಂತೆ ಮೊದಲು ಸೇಂದಿಗಿಡಗಳನ್ನು ಕಡಿಯುವುದು, ಸೇಂದಿ ಬನಗಳನ್ನು ಸುಡುವುದೆಂದು ನಿರ್ಧರಿಸಲಾಯಿತು. ಆ ಪ್ರದೇಶದ ಮಾಹಿತಿ ಇರುವ ನಾಲ್ಕಾರು ಜನರಿಗೆ ಸೇಂದಿಬನಗಳಿರುವ ಕ್ಷೇತ್ರಗಳ ಪತ್ತೆ ಹಚ್ಚಲು ಕಳಿಸಿದರು. ಸೇಂದಿ ಬನಗಳು ಎಲ್ಲೆಲ್ಲಿವೆ ಎಂಬುದು ಪತ್ತೆಯಾದ ಮೇಲೆ ಇವರು ಕಾರ್ಯಾಚರಣೆಗೆ ಇಳಿದರು. ಕೆಲವು ಪ್ರದೇಶಗಳಲ್ಲಿ ಸೇಂದಿಗಿಡಗಳನ್ನು ಕಡಿದು, ಬನಗಳನ್ನು ಸುಟ್ಟು ಬಿಟ್ಟರು. ಇವರ ಈ ಕೆಲಸ ನಡೆಯುತ್ತಿರಬೇಕಾದರೆ ಒಂದು ದಿನ ಮಧ್ಯಾಹ್ನ ಸು. ೨ ಗಂಟೆಗೆ ಸೋಲಾಪುರದ ಕೇಂದ್ರ ಕಚೇರಿಯಿಂದ ಒಂದು ನಿರ್ದೇಶನ ಬಂದಿತು. 'ಸೇಂದಿಗಿಡಗಳನ್ನು ನಾಶಪಡಿಸುವುದು ಬೇಡ. ಅದರಿಂದ ಅರಣ್ಯ ಸಂಪತ್ತು ನಾಶವಾಗುತ್ತದೆ. ಮುಂದೆ ವಿಮೋಚನೆಗೊಂಡಾಗ ನಾವು ಈ ಸಂಪತ್ತನ್ನು ಬೇರೆ ರೀತಿಯಿಂದ ಲಾಭವಾಗುವಂತೆ ಉಪಯೋಗಿಸಿಕೊಳ್ಳಬಹುದು' ಎಂದು ತಿಳಿಸಿದ್ದರು. ಸೇಂದಿ ಬನ ನಾಶಮಾಡುವ ಬದಲಿಗೆ ಕರೋಡಗಿರಿ ನಾಕಾಗಳನ್ನು ನಾಶಗೊಳಿಸಿರಿ. ಕರೋಡಗಿರಿಯ ಅಧಿಕಾರಿಗಳನ್ನು ಕೊಲ್ಲಿರಿ ಎಂದು ಆದೇಶ ಬಂದಿತ್ತು.

ತೆರಿಗೆ ಸಂಗ್ರಹಿಸುವ ಕಚೇರಿಗೆ ಕರೋಡಗಿರಿ ನಾಕೆ ಎಂದು ಕರೆಯುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಇಂಥ ಕರೋಡಗಿರಿಗಳು ಇರುತ್ತಿದ್ದವು. ಒಂದೊಂದರಂತೆ ಇವರು ಕರೋಡಗಿರಿಗಳನ್ನು ತಮ್ಮ ಗುರಿಯಾಗಿಟ್ಟುಕೊಂಡು ಕಾರ್ಯ ಪ್ರಾರಂಭಿಸಿದರು. ಪಡಸಾವಳಗಿ ಎಂಬ ಗ್ರಾಮದ ಕರೋಡಗಿರಿಯ ಮೇಲೆ ನಾಲ್ಕೆಂಟು ಜನ ಹೋರಾಟಗಾರರು ರಾತ್ರಿಯ ಹೊತ್ತು ದಾಳಿ ಮಾಡಿದರು. ರಾತ್ರಿಯ ಹೊತ್ತು ನಾಕೆದಾರನು ಗೊರಕೆ ಹೊಡೆಯುತ್ತಿದ್ದ. ಒಬ್ಬ ಸಿಪಾಯಿ ಪಹರೆ ಮಾಡುತ್ತಿದ್ದ. ಒಂದು ಕಂದೀಲು ಮಾತ್ರ ಉರಿಯುತ್ತಿತ್ತು. ಇವರು ಕತ್ತಲೆಯಲ್ಲಿಯೇ ನಿಧಾನವಾಗಿ ನಾಕೆಯ ಹತ್ತಿರ ಹೋಗಿ ಒಮ್ಮೆಲೇ ಟಾರ್ಚ ಹಾಕಿದರು. ಸಿಪಾಯಿ ಹೌಹಾರಿ ಬಂದೂಕು ಹಾರಿಸಿದ. ಕತ್ತಲೆಯಲ್ಲಿ ಗುಂಡು ಎಲ್ಲೋ ಹಾರಿ ಹೋಯಿತು. ಗುಂಡಿನ ದನಿ ಕೇಳಿ ನಾಕೆದಾರನು ಎದ್ದ. ಕ್ಷಣಮಾತ್ರದಲ್ಲಿ ಆತನಿಗೆ ಪರಿಸ್ಥಿತಿಯ ಅರಿವಾಯಿತು. ತಕ್ಷಣ ಆತ ಅಲ್ಲಿಂದ ಕಾಲ್ಕಿತ್ತಿದ. ಕತ್ತಲೆಯಲ್ಲಿ ಮಾಯವಾದ. ಶಿಬಿರದ ಜನರು ನಾಕೆಯನ್ನು ವಶಪಡಿಸಿಕೊಂಡರು.

ಮತ್ತೆ ಸೋಲಾಪುರದಿಂದ ನಿರ್ದೇಶನ ಬಂದಿತು. ಕರೋಡಗಿರಿ ನಾಕೆಗಳನ್ನು ನಾಶಗೊಳಿಸಬಾರದು. ವಿಮೋಚನೆಯಾದ ಮೇಲೆ ಇವುಗಳಲ್ಲಿ ನಾವು ಬೇರೆ ಬೇರೆ ಕಚೇರಿಗಳನ್ನು ಸ್ಥಾಪಿಸಬಹುದು ಎಂದು ತಿಳಿಸಿದ್ದರು. ಈ ರೀತಿಯಾಗಿ ಶಿಬಿರದ ಜನರನ್ನು ಮುಕ್ತವಾಗಿ ಹೋರಾಡಲು ಬಿಡುತ್ತಿರಲಿಲ್ಲ. ಇದೇ ಕಾಲಕ್ಕೆ ಸರಸಂಬಾದ್ದಿಂದ ಹೊರಟ ದೊಡ್ಡವ್ವ ಎಂಬ ಮಹಿಳೆಯ ಮೇಲೆ ಪಠಾಣರು ಸಾಮೂಹಿಕ ಅತ್ಯಾಚಾರವೆಸಗಿ ಆಕೆಯನ್ನೂ ಆಕೆಯ ಗಂಡ ಹಾಗೂ ಸಹೋದರನನ್ನು ಕೊಲೆ ಮಾಡಿದ್ದರು. ಆ ಜಾಗ ವಾಗದರಿಯಿಂದ ನಾಲ್ಕೇ ಕಿಲೋಮೀಟರ ದೂರದಲ್ಲಿತ್ತು. ಹೆಣಗಳು ರಸ್ತೆಯ ಮೇಲೆ ದಿಕ್ಕಿಲ್ಲದೆ ಬಿದ್ದಿದ್ದವು, ಅವುಗಳಿಗೆ ಗತಿಕಾಣಿಸಬೇಕಾಗಿತ್ತು. ಹತ್ತಿರದ ಚಿಕ್ಕಳ್ಳಿಯಲ್ಲಿ ಸಂತೆ ನಡೆದಿತ್ತು. ಆದರೆ ಹೆಣಗಳನ್ನು ತುಂಬಿ ತರಲು ಯಾರೂ ತಮ್ಮ ಗಾಡಿಯನ್ನು ಕೊಡಲು ತಯಾರಾಗಲಿಲ್ಲ. ಪಾಟೀಲರು ಅಂತೂ ಇಂತೂ ಒಂದು ಗಾಡಿಯ ವ್ಯವಸ್ಥೆ ಮಾಡಿಕೊಂಡು ಹೆಣಗಳನ್ನು ಸಾಗಿಸಿದರು. ಇವರು ಹೆಣ ತರಲು ಹೋದಾಗ ಅಲ್ಲಿ ಮತ್ತೆ ಕೆಲವು ಪಠಾಣರು ಕಾಣಿಸಿಕೊಂಡಿದ್ದರು. ಅವರೊಂದಿಗೆ ಮಾರಿಮಾರಿ ಶುರುವಾಗಿ ಒಬ್ಬ ಪಠಾಣನು ಸ್ಥಳದಲ್ಲಿಯೇ ಹತನಾದನು.

ಈ ಸ್ಸೇಡು ತೀರಿಸಿಕೊಳ್ಳುವುದಕ್ಕಾಗಿ ಪಠಾಣರು ಚಿಕ್ಕಳ್ಳಿ ಎಂಬ ಗ್ರಾಮದಲ್ಲಿ ಬೆಂಕಿ ಹಚ್ಚಿ ಹೆಚ್ಚೂ ಕಡಿಮೆ ಇಡೀ ಗ್ರಾಮವನ್ನು ಸುಟ್ಟು ಹಾಕಿದರು. ಚಿಕ್ಕಳ್ಳಿ ಇರುವುದು ಗಡಿಯ ಈಚೆಗೆ. ವಾಗದರಿ ಇರುವುದು ಗಡಿಯ ಆಚೆಗೆ. ಗಡಿ ದಾಟಿ ಹೋಗಲು ಪಠಾಣರಿಗೆ ಧೈರ್ಯ ಇರಲಿಲ್ಲ. ಯಾಕೆಂದರೆ ಗಡಿಯಾಚೆಗೆ ಭಾರತ ಸರಕಾರದ ಆಡಳಿತವಿದ್ದು ಹತ್ತಿರದಲ್ಲಿಯೇ ಮಿಲ್ಟ್ರಿ ಕ್ಯಾಂಪಗಳಿದ್ದವು. ಪಠಾಣರೇನಾದರೂ ಬಾಲ ಬಿಚ್ಚಿದ್ದರೆ ಮಿಲ್ಟ್ರಿಯವರು ಅವರ ಹುಟ್ಟಡಗಿಸಿ ಬಿಡುತ್ತಿದ್ದರು.

ಪಠಾಣರು ಹಿರೋಳಿಯ ಗಡಿಯ ಮೇಲೆ ನಿಂತು ವಾಗದರಿಯ ಕಡೆಗೆ ಗುಂಡು ಹಾರಿಸಲು ಪ್ರಾರಂಭಿಸಿದರು. ಈ ಕಡೆ ಅಣ್ಣಾರಾವ ಪಾಟೀಲರೂ ಕೂಡ ತಮ್ಮ ಸಂಗಡಿಗರೊಂದಿಗೆ ಗುಂಡಿನ ಮಳೆ ಸುರಿಸಹತ್ತಿದರು. ಅದರಲ್ಲಿ ಅನೇಕ ಜನ ಪಠಾಣರು ಹತರಾದರು. ಶಿಬಿರದ ಕಡೆಯಿಂದ ವಾಗದರಿ ಗ್ರಾಮದ ಚೆನ್ನಪ್ಪ ದುದಗಿ ಎಂಬ ಯುವಕನು ಪಠಾಣರ ಗುಂಡಿಗೆ ಬಲಿಯಾದನು. ಗುಂಡು ತಾಗುತ್ತಿದ್ದಂತೆ 'ಭಾರತ ಮಾತ ಕೀ ಜೈ' ಎಂದು ಜೈಕಾರ ಹಾಕುತ್ತ ನೆಲಕ್ಕುರುಳಿದ. ಪಾಟೀಲರು ಧಾವಿಸಿ ಆತನ ಹತ್ತಿರ ಓಡಿದರು. ಆದರೆ ಚೆನ್ನಪ್ಪ ತನ್ನ ಚಿಂತೆ ಮಾಡಬಾರದು, ಹೋರಾಟ ಮುಂದುವರಿಸಿರಿ ಎಂದು ಹೇಳಿ ಪ್ರಾಣಬಿಟ್ಟ.

ಈ ರೀತಿ ಒಂದೊಂದು ಶಿಬಿರದ ಒಂದೊಂದು ಕತೆಯಿದೆ. ಸರದಾರ ಶರಣಗೌಡರ ಸಿಂದಗಿ ಶಿಬಿರದ ಕತೆಗಳು ಪವಾಡ ಸದೃಶವಾಗಿವೆ. ಶರಣಗೌಡರೆ ಒಂದು ಪವಾಡ ಪುರುಷರಾಗಿದ್ದಾರೆ. ಹೈದರಾಬಾದ ಕರ್ನಾಟಕದ ವಿಮೋಚನಾ ಚಳವಳಿಯಲ್ಲಿ ಶರಣಗೌಡರ ಸೇವೆ ಎಂದಿಗೂ ಮರೆಯುವಂಥದ್ದಲ್ಲ .

***

ಪೊಲೀಸ ಕಾರ್ಯಾಚರಣೆ

'ನೀವು ಒಂದು ಕೋಟಿ ನಲವತ್ತು ಲಕ್ಷ ಹಿಂದೂಗಳನ್ನು ಕೊಲ್ಲುತ್ತಿರಬೇಕಾದರೆ ನಾವು ಕೈಕಟ್ಟಿಕೊಂಡು ಕೂಡುತ್ತೇವೆಂದು ತಿಳಿದಿದ್ದೀರಾ?' ಕಾಸಿಂ ರಜವಿಯು ದಿಲ್ಲಿಗೆ ಸರದಾರ ವಲ್ಲಭಭಾಯಿ ಪಟೇಲರನ್ನು ಬೆದರಿಸಲು ಹೋದಾಗ ಪಟೇಲರು ಸಮಾಧಾನದಿಂದಲೇ ರಜವಿಗೆ ಹೇಳಿದ ಮಾತಿದು. ರಜವಿಯು ದಿಲ್ಲಿಯಿಂದ ಹಿಂತಿರುಗಿ ಬಂದ ಮೇಲೆ ಪಟೇಲರು ಆಡಿದ ಮಾತುಗಳನ್ನು ಕಾರ್ಯರೂಪಕ್ಕೆ ಇಳಿಸುವ ಕಾಲ ಬಹಳ ಬೇಗನೆ ಬಂದಿತು. ಕಾಸಿಂ ರಜವಿಯು ೧೩ ಸೆಪ್ಟೆಂಬರ ೧೯೪೮ರಂದು ಹೈದರಾಬಾದ ರಾಜ್ಯದಲ್ಲಿ ಸಮೂಹಿಕ ಮತಪರಿವರ್ತನೆಯಾದರೂ ಮಾಡುತ್ತೇನೆ ಇಲ್ಲವಾದರೆ ಇಸ್ಲಾಮನ್ನು ಸ್ವೀಕರಿಸಲು ನಿರಾಕರಿಸುವ ಹಿಂದೂಗಳನ್ನು ಕೊಲೆ ಮಾಡುತ್ತೇನೆ ಎಂದು ಎಚ್ಚರಿಕೆ ಕೊಟ್ಟಿದ್ದ. ಆದರೆ ಬೊಗಳುವ ಬೀದಿಯ ನಾಯಿಯಂತಿದ್ದ ರಜವಿಯ ಮಾತಿಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವ ಸರದಾರರು ಕೊಟ್ಟಿದ್ದರು. ಆದರೂ ಹುಚ್ಚು ನಾಯಿಯನ್ನು ನಂಬುವಹಾಗಿರುವುದಿಲ್ಲ ಎಂದು ತಾವು ಏನೆಲ್ಲ ಎಚ್ಚರಿಕೆ ವಹಿಸಬೇಕೋ ಅದನ್ನೆಲ್ಲ ವಹಿಸಿದ್ದಲ್ಲದೆ ಅದಕ್ಕಾಗಿ ತಯಾರಿ ಮಾಡಿಕೊಂಡೂ ಕುಳಿತಿದ್ದರು.

ಹೈದರಾಬಾದದಂಥ ಒಂದು ಸಂಸ್ಥಾನದ ಮೇಲೆ ಸೈನ್ಯವನ್ನು ಕಳಿಸುವುದು ಸೂಕ್ತವೆ? ಎಂದು ಸರದಾರ ಪಟೇಲರು ಬಹಳ ಯೋಚಿಸಿದರು. ಇದರಿಂದ ಕಾನೂನಿನ ತೊಡಕೇನಾದರೂ ಉಂಟಾಗಬಹುದೆ ಎಂದು ತಮ್ಮ ಅಂತರಂಗದ ಮಿತ್ರರೊಂದಿಗೆ ಚರ್ಚಿಸಿದರು. ಸೈನ್ಯದ ಕಾರ್ಯಾಚರಣೆ ಮಾಡಿದರೆ ನಾಳೆಯ ದಿನ ನಿಜಾಮ ಸರಕಾರವು ರಾಷ್ಟ್ರ ಸಂಘದಲ್ಲಿ ಭಾರತ ಸರಕಾರದ ಮೇಲೆ ದೂರು ಒಯ್ಯಬಹುದು. ಯಾಕೆಂದರೆ ಇಂಗ್ಲಿಷರು ಭಾರತವನ್ನು ಬಿಟ್ಟು ಹೋಗುವಾಗ ದೇಶದಲ್ಲಿಯ ಸಂಸ್ಥಾನಗಳು ತಮ್ಮ ಇಚ್ಛೆಯಂತೆ ಭಾರತ ಒಕ್ಕೂಟಕ್ಕಾದರೂ ಸೇರಬಹುದು, ಪಾಕಿಸ್ತಾನಕ್ಕಾದರೂ ಸೇರಬಹುದು. ಇವೆರಡೂ ಬೇಡವೆಂದರೆ ತಾವು ತಮ್ಮ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಸ್ವತಂತ್ರವಾಗಿರಬಹುದು ಎಂದು ಎಲ್ಲ ಸಂಸ್ಥಾನಿಕರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದರು. ಭಾರತ ಒಕ್ಕೂಟದಲ್ಲಿ ಸೇರಿಸಲು ಇಂಗ್ಲಿಷರ ಕೊನೆಯ ವೈಸರಾಯರಾದ ಲಾರ್ಡ್ ಮಾವುಂಟ ಬ್ಯಾಟನ್ನರು ನಿಜಾಮನೊಮದಿಗೆ ಬಹಳಷ್ಟು ಚರ್ಚಿಸಿದ್ದರು. ಅವನ ಮನವೊಲಿಸಲು ಬಹಳ ಪ್ರಯತ್ನಿಸಿದ್ದರು. ಆದರೆ ನಿಜಾಮನು ತಾನು ಇಸ್ಲಾಮೀ ರಾಷ್ಟ್ರದ ಸಾರ್ವಭೌಮ ರಾಜನೆಂದು ಹೇಳಿಕೊಂಡು ಮಾವುಂಟ ಬ್ಯಾಟನ್ನರ ಸಲಹೆಯನ್ನು ತಿರಸ್ಕರಿಸಿದ್ದನು. ಎಲ್ಲ ಸಂಸ್ಥಾನಿಕರನ್ನು ಸರದಾರ ಪಟೇಲರು ಮಾತುಕತೆಗೆ ಕರೆದಾಗ ನಿಜಾಮನು ಆ ಸಭೆಗೆ ಹೋಗಲಿಲ್ಲ. ಆಗಲೂ ತನ್ನ ಸಾರ್ವಭೌಮತ್ವವನ್ನು ಸಾರಿಕೊಂಡಿದ್ದನು. ಇಂಥ ಒಂದು ಸ್ವತಂತ್ರ ರಾಷ್ಟ್ರ (?) ದ ಮೇಲೆ ಸೈನ್ಯಾಚರಣೆ ಮಾಡುವುದು ಅಂತಾರಾಷ್ಟ್ರೀಯ ನೀತಿ

ಸಂಹಿತೆಯನ್ನು ಉಲ್ಲಂಘಿಸಿದಂತಾಗುತ್ತದೆ. ಈ ಎಲ್ಲ ಸೂಕ್ಷ್ಮಗಳನ್ನು ಪರ್ಯಾಲೋಚಿಸಿ ಸರದಾರ ಪಟೇಲರು ಅದಕ್ಕೆ ಪೊಲೀಸ ಕಾರ್ಯಾಚರಣೆ ಎಂದು ಕರೆದು ಸೈನ್ಯವನ್ನು ನಿಜಾಮ ರಾಜ್ಯದೊಳಗೆ ಕಳಿಸಲು ತೀರ್ಮಾನಿಸಿದರು.

ಈ ಕಾರ್ಯಾಚರಣೆಗೆ ಎಲ್ಲ ತಯಾರಿ ಮಾಡಿಕೊಳ್ಳಲಾಯಿತು. ೧೩ನೆಯ ಸೆಪ್ಟೆಂಬರ ೧೯೪೮ರಂದು ನಸುಕಿನಲ್ಲಿ ಹೈದರಾಬಾದ ರಾಜ್ಯದ ನಾಲ್ಕೂ ಕಡೆಯಿಂದ ಸೈನ್ಯವನ್ನು ಕಳಿಸುವುದು. ಸೈನ್ಯದ ಯಾವ ತಂಡವು ಮೊದಲು ಹೈದರಾಬಾದನ್ನು ತಲುಪಿ ರಾಜ್ಯವನ್ನು ವಶಪಡಿಸಿಕೊಳ್ಳುವುದೋ ಆ ತಂಡಕ್ಕೆ ವಿಶೇಷ ಇನ್ಸೆಂಟಿವ್ ನೀಡುವುದಾಗಿ ಘೋಷಿಸಲಾಯಿತು.

ಸೋಲಾಪುರ ವಿಭಾಗದ ಸೈನ್ಯವನ್ನು ಮೇಜರ್ ಜನರಲ್ ಜೆ.ಎನ್. ಚೌಧರಿಯವರು, ಮುಂಬೈ ವಿಭಾಗದ ಸೈನ್ಯವನ್ನು ಮೇಜರ್ ಜನರಲ್ ಎಲ್.ಎಸ್. ಬ್ರಾರರವರು, ಮದ್ರಾಸ ವಿಭಾಗದ ಸೈನ್ಯವನ್ನು ಮೇಜರ್ ಜನರಲ್ ಎ.ಎ. ರುದ್ರ ಅವರು ಮತ್ತು ಮಧ್ಯಪ್ರಾಂತ ಹಾಗೂ ಬಿರಾರ ವಿಭಾಗದ ಸೈನ್ಯವನ್ನು ಬ್ರಿಗೇಡಿಯರ ಶಿವದತ್ತಸಿಂಗ ಅವರು ನಡೆಸಿಕೊಂಡು ಬರಬೇಕೆಂದು ಆದೇಶಿಸಲಾಯಿತು. ಈ ಎಲ್ಲ ತಂಡಗಳಿಗೆ ಏಅರ್ ಮಾರ್ಶಲ್ ಮುಖರ್ಜಿ ಎನ್ನುವವರನ್ನು ಸಹಾಯಕರೆಂದು ಕಳಿಸಲಾಯಿತು. ಈ ತಂಡಗಳು ಉತ್ತರದಲ್ಲಿ ಔರಂಗಾಬಾದದಿಂದ, ಪಶ್ಚಿಮದಲ್ಲಿ ಸೋಲಾಪುರದಿಂದ, ದಕ್ಷಿಣದಲ್ಲಿ ಕರ್ನೂಲದಿಂದ, ಈಶಾನ್ಯದಲ್ಲಿ ಆದಿಲಾಬಾದದಿಂದ ಮತ್ತು ಆಗ್ನೇಯದಲ್ಲಿ ವಿಜಯವಾಡಾದಿಂದ ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕೆಂದು ಆದೇಶ ನೀಡಲಾಯಿತು. ಎಲ್ಲ ಕಾರ್ಯಾಚರಣೆಗಳು ಏಕಕಾಲಕ್ಕೆ ನಡೆಯಬೇಕು, ಯಾವುದೇ ರೀತಿಯ ಆಕ್ರಮಣಕ್ಕೂ ನಿರ್ಬಂಧವಿಲ್ಲ ಎಂದು ತಿಳಿಸಲಾಯಿತು.

ವಿಜಯವಾಡಾದಿಂದ ಹೊರಟ ತಂಡ ವಾರಂಗಲ ವಿಮಾನ ನಿಲ್ದಾಣದ ಮೇಲೆ ಬಾಂಬ್ ಹಾಕಿ ನಿಲ್ದಾಣವನ್ನು ನಾಶಗೊಳಿಸಿತು. ಬೀದರ ವಾಯು ಪಡೆಯ ನಿಲ್ದಾಣದ ಮೇಲೂ ಬಾಂಬ್ ಹಾಕಲಾಯಿತು. ಇದರ ಉದ್ದೇಶವೆಂದರೆ ತುರ್ತು ಪರಿಸ್ಥಿತಿಯಲ್ಲಿ ರಜಾಕಾರರು ಈ ನಿಲ್ದಾಣಗಳನ್ನು ಬಳಸಿಕೊಳ್ಳಬಾರದು ಎಂಬುದಾಗಿತ್ತು.

ಮೇ. ಜ. ಜೆ.ಎನ್. ಚೌಧರಿಯವರ ನಾಯಕತ್ವದಲ್ಲಿ ಸೋಲಾಪುರದಿಂದ ಹೊರಟ ತಂಡ ಯಾವ ವಿರೋಧವಿಲ್ಲದೆ ತುಳಜಾಪುರ ಮಾರ್ಗವಾಗಿ ಗಡಿಯ ಪಟ್ಟಣವಾದ ನಳದುರ್ಗದ ವರೆಗೆ ಬಂದು ತಲುಪಿತು. ಸೋಲಾಪುರ ಬಿಟ್ಟ ಮೇಲೆ ಹೈದರಾಬಾದ ಸರಹದ್ದಿನ ಮೊದಲನೆಯ ಪಟ್ಟಣ ನಳದುರ್ಗ ಇದೆ. ಇದು ಪಾಯಗಾ ಕಾಲಕ್ಕೆ ಒಂದು ಜಿಲ್ಲೆಯಾಗಿತ್ತು. ಪಟ್ಟಣ ಮತ್ತು ಭದ್ರವಾದ ಕೋಟೆ ಎತ್ತರದ ಸ್ಥಾನದಲ್ಲಿವೆ. ಅದನ್ನು ದಾಟಿ ಬಂದರೆ ಆಳವಾದ ಕೊಳ್ಳ. ಕೊಳ್ಳಪ್ರದೇಶದಲ್ಲಿ ಸಿಕ್ಕಿಬಿದ್ದರೆ ಹೋರಾಟಕ್ಕೆ ತುಂಬ ಕಷ್ಟ. ರಜಾಕಾರರು ನಳದುರ್ಗ ಕೋಟೆಯಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಕೊಂಡು ಹೋರಾಟಕ್ಕೆ ಸಿದ್ಧರಾಗಿಯೇ ಕುಳಿತಿದ್ದರು. ಇಲ್ಲಿ ಇನ್ನೊಂದು ವಿಚಾರ ತಿಳಿದುಕೊಳ್ಳಬೇಕು. ೧೩ನೆಯ ಸೆಪ್ಟೆಂಬರಿನ ದಿನ ರಜಾಕಾರರು ಯೋಜಿಸಿಕೊಂಡಿರುವ ಕಾರ್ಯಾಚರಣೆಗೆ ತಮ್ಮ ನೆರವಿಗಾಗಿ ಪಾಕಿಸ್ತಾನದಿಂದ ಸೈನ್ಯ ಬರುತ್ತದೆ ಎಂದು ರಜಾಕಾರರಲ್ಲಿ

ಗುಸುಗುಸು ಸುದ್ದಿ ಹಬ್ಬಿತ್ತು. ಆದರೆ ನಳದುರ್ಗ ಕೋಟೆಯು ಸೋಲಾಪುರಕ್ಕೆ ಕೇವಲ ೪೫ ಕಿಲೋಮೀಟರ ದೂರದಲ್ಲಿರುವುದರಿಂದ ಅಲ್ಲಿಯ ರಜಾಕಾರರಿಗೆ ಭಾರತೀಯ ಸೈನ್ಯ ತಮ್ಮ ಮೇಲೆ ದಾಳಿ ಮಾಡಲು ಹೊರಟಿದೆ ಎಂಬ ಗುಮಾನಿ ಬಂದಿತ್ತು. ಅದಕ್ಕಾಗಿಯೇ ಅವರು ತಯಾರಿ ಮಾಡಿಕೊಂಡಿದ್ದರು. ಆ ಸೈನ್ಯವು ಮುಂದೆ ಹೋಗದಂತೆ ಮಾಡಲು ನಿಜಾಮ ಪೋಲೀಸ ಪಡೆಯು ನಳದುರ್ಗದ ಕಣಿವೆಯಲ್ಲಿರುವ ಸೇತುವೆಯನ್ನು ಧ್ವಂಸ ಮಾಡಲು ಪ್ರಯತ್ನಿಸಿತು. ಆದರೆ ಅಷ್ಟರಲ್ಲಿಯೇ ಭಾರತೀಯ ಸೈನ್ಯ ಸೇತುವೆಯನ್ನು ದಾಟಿ ಮುಂದೆ ಸಾಗಿತ್ತು.

ನಳದುರ್ಗದಲ್ಲಿ ರಜಾಕಾರರು ಸೇನಾಪಡೆಯನ್ನು ಚೆನ್ನಾಗಿ ಎದುರಿಸಿದರು. ಸೈನ್ಯಕ್ಕೆ ಅಲ್ಲಿ ಸ್ವಲ್ಪ ತಡೆಯೇ ಉಂಟಾಯಿತು. ಆದರೆ ಸೈನ್ಯದಲ್ಲಿ ಟ್ಯಾಂಕರಗಳು, ಮಶಿನ್‌ಗನ್ನುಗಳು ಮುಂತಾದ ಮಾರಕ ಅಸ್ತ್ರಗಳಿದ್ದುದರಿಂದ ರಜಾಕಾರರಿಗೆ ಹಿಮ್ಮೆಟ್ಟಲೇಬೇಕಾಯಿತು. ನಳದುರ್ಗವನ್ನು ವಶಪಡಿಸಿಕೊಂಡು ಸೈನ್ಯವು ಈಗಿನ ರಾಷ್ಟ್ರೀಯ ಹೆದ್ದಾರಿ ೯ರ ಮೂಲಕ ಮುಂದೆ ಸಾಗಿತು. ನಡುವೆ ಉಮರ್ಗಾ (ಒಂದು ತಾಲೂಕ ಪಟ್ಟಣ), ತುರೂರಿ (ರಜಾಕಾರರ ಒಂದು ಸಣ್ಣ ಕೇಂದ್ರ), ಚಂಡಕಾಪುರ ಮುಂತಾದ ಯಾವ ಊರುಗಳಲ್ಲಿಯೂ ಈ ಸೈನ್ಯಕ್ಕೆ ಅಷ್ಟೊಂದು ವಿರೋಧ ಬರಲಿಲ್ಲ. ಸಲೀಸಾಗಿ ಸೈನ್ಯ ಮುಂದೆ ಸಾಗಿತು. ದಿ. ೧೪ರಂದು ರಾಜೇಶ್ವರ ಗ್ರಾಮಕ್ಕೆ ಬಂದಾಗ ಒಂದು ವಿಚಿತ್ರ ನಡೆಯಿತು. ಮಿಲ್ಟ್ರಿ ವಾಹನಗಳ ಆರ್ಭಟ ಕೇಳುತ್ತಿದ್ದಂತೆ ಗ್ರಾಮದ ರಜಾಕಾರರೆಲ್ಲ ತಮ್ಮ ಸಹಾಯಕ್ಕೆ ಪಾಕಿಸ್ತಾನದಿಂದ ಸೈನ್ಯ ಬರುತ್ತಿದೆ ಎಂದು ಖುಷಿಯೊಳಗೆ ಅವಸರಿಸುತ್ತ ಸಮವಸ್ತ್ರಗಳನ್ನು ಧರಿಸಿಕೊಂಡು ಕೈಯಲ್ಲಿ ಶಸ್ತ್ರಗಳನ್ನು ಹಿಡಿದು ಪರೇಡ ಮಾಡಲು ನಿಲ್ಲುವಂತೆ ಸೈನ್ಯದ ಸ್ವಾಗತಕ್ಕಾಗಿ ಹೆದ್ದಾರಿಯ ಮೇಲೆ ಬಂದು ನಿಂತಿದ್ದರು. ಆದರೆ ಅದು ಪಾಕಿಸ್ತಾನ ಸೈನ್ಯ ಅಲ್ಲ, ಭಾರತೀಯ ಸೈನ್ಯ, ತಮ್ಮ ಸಂಹಾರಕ್ಕಾಗಿ ಬಂದಿದೆ ಎಂದು ಅರ್ಥಮಾಡಿಕೊಂಡ ಒಂದಿಬ್ಬರು ಉಳಿದವರಿಗೆ ಈ ವಿಷಯ ತಿಳಿಸಿದ ತಕ್ಷಣ ಎಲ್ಲರೂ ದಿಕ್ಕಾಪಾಲಾಗಿ ಓಡಿಹೋದರು.

ಆ ದಿನ ಮತ್ತೆ ವಾರಂಗಲ ಮತ್ತು ಬೀದರ ವಿಮಾನ ನಿಲ್ದಾಣಗಳ ಸೈನಿಕ ನೆಲೆಗಳ ಮೇಲೆ ಬಾಂಬ್ ಸ್ಫೋಟಿಸಲಾಯಿತು.

೧೪ ಮತ್ತು ೧೫ರಂದು ಭಾರತೀಯ ಸೈನ್ಯ ಮುಂದುವರಿಯುತ್ತಲೇ ಹೋಯಿತು. ಜಹೀರಾಬಾದನಲ್ಲಿ ಒಂದಿಷ್ಟು ವಿರೋಧಿಸಲಾಯಿತು. ಅಲ್ಲಿಂದ ಹೊರಟ ಸೈನ್ಯಕ್ಕೆ ಹೆಚ್ಚಿನ ವಿರೋಧ ವ್ಯಕ್ತವಾದುದೆಂದರೆ ಪಟ್ಟನಚೇರುವಿನಲ್ಲಿ. ಅಲ್ಲಿ ಹೈದರಾಬಾದಕ್ಕೆ ಇದ್ದಂಥ ಸಂಪರ್ಕ ಸೇತುವೆಯನ್ನು ನಾಶಗೊಳಿಸಲಾಯಿತು. ಆದರೂ ಭಾರತೀಯ ಸೈನ್ಯವು ತುರ್ತಾಗಿ ತಾತ್ಪೂರ್ತಿಕ ಸೇತುವೆಯನ್ನು ನಿರ್ಮಿಸಿಕೊಂಡು ಹೈದರಾಬಾದಿನ ಕಡೆಗೆ ಸಾಗಿತು. ಆ ಕಡೆ ಬೇರೆ ದಿಕ್ಕುಗಳಿಂದ ದಾಳಿ ಮಾಡಿದ್ದ ಪಡೆಗಳೂ ಕೂಡ ಹೈದರಾಬಾದದ ಹತ್ತಿರ ಹತ್ತಿರಕ್ಕೆ ಬರುತ್ತಿದ್ದವು. ಇಷ್ಟೆಲ್ಲ ನಡೆಯುತ್ತಿರಬೇಕಾದರೆ ಆ ಕಡೆ ನಿಜಾಮನು ರೇಡಿಯೋದ ಮೂಲಕ ಸಮಾಚಾರ ಪ್ರಸಾರ ಮಾಡಲಾಗುತ್ತಿತ್ತು. 'ಹೈದರಾಬಾದ ಸೈನ್ಯವು ಭಾರತೀಯ ಸೈನ್ಯವನ್ನು ಹಿಮ್ಮೆಟ್ಟಿಸುತ್ತಿದೆ. ಭಾರತೀಯ ಸೇನೆ ಹೆದರಿ ದಿಕ್ಕಾಪಾಲಾಗಿ ಓಡಿ ಹೋಗುತ್ತಿದೆ' ಎಂದು ಒಂದು ಸಲ ಬಿತ್ತರಿಸಿದರೆ, ಇನ್ನೊಂದು ಸಲ 'ರಜಾಕಾರ

ನಾಯಕರು ಈಗ ದಿಲ್ಲಿ ತಲುಪಿದ್ದಾರೆ. ಕೆಂಪುಕೋಟೆ ಹತ್ತಿದ್ದಾರೆ. ಆಸಫಿಯಾ ಬಾವುಟ ಹಾರಿಸುತ್ತಿದ್ದಾರೆ' ಎಂದು ಸುಳ್ಳು ಸುದ್ದಿಗಳನ್ನು ಬಿತ್ತರಿಸುತ್ತಿತ್ತು.

ಜೆ.ಎನ್. ಚೌಧರಿಯ (ಜಯಂತಿನಾಥ ಚೌಧರಿ) ದಂಡು ಹೈದರಾಬಾದ ನಗರನವನು ಪ್ರವೇಶಿಸುತ್ತಿದ್ದಂತೆ ದಿ. ೧೭ ಸೆಪ್ಟೆಂಬರ, ೧೯೪೮ರ ಸಾಯಂಕಾಲ ಐದು ಗಂಟೆಗೆ ಹೈದರಾಬಾದ ಸರಕಾರದ ಆರ್ಮಿ ಜನರಲ್‌ರಾದ ಅಲ್ ಇದ್ರೂಸರವರು ಬಿಳಿಯ ಬಾವುಟವನ್ನು ತೋರಿಸಿ ತಮ್ಮ ಸೋಲನ್ನು ಒಪ್ಪಿಕೊಂಡರು. ಆಮೇಲೆ ಮೀರ ಉಸ್ಮಾನ ಅಲೀಖಾನನು ಭಾರತೀಯ ಸೈನ್ಯಕ್ಕೆ ಕೈಜೋಡಿಸಿ ಶರಣಾಗತಿಯನ್ನು ಘೋಷಿಸಿದನು. ೨೨೪ ವರ್ಷಗಳಿಂದ ದಕ್ಕನ್ನನ್ನು ಆಳಿದ ಆಸಿಫಜಾಹೀ ಮನೆತನದ ಅರಸೊತ್ತಿಗೆ ಆ ದಿನ ತನ್ನ ಕೊನೆಯ ಉಸಿರನ್ನೆಳೆಯಿತು. ಎರಡೂಕಾಲು ಶತಮಾನದ ಆ ಮನೆತನದ ಸರ್ವಾಧಿಕಾರ (?)ವನ್ನು ಭಾರತ ಸರಕಾರವು ಒಂದು ನೂರಾ ಒಂಬತ್ತು ತಾಸುಗಳ ಹೋರಾಟದಲ್ಲಿ ಸೋಲಿಸಿ ವಿಜಯವನ್ನು ಸಾಧಿಸಿತು. ಅಸ್ತಂಗತವಾಗುತ್ತಿದ್ದ ಆಸಫಿಯಾ ಮನೆತನದ ಕೊನೆಯ ನಿಜಾಮನಾದ ಮೀರ ಉಸ್ಮಾನ ಅಲೀಖಾನನು ಆ ದಿನ ಒಂದು ರೇಡಿಯೋ ಪ್ರಸಾರ ಭಾಷಣ ಮಾಡಿದನು. ಅದರ ತೀರ ಸಂಕ್ಷಿಪ್ತ ರೂಪ ಇಲ್ಲಿ ಕೊಡಲಾಗುತ್ತಿದೆ:

'ಪ್ರಿಯ ಪ್ರಜೆಗಳೇ, ಇದೇ ದಿನ ನಾನು ಭಾರತದ ಮಹಾಮಹಿಮ ಗವರ್ನರ ಜನರಲ್‌ರಾದ ಶ್ರೀ ರಾಜಗೋಪಾಲಾಚಾರಿಯವರಿಗೆ ಈ ಕೆಳಕಂಡ ಸಂದೇಶವನ್ನು ಕಳಿಸಿದ್ದೇನೆಂದು ತಿಳಿಸಲು ಸಂತೋಷವಾಗುತ್ತದೆ. ನನ್ನ ಸರಕಾರ ಇದೇ ದಿನ ರಾಜೀನಾಮೆ ಕೊಟ್ಟಿದೆ ಎಂದು ನಾನು ಆ ಸಂದೇಶದಲ್ಲಿ ತಿಳಿಸಿದ್ದೇನೆ. ರಾಜ್ಯದ ಬಿಗಡಾಯಿಸುತ್ತಿರುವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಆಡಳಿತದ ಸೂತ್ರವನ್ನು ನನ್ನ ಕೈಯಲ್ಲೇ ಇಟ್ಟುಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಅದು ನನ್ನಿಂದ ಸಾಧ್ಯವಿಲ್ಲ ಎಂದು ನಾನು ಅವರಿಗೆ ತಿಳಿಸಿದ್ದೇನೆ. ಅದಕ್ಕಾಗಿ ನನಗೆ ಖೇದವೂ ಆಗುತ್ತಿದೆ. ಈಗ ತುಂಬ ತಡವಾಗಿದೆ. ನಾವು ಯುದ್ಧವಿರಾಮ ಮಾಡುತ್ತಿದ್ದೇವೆಂದು ಮಹಾಮಹಿಮರಿಗೆ ನಾನು ತಿಳಿಸಿದ್ದೇನೆ. ಸೇನಾಪಡೆಗೂ ಆ ರೀತಿಯ ಆದೇಶ ನೀಡಲಾಗಿದೆ. ಜೊತೆಗೆ ನಾನು ರಜಾಕಾರ ಸಂಘಟನೆಯನ್ನೂ ವಿಸರ್ಜಿಸಿದ್ದೇನೆ. ಭಾರತೀಯ ಸೈನ್ಯವು ಬೋಲಾರಾಮ ಮತ್ತು ಸಿಕಂದರಾಬಾದನ್ನು ಪ್ರವೇಶಿಸಬಹುದೆಂದು ನಾನು ತಿಳಿದಿದ್ದೇನೆ.

ಕಾಂಗ್ರೆಸ ಅಧ್ಯಕ್ಷರಾದ ಶ್ರೀ ರಮಾನಂದ ತೀರ್ಥರನ್ನು ತಕ್ಷಣ ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಆದೇಶಿಸಿದ್ದೇನೆ. ನನ್ನ ಗೆಳೆಯ ಮತ್ತು ಭಾರತ ಸರಕಾರದ ಏಜೆಂಟ ಜನರಲ್ ಶ್ರೀ. ಕೆ. ಎಮ್. ಮುನ್ಶಿಯವರೊಂದಿಗೆ ಇಂದಿನ ಪರಿಸ್ಥಿತಿಯ ಕುರಿತು ಚರ್ಚಿಸಿದ್ದೇನೆ. ಅವರ ಮಹತ್ವಪೂರ್ಣವಾದ ಸಲಹೆಗಳಿಗಾಗಿ ನಾನು ಇಲ್ಲಿ ಅವರನ್ನು ಸ್ಮರಿಸುತ್ತೇನೆ.

ನನ್ನ ಪ್ರಜೆಗಳು ಅವರು ಯಾವುದೇ ಕೋಮಿನವರಾಗಿರಲಿ, ಅವರು ಇಂಥ ಕಠಿಣ ಪರಿಸ್ಥಿತಿಯಲ್ಲಿ ಸಂಯಮದಿಂದ ಇದ್ದು ಶಾಂತಿಯನ್ನು ಕಾಪಾಡಿಕೊಂಡು ಬರಬೇಕೆಂದು

ಪ್ರಾರ್ಥಿಸುತ್ತೇನೆ. ಈ ಎಲ್ಲ ವ್ಯವಸ್ಥೆಯು ಭಾರತ ಸರಕಾರದ ಕೈಗೆ ಹೋದ ಮೇಲೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತದೆ.

ಹಳೆಯ ಮಂತ್ರಿಮಂಡಲದ ವಿರುದ್ಧ ಮಾಡಲಾದ ಫೌಜದಾರಿ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾಗುವುದು. ಯಾಕೆಂದರೆ ಮುಂದೆ ನನಗೆ ಒಂದು ಹೊಸ ಅಧ್ಯಾಯ ಪ್ರಾರಂಭಿಸಬೇಕಾಗಿದೆ. ಮತ್ತು ಭಾರತ ಸರಕಾರದೊಂದಿಗೆ ಸ್ನೇಹಪೂರ್ಣವಾದ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಬೇಕಾಗಿದೆ.'

ಆಸಫಜಾಹೀ ಆಡಳಿತಕ್ಕೆ ದುರ್ದಂತವಾಗಿ ಮಂಗಳವನ್ನು ಹಾಡಿದ ಕಾಸಿಂ ರಜವಿಯು ಈ ಘಟನೆಗಳೆಲ್ಲ ನಡೆಯುತ್ತಿದ್ದಂತೆ ಹೈದರಾಬಾದಿನ ಪಕ್ಕದ ಯಾವುದೋ ಊರಲ್ಲಿ ತನ್ನ ಹೆಂಡತಿಯ ಸಹೋದರನ ಮನೆಯಲ್ಲಿ ಅಡಗಿ ಕುಳಿತಿದ್ದ. ಜನರಲ್ ಚೌಧರಿಯವರು ಆತನ ಬಗ್ಗೆ ಅಲ್ ಇದ್ರೂಸರಿಗೆ ವಿಚಾರಿಸಿದಾಗ ಕಾಸಿಂ ರಜವಿಯನ್ನು ಬಂಧಿಸುವುದೆಂದರೆ ಮಡಿಲಲ್ಲಿ ಬೆಂಕಿಯನ್ನು ಕಟ್ಟಿಕೊಂಡಹಾಗೆ ಎಂದು ಹೇಳಿದರು. ಆತನನ್ನು ಬಂಧಿಸಿದರೆ ರಾಜ್ಯದಲ್ಲಿ ಮತ್ತೆ ಕೋಮುಗಲಭೆಗಳು ಆಗಬಹುದು ಎಂದು ಎಚ್ಚರಿಕೆ ನೀಡಿದರು. ಆದರೆ ಸೈನಿಕರು ಆತನನ್ನು ಬಂಧಿಸಲು ಹೋದಾಗ ಆತ ಯಾವ ವಿರೋಧವನ್ನೂ ವ್ಯಕ್ತಪಡಿಸಲಿಲ್ಲ. ಆತನ ಮೇಲೆ ನೂರಾರು ಕೊಲೆಯ, ಅತ್ಯಾಚಾರದ, ಅಪಹರಣದ ಆರೋಪಗಳಿದ್ದವು. ಆತನಿಗೆ ಗಲ್ಲು ಶಿಕ್ಷೆಗಿಂತ ಕಡಿಮೆ ಶಿಕ್ಷೆ ಕೊಡುವುದು ಸಾಧ್ಯವಿರಲಿಲ್ಲ. ಒಂದು ವೇಳೆ ಗಲ್ಲು ಶಿಕ್ಷೆ ಕೊಟ್ಟಿದ್ದರೆ ಆತ ಇಸ್ಲಾಮಿ ಇತಿಹಾಸದಲ್ಲಿ ಒಬ್ಬ ಶಹೀದನೆಂದು ಪೂಜಿಸಲ್ಪಡುತ್ತಿದ್ದ. ಅಂಥ ದುರುಳನಿಗೆ ಶಹೀದನಾಗುವ ಅವಕಾಶ ಕೊಟ್ಟು ಆ ಪವಿತ್ರವಾದ 'ಶಹೀದ' ಎಂಬ ಪಟ್ಟಕ್ಕೆ ಮಸಿಬಳಿಯುವುದು ಸರಿಯಲ್ಲವೆಂದು ಸರದಾರ ಪಟೇಲರಿಗೆ ಅನಿಸಿತು. ಹೀಗಾಗಿ ಆತನಿಗೆ ಸಾಧಾರಣ ಕೈದಿಗಳ ತರಹ ಏಳು ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ಆ ಏಳು ವರ್ಷಗಳಲ್ಲಿ ಆತನ ದರ್ಪ, ಬೋಗಳೆತನ ಎಲ್ಲ ಹಾರಿಹೋಯಿತು. ಶಿಕ್ಷೆ ಮುಗಿಸಿಕೊಂಡು ಪಾಕಿಸ್ತಾನಕ್ಕೆ ಹೋಗುವ ದಾರಿಯಲ್ಲಿ ಮುಂಬೈ ವಿಮಾನ ನಿಲ್ದಾಣದಲ್ಲಿ ವರದಿಗಾರರು ಕೇಳಿದರು, ಮುಂದೇನು ಯೋಜನೆ ಇದೆ ಎಂದು. ಅದಕ್ಕೆ ಆತ ತನ್ನ ಉಳಿದ ಬದುಕನ್ನು ಕುರಾನಕ್ಕೆ ಭಾಷ್ಯ ಬರೆಯುವುದರಲ್ಲಿ ಕಳೆಯುತ್ತೇನೆ ಎಂದು ಹೇಳಿದ. ಇಂಥ ಒಬ್ಬ ಸೈತಾನನ ದೂತನು ಪಾಕಿಸ್ತಾನದಲ್ಲಿ ದಿ. ೧೦ ನೆಯ ಜನವರಿ, ೧೯೭೦ರಲ್ಲಿ ಸತ್ತನು. ಆತನ ಸಾವು ಬದುಕಿನ ಬಗ್ಗೆ ಯಾರೊಬ್ಬರಿಗೂ ಆಸಕ್ತಿ ಇರಲಿಲ್ಲ.

****

ವಿಮೋಚನಾ ಚಳವಳಿಯ ಕೆಲವು ಹೋರಾಟಗಾರರು

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ನೂರಾರು ಸಂಖ್ಯೆಯಲ್ಲಿ ಜನರು ಈ ವಿಮೋಚನಾ ಚಳವಳಿಯಲ್ಲಿ ದುಡಿದಿದ್ದಾರೆ, ಮನೆ ಮಾರು ಕಳೆದುಕೊಂಡಿದ್ದಾರೆ, ಬಲಿಯಾಗಿದ್ದಾರೆ. ಎಲ್ಲರದೂ ಒಂದೊಂದು ಬಗೆಯ ಕರುಣ ಕಥೆಯಾಗಿದೆ. ಮನೆ ಮಾರು ಕಳೆದುಕೊಂಡವರು ಎಷ್ಟು ಜನರೋ! ಹೆಂಡಿರು ಮಕ್ಕಳನ್ನು ಕಳೆದುಕೊಂಡವರು ಎಷ್ಟು ಜನವೋ! ಗಂಡಂದಿರನ್ನು, ಮಾನವನ್ನು ಕಳೆದುಕೊಂಡ ಮಹಿಳೆಯರು ಎಷ್ಟು ಜನವೋ! ಅವುಗಳನ್ನೆಲ್ಲ ಸಂಗ್ರಹಿಸಿ ಪಟ್ಟಿ ಮಾಡುವುದು ಸಾಧ್ಯವಿಲ್ಲ. ರಜಾಕಾರರ ದುಂಡಾವರ್ತಿಯಲ್ಲಿ (ಅದಕ್ಕೆ **'ರಜಾಕಾರ ಸಪಾಟ'** ಎಂಬ ಪದವನ್ನು ಈ ಪ್ರದೇಶದಲ್ಲಿ ಬಳಸುತ್ತಾರೆ) ಕಳೆದದ್ದು ಕಳೆದು ಹೋಯಿತು, ಉಳಿದದ್ದೇನೂ ಕಡಿಮೆ ಇಲ್ಲ. ಅಂಥ ಬದುಕಿ ಉಳಿದ ರಾಜ್ಯದ ಒಂದೂವರೆ ಕೋಟಿ ಜನತೆಯ ಬದುಕಿಗೆ ಕಾರಣಕರ್ತರಾದವರು ಈ ಹೋರಾಟಗಾರರು. ಅವರು ತಮ್ಮ ಸ್ವಂತದ ಹಿತಾಸಕ್ತಿಗಳನ್ನು ಬದಿಗೊತ್ತಿ ಸಮಾಜಕ್ಕಾಗಿ, ಜನಾಂಗಕ್ಕಾಗಿ, ಮಾನವತೆಗಾಗಿ ಏನೆಲ್ಲ ಮಾಡಿದರೋ ಅದಕ್ಕೆ ಬೆಲೆಕಟ್ಟಲು ಖಂಡಿತ ಸಾಧ್ಯವಿಲ್ಲ. ಅವರು ಕಾಲದ ಕರೆಗೆ ಓಗೊಡದೆ ಹೋಗಿದ್ದರೆ ಹೈದರಾಬಾದ ಕರ್ನಾಟಕದಲ್ಲಿ ಈದಿನ ನೆಮ್ಮದಿಯ ಉಸಿರಾಡುತ್ತಿರುವ ನಾವುಗಳು ಬದುಕಿರುತ್ತಿರಲಿಲ್ಲ. ನಾವೇ ಬದುಕಿರದಿದ್ದರೆ ನಮ್ಮಿಂದ ಹುಟ್ಟಿದ ಈ ಹೊಸ ಪೀಳಿಗೆಯೂ ಇರುತ್ತಿರಲಿಲ್ಲ. ಆದ್ದರಿಂದ ನಾವೆಲ್ಲ ಆ ಪುಣ್ಯ ಪುರುಷರಾದ ವಿಮೋಚನಾ ಚಳವಳಿಯ ಹೋರಾಟಗಾರರನ್ನು ಭಕ್ತಿ ಗೌರವಗಳಿಂದ ನೆನೆಯಬೇಕಾಗಿದೆ. ಆ ಎಲ್ಲರನ್ನೂ ಇಲ್ಲಿ ಸ್ಮರಿಸಿಕೊಳ್ಳುವುದು ಸಾಧ್ಯವಿಲ್ಲವಾದರೂ ಕೆಲವರನ್ನಾದರೂ ನೆನೆಯೋಣ. ಅಂಥ ಪುಣ್ಯಪುರುಷರು ಈ ಕೆಳಗಿನಂತಿದ್ದಾರೆ.

ಸರದಾರ ಶರಣಗೌಡರು ಇನಾಮದಾರ

ಈ ವಿಮೋಚನಾ ಚಳವಳಿಯ ಸಂದರ್ಭದಲ್ಲಿ ಮೊದಲನೆಯ ಹೆಸರು ನೆನಪಾಗುವುದು ಸರದಾರ ಶರಣಗೌಡರು ಇನಾಮದಾರರದು. ಮೊದಲು ಕಾಂಗ್ರೆಸ್ ಸೇರಿ, ಗಾಂಧೀಜಿಯವರ ಆದರ್ಶಗಳ ಬಗ್ಗೆ ಗೌರವ ಹೊಂದಿದ ವ್ಯಕ್ತಿ ಹೈದರಾಬಾದ ಪ್ರದೇಶದ ಪರಿಸ್ಥಿತಿಯನ್ನು ಪರಿಗಣಿಸಿ ಗಾಂಧೀಜಿಯವರ ಅಹಿಂಸಾ ಸಿದ್ಧಾಂತ ಇಲ್ಲಿ ನಿರುಪಯುಕ್ತವೆಂದು ಮನಗಂಡಿದ್ದ ಮೊದಲನೆಯ ವ್ಯಕ್ತಿ ಸರದಾರ ಶರಣಗೌಡರು. ವೈರಿಯು ಸುಸಂಸ್ಕೃತನಾಗಿದ್ದು ಒಂದು ಸಿದ್ಧಾಂತಕ್ಕೆ ಅಂಟಿಕೊಂಡವನಾಗಿದ್ದರೆ ಆತನ ಜೊತೆಗೆ ವ್ಯವಹರಿಸಲು ಅಹಿಂಸೆಯು ಸಾಧಕವಾಗಬಹುದು. ಆದರೆ ನೀತಿ ನಿಯಮ ಯಾವೊಂದು ತತ್ವ ವಿಚಾರವೂ ಇಲ್ಲದ ಅಡನಾಡಿಗಳಿಗೆ ಅಹಿಂಸೆ ಅರ್ಥವಾಗುವುದಿಲ್ಲ. ಅಂಥವರ ಜೊತೆಗೆ ಸಶಸ್ತ್ರ ಹೋರಾಟವೇ ಸಾಧುವಾದುದು ಎಂದು ನಂಬಿದವರು ಮತ್ತು ತಮ್ಮ ನಂಬಿಕೆಯನ್ನು ಕಾರ್ಯರೂಪಕ್ಕೆ ತಂದು ಅದನ್ನು ಸಾಧಿಸಿ

ತೋರಿಸಿದವರು. ಸುಭಾಷಚಂದ್ರ ಬೋಸರನ್ನು ಭೇಟಿಯಾಗಿ ಸಶಸ್ತ್ರ ಕ್ರಾಂತಿಯ ದೀಕ್ಷೆ ಪಡೆದಿದ್ದ ಶರಣಗೌಡರು ಆ ದಿನಗಳಲ್ಲಿ ಈ ಪ್ರದೇಶದ ಹೋರಾಟಗಾರರಲ್ಲಿ ಬೆಂಕಿಯ ಕೆಂಡವಾಗಿದ್ದರು.

ವಿದ್ಯಾರ್ಥಿ ದೆಸೆಯಿಂದಲೇ 'ವಂದೇ ಮಾತರಂ' ಚಳವಳಿಯ ಮೂಲಕ ಹೋರಾಟಕ್ಕೆ ಇಳಿದ ಶರಣಗೌಡರು ಕಾಲೇಜಿನಿಂದ ಉಚ್ಚಾಟಿತರಾಗಿ ನಾಗಪೂರದಲ್ಲಿ ತನ್ನ ಶಿಕ್ಷಣವನ್ನು ಮುಂದುವರಿಸಿದರು. ಚಿಕ್ಕಂದಿನಿಂದಲೇ ಸ್ವತಂತ್ರ ಪ್ರವೃತ್ತಿಯವರಾದ ಗೌಡರು ಧಾರ್ಮಿಕ ಹಕ್ಕುಗಳಿಗಾಗಿ ನಿಜಾಮನೊಂದಿಗೆ ಹೋರಾಡಿದರು. ಪೋಲೀಸರೊಂದಿಗೆ ಯಾವಾಗಲೂ ಅವರು ಸಂಘರ್ಷ ಮಾಡುತ್ತಲೇ ಬಂದಿದ್ದಾರೆ. 'ರಜಾಕಾರರ ವಿರುದ್ಧ ಶಾಂತಿಯುತವಾದ ಮಾರ್ಗಗಳಿಂದ ಹೋರಾಡಲು ಸಾಧ್ಯವಿಲ್ಲ. ಆದ್ದರಿಂದ ಅವರೊಡನೆ ಸಶಸ್ತ್ರ ಹೋರಾಟಕ್ಕೆ ಅವಕಾಶ ಕೊಡಿ' ಎಂದು ಕಾಂಗ್ರೆಸ್ ಸಭೆಯಲ್ಲಿ ಬೇಡಿಕೆ ಇಟ್ಟಾಗ ಅದು ಕಾಂಗ್ರೆಸ್ ಒಪ್ಪದೆ ಹೋದಾಗ ಅದಕ್ಕೆ ಸೊಪ್ಪುಹಾಕದೆ ತಮ್ಮಂತೆ ಸಮಾನ ವಿಚಾರವುಳ್ಳ ತರುಣರನ್ನು ಕಟ್ಟಿಕೊಂಡು ಗಡಿಯಾಚೆಗೆ ಹೋಗಿ ಗದಗ, ಸೋಲಾಪುರ, ವಿಜಾಪೂರ ಮುಂತಾದ ಕಡೆಗಳಲ್ಲಿ ತಮ್ಮ ಕಾರ್ಯ ಕೇಂದ್ರಗಳನ್ನು ಸ್ಥಾಪಿಸಿಕೊಂಡು ಉಗ್ರವಾಗಿ ಹೋರಾಡಿದರು.

ನಿಜಾಮ ರಾಜ್ಯದ ಕಕ್ಕಳಮೇಲಿ ಪೋಲೀಸ ಠಾಣೆಯ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡದ್ದು ಶರಣಗೌಡರ ಒಂದು ಸಾಹಸದ ಕಥೆಯೇ ಆಗಿದೆ. ಸುರಪುರ, ಜೇವರ್ಗಿ, ಶಾಹಪುರ ಮುಂತಾದ ಪ್ರದೇಶಗಳ ಅನೇಕ ಹಳ್ಳಿಗಳಲ್ಲಿಯ ಪೋಲೀಸ ಠಾಣೆಗಳ ಮೇಲೆ ಕರೋಡಗಿರಿಯ ಮೇಲೆ, ರಜಾಕಾರರ ಮೇಲೆ ದಾಳಿ ಮಾಡಿ ಆಯಾ ಗ್ರಾಮದ ಜನರನ್ನು ಅತ್ಯಾಚಾರಿಗಳ ದವಡೆಯಿಂದ ಮುಕ್ತಗೊಳಿಸಿದ ಕೀರ್ತಿ ಶರಣಗೌಡರಿಗೆ ಸಲ್ಲುತ್ತದೆ. ಶರಣಗೌಡರೇನಾದರೂ ಕೈಯಲ್ಲಿ ಬಂದೂಕು ಹಿಡಿದು ರಜಾಕಾರರನ್ನು ಎದುರಿಸದೇ ಹೋಗಿದ್ದರೆ ಈ ದಿನ ಎಷ್ಟು ಜನ ಹಿಂದೂಗಳು ಬದುಕಿ ಉಳಿಯುತ್ತಿದ್ದರೋ ಹೇಳಲು ಸಾಧ್ಯವಿಲ್ಲ.

ಹೈದರಾಬಾದ ರಾಜ್ಯದ ಮೇಲೆ ಭಾರತ ಸರಕಾರದ ಸೈನಿಕರು ಕಾರ್ಯಾಚರಣೆಯನ್ನು ಪ್ರಾರಂಭಿಸಿದಾಗ ಸೋಲಾಪುರ ತಂಡದ ಜೊತೆಗೆ ಶರಣಗೌಡರು ಹೊರಟು ತುಳಜಾಪುರ, ನಳದುರ್ಗ, ಹುಮನಾಬಾದ ಮಾರ್ಗವಾಗಿ ಅವರನ್ನು ಮುನ್ನಡೆಸಿದರು. ಮುಂದೆ ಒಂದು ತುಕಡಿಯನ್ನು ಹೈದರಾಬಾದಿಗೆ ಹೋಗಲು ಬಿಟ್ಟು ಇನ್ನೊಂದು ತುಕಡಿಯ ಜೊತೆಗೆ ಗುಲಬರ್ಗಾ ಮಾರ್ಗವಾಗಿ ಬಂದರು. ೧೯೨೪ರಲ್ಲಿ ಪ್ರತಿಬಂಧಿಸಿದ ಶ್ರೀ ಶರಣಬಸವೇಶ್ವರ ದೇವಸ್ಥಾನದ ಕಳಶಾರೋಹಣವನ್ನು ಗೌಡರು ೬ನೆಯ ಮಾರ್ಚ್ ೧೯೪೯ರಂದು ನೆರವೇರಿಸಿದರು. ಶ್ರೀ ಶರಣಗೌಡರು ಈಗ ಎಂಬತ್ತೈದರ ಗಡಿಯನ್ನು ದಾಟಿದ್ದಾರೆ. ಆದರೂ ಆ ಆತ್ಮವಿಶ್ವಾಸ, ತೇಜಸ್ಸು ಒಂದಿಷ್ಟೂ ಮಾಯವಾಗಿಲ್ಲ.

ಸ್ವಾಮಿ ರಮಾನಂದ ತೀರ್ಥರು

ಸ್ವಾಮಿ ರಮಾನಂದ ತೀರ್ಥರ ಪೂರ್ವಾಶ್ರಮದ ಹೆಸರು ವೆಂಕಟೇಶ ಭವಾನರಾವ ಖೇಡಗೀಕರ ಎಂದು. ಇವರು ಜನಿಸಿದ್ದು ವಿಜಾಪೂರ ಜಿಲ್ಲೆಯ ಸಿಂದಗಿಯಲ್ಲಿ. ಬಾಲ್ಯದಿಂದಲೇ

ಚಿಂತನಪರರಾಗಿದ್ದ ವೆಂಕಟೇಶ ಅವರಿಗೆ ಹದಿವಯಸ್ಸಿನಲ್ಲಿ ಮಹಾತ್ಮಾ ಗಾಂಧೀ ಮತ್ತು ಲೋಕಮಾನ್ಯ ತಿಲಕರ ಸಂಪರ್ಕ ಬಂದಿತ್ತು. ಗಾಂಧೀಜಿಯವರು 'ದೇಶ್ ಕೇ ಲಿಯೇ ಕುಚ್ಛ ಕರೋ' ಎಂಬ ಆದೇಶ ನೀಡಿದರು. ಅದನ್ನೇ ಗುರು ಮಂತ್ರವೆಂದು ಪರಿಗಣಿಸಿ ದೇಶಕ್ಕಾಗಿ ದುಡಿಯುವುದೇ ತನ್ನ ಜೀವನದ ಪರಮಗುರಿಯೆಂದು ದೃಢಸಂಕಲ್ಪ ಮಾಡಿ ಸಂನ್ಯಾಸ ಸ್ವೀಕರಿಸಿದರು. ಮೊದಲು ಶಿಕ್ಷಕ ವೃತ್ತಿಯನ್ನು ಕಟ್ಟಿಕೊಂಡು ಆಮೇಲೆ ಹೈದರಾಬಾದ ವಿಮೋಚನಾ ಚಳವಳಿಗೆ ಇಳಿದು ರಾಜ್ಯದ ಉದ್ದಗಲಕ್ಕೂ ಸಂಚರಿಸಿ ಜನಜಾಗೃತಿಯನ್ನುಂಟು ಮಾಡಿದರು. 'ಹೈದರಾಬಾದ ಸ್ಟೇಟ್ ಕಾಂಗ್ರೆಸ್'ನ ಹುಟ್ಟಿಗೆ ಸ್ವಾಮಿಗಳೇ ಕಾರಣಕರ್ತರಾದರು.

ಗಾಂಧೀಜಿಯವರ ಮಾದರಿಯಲ್ಲಿ ಅಹಿಂಸಾತ್ಮಕ ಚಳವಳಿಗೆ ಒತ್ತುಕೊಟ್ಟು ಸತ್ಯಾಗ್ರಹದ ಅಸ್ತ್ರದಿಂದ ಹೋರಾಡಿದರು. ಸ್ಟೇಟ್ ಕಾಂಗ್ರೆಸ್ಸಿನಲ್ಲಿ ಆಂತರಿಕ ಒಡಕು ಉಂಟಾದಾಗ ಇವರು ಅಡ್ಡಗೋಡೆಯ ಮೇಲೆ ದೀಪ ಇಟ್ಟು ಸತ್ಯಾಗ್ರಹ ನಡೆಸಬೇಕೆಂಬ ಸೌಮ್ಯವಾದಿಗಳನ್ನು ತರಾಟೆಗೆ ತೆಗೆದುಕೊಂಡು ಉಗ್ರ ಹೋರಾಟಕ್ಕೆ ಇಳಿದರು. ಆ ಕಡೆಗೆ ನಿಜಾಮನಿಗೂ ನಿಷ್ಠುರರಾಗಬಾರದು, ಇತ್ತ ಕಾಂಗ್ರೆಸ್ಸಿನಿಂದಲೂ ದೂರಾಗಬಾರದು ಎಂಬ ಎಡಬಿಡಂಗಿ ನೀತಿಯನ್ನು ಹೊಂದಿದ ಜನರು ವಿಮೋಚನೆಯ ನಂತರ ಮಂತ್ರಿಗಳಾಗಿ, ಅಧಿಕಾರಿಗಳಾಗಿ ಮೆರೆದಾಡಿದರೆ ಸ್ವಾಮಿ ರಮಾನಂದರಂಥ ಕರ್ಮಠರು ಸೇವೆಯೇ ತನ್ನ ಜೀವನದ ಗುರಿ, ಸಾಧನೆ ಹಾಗೂ ಸಿದ್ಧಿಯೆಂದು ಭಾವಿಸಿ ಅದರಲ್ಲಿಯೇ ತೃಪ್ತರಾದವರು. ಹೈದರಾಬಾದ ವಿಮೋಚನಾ ಚಳವಳಿಯ ಚರಿತ್ರೆಯಲ್ಲಿ ಸ್ವಾಮೀಜಿಯವರ ಹೆಸರು ಅಜರಾಮರವಾಗಿದೆ.

ವಿ.ಪಿ. ದೇವುಳಗಾಂವಕರ್

ಗುಲಬರ್ಗಾದ ಪ್ರತಿಷ್ಠಿತ ಮನೆತನಕ್ಕೆ ಸೇರಿದ್ದ ಶ್ರೀ ವಿಠ್ಠಲರಾವ ಪಾಂಡುರಂಗರಾವ ದೇವುಳಗಾಂವಕರರು 'ಭಾವುಸಾಹೇಬ' ಎಂದೆ ಪರಿಚಿತರು. ಗುಲಬರ್ಗಾದಲ್ಲಿ ಕಾಂಗ್ರೆಸ್ ಹುಟ್ಟಿಕೊಂಡದ್ದೇ ಇವರ ಮನೆಯಲ್ಲಿ ಎಂದು ಹೇಳುತ್ತಾರೆ. ೧೯೩೦ರಲ್ಲಿ ಗಾಂಧೀಜಿಯವರ ದಾಂಡೀಯಾತ್ರೆಗೆ ಪಾದಾರ್ಪಣೆ ಮಾಡಿದ ವ್ಯಕ್ತಿ ಇವರು. ಒಂದು ರೀತಿಯಿಂದ ಬಾಲ್ಯದಿಂದಲೂ ಖಾದಿಯ ಆರಾಧಕರು ಮತ್ತು ಗಾಂಧೀಜಿಯ ಭಕ್ತರಾಗಿದ್ದಾರೆ. ಹೈದರಾಬಾದಿನಲ್ಲಿ ವಿದ್ಯಾರ್ಥಿಯಾಗಿದಾಗ ಇವರ ಖಾದಿ ಉಡಿಗೆ ನೋಡಿ ಎಲ್ಲರೂ ಇವರನ್ನು ಅನುಮಾನಿಸುತ್ತಿದ್ದರು. ಅಲ್ಲಿಯೇ ಸ್ಟೇಟ್ ಕಾಂಗ್ರೆಸ್ಸಿನ ಚಳವಳಿಗೆ ಧುಮುಕಿ ಸ್ವಾಮಿ ರಮಾನಂದ ತೀರ್ಥರ ಮಾರ್ಗದರ್ಶನದಲ್ಲಿ ಅನೇಕ ಅಹಿಂಸಾತ್ಮಕ ಚಳುವಳಿಗಳಲ್ಲಿ ಭಾಗವಹಿಸಿದರು. ತಮ್ಮ ಅರ್ಬುದರೋಗಕ್ಕೆ 'ನಿಲ್ಲು ಆಚೆಗೆ' ಎಂಬ ಎಚ್ಚರಿಕೆಯ ಆದೇಶವನ್ನು ಕೊಟ್ಟು ಆ ರೋಗವನ್ನೂ ಮರೆತು ಈಗಲೂ ದೇಶ, ಸಂಸ್ಕೃತಿ ಮುಂತಾದವುಗಳ ಬಗ್ಗೆಯೇ ಚಿಂತಿಸುತ್ತಿರುತ್ತಾರೆ.

ವಿದ್ಯಾಧರ ಗುರೂಜೀ

ಗುರುಮಿಟಕಲನಲ್ಲಿ ಜನಿಸಿದ ಭಿಕ್ಷಪ್ಪ ಎಂಬ ಸ್ವಾಭಿಮಾನಿ, ದೇಶಭಕ್ತ ತರುಣ ಆರ್ಯ ಸಮಾಜದ ತತ್ವಸಿದ್ಧಾಂತಗಳಿಂದ ಆಕರ್ಷಿತನಾಗಿ ಆರ್ಯಸಮಾಜಿಯಾದ. ಪೂರ್ವಾಶ್ರಮ ತೊರೆದು ಆರ್ಯರಾದ ಈ ವ್ಯಕ್ತಿಯೇ ಶ್ರೀ ವಿದ್ಯಾಧರ ಗುರೂಜಿ. ಆಗಿನ ದಿನಗಳಲ್ಲಿ ಗುರುಮಿಟಕಲ್

ಪಠಾಣರ ಒಂದು ಪ್ರಮುಖ ಕೇಂದ್ರವಾಗಿತ್ತು. ನಿಜಾಮನ ಪಿಷ್ಟಪೋಷಣೆಗಾಗಿ ಪಠಾಣರ ಪಡೆಗಳೂ ಹೈದರಾಬಾದ ರಾಜ್ಯಾದ್ಯಂತ ಅಲ್ಲಲ್ಲಿ ಬೀಡು ಬಿಟ್ಟಿದ್ದವು. ಅಂಥವುಗಳಲ್ಲಿ ಗುರುಮಿಟಕಲ್ ಕೂಡ ಒಂದು. ಕಿಶೋರಾವಸ್ಥೆಯಲ್ಲಿಯೇ ಈ ಪಠಾಣರ ಚಟುವಟಿಕೆಗಳನ್ನು ಕಂಡು ಗುರೂಜಿಯವರಲ್ಲಿ ಸುಪ್ತವಾಗಿದ್ದ ಆರ್ಯ ಸಂಸ್ಕೃತಿಯ ಅಭಿಮಾನ ಜಾಗೃತವಾಯಿತು. ನೇರ ಹೋರಾಟಕ್ಕೆ ಇಳಿದರು. ಅನೇಕ ಸಲ ಜೈಲಿಗೂ ಹೋಗಬೇಕಾಯಿತು. ಮುಂದೆ ಲಾಹೋರಿಗೆ ಹೋಗಿ ತಮ್ಮ ಶಿಕ್ಷಣ ಮುಗಿಸಿಕೊಂಡು ಬಂದು ಮತ್ತೆ ಚಳವಳಿಗೆ ಇಳಿದರು. ವಿಮೋಚನೆಯ ನಿಕಟ ಪೂರ್ವದಲ್ಲಿ ಗಡಿನಾಡಿನಲ್ಲಿ ನಿರ್ವಾಸಿತರಾಗಿ ಹೋಗಿದ್ದ ಹೈದರಾಬಾದ ರಾಜ್ಯದ ಜನರನ್ನು ನೆಲೆಗೊಳಿಸಿ ಅವರ ಉಸ್ತುವಾರಿಯನ್ನು ನೋಡಿಕೊಳ್ಳುವಲ್ಲಿ ಗಮನಹರಿಸಿದರು. ಈಗ ಹಿಂದೀ, ಖಾದಿ, ಸಂಸ್ಕೃತಿ ಎಂದು ಸಾರ್ವಜನಿಕ ಜೀವನದಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

ಚೆನ್ನಬಸಪ್ಪಾ ಕುಳಗೇರಿ

ಕಿಶೋರಾವಸ್ಥೆಯಲ್ಲಿ ತಮ್ಮ ಕಣ್ಣೆದುರಿಗೆ ಮುಸ್ಲಿಂ ಧರ್ಮಾಂಧರಿಂದ ನಡೆಯುತ್ತಿದ್ದ ಸ್ತ್ರೀಯರ ಮೇಲಿನ ಅತ್ಯಾಚಾರ, ಹಿಂದೂ ಜನರ ಲೂಟಿ, ದರೋಡೆ ಮುಂತಾದವುಗಳನ್ನು ಕಂಡು ಚೆನ್ನಬಸಪ್ಪನವರ ಮನಸ್ಸಿನ ಮೇಲೆ ತುಂಬ ಪರಿಣಾಮವಾಗಿತ್ತು. ಯಾವಾಗ ಇದೆಲ್ಲದರ ವಿರುದ್ಧ ಹೋರಾಡುವ ಶಕ್ತಿ ದೇವರು ನನಗೆ ಕೊಡುತ್ತಾನೋ ಎಂದು ಕಾದುಕೊಂಡಿದ್ದರು. ಅದೇ ಕಾಲಕ್ಕೆ ಸರದಾರ ಶರಣಗೌಡರ ಸಾಹಚರ್ಯವೂ ಅವರಿಗೆ ಲಭಿಸಿತು. ಶರಣಗೌಡರ ಜೊತೆಗೆ ಭೂಗತ ಚಳವಳಿಗೆ ಇಳಿದು, ಜೀವನದ ಹಂಗು ತೊರೆದು ಹೋರಾಡಿದರು. ಗೋಮುಖ ವ್ಯಾಘ್ರದಂತಿರುವ ನಮ್ಮವರೇ ಆದ ಜನರು ಮುಸ್ಲಿಮರ ಜೊತೆ ಸೇರಿ ಚೆನ್ನಬಸಪ್ಪನವರ ಕೊಲೆಗೆ ಅನೇಕ ಸಲ ಪ್ರಯತ್ನಿಸಿದರು. ಆದರೆ ಈ ಲೋಕದಲ್ಲಿ ಚೆನ್ನಬಸಪ್ಪನವರ ಕಾರ್ಯಗಳು ಇನ್ನೂ ಮುಗಿದಿರಲಿಲ್ಲ. ಅಂದಮೇಲೆ ಸಾವಿಗೆ ಹತ್ತಿರ ಸುಳಿಯಲು ಅದು ಹೇಗೆ ಸಾಧ್ಯವಾದೀತು? ಆ ಎಲ್ಲ ಸಂದರ್ಭಗಳಲ್ಲಿ ಅವರು ಆಶ್ಚರ್ಯಕರವಾದ ರೀತಿಯಲ್ಲಿ ಉಳಿದುಕೊಳ್ಳುತ್ತ ಬಂದರು. ಶ್ರೀ ಶರಣಬಸವೇಶ್ವರರ ಕಳಶಾರೋಹಣದಲ್ಲಿ ಅವರ ಯೋಗದಾನ ಬೇಕಾಗಿತ್ತು. ಅದೆಲ್ಲ ಮುಗಿಸಿ ಈಗ 'ನಾವು ಇಷ್ಟೆಲ್ಲ ಕಷ್ಟಪಟ್ಟು ಈ ನಾಡನ್ನು ನಿಮ್ಮ ಕೈಗೆ ಕೊಟ್ಟಿದ್ದೇವೆ ಮುಂದೇನು ಮಾಡುತ್ತೀರೋ ನೋಡುತ್ತೇವೆ' ಎಂದು ಮೂಕರಾಗಿ ನಿರೀಕ್ಷಿಸುತ್ತ ಕುಳಿತಿದ್ದಾರೆ.

ಅಣ್ಣಾರಾವ ವೀರಭದ್ರಪ್ಪಾ ಪಾಟೀಲ

ಶಿಬಿರ ಅಣ್ಣಾರಾವ ಎಂದೇ ಖ್ಯಾತಿಹೊಂದಿದ ಅಣ್ಣಾರಾವ ಪಾಟೀಲರು ಆಳಂದದವರು. ಗುಲಬರ್ಗಾದಲ್ಲಿ ಶಿಕ್ಷಣಕ್ಕಾಗಿ ಇದ್ದಾಗಲೇ ಅವರ ಒಲವು ಹೈದರಾಬಾದ ವಿಮೋಚನೆಗಾಗಿ ತುಡಿಯಲು ಪ್ರಾರಂಭಿಸಿತು. ಮುಸ್ಲಿಂ ಧರ್ಮಾಂಧರ ದುಂಡಾವರ್ತಿಯನ್ನು ಎದುರಿಸಿ ಹೋರಾಡುವ ಒಬ್ಬ ವೀರನೂ ಕಾಣದೆ ಇದ್ದಾಗ ಅಣ್ಣಾರಾಯರ ರಕ್ತ ಕುದಿಯಿತು. ನೇರವಾಗಿ ಚಳವಳಿಗೆ ಇಳಿದರು. ಮೊದಮೊದಲು ಆಳಂದ ಪ್ರದೇಶದಲ್ಲಿ ಪ್ರಾರಂಭವಾದ ಇವರ ಚಟುವಟಿಕೆ ಹಿರಿಯ ನಾಯಕರ ಗಮನಕ್ಕೆ ಬಂದಿತು. ಗಡಿಯ ಹೊರಗಿನಿಂದ ನಿಜಾಮ

ಸರಕಾರವನ್ನು ಬಗ್ಗುಬಡಿಯಬೇಕೆಂಬ ಉದ್ದೇಶದಿಂದ ಶಿಬಿರಗಳನ್ನು ಸ್ಥಾಪಿಸಲು ನಿರ್ಧರಿಸಿದಾಗ ಅಣ್ಣಾರಾಯರಿಗೆ ವಾಗದರಿ ಶಿಬಿರದ ಹೊಣೆ ಹೊರಿಸಲಾಯಿತು. ಸೋಲಾಪುರದಲ್ಲಿದ್ದ ಹೋರಾಟದ ಒಂದು ಕೇಂದ್ರ ಕಚೇರಿಯೊಂದಿಗೆ ನೇರ ಸಂಪರ್ಕಹೊಂದಿದ್ದು ಅವರ ನಿರ್ದೇಶನದಲ್ಲಿ ಕಟ್ಟುನಿಟ್ಟಾಗಿ ಕೆಲಸ ಮಾಡುತ್ತಿದ್ದರು. ಅದೆಷ್ಟೋ ಪೊಲೀಸ ಠಾಣೆಗಳ ಮೇಲೆ, ಕರೋಡಗಿರಿಗಳ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡರು. ಅಣ್ಣಾರಾಯ ಎಂದರೆ ರಜಾಕಾರರು ಕನಸಿನಲ್ಲಿಯೂ ಬೆಚ್ಚಿಬೀಳುವಂತೆ ಇವರ ಕಾರ್ಯವೈಖರಿ ಇತ್ತು. ಈ ಹೋರಾಟಕ್ಕಾಗಿ ಇವರ ಕುಟುಂಬದವರು ಅನುಭವಿಸಿದ ಕಷ್ಟಕೋಟಲೆಗಳು, ಹಿಂಸೆಗಳು ಅಷ್ಟಿಷ್ಟಲ್ಲ. ಆದರೂ ಕುಟುಂಬವನ್ನು ಸಂಪೂರ್ಣವಾಗಿ ಮರೆತು ಚಳವಳಿ ಮಾಡಿದ ಧೀರ ಈ ಅಣ್ಣಾರಾಯ. ನಿಜಾಮನು ಶರಣಾದ ಮರುದಿನ ಇವರು ತಮ್ಮೂರಾದ ಆಳಂದಕ್ಕೆ ಬಂದಾಗ ಹಾಳುಗೋಡೆಗಳ ಹೊರತು ಇವರ ಮನೆಯೆಂಬುದೊಂದು ಇರಲಿಲ್ಲ. ಆ ರೀತಿ ರಜಾಕಾರರು ಇವರ ಮನೆಯ ಎಲ್ಲ ಆಸ್ತಿಯನ್ನು ಸರ್ವನಾಶಗೊಳಿಸಿದರು. ಹಳ್ಳಿಯ ಜನ ತಮ್ಮ ಊರುಗಳಿಂದ ರೊಟ್ಟಿ ಕಟ್ಟಿಕೊಂಡು ಬಂದು ಇವರ ಅಂಗಳದಲ್ಲಿ ಇವರನ್ನು ಉಣಿಸಿ ತಾವೂ ಉಣ್ಣುತ್ತಿದ್ದರಂತೆ. ವಿಮೋಚನೆಯ ನಂತರದ ದಿನಗಳಲ್ಲಿ ಇವರಿಗೆ ಸಿಗಬೇಕಾದಷ್ಟು ಗೌರವ ಸಿಗದೇಹೋಯಿತು. ರಾಜಕೀಯ ಚದುರಂಗದಾಟದಲ್ಲಿ ನೇತಾರರು ಇವರನ್ನು ಮರೆತುಬಿಟ್ಟರೆಂದು ಕಾಣುತ್ತದೆ.

ದಾಸರಾವ ಮಖ್ತೆದಾರ

ವಿದ್ಯಾರ್ಥಿದೆಸೆಯಿಂದಲೇ ಸಂಘಟನೆ, ಹೋರಾಟದ ಕಲ್ಪನೆಯನ್ನು ಹೊತ್ತುಕೊಂಡು ಬೆಳೆದವರು. ಇವರ ಉತ್ಸಾಹವನ್ನು ಕಂಡು ಶರಣಗೌಡರು ಇವರನ್ನು ತಮ್ಮ ಗುಂಪಿಗೆ ಸೇರಿಸಿಕೊಂಡು ತಾವು ಸಿಂದಗಿ ಶಿಬಿರವನ್ನು ವಹಿಸಿಕೊಂಡಾಗ ಕಕ್ಕಳಮೇಲಿ ಶಿಬಿರದ ಹೊಣೆಯನ್ನು ದಾಸರಾಯರಿಗೆ ವಹಿಸಿಕೊಟ್ಟರು. ಈ ಶಿಬಿರದಿಂದಲೇ ದಾಸರಾವರ ಹೋರಾಟಕ್ಕೆ ಪ್ರಾರಂಭವಾಯಿತು. ಕಕ್ಕಳಮೇಲಿ ಶಿಬಿರದ ಹೊಣೆ ಹೊತ್ತ ಮೇಲೆ ಮೊಟ್ಟಮೊದಲು ಇವರು ಮಾಡಿದ ಕೆಲಸವೆಂದರೆ ಕಕ್ಕಳಮೇಲಿ ಗ್ರಾಮವನ್ನು ನಿಜಾಮನ ಹಿಡಿತದಿಂದ ಮುಕ್ತಗೊಳಿಸಿದ್ದು. ೨೦ ಜನ ಯುವಕರೊಂದಿಗೆ ಧೈರ್ಯದಿಂದ ಹೋರಾಡಿ ನಿಜಾಮನ ಸೈನ್ಯವನ್ನು ಸದೆಬಡಿದರು. ಆದರೂ ನಿಜಾಮ ಸರಕಾರ ಇವರ ಬೆನ್ನು ಬಿಡದೆ ಇವರ ಮೇಲೆ ವಾರಂಟ ಜಾರಿಗೊಳಿಸಿತು. ಇವರನ್ನು ಹಿಡಿದು ಕೊಟ್ಟವರಿಗೆ ೫೦೦೦/- ರೂ. ಬಹುಮಾನವನ್ನೂ ಘೋಷಿಸಲಾಯಿತು. ಆದರೂ ದಾಸರಾಯರು ಹೆದರದೆ ನಿಜಾಮ ಸರಕಾರಕ್ಕೆ ಚಳ್ಳೆಹಣ್ಣು ತಿನ್ನಿಸಿ ಕಕ್ಕಳಮೇಲಿ ಗ್ರಾಮವನ್ನೇ ತಮ್ಮ ಶಿಬಿರವನ್ನಾಗಿ ಮಾಡಿಕೊಂಡು ಅಲ್ಲಿಯೆ ಒಂದು ಜೈಲು ನಿರ್ಮಿಸಿಕೊಂಡರು. ಆ ಜೈಲಿನಲ್ಲಿ ರಜಾಕಾರ ಸೈನ್ಯವನ್ನು ಹಿಡಿಹಿಡಿದು ತಂದು ಹಾಕುತ್ತಿದ್ದರು. ಈ ಚಳವಳಿಯಲ್ಲಿ ನಮ್ಮ ಬಾಂಧವರೇ ಅನೇಕರು ಆಮಿಷಕ್ಕೆ ಒಳಗಾಗಿ ರಜಾಕಾರರೊಂದಿಗೆ ಸೇರಿಕೊಂಡು ಒಳಗೊಳಗೆ ಪಿತೂರಿಯ ಕೆಲಸ ಮಾಡುತ್ತಿದ್ದರು. ಅಂಥವರು ದಾಸರಾಯರನ್ನು ಕೊಲ್ಲುವ ಅನೇಕ ಪ್ರಯತ್ನ ಮಾಡಿದರು. ಆದರೆ ದೂರದರ್ಶಿಯಾಗಿದ್ದ ದಾಸರಾಯರು ಯಾರ ಕೈಗೂ ಸಿಗದೆ ಸಾಬೀತಾಗಿ ಬಚಾವಾದರು.

ಅನ್ನಪೂರ್ಣಯ್ಯಾ ಸ್ವಾಮಿ ಎಲೇರಿ

ಅನ್ನಪೂರ್ಣಯ್ಯನವರದೇ ಒಂದು ಬಗೆ. ನಿಜಾಮನ ಆಡಳಿತ ಹೋಗಬೇಕು. ಅದರ ಜೊತೆಗೆ ವೀರಶೈವವೂ ತನ್ನ ಐಡೆಂಟಿಟಿಯನ್ನು ಉಳಿಸಿಕೊಂಡು ಬಾಳಬೇಕು ಎಂಬುದು ಇವರ ಧ್ಯೇಯವಾಗಿತ್ತು. ಆರ್ಯಸಮಾಜವು ಈ ರಜಾಕಾರ ಚಳವಳಿಯಲ್ಲಿ ಎಷ್ಟೇ ಆತ್ಮಾರ್ಪಣೆಯಿಂದ ಹೋರಾಡಿದರೂ ಅದು ಹಿಂದೂ ಸಮಾಜದ ವಿವಿಧ ಭಾವನೆಗಳನ್ನು ಗೌರವಿಸುತ್ತಿರಲಿಲ್ಲ. ಹರ್ಡೇಕರ ಮಂಜಪ್ಪ ಮುಂತಾದವರು ಮೊದಲು ಆರ್ಯಸಮಾಜದಲ್ಲಿಯೇ ಇದ್ದವರು. ಆದರೆ ಆರ್ಯಸಮಾಜದ ಇನ್ನೊಂದು ರೀತಿಯ ಅತಿರೇಕದಿಂದ ರೋಸಿಹೋಗಿ ಹೊರಗೆ ಸಿಡಿದಿದ್ದರು. ಆರ್ಯಸಮಾಜದಿಂದಷ್ಟೇ ಅಲ್ಲ, ಆಗಿನ ದಿನಗಳಲ್ಲಿ ಬಹುಸಂಖ್ಯಾತ ಆರ್ಯಸಮಾಜಿಗಳಿಂದ ತುಂಬಿದ ಕಾಂಗ್ರೆಸ್ ಸಂಸ್ಥೆಯಿಂದಲೂ ಲಿಂಗಾಯತರು ದೂರ ಸರಿದಿದ್ದರು. ಉದಗೀರದಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಯೀ ಶ್ಯಾಮಲಾಲರು ಒಂದು ಮಾತಾಡಿದ್ದರಂತೆ, 'ಇನ್ನೂ ಕೆಲವು ದಿನಗಳಲ್ಲಿ ಈ ಲಿಂಗಾಯತರ ಶಿವದಾರ ಕಳಚಿ ಜನಿವಾರ ತೊಡಿಸುತ್ತೇನೆ' ಎಂದು. ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದ ಒಂದು ಪಂಗಡದವರ ಕುರಿತು ಈ ರೀತಿಯ ಮಾತು ಆಡಬಾರದಾಗಿತ್ತು. ಆದರೂ ಕೂಡ ಲಿಂಗಾಯತರು ವಿಮೋಚನಾ ಚಳವಳಿಯಿಂದ ಹಿಂದೆ ಸರಿಯಲಿಲ್ಲ. ಕೆ. ಎಂ. ಮುನ್ಶಿಯವರ ವರದಿಯ ಪ್ರಕಾರ ಮಾರಣ ಹೋಮದಲ್ಲಿ ಆಹುತಿಯಾದವರು ಹೆಚ್ಚು ಜನ ಲಿಂಗಾಯತರೇ ಆಗಿದ್ದರು. ಎಲೇರಿ ಅನ್ನಪೂರ್ಣಯ್ಯನವರು ಹೈದರಾಬಾದ ರಾಜ್ಯದ ಮೂಲೆಮೂಲೆಗಳಲ್ಲಿ ಲಿಂಗಾಯತ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿ ಧರ್ಮಜಾಗೃತಿಯನ್ನು ಉಂಟು ಮಾಡಬೇಕೆಂದು ಸಂಕಲ್ಪ ಹೊಂದಿದ್ದರು.

ಅಳವಂಡಿಯ ಶಿವಮೂರ್ತಿಸ್ವಾಮಿ

ಅಳವಂಡಿ ಹಿರೇಮಠ ಸಂಸ್ಥಾನಕ್ಕೆ ಸೇರಿದ್ದ ಶಿವಮೂರ್ತಿ ಸ್ವಾಮಿಗಳು ಸಂಸ್ಕಾರಬಲದಿಂದ ಸಮಾಜ ಸೇವೆಯನ್ನು ಮೈಗೂಡಿಸಿಕೊಂಡು ಬಂದಿದ್ದರು. ಬರಗಾಲವಾಗಲಿ, ಮಹಾಮಾರಿಯಾಗಲಿ, ಅಥವಾ ಇನ್ನಾವುದೇ ದೈವೀ ಪ್ರಕೋಪಕ್ಕೆ ಗ್ರಾಮವು ತುತ್ತಾದಾಗಲೆಲ್ಲ ಅಳವಂಡಿ ಮಠವು ಸೇವೆಗೆ ಟೊಂಕ ಕಟ್ಟಿ ನಿಲ್ಲುತ್ತಿತ್ತು. ಗಾಂಧೀಜಿಯವರ ಸ್ವದೇಶಿ ಆಂದೋಲನ ನಡೆದಾಗ ಅದಕ್ಕೆ ಪ್ರಭಾವಿತರಾಗಿ ಶಿವಮೂರ್ತಿ ಸ್ವಾಮಿಗಳು ತಾವೂ ಖಾದಿಧಾರಿಗಳಾಗುವ ಪಣ ತೊಟ್ಟರಲ್ಲದೆ ಊರಲ್ಲಿ ಒಂದು ಚರಖಾ ಸಂಘ ಸ್ಥಾಪಿಸಬೇಕೆಂದು ಸಂಕಲ್ಪ ಮಾಡಿದರು. ತಮ್ಮ ತಾಯಿಯ ಕೈಯಲ್ಲಿಯ ಬಂಗಾರದ ಬಳೆಗಳನ್ನು ಮತ್ತು ತಮ್ಮ ಬಂಗಾರದ ಗುಂಡಗಡಿಗೆಯನ್ನು ಮಾರಿ ಊರಲ್ಲಿ ಚರಖಾ ಸಂಘ ಸ್ಥಾಪಿಸಿದರು. ಆಗಿನ್ನೂ ಅವರು ವಿಮೋಚನಾ ಚಳವಳಿಗೆ ಕಾಲಿಟ್ಟಿರಲಿಲ್ಲ. ಈ ರೀತಿಯ ಸಾಮಾಜಿಕ ಕಳಕಳಿ ಮತ್ತು ದೇಶಪ್ರೇಮ ಅವರಲ್ಲಿ ಹುಟ್ಟಿನಿಂದಲೇ ಅಳವಟ್ಟಿತ್ತು ಎಂದು ಹೇಳುವುದಕ್ಕಾಗಿ ಈ ಮಾತು ಇಲ್ಲಿ ಉಲ್ಲೇಖಿಸಲಾಗುತ್ತಿದೆ.

ಮುಂದೆ ನಿಜಾಮ ರಾಜ್ಯದ ವಿಮೋಚನಾ ಚಳವಳಿಗೆ ಧುಮುಕಿದಾಗ ಅವರು ತಮ್ಮ ಮಠದ ಚಿರ ಸ್ಥಿರ ಆಸ್ತಿಯನ್ನು ಕಳೆದುಕೊಳ್ಳಬೇಕಾಯಿತು. ಅವರು ಆ ಕಡೆ ಮುಂಡರಗಿ

ಶಿಬಿರದಲ್ಲಿ ಕೆಲಸ ಮಾಡುತ್ತಿರುವಾಗ ಈ ಕಡೆ ರಜಾಕಾರರು, ಪಠಾಣರು ಇವರ ಮಠದ ಮೇಲೆ ದಾಳಿ ಮಾಡಿ, ಇವರ ತಂದೆ ತಾಯಿ ಮತ್ತು ಮಠದಲ್ಲಿದ್ದ ಇತರರನ್ನು ಹೊಡೆದು ಬಡಿದು, ಹೊರಗೆ ತಳ್ಳಿ ನಾಲ್ಕೈದು ಲಾರಿ ತುಂಬಿಕೊಂಡು ಮಠದ ಆಸ್ತಿಯನ್ನು ಲೂಟಿ ಮಾಡಿಕೊಂಡು ಹೋದರು. ಆದರೂ ಸ್ವಾಮಿಗಳು ಧೃತಿಗೆಡಲಿಲ್ಲ. ತಾವು ವಹಿಸಿಕೊಂಡಂಥ ಶಿಬಿರದ ಕೆಲಸಗಳನ್ನು ಜವಾಬ್ದಾರಿಯಿಂದ ನಿರ್ವಹಿಸಿದರು. ಹತ್ತಿರದಲ್ಲೇ ಇದ್ದ ಇಟಗಿ ಶಿಬಿರದ ಶಿಬಿರಾಧ್ಯಕ್ಷರಾದ ಆರ್.ವಿ. ಬೀಡಪ ಮತ್ತು ಇವರು ಸೇರಿ ಸಂಕನೂರು ಅಡ್ಡದಾರಿಯ ಆಚೆಗಿರುವ ಹಳ್ಳಿಗಳನ್ನು ಮುಸ್ಲಿಮರ ದವಡೆಯಿಂದ ಸ್ವತಂತ್ರಪಡಿಸಿದರು. ರಜಾಕಾರರು ಮತ್ತು ಪಠಾಣರು ಅಕ್ರಮವಾಗಿ ಸಂಗ್ರಹಿಸಿದ್ದ ಲೇವಿ ಧಾನ್ಯವನ್ನು ಲೂಟಿ ಮಾಡಿ ಶಿಬಿರಕ್ಕಾಗಿ ಉಪಯೋಗಿಸಿಕೊಂಡು ಉಳಿದದ್ದನ್ನು ಹಳ್ಳಿಯ ಬಡವರಲ್ಲಿ ಹಂಚಿದರು. ಕರೋಡಗಿರಿಗಳನ್ನು ನಾಶಪಡಿಸಿದರು. ಸೇಂದಿ ಮರಗಳನ್ನು, ಬನಗಳನ್ನು ಸುಟ್ಟರು. ಸೆರೆ-ಸೇಂದಿ ಗಡಂಗಗಳ ಎದುರಿಗೆ ಕುಳಿತು ಪಿಕೆಟಿಂಗ್ ನಡೆಸಿದ್ದಲ್ಲದೆ, ಗಡಂಗದವರು ತಮ್ಮ ಮಾತಿಗೆ ಬಗ್ಗದೆ ಇದ್ದಾಗ ಅವುಗಳನ್ನು ಸುಟ್ಟರು.

ಈ ಚಳವಳಿಯ ಕಾಲಕ್ಕೆ ಅನೇಕ ಸಲ ಜೈಲಿನ ಕಂಬಿ ಎಣಿಸಬೇಕಾಯಿತು. ಅಂತೂ ಕೊನೆಗೆ ತಮ್ಮ ಸಂಕಲ್ಪವನ್ನು ಪೂರ್ಣಗೊಳಿಸಿ ನಿಜಾಮ ರಾಜ್ಯವನ್ನು ವಿಮೋಚನೆಗೊಳಿಸುವಲ್ಲಿ ಯಶಸ್ವಿಗಳಾದರು. ಕೆಲವು ವಿಚಾರಗಳಲ್ಲಿ ಅವರಿಗೆ ಕಾಂಗ್ರೆಸ್ಸಿನೊಂದಿಗೆ ಹೊಂದಿಕೊಂಡು ಹೋಗುವುದು ಸಾಧ್ಯವಾಗಲಿಲ್ಲ. ಆಗ ತಮ್ಮದೇ ಆದ ಒಂದು ಲೋಕಸೇವಾ ಸಂಘವನ್ನು ಸ್ಥಾಪಿಸಿಕೊಂಡರು. ವಿಮೋಚನೆಯ ನಂತರವೂ ಅವರು ಕೈಕಟ್ಟಿಕೊಂಡು ಸುಮ್ಮನೆ ಕೂಡಲಿಲ್ಲ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದರು. ತುಂಗಭದ್ರಾ ಕಾಲುವೆ ಪಡೆಯುವುದಕ್ಕಾಗಿ ಹೋರಾಡಿದರು. ೧೯೫೭ರಲ್ಲಿ ಮತ್ತು ೧೯೬೭ರಲ್ಲಿ ಅವರು ಲೋಕಸಭೆಗೆ ಆರಿಸಿ ಬಂದಿದ್ದರು. ಈಗ ಹೊಸಪೇಟೆಯ ಹತ್ತಿರ ರಾಮಸಾಗರದಲ್ಲಿ ಸಹಕಾರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ದುಡಿಯುತ್ತಿದ್ದಾರೆ.

ವೀರಭದ್ರಪ್ಪ ಶಿರೂರ

ವೀರಭದ್ರಪ್ಪ ಶಿರೂರರು ಕೊಪ್ಪಳ ಭಾಗದ ಅತ್ಯಂತ ಗಣ್ಯ ಸ್ವಾತಂತ್ರ್ಯ ಯೋಧರು ಹಾಗೂ ಸಾಮಾಜಿಕ ಕಾರ್ಯಕರ್ತರಾಗಿದ್ದರು. ೧೯೪೦ರಲ್ಲಿ ಬೀದರಿನಲ್ಲಿ ನಿಜಾಮ ಕರ್ನಾಟಕ ಪರಿಷತ್ತಿನ ಎರಡನೆಯ ಸಮ್ಮೇಳನವಾದಾಗ ಕೊಪ್ಪಳದಿಂದ ಅನೇಕ ಜನರನ್ನು ಕರೆದುಕೊಂಡು ಹೋಗಿದ್ದರು. ನಿಜಾಮನು ಹಿಂದೂಗಳ ಕಣ್ಣೊರೆಸುವುದಕ್ಕಾಗಿ ಸುಧಾರಣೆಯ ಹೆಸರಿನಲ್ಲಿ ಕೆಲವು ನಿರ್ಬಂಧಗಳನ್ನು ಹೇರಿದ್ದನು. ವೀರಭದ್ರಪ್ಪನವರು ಆ ಸಮ್ಮೇಳನದಲ್ಲಿ ಆ ಸುಧಾರಣೆಗಳನ್ನು ವಿರೋಧಿಸಿದ್ದಲ್ಲದೆ ಹೊಣೆಗಾರಿಕೆಯ ಸರಕಾರದ ಸ್ಥಾಪನೆಗಾಗಿ ಕಾರ್ಯಸಾಧುವಾದ ನಿಲುವಳಿಗಳನ್ನು ಮಂಡಿಸಿದ್ದರು.

೧೯೪೭ರ ಆಗಸ್ಟ್ ೧೫ರಂದು ಕಿನ್ನಾಳ, ಅಳವಂಡಿ, ಕಾತರಕಿ, ಕವಲೂರು, ಕುಕನೂರು, ಯಲಬುರ್ಗಿ, ಸಂಗನಹಾಳ, ಚಿಕ್ಕೇನಕೊಪ್ಪ ಮುಂತಾದ ಕಡೆಗಳಲ್ಲಿ ತಿರಂಗಾ ಬಾವುಟವನ್ನು ಹಾರಿಸಿದರು. ಕೊಪ್ಪಳದಲ್ಲಿ ಲಕ್ಷ್ಮಣಾಚಾರ್ಯ ವಕೀಲರು, ಹಂಪಿ ಮಾಸ್ತರು ಮತ್ತು ಇವರು

ಧ್ವಜವಂದನೆ ಮಾಡಿ ಬಂಧನಕ್ಕೆ ಒಳಗಾಗಿದ್ದರು. ೧೦-೧೨ ಜನ ಗೆಳೆಯರೊಡನೆ ಕುಕನೂರು ಪೋಲೀಸ್ ಠಾಣೆಯ ಮೇಲೆ ದಾಳಿ ಮಾಡಿ ಪೋಲೀಸರಿಂದ ಸುಮಾರು ಒಂದು ನೂರು ಬಂದೂಕುಗಳನ್ನು ಅಪಹರಿಸಿಕೊಂಡು ಮುಂಡರಗಿ ಶಿಬಿರಕ್ಕೆ ತಂದುಕೊಟ್ಟಿದ್ದರು.

ಮುಂದೆ ಪೋಲೀಸ ಕಾರ್ಯಾಚರಣೆಯ ಕಾಲಕ್ಕೆ ಗದಗದ ಕಡೆಯಿಂದ ನುಗ್ಗಿದ ಮಿಲ್ಟ್ರಿಗೆ ಆ ಪ್ರದೇಶದ ಪರಿಚಯವಿರಲಿಲ್ಲ. ಆಗ ಇವರು ಆ ಮಿಲ್ಟ್ರಿಯ ಜೊತೆಗೆ ಗಡಿಯ ಒಳಕ್ಕೆ ಹಾದಿ ತೋರಿಸುತ್ತ ಬಂದು ರಜಾಕಾರರ ಪ್ರಮುಖ ನೆಲೆಗಳನ್ನು ತೋರಿಸಿದರು. ಮಿಲ್ಟ್ರಿಯು ಆ ಪ್ರದೇಶವನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಂಡ ಮೇಲೆ ಇನ್ನೊಂದು ರೀತಿಯ ದೌರ್ಜನ್ಯ ಪ್ರಾರಂಭವಾಗುವುದರಲ್ಲಿತ್ತು. ಹಿಂದೂಗಳು ಅಮಾಯಕ ಮುಸ್ಲಿಮರ ಮೇಲೆ ಹಲ್ಲೆ ಮಾಡಿ ತಮ್ಮ ರೋಷವನ್ನು ಶಮನಗೊಳಿಸಿಕೊಳ್ಳುವುದರಲ್ಲಿ ತೊಡಗಿದ್ದರು. ಆಗ ವೀರಭದ್ರಪ್ಪನವರು ತಮ್ಮ ಸಂಗಡಿಗರೊಂದಿಗೆ ಅಂಥ ಪ್ರಕರಣಗಳು ಸಂಭವಿಸದಂತೆ ಮಿತಿಮೀರಿ ದುಡಿದರು.

ಕೀರ್ತನ ಕೇಸರಿ ಕೊಪ್ಪಳದ ಜಯರಾಮಾಚಾರ್ಯ

ಜಯರಾಮಾಚಾರ್ಯರ ವ್ಯಕ್ತಿತ್ವ ಅತ್ಯಂತ ವರ್ಣಮಯವಾಗಿತ್ತು. ಅವರು ಶ್ರೇಷ್ಠ ವಾಗ್ಮಿಗಳಾಗಿದ್ದರಲ್ಲದೇ, ದೇಶಾಭಿಮಾನಿಗಳೂ ಆಗಿದ್ದರು. ೧೯೨೦ರ ಅಸಹಕಾರ ಚಳವಳಿಯಲ್ಲಿ ಅವರು ರಾಷ್ಟವನ್ನು ಜಾಗೃತಗೊಳಿಸುವ ರಾಜಕೀಯ ಕೀರ್ತನೆಗಳನ್ನು ಪ್ರಾರಂಭಿಸಿದರು. ಅವರ ಅಮೋಘವಾದ ಶೈಲಿಗೆ ಜನರು ಮುಗ್ಧರಾಗಿ ಹೋಗುತ್ತಿದ್ದರಲ್ಲದೆ, ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆಯುತ್ತಿದ್ದರು. ಇದನ್ನು ಕಂಡ ಹಿಂದಿನ ತಲೆಮಾರಿನವರು ಇಂದಿಗೂ ಅವರನ್ನು ಸ್ಮರಿಸುತ್ತಾರೆ... ಒಮ್ಮೆ ಜಯರಾಮಾಚಾರ್ಯರು ಗದುಗಿನ ವೀರನಾರಾಯಣ ದೇವರ ಗುಡಿಯಲ್ಲಿ ಕೀರ್ತನೆ ಮಾಡಿ, 'ಕಾಂಗ್ರೆಸ್ ಫಂಡಿನ' ಜೋಳಿಗೆಯನ್ನು ಹಿಡಿದರಂತೆ. ಅವರ ಕೀರ್ತನೆಯಿಂದ ಪ್ರಭಾವಿತರಾದ ಮಹಿಳೆಯರು ದೇಶಾಭಿಮಾನದಿಂದ ಬಂಗಾರದ ಆಭರಣಗಳನ್ನು ಹಾಕಿದರಂತೆ. ಅಷ್ಟು ಪರಿಣಾಮಕಾರಿಯಾಗಿತ್ತು ಅಂದಿನ ಕೀರ್ತನೆ. ಜಯರಾಮಾಚಾರ್ಯರು ಮೊದಲು ಸ್ಟೇಶನ್ ಮಾಸ್ತರ ಆಗಿದ್ದರು. ಅವರು ಯಲವಿಗಿಯಲ್ಲಿದ್ದಾಗ ಮಹಾತ್ಮಾ ಗಾಂಧಿಯವರು ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದುದು ತಿಳಿದು ಜಯರಾಮಾಚಾರ್ಯರು ಅವರಿಗೆ ಮಾಲೆ ಹಾಕಿದರು. ಅಂದಿನ ದಿನಗಳಲ್ಲಿ ಅದು ರಾಜದ್ರೋಹವೇ ಆಗಿತ್ತು. ಆಚಾರ್ಯರು ತಮ್ಮ ನೌಕರಿಗೆ ರಾಜೀನಾಮೆಯಿತ್ತು ಅಸಹಕಾರ ಚಳುವಳಿಯಲ್ಲಿ ಧುಮುಕಿ ಕೀರ್ತನೆಗಳನ್ನು ಹೇಳಲು ಪ್ರಾರಂಭಿಸಿದರೆಂದು ತಿಳಿದುಬರುತ್ತದೆ.

ಜಯರಾಮಾಚಾರ್ಯರಿಗೆ ಜಾತಿ-ಮತ-ಪಂಥಗಳನ್ನು ಮೀರಿದ ಮಾನವೀಯತೆ ಇತ್ತು. ಅವರು ವೈಷ್ಣವ ಮಠಗಳಲ್ಲಿಯೂ ಅಂತೆಯೇ ವೀರಶೈವ ಮಠಗಳಲ್ಲಿಯು ಕೀರ್ತನೆಗಳನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. *(ಬಿ.ಆರ್. ವಾಡಪ್ಪಿ : ವಿಮೋಚನೆ, ಪು.೪೩೬-೩೭).*

ನಿಜಾಮ ಕರ್ನಾಟಕ ಪರಿಷತ್ತಿನ ಎರಡನೆಯ ಸಮ್ಮೇಳನ ಬೀದರಿನಲ್ಲಿ ಆಗಬೇಕೆಂದು ನಿರ್ಧರಿಸಿದಾಗ ಅಲ್ಲಿಯ ಸ್ಥಳೀಯ ಪರಿಸ್ಥಿತಿಯಿಂದಾಗಿ ಸಾಧ್ಯವಾಗಿರಲಿಲ್ಲ. ಆಗ ಜಯರಾಮಾಚಾರ್ಯರು ಬೀದರಿನಲ್ಲಿ ಕೆಲವು ದಿನ ಮುಕ್ಕಾಮ ಮಾಡಿ ತಮ್ಮ ಕೀರ್ತನೆಗಳ ಮೂಲಕ ಅಲ್ಲಿಯ ಕನ್ನಡಪರವಾದ ಸಂಘಟನೆಗಳಲ್ಲಿ ಧೈರ್ಯ ತುಂಬಿ ೧೯೪೦ರಲ್ಲಿ ಆ ಎರಡನೆಯ ಸಮ್ಮೇಳನ ನಡೆಯುವಂತೆ ಮಾಡಿದರು. ಅವರು ರಾಮಾಯಣ ಮಹಾಭಾರತದ ಕಥೆಗಳನ್ನೇ ಆಧಾರವಾಗಿಟ್ಟುಕೊಂಡು ಕೀರ್ತನೆಗಳನ್ನು ಹೆಣೆಯುತ್ತಿದ್ದರು. ಆದರೆ ಅದರಲ್ಲಿ ನಿಜಾಮನ ರಾಕ್ಷಸೀ ಆಡಳಿತ, ರಜಾಕಾರರ ಸೈತಾನಿ ಅತ್ಯಾಚಾರಗಳು ಸ್ಪಷ್ಟವಾಗಿ ಧ್ವನಿತವಾಗುತ್ತಿದ್ದವು. ಇವೆಲ್ಲ ಪ್ರಚೋದನಾತ್ಮಕ ವಿಚಾರಗಳೇ ಆಗಿದ್ದವು. ಆದರೆ ಮೇಲೆ ಪುರಾಣ ಕತೆಗಳ ಲೇಪನವಿರುತ್ತಿತ್ತು. ಹೀಗಾಗಿ ಇವರ ಕೀರ್ತನೆಗಳೆಂದರೆ ಬರೀ ರಂಜನೆಗಾಗಿ ಇರದೇ ಉದ್ಬೋಧಕವೂ ಆಗಿರುತ್ತಿದ್ದವು.

ಹುಮನಾಬಾದಿನ ಪಂ. ಶಿವಚಂದ್ರ

ಹುಮನಾಬಾದಿನ ಆಸುಪಾಸಿನ ಹಳ್ಳಿಗಳಲ್ಲಿ ಹಿಂದೂ ಸಮಾಜದಲ್ಲಿ ಕೆಲವು ಸಂಕುಚಿತ ನಂಬಿಕೆಗಳು ಮತ್ತು ಆಚರಣೆಗಳಿದ್ದವು. ಚಿಟಗೋಪಾದಲ್ಲಿ ಒಬ್ಬ ವಿವಾಹಿತ ಪದ್ಮಸಾಲಿ ಕನ್ಯೆಯನ್ನು (ಬಾಲ್ಯವಿವಾಹವಾಗಿತ್ತು) ಒಬ್ಬ ಮುಸ್ಲಿಮ ಯುವಕನು ಚುಡಾಯಿಸಿದ್ದರಿಂದ ಆ ಕನ್ಯೆಯನ್ನು ಸಮಾಜದ ಹೊರಗಿಡಲಾಗಿತ್ತು.. ಮುಸ್ಲಿಮ ಯುವಕನು ಬಂದು ತಪ್ಪೊಪ್ಪಿಕೊಂಡರೂ ಆಕೆಯ ಗಂಡನ ಮನೆಯವರಾಗಲೀ, ತವರು ಮನೆಯವರಾಗಲೀ ಆಕೆಯನ್ನು ಸ್ವೀಕರಿಸಲು ತಯಾರಾಗಲಿಲ್ಲ. ಆಗ ರೊಚ್ಚಿಗೆದ್ದು ಆ ಮುಸ್ಲಿಂ ಯುವಕನು ಆಕೆಯನ್ನು ಎಳೆದುಕೊಂಡು ಹೋಗಿ ಮದುವೆಯಾಗಿದ್ದ. ಇಂಥದ್ದೇ ಒಂದು ಘಟನೆ ಬೀದರಿನಲ್ಲಿ ನಡೆದಿತ್ತು. ಶಾಂತಪ್ಪಾ ಶೆಟಗಾರ ಎಂಬ ಒಬ್ಬ ಪ್ರತಿಭಾವಂತ ಡಾಕ್ಟರರಿಗೆ ನಿಜಾಮನ ವಿದ್ಯಾರ್ಥಿವೇತನದ ಮೇಲೆ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋಗುವ ಅವಕಾಶ ಲಭಿಸಿತ್ತು. ಎಲ್ಲ ಬಳಗದವರು ಸಂತೋಷವಾಗಿ ಕಳಿಸಿಕೊಟ್ಟರು. ಆದರೆ ಡಾ. ಶಾಂತಪ್ಪನವರು ಶಿಕ್ಷಣ ಮುಗಿಸಿಕೊಂಡು ವಾಪಸ್ಸು ಬಂದಾಗ ಮುಖ್ಯವಾಗಿ ಅವರ ಮನೆಯವರೇ ಅವರನ್ನು ಮನೆಯಲ್ಲಿ ಸೇರಿಸಿಕೊಳ್ಳಲಿಲ್ಲ. ಆಗ ಡಾ. ಶಾಂತಪ್ಪನವರು ಈ ಜಾತೀಯತೆಗೆ ರೋಸಿಹೋಗಿ ಕ್ರಿಶ್ಚನ್ನರಾದರು.

ಈ ಎಲ್ಲ ಘಟನೆಗಳನ್ನು ಕಂಡು ಹದಿಹರೆಯದ ಶಿವಚಂದ್ರರಿಗೆ ಈ ಜಾತಿಯ ಸಂಕೀರ್ಣತೆಯ ಬಗ್ಗೆ ಹೇಸಿಕೆಯಾಗಿ ಆರ್ಯಸಮಾಜಿಯಾದರು. ಅವರ ಸಾತ್ವಿಕ ಬದುಕು ಆದರ್ಶಪ್ರಾಯವಾಗಿತ್ತು. ಅವರ ಪ್ರಭಾವಕ್ಕೆ ಒಳಗಾಗಿ ಹಾದಿ ತಪ್ಪಿದ ಅನೇಕ ಯುವಕರು ಸುಧಾರಿಸಿದರು. ಅಂಥವರಲ್ಲಿ ದಿ. ಲಕ್ಷ್ಮಣ ವೀರಪ್ಪ ಮತ್ತು ದಿ. ರಾಮಚಂದ್ರ ವೀರಪ್ಪಾ (ಸಂಸದರಾಗಿದ್ದರು) ಸೇರಿದ್ದಾರೆ. ಶಿವಚಂದ್ರರು ತೃಣಮೂಲದ ಕಾರ್ಯಕರ್ತರಾಗಿದ್ದರು. ಹಳ್ಳಿಹಳ್ಳಿಗಳಿಗೆ ಹೋಗಿ ಜನರನ್ನು ತಿದ್ದುತ್ತಿದ್ದರು, ಜಾಗೃತಿಯನ್ನುಂಟುಮಾಡುತ್ತಿದ್ದರು. ರಜಾಕಾರರ ಸೈತಾನಿ ಕೃತ್ಯಗಳನ್ನು ಖಂಡಿಸುತ್ತಿದ್ದರು. ಗಂಡಾಂತರದ ಎಂಥದ್ದೇ ಪ್ರಸಂಗವಾದರೂ ನಿರ್ಭಯವಾಗಿ ಎದುರಿಸುತ್ತಿದ್ದರು. ರಜಾಕಾರರಿಗೆ ಇವರು ಒಂದು ಸಿಂಹಸ್ವಪ್ನವಾಗಿದ್ದರು. ೧೯೪೭ರ ಹೋಳಿ ಹಬ್ಬದ ದಿನ ಹೊಂಚು ಹಾಕಿ ಹಾಡೇಹಗಲೇ ಇವರನ್ನು ನಡು ಊರಲ್ಲಿ ಗುಂಡಿಟ್ಟು ಕೊಲ್ಲಲಾಯಿತು.

ಒಂದು ವಿಶೇಷವೆಂದರೆ ಇವರು ಹುಟ್ಟಿದ್ದೂ ಹೋಳಿಹುಣ್ಣಿಮೆಯ ದಿನ ಮತ್ತು ಸತ್ತದ್ದೂ ಕೂಡ ಹೋಳಿಹುಣ್ಣಿಮೆಯ ದಿನವೇ.

ರಾಮಚಂದ್ರ ವೀರಪ್ಪ

ರಾಮ–ಲಕ್ಷ್ಮಣರಂತೆ ಅಣ್ಣ ತಮ್ಮ ಇಬ್ಬರೂ ಪಂ: ಶಿವಚಂದ್ರರ ಸಾತ್ವಿಕ ಜೀವನಕ್ಕೆ ಪ್ರಭಾವಿತರಾಗಿ ಆರ್ಯಸಮಾಜವನ್ನು ಸ್ವೀಕರಿಸಿ ಆರ್ಯರಾಗಿದ್ದರು. ೧೯೫೨ರ ಮೊದಲನೆಯ ಚುನಾವಣೆಯಲ್ಲಿ ಹುಮನಾಬಾದ ಮತಕ್ಷೇತ್ರದಲ್ಲಿ ಒಂದು ಮೀಸಲು ಸ್ಥಾನವಿತ್ತು. ಆಗಿನ ಮುಖ್ಯಮಂತ್ರಿಯಾಗಿದ್ದ ಬುರುಗುಲ ರಾಮಕಿಶನರಾಯರು ಅಣ್ಣ ಲಕ್ಷ್ಮಣರಿಗೆ ಹುಮನಾಬಾದ ಮೀಸಲು ಸ್ಥಾನದಿಂದ ಚುನಾವಣೆಗೆ ಸ್ಪರ್ಧಿಸಲು ಕೇಳಿಕೊಂಡರು. ಆಗ ಲಕ್ಷ್ಮಣರು ಕೇಳಿದ್ದು ಒಂದು ಪ್ರಶ್ನೆ. 'ಮೀಸಲು ಕ್ಷೇತ್ರ ಯಾರಿಗಾಗಿ ಇರುವುದು? ಅದು ಹರಿಜನರಿಗಾಗಿ ಮೀಸಲಾಗಿದೆ. ನಾವು ಹರಿಜನರಾಗಿದ್ದೇವೆಯೇ? ಈಗ ನಾವು ಆರ್ಯರು' ಎಂದು ಹೇಳಿದಂಥ ವ್ಯಕ್ತಿ ಲಕ್ಷ್ಮಣರು. ಆರ್ಯಸಮಾಜಕ್ಕೆ ಸೇರಿದ ಮೇಲೆ ಅಣ್ಣ ತಮ್ಮ ಇಬ್ಬರೂ ಈ ಮಡಿವಂತಿಕೆ ಜನರು ನಾಚುವಂತೆ ಸಾತ್ವಿಕ ಜೀವನವನ್ನು ಸಾಗಿಸಿದರು. ಮದ್ಯ ಮಾಂಸದ ಮಾತಂತೂ ಇರಲಿ, ಚಹ, ಕಾಫಿ, ಸಿಗರೇಟು ಮುಂತಾದ ಯಾವುದೇ ವ್ಯಸನವಿಲ್ಲದೆ ಇಡೀ ಬದುಕನ್ನು ಸಾಗಿಸಿದರು.

ರಾಮಚಂದ್ರ ವೀರಪ್ಪನವರು ಒಬ್ಬ ಮಹಿಳೆಯ ಮಾನ ಉಳಿಸಲು ಹೋಗಿ ತಮ್ಮ ಜೀವಕ್ಕೆ ಅಪಾಯ ತಂದುಕೊಂಡಿದ್ದರು. ರಜಾಕಾರರು ಇವರ ಮೇಲೆ ಆಕ್ರಮಣ ಮಾಡಿ ಹೊಟ್ಟೆಗೆ ಚೂರಿ ಹಾಕಿದ್ದರು. ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು. ಪಂ. ಶಿವಚಂದ್ರರು ಮತ್ತು ಇತರರು ತಕ್ಷಣ ಗುಲಬರ್ಗಾ ಆಸ್ಪತ್ರೆಗೆ ಸೇರಿಸಿದರು. ಆಗಿನ ದಿನಗಳಲ್ಲಿ ವಾಹನ ಸೌಕರ್ಯವೂ ಇರಲಿಲ್ಲ. ಆದರೂ ದೈವ ಅನುಕೂಲ ಮಾಡಿಕೊಟ್ಟಿತು. ಶಿವಚಂದ್ರರು ತಮ್ಮ ರಕ್ತ ಕೊಟ್ಟರು. ರಾಮಚಂದ್ರರು ಬದುಕಿಕೊಂಡರು. ಬೀದರ ಜಿಲ್ಲೆಯ ಅಜಾತಶತ್ರುವಾಗಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ರಾಜಕೀಯರಂಗದಲ್ಲಿ ಎಲ್ಲರ ಪ್ರೀತಿಪಾತ್ರರಾಗಿ ಬದುಕಿದ್ದರು.

****

ಆಕರಗಳು

ಗ್ರಂಥಗಳು

೧.	ವಂದೇ ಮಾತರಂದಿಂದ ಜನಗಣಮನದವರೆಗೆ ...	ವಿ.ಎಚ್. ದೇಸಾಯಿ
೨.	ಹೈದರಾಬಾದ ಮುಕ್ತಿ ಸಂಘರ್ಷ	ಗೋಪಾಲರಾವ ಹೇಜೀಬ್
೩.	ವಿಮೋಚನೆ	ಜಿಲ್ಲಾ ಆಡಳಿತ ಕೊಪ್ಪಳ
೪.	ಬಿಡುಗಡೆ	ಸಂ. ಡಾ.ಬಸವರಾಜ ಪೊಲೀಸ ಪಾಟೀಲ
೫.	ದಾರಿದೀಪ (ಹದೀಸ)	ಅನು: ಎಂ. ಸಾದುಲ್ಲ
೬.	ಶಿಬಿರ ಅಣ್ಣಾರಾವ	ಡಾ. ಪ್ರಭು ಖಾನಾಪುರೆ
೭.	ಪೂಜ್ಯ ದೊಡ್ಡಪ್ಪ ಅಪ್ಪಾ	ಡಾ. ಎಂ. ಎಸ್. ಲಠ್ಠೆ
೮.	ಪಂ. ಶಿವಚಂದ್ರಜೀ (ಅಪ್ರಕಟಿತ)	ಭಾಲಚಂದ್ರ ಜಯಶೆಟ್ಟಿ
೯.	ಹೈದರಾಬಾದ ಮುಕ್ತಿ ಸಂಗ್ರಾಮ ಕಾ ಇತಿಹಾಸ	ಡಾ. ಚಂದ್ರಶೇಖರ ಲೋಖಂಡೆ
೧೦.	ಹೈದರಾಬಾದ ಸತ್ಯಾಗ್ರಹ ಕಾ ರಕ್ತರಂಜಿತ ಇತಿಹಾಸ	ಪಂ. ಜಯದೇವ ಶರ್ಮಾ, ಡಾ. ಸೂರ್ಯದೇವ ಶರ್ಮಾ
೧೧.	ಹೈದರಾಬಾದ ಮುಕ್ತಿ ಸಂಗ್ರಾಮ : ಮಾಝ್ಯಾ ಆಠವಣೀ	ಜ.ರಾ. ಬರ್ದಾಪೂರಕರ
೧೨.	ಹೈದರಾಬಾದ ಸ್ವಾತಂತ್ರ್ಯ ಸಂಗ್ರಾಮ	ವಸಂತ ಬ. ಪೋತದಾರ

ವ್ಯಕ್ತಿಗಳು

ಶ್ರೀ ದಿ. ಲಕ್ಷ್ಮಣ ವೀರಪ್ಪಾ ಆರ್ಯ, ಹುಮನಾಬಾದ

ಶ್ರೀ ದಿ. ರಾಮಚಂದ್ರ ವೀರಪ್ಪಾ ಆರ್ಯ, ಹುಮನಾಬಾದ

ಶ್ರೀ ಮಲಶೆಟ್ಟೆಪ್ಪಾ ಹೊಳಕುಂದಿ, ಹುಮನಾಬಾದ

ಪ್ರೊ. ವಿ. ಪಾಂ. ದೇವೂಳಗಾಂವಕರ

ಶ್ರೀ ವಿದ್ಯಾಧರ ಗುರೂಜಿ

ಶ್ರೀ ಸರದಾರ ಶರಣಗೌಡರು

***

ಕೃತಿಕಾರರ ಪರಿಚಯ



ಪ್ರೊ. ಭಾಲಚಂದ್ರ ಜಯಶೆಟ್ಟಿಯವರು ಕನ್ನಡ, ಹಿಂದೀ ಎರಡೂ ಭಾಷೆಗಳಲ್ಲಿ ಪ್ರಭುತ್ವ ಹೊಂದಿದ ಲೇಖಕರು. ಕನ್ನಡದಲ್ಲಿ ಕಥೆ, ನಾಟಕ, ವಿಡಂಬನೆ, ಲಲಿತ ಪ್ರಬಂಧ, ವಿಮರ್ಶೆ, ಸಂಶೋಧನೆ, ಜೀವನ ಚರಿತ್ರೆ ಮುಂತಾದ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. 'ನಮ್ಮ ಮನೆ' (ಲಲಿತಪ್ರಬಂಧ), ಚಿಂತನ- ಮಂಥನ (ವೈಚಾರಿಕ ಲೇಖನಗಳು), ಯುಗಾಂತ (ನಾಟಕ), 'ಕೋಡ್ಗಲ್ಲಿನ ಕೂಗು' ಮತ್ತು 'ಮಿರ್ಚಿಬಾಬಾ ಹಾಗೂ ಇತರ ಕಥೆಗಳು' (ಕಥಾಸಂಕಲನಗಳು), ವಿ.ಸ. ಖಾಂಡೇಕರ, ಭಗತಸಿಂಗ (ಜೀವನ ಚರಿತ್ರೆಗಳು) ವಿಶೇಷ ಚರ್ಚೆಗೆ ಒಳಗಾದ ಕೃತಿಗಳಾಗಿವೆ.

ಆದರೂ ಪ್ರೊ. ಭಾಲಚಂದ್ರರು ಪ್ರಮುಖವಾಗಿ ಅನುವಾದಕರೆಂದೇ ಖ್ಯಾತರಾಗಿದ್ದಾರೆ. ಇವರು ಹಿಂದಿಗೆ ಅನುವಾದಿಸಿದ ಎಲ್ಲ ಲೇಖಕರನ್ನು 'ಕನ್ನಡದಲ್ಲಿ ಬರೆಯುವ ಹಿಂದಿ ಲೇಖಕರು' ಎಂದೇ ಹಿಂದೀ ಓದುಗರು ಗುರುತಿಸುತ್ತಾರೆ. ಅಷ್ಟರ ಮಟ್ಟಿಗೆ ಇವರ ಅನುವಾದ ಸಹಜವಾಗಿರುತ್ತದೆ, ಅದು ಅನುವಾದವೆಂದು ಅನಿಸುವುದೇ ಇಲ್ಲ. ಇದು ಅವರ ವೈಶಿಷ್ಟ್ಯ. ಕಥೆ, ಕಾದಂಬರಿಗಳನ್ನಲ್ಲದೆ 'ಭಾರತೀಯ ಕಾವ್ಯಮೀಮಾಂಸೆ', 'ಕಾವ್ಯಾರ್ಥ ಚಿಂತನ' ದಂಥ ಶಾಸ್ತ್ರಗ್ರಂಥಗಳನ್ನೂ ಹಿಂದಿಗೆ ಅನುವಾದಿಸಿ ಕರ್ನಾಟಕ ಸರಕಾರದಿಂದಲೂ, ಕೇಂದ್ರೀಯ ಹಿಂದಿ ನಿರ್ದೇಶನಾಲಯದಿಂದಲೂ, ಉತ್ತರ ಪ್ರದೇಶದ ಹಿಂದಿ ಸಂಸ್ಥಾನದಿಂದಲೂ, ಅಂತಾರಾಷ್ಟ್ರೀಯ ಕಲೆ ಮತ್ತು ಸಂಸ್ಕೃತಿ ಸಂಸ್ಥೆಯಿಂದಲೂ ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ತಮ್ಮ 'ಭಾರತೀಯ ಕಾವ್ಯಮೀಮಾಂಸೆ'ಯ ಅನುವಾದಕ್ಕಾಗಿ ಇವರು ರಾಷ್ಟ್ರಪತಿಗಳಿಂದ ಸನ್ಮಾನಕ್ಕೂ ಪಾತ್ರರಾಗಿದ್ದಾರೆ. ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ಪಡೆದಿದ್ದಾರೆ.

ಹಿಂದಿ ಮತ್ತು ಮರಾಠಿಯಿಂದಲೂ ಕಥೆ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನಡುಗನ್ನಡ ಸಾಹಿತ್ಯ ಕುರಿತು ಹೆಚ್ಚಿನ ಆಸಕ್ತಿ ಹೊಂದಿದ ಭಾಲಚಂದ್ರರು ವಚನ ಸಾಹಿತ್ಯದ ಆಳವಾದ ಅಧ್ಯವಸಾಯಿಗಳಾಗಿದ್ದಾರೆ. ಇವರು ಪ್ರಕಟಿಸಿರುವ ಕೃತಿಗಳ ಸಂಖ್ಯೆ ಇಪ್ಪತ್ತೈದಕ್ಕೂ ಮೀರಿದೆ.

ವಿಳಾಸ : ಪ್ರೊ. ಭಾಲಚಂದ್ರ ಜಯಶೆಟ್ಟಿ
'ನಮ್ಮ ಮನೆ' ಜಯನಗರ
ಸೇಡಂ ರಸ್ತೆ, ಗುಲ್ಬರ್ಗ-೫೮೫೧೦೫
ದೂರವಾಣಿ : ೦೮೪೭೨-೨೪೫೦೫೪

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೨ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮